ಸೋಮವಾರ, ಜುಲೈ 12, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 193 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ರಿಚರ್ಡ್ ಬ್ರಾನ್ಸನ್‌ರಿಂದ ಗಗನಯಾನ 7
ನೀತಿ ಆಯೋಗದ ಉಪಾಧ್ಯಕ್ಷ ರಾಜೀವ್ ಕುಮಾರ್
ಆಳ-ಅಗಲ
ತಾಲಿಬಾನ್ ಕರಿನೆರಳು
ವಿಂಬಲ್ಡನ್: ನೊವಾಕ್‌ಗೆ ಪ್ರಶಸ್ತಿ ಸಂಭ್ರಮ 11
ಪ್ರಸಕ್ತ ಹಣಕಾಸು ವರ್ಷದಲ್ಲಿ ಎರಡಂಕಿ ಆರ್ಥಿಕ ಪ್ರಗತಿ 10

ಶಿಕ್ಷಣ
ಎಸ್ಸೆಸ್ಸೆಲ್ಸಿ ಪರೀಕ್ಷೆ ಮುಂದಿನ ವಾರ ನಡೆಯಲಿದ್ದು, ಈ ಬಾರಿಯ ಬದಲಾದ ಪರೀಕ್ಷಾ ವಿಧಾನಕ್ಕೆ ಹೇಗೆ ಓದಬೇಕು?



ತನಿಖೆ ಆರಂಭಿಸಿದ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ

ಎಂಎಸ್‌ಪಿ ಅಕ್ಕಿ ಸಾಗಣೆಯಲ್ಲಿ ಅಕ್ರಮ?

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ರಾಜ್ಯ ಸರ್ಕಾರ ಬೆಂಬಲ ಬೆಲೆ ಯೋಜನೆಯಲ್ಲಿ (ಎಂಎಸ್‌ಪಿ) ಖರೀದಿಸಿದ್ದ ಭತ್ತದಿಂದ ಪಡೆದ 14,344 ಟನ್‌ಗಳಷ್ಟು ಅಕ್ಕಿಯನ್ನು ಗುಣಮಟ್ಟ ಪರಿಶೀಲನೆ, ಕಂಪ್ಯೂಟರೀಕೃತ ತೂಕದ ದಾಖಲೆ ಮತ್ತು ಕಣ್ಗಾವಲು ಇಲ್ಲದೆ ಮಂಡ್ಯ ಜಿಲ್ಲೆಯ ಗಿರಣಿಗಳಿಂದ ಸಗಟು ಪಡಿತರ ವಿತರಣಾ ಗೋದಾಮುಗಳಿಗೆ ಸಾಗಿಸಲಾಗಿದೆ.

ಬೃಹತ್ ಪ್ರಮಾಣದ ಅಕ್ಕಿ ಕಾಳಸಂತೆ ಪಾಲಾಗಿರುವ ಶಂಕೆಯ ಮೇಲೆ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯು ಈಗ ತನಿಖೆ ಆರಂಭಿಸಿದೆ.

ಎಂಎಸ್‌ಪಿ ಅಡಿ ಖರೀದಿಸಿದ್ದ ಬೃಹತ್ ಪ್ರಮಾಣದ ಭತ್ತವನ್ನು ಮಂಡ್ಯ ಜಿಲ್ಲೆಯ ಅಕ್ಕಿ ಗಿರಣಿಗಳಲ್ಲಿ 'ಹಲ್ಲಿಂಗ್' ಮಾಡಲಾಗಿದೆ. ಅಲ್ಲಿ ದಾಸ್ತಾನು ಇದ್ದ 14,344.21 ಟನ್ ಅಕ್ಕಿಯನ್ನು ಬಿಬಿಎಂಪಿ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಮಂಡ್ಯ ಮತ್ತು ರಾಮನಗರ ಜಿಲ್ಲೆಗಳಲ್ಲಿ ಜೂನ್ ತಿಂಗಳಲ್ಲಿ ಪಡಿತರ ಚೀಟಿದಾರರಿಗೆ ವಿತರಿಸುವುದಕ್ಕಾಗಿ ಹಂಚಿಕೆ ಮಾಡಲಾಗಿತ್ತು.

'ಕಟ್ಟಿಂಗ್' ದಂಧೆಯ ನಂಟು?

ಮೇ ಮತ್ತು ಜೂನ್ ತಿಂಗಳಲ್ಲಿ ಲಾಕ್‌ಡೌನ್ ಕಾರಣದಿಂದ ಕೇಂದ್ರ ಸರ್ಕಾರವು ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆಯಡಿಯಲ್ಲೂ ಆಹಾರ ಧಾನ್ಯ ಹಂಚಿಕೆ ಮಾಡಿತ್ತು. ರಾಜ್ಯ ಸರ್ಕಾರದ ಅನ್ನಭಾಗ್ಯ ಯೋಜನೆಯಲ್ಲೂ ಪಡಿತರ ವಿತರಣೆ ಇತ್ತು.

ಕಾಳಸಂತೆಗೆ ಪಡಿತರ ಅಕ್ಕಿ ಸಾಗಿಸುವ ವ್ಯಕ್ತಿಗಳು, ಸಗಟು ಗೋದಾಮುಗಳ ವ್ಯವಸ್ಥಾಪಕರು ಮತ್ತು ನ್ಯಾಯಬೆಲೆ ಅಂಗಡಿಗಳ ಮಾಲೀಕರು ಸೇರಿ 'ಕಟ್ಟಿಂಗ್' ದಂಧೆ ಹೆಸರಿನಲ್ಲಿ ಪಡಿತರ ಚೀಟಿದಾರರಿಗೆ ತಲುಪಬೇಕಿದ್ದ ಅಕ್ಕಿಯನ್ನೇ ಗೋದಾಮುಗಳಲ್ಲಿ ಉಳಿಸಿಕೊಂಡು, ಮಂಡ್ಯದಿಂದ ಪೂರೈಕೆಯಾಗಬೇಕಿದ್ದ ಅಕ್ಕಿಯ ಹೆಸರಿನಲ್ಲಿ ಜಮಾ ತೋರಿಸಿರುವ ಶಂಕೆ ಇದೆ. ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಅಕ್ಕಿ ಗಿರಣಿಗಳಲ್ಲಿ ಪಡಿತರ ಅಕ್ಕಿ ಪತ್ತೆಯಾದ ಪ್ರಕರಣಗಳ ಜಾಡು ಹಿಡಿದಿರುವ ರಾಜ್ಯಮಟ್ಟದ ತನಿಖಾ ದಳ, ಈ ಬಗ್ಗೆಯೂ ತನಿಖೆಯನ್ನು ವಿಸ್ತರಿಸಲು ಮುಂದಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಪ್ರಜಾವಾಣಿ ವಿಶೇಷ

ಈ ಪೈಕಿ ಬಿಬಿಎಂಪಿ ಸೇರಿದಂತೆ ಬೆಂಗಳೂರು ನಗರವೊಂದಕ್ಕೆ 7,233 ಟನ್ ಹಂಚಿಕೆಯಾಗಿತ್ತು.

ನಾಲ್ಕು ಜಿಲ್ಲೆಗಳಲ್ಲಿರುವ ಕರ್ನಾಟಕ ಆಹಾರ ಮತ್ತು ನಾಗರಿಕ ಪೂರೈಕೆ ನಿಗಮದ 22 ಸಗಟು ಗೋದಾಮುಗಳು, 16 ತಾಲ್ಲೂಕು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಗೋದಾಮುಗಳು, ಕೃಷಿ ಪತ್ತಿನ ಸಹಕಾರ ಸಂಘಗಳ ಎರಡು ಮತ್ತು ಆಹಾರ ಇಲಾಖೆಯ ಎರಡು ಗೋದಾಮುಗಳಿಗೆ ಮಂಡ್ಯದ ಅಕ್ಕಿ ಗಿರಣಿಗಳಿಂದ ಸಾಗಿಸಲಾಗಿದೆ. ಅಲ್ಲಿಂದ ನ್ಯಾಯಬೆಲೆ ಅಂಗಡಿಗಳಿಗೆ ಹಂಚಿಕೆಯಾಗಿದೆ. ಮಂಡ್ಯದ ಅಕ್ಕಿ ಗಿರಣಿಗಳಿಂದ ಸುಮಾರು 1,500 ಟ್ರಕ್‌ಗಳಷ್ಟು ಅಕ್ಕಿಯನ್ನು ಸಾಗಿಸಲಾಗಿದೆ.

ಮಂಡ್ಯದಿಂದ ಸಾಗಿಸಿರುವ ಅಕ್ಕಿಯ ವಿವರ

ಜಿಲ್ಲೆ	ಪ್ರಮಾಣ (ಟನ್‌ಗಳಲ್ಲಿ)
ಬೆಂಗಳೂರು ನಗರ	3,554.29
ಬೆಂಗಳೂರು ಪೂರ್ವ	558.85
ಬೆಂಗಳೂರು ಉತ್ತರ	857.16
ಬೆಂಗಳೂರು ದಕ್ಷಿಣ	887.17
ಬೆಂಗಳೂರು ಪಶ್ಚಿಮ	1,375.71
ಬೆಂಗಳೂರು ಗ್ರಾಮಾಂತರ	1,683.25
ಮಂಡ್ಯ	3,371.15
ರಾಮನಗರ	2,056.59

ಸಾಗಿಸುವ ಮುನ್ನ, ಭಾರತೀಯ ಆಹಾರ ನಿಗಮದ ಗುಣಮಟ್ಟ ತಪಾಸಣಾ ತಂಡದ ಅಧಿಕಾರಿಗಳ ಮೂಲಕ ಅಕ್ಕಿಯ ಗುಣಮಟ್ಟ ಪರೀಕ್ಷಿಸಿ, ಪ್ರಮಾಣ ಪತ್ರ ಪಡೆಯಬೇಕು. ಅಕ್ಕಿಯನ್ನು ಗಿರಣಿಗಳಲ್ಲಿ ಟ್ರಕ್‌ಗಳಿಗೆ ಲೋಡ್ ಮಾಡಿದ ತಕ್ಷಣ ಮತ್ತು ಸಗಟು ಗೋದಾಮುಗಳಲ್ಲಿ ಇಳಿಸುವ ಮುನ್ನ ಕಂಪ್ಯೂಟರೀಕೃತ ತೂಕದ (ಕಂಪ್ಯೂಟರೈಸ್ಡ್ ವೆಹಿಮೆಂಟ್ ಬಿಲ್) ಪಡೆಯುಬೇಕು ಎಂಬ ನಿರ್ದೇಶನಗಳನ್ನು ಆಹಾರ ಇಲಾಖೆಯಿಂದ ನೀಡಲಾಗಿತ್ತು. ಆದರೆ, ಬಹುತೇಕ ಸಗಟು ಗೋದಾಮುಗಳಿಗೆ ಅಕ್ಕಿ ಸಾಗಿಸುವಾಗ ಈ ಯಾವುದೇ ನಿರ್ದೇಶನಗಳನ್ನೂ ಪಾಲಿಸಿಲ್ಲ ಎಂಬ ಮಾಹಿತಿ ಆಧರಿಸಿ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ಜಂಟಿ ಆಯುಕ್ತ ಡಾ.ಕೆ. ರಾಮೇಶ್ವರಪ್ಪ ನೇತೃತ್ವದ ರಾಜ್ಯ ಮಟ್ಟದ ತನಿಖಾ ದಳ ತನಿಖೆ ಆರಂಭಿಸಿದೆ.

ಮಂಡ್ಯದ ಅಕ್ಕಿ ಗಿರಣಿಗಳಿಂದ ಸಗಟು ಗೋದಾಮುಗಳಿಗೆ ಅಕ್ಕಿಯನ್ನು ಸಾಗಿಸಿರುವುದಕ್ಕೆ ಸಂಬಂಧಿಸಿದ ಸಾಗಣೆ ಆದೇಶ, ಟ್ರಕ್ ಶೀಟ್, ಗುಣಮಟ್ಟ ತಪಾಸಣಾ ವರದಿ ಮತ್ತು ಟ್ರಕ್‌ಗಳಿಗೆ ತುಂಬಿಸಿದ ತಕ್ಷಣ ಹಾಗೂ ಇಳಿಸುವ ಮುನ್ನ ಪಡೆದಿರುವ ಕಂಪ್ಯೂಟರೀಕೃತ ತೂಕದ ರಸೀದಿಗಳನ್ನು ಸಲ್ಲಿಸುವಂತೆ ತನಿಖಾ ದಳವು ಎಲ್ಲ ಸಗಟು ಗೋದಾಮುಗಳ ವ್ಯವಸ್ಥಾಪಕರಿಗೆ ಜುಲೈ 7ರಂದು ಸೂಚನೆ ನೀಡಿದೆ.

6ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಉ. ಪ್ರದೇಶ: ಶಂಕಿತ ಉಗ್ರರ ಸೆರೆ

ಪ್ರಜಾವಾಣಿ ವಾರ್ತೆ

ಲಖನೌ: 'ಉತ್ತರ ಪ್ರದೇಶದಲ್ಲಿ ಸಕ್ರಿಯವಾಗಿದ್ದ ಅಲ್ ಕೈದಾ ಉಗ್ರ ಸಂಘಟನೆಯ ಘಟಕವೊಂದನ್ನು ಪತ್ತೆ ಮಾಡಿದ್ದೇವೆ. ಇಬ್ಬರು ಶಂಕಿತ ಉಗ್ರರನ್ನು ಬಂಧಿಸಿದ್ದೇವೆ. ಅವರಿಂದ ಭಾರಿ ಪ್ರಮಾಣದ ಸ್ಫೋಟಕ ವಸ್ತುಗಳನ್ನು ವಶಕ್ಕೆ ಪಡೆದುಕೊಂಡಿದ್ದೇವೆ' ಎಂದು ಉತ್ತರ ಪ್ರದೇಶ ಭಯೋತ್ಪಾದನೆ ನಿಗ್ರಹ ಪಡೆ ಭಾನುವಾರ ಹೇಳಿದೆ.

ಉತ್ತರ ಪ್ರದೇಶ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಪ್ರಶಾಂತ್ ಕುಮಾರ್ ಅವರು ಭಾನುವಾರ ಸುದ್ದಿಗೋಷ್ಠಿಯಲ್ಲಿ ಈ ಮಾಹಿತಿ ನೀಡಿದ್ದಾರೆ. ಬಂಧಿತರನ್ನು ಮಿನಾಜ್ ಅಹ್ಮದ್ ಮತ್ತು ಮುಶ್ರುದ್ದೀನ್ ಅಲಿಯಾಸ್ ಮುಶೀರ್ ಎಂದು ಗುರುತಿಸಲಾಗಿದೆ.

> **ರಾಜ್ಯದ ಪ್ರಮುಖ ರಾಜಕಾರಣಿಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲು ಬಂಧಿತ ಶಂಕಿತ ಉಗ್ರರು ಯೋಜನೆ ರೂಪಿಸಿದ್ದರು**
>
> **ಪ್ರಶಾಂತ್ ಕುಮಾರ್,** ಉತ್ತರ ಪ್ರದೇಶ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ

3ನೇ ಪುಟ ನೋಡಿ

ಉಗ್ರ ಸಂಘಟನೆಗಳಿಗೆ ಆರ್ಥಿಕ ನೆರವು: ಆರು ಮಂದಿ ಬಂಧನ

ಶ್ರೀನಗರ: ಉಗ್ರರ ಸಂಘಟನೆಗಳಿಗೆ ಹಣಕಾಸು ನೆರವು ನೀಡಿದ ಪ್ರಕರಣ ಗಳಿಗೆ ಸಂಬಂಧಿಸಿ ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಸಿಬ್ಬಂದಿ ಭಾನುವಾರ ಕಾಶ್ಮೀರದ ವಿವಿಧೆಡೆ ದಾಳಿ ನಡೆಸಿದ್ದು, ಆರು ಜನರನ್ನು ಬಂಧಿಸಿದ್ದಾರೆ. ಬಂಧಿತರಲ್ಲಿ ಧಾರ್ಮಿಕ ಸಂಸ್ಥೆಯೊಂದರ ಅಧ್ಯಕ್ಷ ಕೂಡಾ ಸೇರಿದ್ದಾರೆ. 7

'ಸಿಬಿಎಸ್‌ಇ: ಶುಲ್ಕ ನಿಗದಿ ಅಧಿಕಾರ ರಾಜ್ಯ ಸರ್ಕಾರದ್ದು'

ಬೆಂಗಳೂರು: ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿ (ಸಿಬಿಎಸ್‌ಇ) ಜೊತೆ ಸಂಯೋಜನೆಗೊಂಡಿರುವ ಶಾಲೆಗಳಲ್ಲಿ ಶುಲ್ಕ ನಿಗದಿಪಡಿಸುವ ಅಧಿಕಾರವನ್ನು ರಾಜ್ಯ ಸರ್ಕಾರ ಹೊಂದಿದೆ ಎಂದು ಮಂಡಳಿ ಸ್ಪಷ್ಟಪಡಿಸಿದೆ. 6

ಟ್ವಿಟರ್: ವಿನಯ್ ಪ್ರಕಾಶ್ ಆರ್‌ಜಿಒ

ನವದೆಹಲಿ (ಪಿಟಿಐ): ಭಾರತದ ಸ್ಥಾನಿಕ ಕುಂದುಕೊರತೆ ಅಧಿಕಾರಿಯನ್ನಾಗಿ (ಆರ್‌ಜಿಒ) ವಿನಯ್ ಪ್ರಕಾಶ್ ಅವರನ್ನು ನೇಮಿಸಿರುವುದಾಗಿ ಟ್ವಿಟರ್ ಭಾನುವಾರ ತಿಳಿಸಿದೆ. 7

ಚಿತ್ರಕಲಾ ಶಿಕ್ಷಕರ ನೇಮಕಾತಿ: ದಾಖಲೆಗಳನ್ನು ಕಳುಹಿಸಲು ಸೂಚನೆ

ಕೊನೆಯ ದಿನಾಂಕ ಮುಗಿದ ಬಳಿಕ ಬಂತು ಪತ್ರ!

• ಗುರು ಪಿ. ಎಸ್

ಬೆಂಗಳೂರು: ತಾತ್ಕಾಲಿಕ ನೇಮಕಾತಿ ಪಟ್ಟಿಯಲ್ಲಿ ಹೆಸರಿರುವ ಚಿತ್ರಕಲಾ ಶಿಕ್ಷಕರ ದಾಖಲೆಗಳ ಪರಿಶೀಲನೆಗಾಗಿ ಕರ್ನಾಟಕ ಲೋಕಸೇವಾ ಆಯೋಗವು ಅಗತ್ಯ ದಾಖಲೆಗಳನ್ನು ಕಳುಹಿಸುವಂತೆ ಅಭ್ಯರ್ಥಿಗಳಿಗೆ ಸೂಚನೆ ನೀಡಿದೆ. ಆದರೆ ಈ ಕುರಿತು ಆಯೋಗ ಕಳುಹಿಸಿರುವ ಪತ್ರವು, ಕೊನೆಯ ದಿನಾಂಕದ ನಂತರ ಅಭ್ಯರ್ಥಿಗಳ ಕೈ ಸೇರಿದೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿನ ಮೊರಾರ್ಜಿ ದೇಸಾಯಿ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರ ನೇಮಕಾತಿ ಪ್ರಕ್ರಿಯೆಯು ಐದು ವರ್ಷಗಳಿಂದ ನಡೆಯುತ್ತಿದೆ. ಇನ್ನೂ ಪೂರ್ಣಗೊಂಡಿಲ್ಲ. ತಾತ್ಕಾಲಿಕವಾಗಿ ಆಯ್ಕೆಯಾಗಿರುವ ಅಭ್ಯರ್ಥಿಗಳ ಆರನೇ ಪಟ್ಟಿಯನ್ನು ಈಗ ಪ್ರಕಟಿಸಲಾಗಿದ್ದು, ದಾಖಲೆಗಳನ್ನು ಕಳುಹಿಸುವಂತೆ ಕೆಪಿಎಸ್‌ಸಿ ಸೂಚನೆ ನೀಡಿದೆ.

‘ಜುಲೈ 6ರಂದು ತಾತ್ಕಾಲಿಕ ಪಟ್ಟಿ ಪ್ರಕಟಿಸಲಾಗಿತ್ತು. ದಾಖಲೆಗಳನ್ನು ಕಳುಹಿಸುವಂತೆ 7ರ ಸಂಜೆ ಇ–ಮೇಲ್ ಮಾಡಿದ್ದಾರೆ. ಆದರೆ, ಯಾವ ಯಾವ ದಾಖಲೆಗಳು ಬೇಕು, ಎಷ್ಟು ಪ್ರತಿ ಬೇಕು ಎಂಬ ಮಾಹಿತಿ ಇ–ಮೇಲ್‌ನಲ್ಲಿ ಇರಲಿಲ್ಲ. ಆದರೆ, ದಾಖಲೆಗಳನ್ನು ಕಳುಹಿಸಲು 9ನೇ ತಾರೀಖು ಕೊನೆಯ ದಿನ ಎಂದು ಹೇಳಿದ್ದರು. ಈ ಕುರಿತ ಪತ್ರ ನಮಗೆ 10ರ ಸಂಜೆ 4 ಗಂಟೆಯ ವೇಳೆಗೆ ಬಂದಿತು’ ಎಂದು ಹೆಸರು ಬಹಿರಂಗ ಪಡಿಸಲು ಬಯಸದ ಅಭ್ಯರ್ಥಿಯೊಬ್ಬರು ಹೇಳಿದರು.

‘ನನ್ನ ಕೈಗೆ 9ರಂದು ಬೆಳಿಗ್ಗೆ ಪತ್ರ ಸಿಕ್ಕಿದೆ. ಸಂಜೆಯೊಳಗೇ ದಾಖಲೆಗಳನ್ನು ಕಳುಹಿಸಲು ಸಾಧ್ಯವಾಗುತ್ತದೆಯೇ’ ಎಂದು ಮತ್ತೊಬ್ಬ ಅಭ್ಯರ್ಥಿ ಇಂದ್ರಕುಮಾರ್ ಬಿ. ದಸ್ತೇನವರ ಪ್ರಶ್ನಿಸಿದರು.

‘ದಾಖಲೆಗಳನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ತ್ವರಿತ ಅಂಚೆ ಮೂಲಕ (ಸ್ಪೀಡ್ ಪೋಸ್ಟ್) ಮೂಲಕ ಕಳುಹಿಸಬೇಕು ಎಂದು ಸೂಚಿಸಲಾಗಿದೆ. ಐದು ವರ್ಷಗಳಿಂದ ಪ್ರಕ್ರಿಯೆ ನಡೆಯುತ್ತಿದೆ. ಈಗ ದಾಖಲೆಗಳನ್ನು ಕಳುಹಿಸಲು ಐದು ದಿನ ಕೂಡ ಕಾಲಾವಕಾಶ ನೀಡಿಲ್ಲ’ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

‘ಆರನೇ ಸುತ್ತಿನ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ನನ್ನ ಹೆಸರು ಕೂಡ ಇದೆ. ಪಟ್ಟಿಯಲ್ಲಿ ಹೆಸರಿದ್ದವರಿಗೆಲ್ಲ ಪತ್ರಗಳನ್ನು ಕಳುಹಿಸಲಾಗಿದೆ. ಆದರೆ, ಕೊನೆಯ ದಿನಾಂಕ ಮುಗಿದರೂ ನನಗೆ ಇನ್ನೂ ಪತ್ರ ಬಂದಿಲ್ಲ’ ಎಂದು ಅಭ್ಯರ್ಥಿಯೊಬ್ಬರು ಅಳಲು ತೋಡಿಕೊಂಡರು.

ಒಟ್ಟು 460 ಹುದ್ದೆಗಳಿಗೆ 3,000ಕ್ಕೂ ಹೆಚ್ಚು ಅಭ್ಯರ್ಥಿಗಳನ್ನು ದಾಖಲೆಗಳ ಪರಿಶೀಲನೆಗೆ ಆಹ್ವಾನಿಸಲಾಗಿದೆ. ಚಿತ್ರಕಲೆ ವಿಷಯದಲ್ಲಿ ಡಿಪ್ಲೊಮಾ ಮತ್ತು ಪದವಿಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ತಾತ್ಕಾಲಿಕ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ.

‘ಪರಿಶೀಲಿಸಿದ ನಂತರ ಕ್ರಮ’

‘ಭಾನುವಾರ ಆಯೋಗಕ್ಕೆ ರಜೆ ಇತ್ತು. ಸಿಬ್ಬಂದಿ ಮತ್ತು ಅಧಿಕಾರಿಗಳು ಪ್ರತಿಕ್ರಿಯೆಗೆ ಲಭ್ಯವಿಲ್ಲ. ಸೋಮವಾರ ಈ ಬಗ್ಗೆ ಪರಿಶೀಲನೆ ನಡೆಸಿ, ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಕೆಪಿಎಸ್‌ಸಿ ಕಾರ್ಯದರ್ಶಿ ಜಿ. ಸತ್ಯವತಿ ‘ಪ್ರಜಾವಾಣಿ’ಗೆ ತಿಳಿಸಿದರು.

ಚಿತ್ರರಂಗಕ್ಕೆ ಹೆಚ್ಚಿನ ಬೆಂಬಲದ ಅಗತ್ಯವಿದೆ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲಕ್ಷಾಂತರ ಜನರಿಗೆ ಉದ್ಯೋಗ ನೀಡಿರುವ ಚಿತ್ರರಂಗ ಕೋವಿಡ್‌ನಿಂದ ತತ್ತರಿಸಿದ್ದು, ಈ ಸಮಯದಲ್ಲಿ ಚಿತ್ರರಂಗಕ್ಕೆ ಹೆಚ್ಚಿನ ಬೆಂಬಲ, ನೆರವಿನ ಅಗತ್ಯವಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ನಿರ್ದೇಶಕ, ನಿರ್ಮಾಪಕ ಎಸ್. ನಾರಾಯಣ್ ಅವರ ನಿರ್ದೇಶನದ ‘5ಡಿ’ ಸಿನಿಮಾದ ಮೊದಲ ನೋಟವನ್ನು (ಲುಕ್) ಭಾನುವಾರ ಬಿಡುಗಡೆ ಮಾಡಿ ಮಾತನಾಡಿದ ಅವರು, ‘ನಾನೂ ಮೊದಲು ಒಬ್ಬ ಚಿತ್ರ ಪ್ರದರ್ಶಕ. ಇಂದಿರಾ ಗಾಂಧಿ ಹೆಸರಲ್ಲಿ ನನ್ನ ಚಿತ್ರಮಂದಿರ ಇತ್ತು. ನನ್ನ ಅನೇಕ ಸ್ನೇಹಿತರು ಸಿನಿಮಾ ರಂಗದಲ್ಲಿದ್ದಾರೆ. 25 ವರ್ಷಗಳಿಂದ ಇಂಥ ಸಮಾರಂಭಗಳಿಗೆ ನನ್ನನ್ನು ಕರೆಯುತ್ತಾರೆ. ಒಂದೆರಡು ಬಾರಿ ಹೋಗಿದ್ದು ಬಿಟ್ಟರೆ, ಹೆಚ್ಚಿಗೆ ಹೋಗಿಲ್ಲ’ ಎಂದರು.

‘ಬೆಂಗಳೂರಿಗೆ ಬರಿಗೈಲಿ ಬಂದು 50ಕ್ಕೂ ಹೆಚ್ಚು ಸಿನಿಮಾ ನಿರ್ದೇಶನ ಮಾಡಿದ ನಾರಾಯಣ್ ಅವರ ಸಾಧನೆ ಶ್ಲಾಘನೀಯ. ಕೋವಿಡ್‌ನಿಂದ ಚಿತ್ರರಂಗ, ಪ್ರವಾಸೋದ್ಯಮ ಎಲ್ಲವೂ ನೆಲಕಚ್ಚಿವೆ. ಚಿತ್ರಮಂದಿರ ಮಾಲೀಕರಿಂದ ಹಿಡಿದು ಕಲಾವಿದರು, ತಂತ್ರಜ್ಞರು ಎಲ್ಲರೂ ಸಂಕಷ್ಟದಲ್ಲಿದ್ದಾರೆ. ಎಲ್ಲರ ಬಡ್ಡಿ ಮೀಟರ್ ಏರುತ್ತಲೇ ಇದೆ. ಎಷ್ಟೋ ಕಲಾವಿದರು, ನಿರ್ಮಾಪಕರು ಬೀದಿಗೆ ಬಿದ್ದಿದ್ದಾರೆ. ಲಾಕ್ ಡೌನ್‌ನಿಂದ ಬಾಡಿಗೆ, ವಿದ್ಯುತ್ ಬಿಲ್ ಕಟ್ಟಲು ಚಿತ್ರಮಂದಿರ ಮಾಲೀಕರಿಗೆ ಆಗುತ್ತಿಲ್ಲ. ಸರ್ಕಾರ ಯಾವುದೇ ಸಹಕಾರ ನೀಡುತ್ತಿಲ್ಲ. ಸಂಕಷ್ಟದಲ್ಲಿರುವವರಿಗೆ ಧೈರ್ಯ ತುಂಬುವ ಪ್ರಯತ್ನ ಮಾಡಿಲ್ಲ. ಸರ್ಕಾರ ಈ ಬಗ್ಗೆ ಕಾಳಜಿ ವಹಿಸಬೇಕು’ ಎಂದರು.

ಎಸ್. ನಾರಾಯಣ್ ಮಾತನಾಡಿ, ‘ಚಿತ್ರದ ಮೊದಲ ಶೆಡ್ಯೂಲ್ ಯಶಸ್ವಿಯಾಗಿದ್ದು, ಎರಡನೇ ಶೆಡ್ಯೂಲ್ ಈಗ ಆರಂಭವಾಗಲಿದೆ. ಇಂದು ಚಿತ್ರದ ಮೊದಲ ಲುಕ್ ಬಿಡುಗಡೆ ಮಾಡಿದ್ದೇವೆ’ ಎಂದರು.

ಶೀಘ್ರ ಸಿಎಂ ಆಗಲಿ: ‘ಸಿನಿಮಾದಿಂದ ಬಂದ ಅನೇಕರು ಮುಖ್ಯಮಂತ್ರಿ ಆಗಿದ್ದಾರೆ. ಎನ್.ಟಿ. ರಾಮರಾವ್, ಎಂ.ಜಿ. ರಾಮಚಂದ್ರನ್, ಜಯಲಲಿತಾ, ಕರುಣಾನಿಧಿ ಹೀಗೆ. ರೊನಾಲ್ಡ್ ರೇಗನ್ ಅಮೆರಿಕ ಅಧ್ಯಕ್ಷರಾದರು. ಅದೇ ರೀತಿ ಡಿ.ಕೆ. ಶಿವಕುಮಾರ್ ಕೂಡಾ ಮುಖ್ಯಮಂತ್ರಿ ಆಗುತ್ತಾರೆ ಎಂಬ ನಂಬಿಕೆ ಇದೆ’ ಎಂದು ರಾಜೇಂದ್ರ ಸಿಂಗ್ ಬಾಬು ವಿಶ್ವಾಸ ವ್ಯಕ್ತಪಡಿಸಿದರು.



ಕೆಎಚ್‌ಬಿ ಬಡಾವಣೆ ನಿವಾಸಿಗಳು ಫಲಕ ಹಿಡಿದು ಪ್ರತಿಭಟನೆ ನಡೆಸಿದರು.

‘ಕೆಎಚ್‌ಬಿ ಬಡಾವಣೆ ಬಿಬಿಎಂಪಿಗೆ ಹಸ್ತಾಂತರಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೂಲಸೌಕರ್ಯಗಳಿಂದ ವಂಚಿತಗೊಂಡಿರುವ ಕೆಂಗೇರಿಯ ಬಂಡೇಮಠ ಬಳಿ ಇರುವ ಕೆ.ಎಚ್.ಬಿ ಬಡಾವಣೆಯನ್ನು ಬಿಬಿಎಂಪಿಗೆ ಹಸ್ತಾಂತರಿಸಬೇಕು’ ಎಂದು ಒತ್ತಾಯಿಸಿ ಬಡಾವಣೆಯ ನಿವಾಸಿಗಳು ಭಾನುವಾರ ಪ್ರತಿಭಟನೆ ನಡೆಸಿದರು.

‘15 ವರ್ಷಗಳ ಹಿಂದೆ ಕರ್ನಾಟಕ ಗೃಹ ಮಂಡಳಿ ಅಭಿವೃದ್ಧಿಪಡಿಸಿದ ಬಡಾವಣೆ ಅವ್ಯವಸ್ಥೆಯ ಆಗರವಾಗಿದೆ. ಕಳಪೆ ಕಾಮಗಾರಿಯಿಂದಾಗಿ ರಸ್ತೆಗೆ ಹಾಕಿದ್ದ ಡಾಂಬರು ಒಂದೇ ತಿಂಗಳಲ್ಲಿ ಹಾಳಾಗಿದೆ. ಗುಂಡಿಗಳಲ್ಲಿ ನೀರು ನಿಲ್ಲುತ್ತದೆ. ಇದರಿಂದ ಅಪಘಾತಗಳೂ ಸಂಭವಿಸುತ್ತಿವೆ’ ಎಂದು ನಿವಾಸಿಗಳು ದೂರಿದರು.

‘ಬಡಾವಣೆಯ ಬಹುತೇಕ ವಿದ್ಯುತ್ ಕಂಬಗಳಲ್ಲಿ ಬೀದಿ ದೀಪಗಳಿಲ್ಲ. ರಾತ್ರಿ ವೇಳೆ ಸಂಚರಿಸಲು ಬೆಳಕು ಇಲ್ಲ. ರಸ್ತೆಗಳಲ್ಲಿ ಸುರಿದಿರುವ ಕಸದಿಂದ ಕೆಎಚ್‌ಬಿ ಎಂದರೆ ‘ಕಸ ಹಾಕೋ ಬಡಾವಣೆ’ ಎಂಬಂತಾಗಿದೆ. ಕೆಲವರು ಕಸಕ್ಕೆ ಬೆಂಕಿ ಇಡುವುದರಿಂದ ದಟ್ಟ ಹೊಗೆ ಬರುತ್ತಿದ್ದು, ಸ್ಥಳೀಯರ ಆರೋಗ್ಯದ ಮೇಲೂ ಪರಿಣಾಮ ಬೀರುತ್ತಿದೆ. ಈ ಬಗ್ಗೆ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

ಈ ಸಂಬಂಧ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಮತ್ತು ಸ್ಥಳೀಯ ಶಾಸಕರೂ ಆಗಿರುವ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರಿಗೆ ಬಡಾವಣೆ ನಿವಾಸಿಗಳು ಇ-ಮೇಲ್ ಮೂಲಕ ಮನವಿ ಪತ್ರ ಸಲ್ಲಿಸಿದ್ದಾರೆ.

ಸುದ್ದಿ 2 ನಿಮಿಷ

ವಿಮಾನ ನಿಲ್ದಾಣ ಮಾರ್ಗಕ್ಕೆ ಎರಡು ಸಾವಿರ ಮರ ಬಲಿ ?

ಬೆಂಗಳೂರು: ‘ನಮ್ಮ ಮೆಟ್ರೊ’ ಎರಡನೇ ಹಂತದಲ್ಲಿ ಕೆ.ಆರ್. ಪುರದಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆಗೆ (2ಬಿ) ಮೆಟ್ರೊ ಮಾರ್ಗ ನಿರ್ಮಾಣಕ್ಕೆ ಸುಮಾರು 2000 ಮರಗಳು ಬಲಿಯಾಗುವ ಸಾಧ್ಯತೆ ಇದೆ.

ಈ ಮೊದಲು 1,507 ಮರಗಳನ್ನು ಕಡಿಯುವುದಕ್ಕೆ ಅನುಮತಿ ಕೋರಿದ್ದ ಬೆಂಗಳೂರು ಮೆಟ್ರೊ ರೈಲು ನಿಗಮವು (ಬಿಎಂಆರ್‌ಸಿಎಲ್) ಶನಿವಾರ ಹೆಚ್ಚುವರಿಯಾಗಿ 429 ಮರಗಳನ್ನು ಕಡಿಯಲು ಅನುಮತಿಗಾಗಿ ಮನವಿ ಮಾಡಿದೆ.

2ಬಿ ಮಾರ್ಗದಲ್ಲಿನ ಕಸ್ತೂರಿನಗರದಿಂದ ಕೆಂಪಾಪುರದವರೆಗೆ 1,507 ಮರಗಳನ್ನು ಕಡಿಯಬೇಕಾಗುತ್ತದೆ ಎಂದು ಬಿಬಿಎಂಪಿ ಅರಣ್ಯ ವಿಭಾಗಕ್ಕೆ ನಿಗಮವು ಪ್ರಸ್ತಾವ ಸಲ್ಲಿಸಿತ್ತು. ಈ ಮಾರ್ಗದಲ್ಲಿ ಎಂಟು ಮೆಟ್ರೊ ನಿಲ್ದಾಣಗಳ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ.

ಇದೇ ಮಾರ್ಗದಲ್ಲಿ ಹೆಬ್ಬಾಳದಿಂದ ಬಾಗಲೂರು ಅಡ್ಡರಸ್ತೆಯವರೆಗೆ ಮೆಟ್ರೊ ಮಾರ್ಗ ನಿರ್ಮಾಣಕ್ಕೆ 429 ಮರಗಳನ್ನು ಕಡಿಯಬೇಕಾಗಿದೆ ಎಂದು ನಿಗಮ ಹೇಳಿದೆ. ಇಲ್ಲಿ ಐದು ಮೆಟ್ರೊ ನಿಲ್ದಾಣಗಳು ತಲೆ ಎತ್ತಲಿವೆ. 2ಬಿ ಮಾರ್ಗ ನಿರ್ಮಾಣಕ್ಕೆ ಬಲಿಯಾಗುವ ಮರಗಳ ಒಟ್ಟು ಸಂಖ್ಯೆ 1,936ಕ್ಕೆ ಏರಿದಂತಾಗಿದೆ. ಮುಂದಿನ ದಿನಗಳಲ್ಲಿ ಈ ಸಂಖ್ಯೆ ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ.

ಸಿಲ್ಕ್ ಬೋರ್ಡ್‌ನಿಂದ ಕೆ.ಆರ್. ಪುರದವರೆಗಿನ (2ಎ) ಮಾರ್ಗಕ್ಕೆ 1,859 ಮರಗಳನ್ನು ಕಡಿಯಲು ಈಗಾಗಲೇ ಬಿಎಂಆರ್‌ಸಿಎಲ್ ಅನುಮತಿ ಕೋರಿದ್ದು, ಬಿಬಿಎಂಪಿ ಅರಣ್ಯ ವಿಭಾಗ ಈಗಾಗಲೇ ಈ ಕುರಿತು ಅಧಿಸೂಚನೆಯನ್ನೂ ಹೊರಡಿಸಿದೆ.

‘ಆರ್‌ಪಿಐನಿಂದ ಪರಿಶಿಷ್ಟರು ಮುಖ್ಯಮಂತ್ರಿ ಅಭ್ಯರ್ಥಿ’



ಬೆಂಗಳೂರು: ‘ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳಲ್ಲಿ ಪರಿಶಿಷ್ಟ ಜಾತಿಯವರನ್ನು ಮುಖ್ಯಮಂತ್ರಿ ಸ್ಥಾನದಲ್ಲಿ ಕೂರಿಸುವುದಿಲ್ಲ. ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಆರ್‌ಪಿಐ) ಪಕ್ಷದಿಂದಲೇ ಪರಿಶಿಷ್ಟ ಜಾತಿಯ ಮುಖ್ಯಮಂತ್ರಿ ಅಭ್ಯರ್ಥಿಯನ್ನು ತಯಾರು ಮಾಡಲಿದ್ದೇವೆ’ ಎಂದು ಆರ್‌ಪಿಐ ರಾಜ್ಯ ಘಟಕದ ಅಧ್ಯಕ್ಷ ಎಂ.ವೆಂಕಟಸ್ವಾಮಿ ತಿಳಿಸಿದರು.

ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ರಾಜ್ಯ ಸಮಿತಿ ಸಭೆ ಹಾಗೂ ಹೊಸ ಮುಖಂಡರ ಸೇರ್ಪಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಸರ್ಕಾರ ಜಾತಿ ಆಧಾರಿತ ಜನಗಣತಿ ನಡೆಸಬೇಕು ಹಾಗೂ ಕಾಂತರಾಜು ಆಯೋಗದ ವರದಿ ಅನುಷ್ಠಾನಗೊಳಿಸಬೇಕು. ಭೂ ಪರಭಾರೆ ನಿಷೇಧ ಕಾಯ್ದೆಗೆ ತಿದ್ದುಪಡಿ ತರಬೇಕು’ ಎಂದೂ ಆಗ್ರಹಿಸಿದರು.

ವಿವಿಧ ಪಕ್ಷಗಳ 13 ಮುಖಂಡರು ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾಗೆ ಸೇರ್ಪಡೆಯಾದರು.

‘ರಾಜ್ಯ ರಾಜಕಾರಣದ ಅಜಾತಶತ್ರು ಎಂ.ಪಿ.ಪ್ರಕಾಶ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದಿವಂಗತ ಎಂ.ಪಿ.ಪ್ರಕಾಶ್ ಅವರು ಈ ನಾಡು ಕಂಡ ಅಪರೂಪದ ರಾಜಕಾರಣಿ. ಸಮಾಜವಾದಿ ಚಿಂತಕ. ಸರಳತೆ ಹಾಗೂ ಸಜ್ಜನಿಕೆಗೆ ಹೆಸರಾಗಿದ್ದ ಅವರು ರಾಜ್ಯ ರಾಜಕಾರಣದ ಅಜಾತ ಶತ್ರುವಾಗಿದ್ದರು’ ಎಂದು ಪ್ರಕಾಶ್ ಅವರ ಒಡನಾಡಿಗಳು ಸ್ಮರಿಸಿದರು.

ಬೆಂಗಳೂರು ನಗರ ಶರಣ ಸಾಹಿತ್ಯ ಪರಿಷತ್ತು ಹಾಗೂ ಹೂವಿನ ಹಡಗಲಿಯ ಎಂ.ಪಿ.ಪ್ರಕಾಶ್ ಪ್ರತಿಷ್ಠಾನದ ಆಶ್ರಯದಲ್ಲಿ ಆನ್‌ಲೈನ್ ಮೂಲಕ ಭಾನುವಾರ ನಡೆದ ಎಂ.ಪಿ.ಪ್ರಕಾಶ್ ಅವರ 81ನೇ ಜನ್ಮದಿನಾಚರಣೆ ಹಾಗೂ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಅನೇಕರು ಪ್ರಕಾಶ್ ಅವರೊಂದಿಗಿನ ಒಡನಾಟ ಮೆಲುಕು ಹಾಕಿದರು.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ‘ಪ್ರಕಾಶ್ ಅವರನ್ನು ಜನ ಬಹಳ ಪ್ರೀತಿ, ವಿಶ್ವಾಸದಿಂದ ಕಾಣುತ್ತಿದ್ದರು. ವಿಧಾನಸಭೆಯಲ್ಲಿ ಅವರು ಸದಾ ಸರ್ಕಾರದ ಬೆನ್ನಿಗೆ ನಿಲ್ಲುತ್ತಿದ್ದರು. ಅವರಿಗೆ ವಿರೋಧಿಗಳೇ ಇರಲಿಲ್ಲ’ ಎಂದರು.

ಚಿಂತಕ ಎಚ್.ಎಸ್.ಶಿವಪ್ರಕಾಶ್ ‘ಎಂ.ಪಿ.ಪ್ರಕಾಶ್ ಅವರು ಸಾಂಸ್ಕೃತಿಕ ಕ್ಷೇತ್ರದಿಂದ ರಾಜಕಾರಣಕ್ಕೆ ಬಂದವರು. ಸಚಿವರಾಗಿದ್ದ ಅವಧಿಯಲ್ಲಿ ಜನಪರ ಯೋಜನೆಗಳನ್ನು ಜಾರಿಗೊಳಿಸಿದ್ದರು. ಗಾಂಧಿ, ಲೋಹಿಯಾ ವಾದವನ್ನು ಅರ್ಥ ಮಾಡಿಕೊಂಡಿದ್ದರು’ ಎಂದರು.

ಚಿಂತಕ ಕೆ.ಎಸ್.ನಾಗರಾಜ್ ‘ಸಾಹಿತ್ಯ ಮತ್ತು ಸಂಸ್ಕೃತಿಯ ನಂಟಿರುವ ಅಪರೂಪದ ರಾಜಕಾರಣಿಗಳಲ್ಲಿ ಎಂ.ಪಿ. ಪ್ರಕಾಶ್ ಕೂಡ ಒಬ್ಬರು. ಹೂವಿನ ಹಡಗಲಿಯನ್ನು ಸಾಂಸ್ಕೃತಿಕ ರಾಜಧಾನಿಯನ್ನಾಗಿ ರೂಪಿಸಿದ್ದರು’ ಎಂದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಗೊ.ರು.ಚನ್ನಬಸಪ್ಪ, ‘ರಾಜಕೀಯ ಹಾಗೂ ಸಾಹಿತ್ಯ ವಲಯದಲ್ಲಿ ಪ್ರಕಾಶ್‌ಗೆ ದೊಡ್ಡ ಮನ್ನಣೆ ಇತ್ತು. ಸಂಗೀತದ ಬಗ್ಗೆ ಅಪಾರ ಆಸಕ್ತಿ ಹೊಂದಿದ್ದರು’ ಎಂದರು.

ಎಂ.ಪಿ.ಪ್ರಕಾಶ್ ಅವರ ಪುತ್ರಿ ವೀಣಾ ಮಹಾಂತೇಶ್, ಬೆಂಗಳೂರು ನಗರ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ಇದ್ದರು.

ವಿದ್ಯುತ್ ವ್ಯತ್ಯಯ ಇಂದಿನಿಂದ

ಬೆಂಗಳೂರು: ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ಜಯನಗರ ಉಪವಿಭಾಗದ ವ್ಯಾಪ್ತಿಯಲ್ಲಿ ಇದೇ 12ರಿಂದ 17ರವರೆಗೆ ಬೆಳಿಗ್ಗೆ 10ರಿಂದ ಸಂಜೆ 5ರ ತನಕ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

12ರಿಂದ 14: ನಂಜಪ್ಪ ಬಡಾವಣೆ, ವಿನಾಯಕ ನಗರ, ಚಿಕ್ಕಲಕ್ಷ್ಮಿ ಬಡಾವಣೆ, ಮಹಾಲಿಂಗೇಶ್ವರ ಕೊಳೆಗೇರಿ, ಚಂದ್ರಪ್ಪ ಬಡಾವಣೆ, ರಂಗದಾಸಪ್ಪ ಬಡಾವಣೆ, ಗುಪ್ತ ಬಡಾವಣೆ, ಲಾಲ್‌ಜಿ ನಗರ, ಲಕ್ಕಸಂದ್ರ, ಬಂಡೆ ಕೊಳೆಗೇರಿ, ಚಿನ್ನಯ್ಯ ಪಾಳ್ಯ, ವಿಲ್ಸನ್ ಗಾರ್ಡನ್, ಮುರಳಿ ನಗರ, ಜೋಗಿ ಕಾಲೊನಿ, ಮಡಿವಾಳ, ವೆಂಕಟೇಶ್ವರ ಬಡಾವಣೆ, ಬೃಂದಾವನ ನಗರ ಮತ್ತು ಸುತ್ತಮುತ್ತಲಿನ ಪ್ರದೇಶ.

ಬಂಡೆ ಪಾರ್ಕ್, ಡಿಯೋ ಹೈಟ್ಸ್ ಬಡಾವಣೆ, ರಾಯಲ್ ಮೆರಿಡಿಯನ್ ಲೇಔಟ್, ಪಟೇಲ್ ಬಡಾವಣೆ, ನಂಜುಂಡಯ್ಯ ಬಡಾವಣೆ, ಬೇಗೂರು ಸರ್ಕಾರಿ ಶಾಲೆ. ಕೃಷ್ಣ ಬಡಾವಣೆ, ಸುಬ್ರಮಣ್ಯ ತೋಟ, ವಾಲ್‌ಮಾರ್ಕ್ ಅಪಾರ್ಟ್‌ಮೆಂಟ್ ಸಮುಚ್ಚಯ, ಬೇಗೂರು ಕೊಪ್ಪ ರಸ್ತೆ, ಎಲ್ ಆ್ಯಂಡ್ ಟಿ ಸೌತ್ ಸಿಟಿ, ಕಮ್ಮನಹಳ್ಳಿ, ಸೆಂಟ್ರಲ್ ಎಕ್ಸೈಸ್ ಬಡಾವಣೆ, ನಾರಾಯಣ ರೆಡ್ಡಿ ಬಡಾವಣೆ, ಎಲೆಕ್ಟ್ರಾನಿಕ್ ಸಿಟಿ, ಎಚ್‌ಎಸ್‌ಆರ್ 19ನೇ ಮುಖ್ಯರಸ್ತೆ, ಟಿ.ವಿ.ಎಸ್. ಷೋ ರೂಂ, ಆರೋಗ್ಯ ಆಹಾರ್ ಹೋಟೆಲ್, ಗೊಲ್ಲಹಳ್ಳಿ, ಹೊಮ್ಮದೇವನಹಳ್ಳಿ, ಬೆಟ್ಟದಾಸನಪುರ, ಮೈಲಸಂದ್ರ, ವಿಜಯ ಬ್ಯಾಂಕ್ ಬಡಾವಣೆ, ಅಗರ ಗ್ರಾಮದ ಒಂದು ಭಾಗ, ಎಚ್.ಎಸ್.ಆರ್. ಬಡಾವಣೆ, ಅಗರ ಕೆರೆ ಮುಖ್ಯ ರಸ್ತೆ.

15ರಿಂದ 17: ಆಡುಗೋಡಿ ಪೊಲೀಸ್ ಕ್ವಾರ್ಟರ್ಸ್, ಕೋರಮಂಗಲ 8ನೇ ಬ್ಲಾಕ್, ಸೇಂಟ್ ಜಾನ್ಸ್ ಆಸ್ಪತ್ರೆ, ಬಿಗ್ ಬಜಾರ್, ಅಕ್ಸೆಂಚರ್, ಕೆಎಂಎಫ್ ಕ್ವಾರ್ಟರ್ಸ್, ಡೇರಿ, ಲಕ್ಕಸಂದ್ರ, ವಿಲ್ಸನ್ ಗಾರ್ಡನ್, ಮಡಿವಾಳ. ಎಚ್‌ಎಸ್‌ಆರ್ 5ನೇ ಮುಖ್ಯರಸ್ತೆ, ವಿನಾಯಕ ಬಡಾವಣೆ, ಕೂಡ್ಲು, ಮೈಕೊ ಬಡಾವಣೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ನಗರದಲ್ಲಿ ಇಂದು

ಚಿಂತಕ ಎಂ.ಪಿ.ಪ್ರಕಾಶ್ ಅವರ ಜನ್ಮದಿನದ ಅಂಗವಾಗಿ ‘ಈಗ ನಮ್ಮ ಜೊತೆ ಎಂ.ಪಿ.ಪ್ರಕಾಶ್ ಇರಬೇಕಿತ್ತು’ ಚಿಂತನಾ ಕಾರ್ಯಕ್ರಮ: ಉದ್ಘಾಟನೆ–ಸಾಣೇಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಅಧ್ಯಕ್ಷತೆ–ವಿ.ಆರ್.ಸುದರ್ಶನ್, ಚಿಂತನೆ–ಮೋಹನ್ ಕೊಂಡಜ್ಜಿ, ಎಸ್.ಜಿ.ಸಿದ್ಧರಾಮಯ್ಯ, ಎಂ.ಎಸ್.ಮೂರ್ತಿ, ಸಾಸಿವೆಹಳ್ಳಿ ಸತೀಶ್, ಎಂ.ಪಿ.ಸುಮಾ ವಿಜಯ್, ಶ್ರೀನಿವಾಸ ಜಿ.ಕಪ್ಪಣ್ಣ, ಆಯೋಜನೆ–ರಂಗ ವಿಜಯಾ ಮತ್ತು ರಂಗಚಂದಿರ, ಸಂಜೆ 6 (ಆನ್‌ಲೈನ್ ಕಾರ್ಯಕ್ರಮ)

ಇನ್ನರ್‌ವೀಲ್ ಕ್ಲಬ್ ಆಫ್ ಬೆಂಗಳೂರಿನ 319ನೇ ಜಿಲ್ಲೆಯ ನೂತನ ಅಧ್ಯಕ್ಷರ ಅಧಿಕಾರ ಸ್ವೀಕಾರ: ವಿರಿನಾ ಸುಬ್ಬಯ್ಯ, ಅತಿಥಿ–ಲತಿಕಾ ಪೈ, ಭಾಗವಹಿಸುವವರು–ಜಿಲ್ಲಾ ಅಧ್ಯಕ್ಷೆ ವೀಣಾ ನಿರಂಜನ್, ಪ್ರೇಮಾ ಅಯ್ಯರ್, ಗೀತಾ ವಿಶ್ವನಾಥನ್, ಉದಯಾ ರೆಡ್ಡಿ, ಆಯೋಜನೆ–ಇನ್ನರ್‌ವೀಲ್ ಕ್ಲಬ್, ಸಂಜೆ 7 (ಆನ್‌ಲೈನ್ ಕಾರ್ಯಕ್ರಮ)

‘ವೈದ್ಯಕೀಯ ಮತ್ತು ಎಂಜಿಯರಿಂಗ್ ಅದರಾಚೆಗಿನ ಉದ್ಯೋಗಾವಕಾಶಗಳು’ ಕುರಿತು ಕಾರ್ಯಾಗಾರ: ಮಾತನಾಡುವವರು–ಪ್ರೊ.ಕತ್ರೆ ಶಕುಂತಲಾ, ಎಂ.ಎಸ್. ಶಿವಪ್ರಕಾಶ್, ಬಿ.ಆರ್.ಗುರುಪ್ರಸಾದ್, ಆಯೋಜನೆ–ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಸುರಾನ ಕಾಲೇಜು, ಬೆಳಿಗ್ಗೆ 10.45 (ಆನ್‌ಲೈನ್ ಕಾರ್ಯಕ್ರಮ)

‘ಕಾಂಗ್ರೆಸ್ ಅಧಿಕಾರಕ್ಕೆ ಆಸೆ ಪಡೋ ಪಕ್ಷ ಅಲ್ಲ’


ಶಿವಮೊಗ್ಗ: ‘ಕಾಂಗ್ರೆಸ್ ಅಧಿಕಾರಕ್ಕೆ ಆಸೆ ಪಡೋ ಪಕ್ಷ ಅಲ್ಲ. ಸೇವಾ ಮನೋಭಾವ ಇರುವ ಪಕ್ಷ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಧ್ರುವನಾರಾಯಣ್ ಹೇಳಿದರು.

ಭಾನುವಾರ ಸುದ್ದಿಗಾರೊಂದಿಗೆ ಮಾತನಾಡಿದ ಅವರು, ‘ಮುಖ್ಯಮಂತ್ರಿ ಅಭ್ಯರ್ಥಿ ಯಾರು ಎಂಬುದರ ಕುರಿತು ಯಾರೂ ಮಾತನಾಡಬಾರದು, ಇದು ಸೂಕ್ತ ಸಮಯವಲ್ಲ ಎಂದು ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಸ್ಪಷ್ಟ ಸೂಚನೆ ನೀಡಿದ್ದಾರೆ. ಹಾಗಾಗಿ, ನಾವೆಲ್ಲಾ ಒಟ್ಟಾಗಿದ್ದೇವೆ’ ಎಂದರು.

ಚಿತ್ರಾವಳಿ



ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹೆನ್ನಾಗರದಲ್ಲಿ ಶಾಸಕ ಎಂ. ಕೃಷ್ಣಪ್ಪ ಅವರು ದಿನಸಿ ಕಿಟ್‌ಗಳನ್ನು ವಿತರಿಸಿದರು. ಬಿಜೆಪಿ ಮುಖಂಡರಾದ ಚುಂಚಘಟ್ಟ ಸುಬ್ರಮಣಿ, ಕೆ.ಸೋಮಶೇಖರ್, ಶಶಿಕಲಾ ಜಯರಾಮ್ ಇದ್ದರು



ಬೆಂಗಳೂರು ದಕ್ಷಿಣ ಕ್ಷೇತ್ರ ವ್ಯಾಪ್ತಿಯ ಗೊಟ್ಟಿಗೆರೆ ವಾರ್ಡ್‌ನ ಜಂಬೂಸವಾರಿ ದಿಣ್ಣೆಯಲ್ಲಿ ಬಡವರು ಮತ್ತು ಕಾರ್ಮಿಕರಿಗೆ ರಾಷ್ಟ್ರೀಯ ಮಜ್ದೂರ್ ಕಾಂಗ್ರೆಸ್ ವತಿಯಿಂದ ನೀಡಿದ ದಿನಸಿ ಕಿಟ್‌ಗಳನ್ನು ಕಾಂಗ್ರೆಸ್ ಮುಖಂಡ ಆರ್.ಕೆ.ರಮೇಶ್ ಉಚಿತವಾಗಿ ವಿತರಿಸಿದರು. ಶ್ರೀಧರ್ ಲಕ್ಷ್ಮಣ್, ಎಸ್.ಎಸ್. ಪ್ರಕಾಶಂ, ಶೌಕತ್ ಅಲಿ ಇದ್ದರು

ಮುಗಿಯದ 110 ಹಳ್ಳಿ ಯೋಜನೆ ಕಾಮಗಾರಿ; ವಾಹನ ಸಂಚಾರಕ್ಕೆ ತಿಣುಕಾಟ

ಎಲ್ಲೆಲ್ಲೂ ಕಲ್ಲು–ಗುಂಡಿಗಳ ಹಾದಿ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಡಾಂಬರು ಹಾಕಿದ್ದ ರಸ್ತೆಯನ್ನೇ ಕಾವೇರಿ ನೀರಿಗಾಗಿ ಮತ್ತೆ ಅಗೆದರು, ಒಳಚರಂಡಿ ಕಾಮಗಾರಿಗೆ ಅಗೆದ ರಸ್ತೆಗಳೆಲ್ಲಾ ಕಲ್ಲು–ಗುಂಡಿಗಳ ಹಾದಿಯಾದವು, ಸಂಚಾರ ಸಮಸ್ಯೆಯಿಂದ ನಲುಗಿ ಹೋಗಿರುವ ಹಳ್ಳಿಗಳು...

ಇದು ಯಶವಂತಪುರ ವಿಧಾನ ಸಭಾ ಕ್ಷೇತ್ರದ 19 ಹಳ್ಳಿಗಳ ಸ್ಥಿತಿ. 110 ಹಳ್ಳಿ ಯೋಜನೆಯಡಿ ಕಾಮಗಾರಿ ಆರಂಭವಾಗಿ ಹಲವು ವರ್ಷಗಳೇ ಕಳೆದಿದ್ದು, ವಾಹನ ಸಂಚಾರಕ್ಕೆ ಸಾಧ್ಯವಾಗದೆ ಜನರು ಪರದಾಡುತ್ತಿದ್ದಾರೆ. ಅದರಲ್ಲೂ ದೊಡ್ಡಬಿದರಕಲ್ಲು ವಾರ್ಡ್ ವ್ಯಾಪ್ತಿಯ ಅಂದ್ರಹಳ್ಳಿ, ದೊಡ್ಡಬಿದರಕಲ್ಲು, ತಿಪ್ಪೇನಹಳ್ಳಿ, ಚನ್ನನಾಯಕನಪಾಳ್ಯ ಸುತ್ತಮುತ್ತಲ ಹಳ್ಳಿಗಳ ಪರಿಸ್ಥಿತಿ ಹೇಳ ತೀರದಾಗಿದೆ.

ಬಿಸಿಲಾದರೆ ಧೂಳು, ಮಳೆ ಬಂದರೆ ಕೆಸರಿನ ಗದ್ದೆಗಳಾಗಿ ರಸ್ತೆಗಳು ಮಾರ್ಪಡುತ್ತವೆ. ಡಾಂಬರು ಹಾಕದಿದ್ದರೂ ವಾಹನ ಸಂಚಾರಕ್ಕೆ ಯೋಗ್ಯವಾಗುವಂತೆ ಸಮತಟ್ಟನ್ನೂ ಮಾಡಿಲ್ಲ. ದೊಡ್ಡಬಿದರಕಲ್ಲು ಗ್ರಾಮಕ್ಕೆ ಯಾವ ಕಡೆಯಿಂದಲೂ ಸಂಪರ್ಕಿಸಲು ಸಾಧ್ಯವಾಗದಷ್ಟು ಮಟ್ಟಕ್ಕೆ ರಸ್ತೆಗಳು ಹಾಳಾಗಿವೆ. ಇಡೀ ಊರನ್ನೇ ಕಿತ್ತು ಬಿಸಾಡಿದಂತೆ ಆಗಿದೆ.

‘ಚೆನ್ನಾಗಿದ್ದ ರಸ್ತೆಯನ್ನು ಕಾವೇರಿ ನೀರಿನ ಪೈಪ್‌ಲೈನ್ ಮತ್ತು ಒಳಚರಂಡಿ ಕಾಮಗಾರಿ ನಿರ್ವಹಿಸಲು ಅಗೆದಿದ್ದಾರೆ. ವರ್ಷಗಟ್ಟಲೇ ಕಾಮಗಾರಿ ಮುಗಿಯದ ಕಾರಣ ರೋಸಿ ಹೋಗಿದ್ದೇವೆ’ ಎಂದು ಅಲ್ಲಿನ ನಿವಾಸಿಗಳು ಅಳಲು ತೋಡಿಕೊಳ್ಳುತ್ತಾರೆ.

ಈ ಕಾಮಗಾರಿ ಆರಂಭಿಸುವ ಮೊದಲು ರಸ್ತೆಗಳು ತಕ್ಕಮಟ್ಟಿಗೆ ಸಂಚಾರಕ್ಕೆ ಯೋಗ್ಯವಾಗಿದ್ದವು. ಈಗ ಒಂದು ರಸ್ತೆಯಿಂದ ಪಕ್ಕದ ರಸ್ತೆಗೆ ಹೋಗುವುದೇ ಕಷ್ಟವಾಗಿದೆ. ದ್ವಿಚಕ್ರ ವಾಹನ ಸವಾರರು ಆಗಾಗ ಬಿದ್ದು ಕೈ, ಕಾಲು ಮುರಿದುಕೊಳ್ಳುವುದು ತಪ್ಪಿಲ್ಲ ಎಂದು ಹೇಳಿದರು.

‘ಮನೆಯಿಂದ ಹೊರಗೆ ಹೋಗುವುದೆಂದರೆ ಭಯಪಡುವ ಸ್ಥಿತಿ ಇದೆ. ಮಳೆಗಾಲದಲ್ಲಿ ಅದೆಷ್ಟು ಬಾರಿ ಬಿದ್ದಿದ್ದೇವೋ ಲೆಕ್ಕವಿಲ್ಲ. ಈ ಸಮಸ್ಯೆಯಿಂದ ಯಾವಾಗ ಮುಕ್ತಿ ಸಿಗುವುದೋ ಗೊತ್ತಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

8ನೇ ಮೈಲಿಯಿಂದ ಹೇರೋಹಳ್ಳಿ ಮಾರ್ಗವಾಗಿ ಮಾಗಡಿ ರಸ್ತೆಗೆ ಸಂಪರ್ಕ ಕಲ್ಪಿಸುವ ಅಂದ್ರಹಳ್ಳಿ ಮುಖ್ಯ ರಸ್ತೆ ತೀರಾ ಹದಗೆಟ್ಟಿತ್ತು. ಇತ್ತೀಚೆಗೆ ಡಾಂಬರು ಹಾಕಿ ವಾಹನ ಸಂಚಾರಕ್ಕೆ ಯೋಗ್ಯ ಮಾಡಲಾಗಿದೆ. ಅದನ್ನು ಹೊರತುಪಡಿಸಿ ಯಾವುದೇ ಅಡ್ಡ ರಸ್ತೆಗೂ ವಾಹನಗಳನ್ನು ಇಳಿಸಲು ಸಾಧ್ಯವಾಗದ ಸ್ಥಿತಿ ಇದೆ. ಅಂದ್ರಹಳ್ಳಿ ಮುಖ್ಯ ರಸ್ತೆಯನ್ನೂ ಕಾವೇರಿ ನೀರಿನ ಪೈಪ್‌ಲೈನ್ ಅಳವಡಿಕೆಗೆ ಅಲ್ಲಲ್ಲಿ ಅಗೆಯಲಾಗಿದೆ.

‘ಅನಿವಾರ್ಯ ಕಾರಣದಿಂದ ಅಗೆಯಲಾಗಿದ್ದು, ಜಲಮಂಡಳಿಯಿಂದಲೇ ಮರು ನಿರ್ಮಾಣ ಮಾಡಿಸಲಾಗುವುದು’ ಎಂದು ಅಧಿಕಾರಿಗಳು ಹೇಳುತ್ತಾರೆ.

ಉಲ್ಲಾಳು, ಹೆಮ್ಮಿಗೆಪುರ ವಾರ್ಡ್‌ಗಳ ಸ್ಥಿತಿಯೂ ಇದಕ್ಕೆ ಹೊರತಾಗಿಲ್ಲ. ಕಾಮಗಾರಿ ಮುಗಿದು ಸಂಚಾರಕ್ಕೆ ಯೋಗ್ಯವಾದ ರಸ್ತೆಗಳು ನಿರ್ಮಾಣವಾದರೆ ಸಾಕು ಎಂದು ಜನ ಕಾಯುತ್ತಿದ್ದಾರೆ.


ದೊಡ್ಡ ಬಿದರಕಲ್ಲಿನ ಇಂದಿರಾನಗರದಲ್ಲಿನ ರಸ್ತೆಯ ಸ್ಥಿತಿ –ಪ್ರಜಾವಾಣಿ ಚಿತ್ರಗಳು/ಎಂ.ಎಸ್. ಮಂಜುನಾಥ್


ಹೇರೋಹಳ್ಳಿ ಏಕದಂತನಗರದಲ್ಲಿ ರಸ್ತೆ ಹಾಳಾಗಿರುವುದು

110 ಹಳ್ಳಿ
ಸಿಗದ ಅನುದಾನ ಬಿಬಿಎಂಪಿಗೆ ಅವಮಾನ



ಅಂದ್ರಹಳ್ಳಿ ಮುಖ್ಯ ರಸ್ತೆಗೆ ಇತ್ತೀಚೆಗೆ ಡಾಂಬರು ಹಾಕಲಾಗಿತ್ತು. ಕಾವೇರಿ ನೀರಿನ ಪೈಪ್‌ಲೈನ್ ಅಳವಡಿಕೆಗೆ ಮತ್ತೆ ಅಗೆಯುತ್ತಿದ್ದಾರೆ

ಗಿರೀಶ್
ಅಂದ್ರಹಳ್ಳಿ ನಿವಾಸಿ




ಸಂಚಾರಕ್ಕೆ ಯೋಗ್ಯವಾದ ರಸ್ತೆ ಇತ್ತು ಎಂಬುದೇ ಈಗ ಮರೆತು ಹೋಗಿದೆ. ಮನೆಯಿಂದ ಹೊರಗೆ ಹೋಗುವುದೆಂದರೆ ಭಯಪಡುವಂತಾಗಿದೆ

ಹನುಮಂತು, ಅಂದ್ರಹಳ್ಳಿ ನಿವಾಸಿ

ಕಾಮಗಾರಿ ನಡೆಯುತ್ತಿರುವ ಹಳ್ಳಿಗಳು

ದೊಡ್ಡಬಿದರಕಲ್ಲು, ಅಂದ್ರಹಳ್ಳಿ, ಹೊಸಳ್ಳಿ, ಲಿಂಗಧೀರನಹಳ್ಳಿ, ಕರಿಹೋಬನಹಳ್ಳಿ, ಹೇರೋಹಳ್ಳಿ, ಗಿಡದಕೊನ್ನೆನಹಳ್ಳಿ, ಉಲ್ಲಾಳು, ಸೋನೆನಹಳ್ಳಿ, ಗಣಕಲ್ಲು, ಹೆಮ್ಮಿಗೆಪುರ, ಹೊಸಹಳ್ಳಿ, ಮನವರ್ತೆ ಕಾವಲ್, ಸೋಂಪುರ, ವರಹಸಂದ್ರ, ವಾಜರಹಳ್ಳಿ, ರಘುವನಹಳ್ಳಿ,ತಲಘಟ್ಟಪುರ.

‘ಶೇ 65ರಷ್ಟು ಕಾಮಗಾರಿ ಪೂರ್ಣ’



‘ಕಾವೇರಿ ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವ ಕಾಮಗಾರಿ ಶೇ 65ರಷ್ಟು ಪೂರ್ಣಗೊಂಡಿದೆ. ರಸ್ತೆಗಳ ಮರು ನಿರ್ಮಾಣ ಆಗಬೇಕಿದೆ’ ಎಂದು ಸಹಕಾರ ಸಚಿವರೂ ಆಗಿರುವ ಕ್ಷೇತ್ರದ ಶಾಸಕ ಎಸ್.ಟಿ. ಸೋಮಶೇಖರ್ ತಿಳಿಸಿದರು.

ಲಾಕ್‌ಡೌನ್ ಸಂದರ್ಭದಲ್ಲಿ ಕಾಮಗಾರಿ ನಿಧಾನವಾಗಿತ್ತು. ಈಗ ಎರಡು ಸುತ್ತಿನ ಸಭೆ ನಡೆಸಿ ಕಾಮಗಾರಿಗೆ ಮತ್ತೆ ಚುರುಕು ನೀಡಲಾಗಿದೆ ಎಂದರು.

‘ಮಹದೇವಪುರ, ಬೆಂಗಳೂರು ದಕ್ಷಿಣ ಕ್ಷೇತ್ರ ಬಿಟ್ಟರೆ 110 ಹಳ್ಳಿ ಯೋಜನೆ ಕಾಮಗಾರಿ ನಡೆಯುತ್ತಿರುವ ಮೂರನೇ ಅತೀದೊಡ್ಡ ಕ್ಷೇತ್ರ ಎಂದರೆ ಯಶವಂತಪುರ. ಕಾಮಗಾರಿ ಪೂರ್ಣಗೊಳ್ಳಲು ಇನ್ನೂ ₹600 ಕೋಟಿ ಅಗತ್ಯವಿದೆ. ರಸ್ತೆಗಳ ಮರು ನಿರ್ಮಾಣಕ್ಕೆ ಬಿಬಿಎಂಪಿ ಮೂಲಕ ಸದ್ಯಕ್ಕೆ ₹416 ಕೋಟಿಗೆ ಕೋರಿಕೆ ಸಲ್ಲಿಸಲಾಗಿತ್ತು. ಸದ್ಯಕ್ಕೆ ₹200 ಕೋಟಿ ಅನುದಾನ ದೊರೆತಿದೆ’ ಎಂದರು.

‘ಬಿಡುಗಡೆ ಆಗಿರುವ ₹200 ಕೋಟಿ ಅನುದಾನದಲ್ಲಿ ಕಾಮಗಾರಿ ಆರಂಭಿಸಲು ಬಿಬಿಎಂಪಿ ಅಧಿಕಾರಿಗಳು ತಿಣುಕಾಡುತ್ತಿದ್ದಾರೆ. ಜಾಬ್ ಕೋಡ್ ನೀಡಲು ನೂರೆಂಟು ಸಮಸ್ಯೆ ಹೇಳುತ್ತಿದ್ದಾರೆ. ಅಗೆದಿರುವ ರಸ್ತೆಗಳಲ್ಲಿ ವಾಹನ ಸಂಚಾರ ಕಷ್ಟವಾಗಿದೆ. ಮಳೆ ಬಂದರೆ ತೀರಾ ತೊಂದರೆಯಾಗುತ್ತಿದೆ. ಹೀಗಾಗಿ, ಯಾವುದೇ ಕಾರಣ ಹೇಳದೆ ಡಾಂಬರೀಕರಣ ಕಾಮಗಾರಿ ಆರಂಭಿಸಲು ಸೂಚನೆ ನೀಡಲಾಗಿದೆ’ ಎಂದು ತಿಳಿಸಿದರು.

‘ಡಾಂಬರೀಕರಣ ಕಾಮಗಾರಿ ಆರಂಭವಾದರೆ ಹಂತ–ಹಂತವಾಗಿ ಪೂರ್ಣಗೊಳಿಸಲಾಗುವುದು. 110 ಹಳ್ಳಿ ಯೋಜನೆಯಡಿ ಎಲ್ಲ ಕಾಮಗಾರಿ ಸಂಪೂರ್ಣಗೊಳ್ಳಲು ಇನ್ನೂ ಒಂದು ವರ್ಷ ಬೇಕಾಗಲಿದೆ’ ಎಂದರು.

‘ಕಾಂಗ್ರೆಸ್‌ಗೆ ಅಂಬೇಡ್ಕರ್ ಹೆಸರು ಹೇಳುವ ನೈತಿಕತೆ ಇಲ್ಲ’

ಬೆಂಗಳೂರು: ದೇಶದ ಸಂವಿಧಾನದ ಕರ್ತೃ ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಚುನಾವಣೆಯಲ್ಲಿ ಸೋಲಿಸಿದ ಮತ್ತು ಅವರಿಗೆ ಅವಮಾನ ಮಾಡಿರುವ ಕಾಂಗ್ರೆಸ್ ಪಕ್ಷಕ್ಕೆ ಅಂಬೇಡ್ಕರ್ ಹೆಸರನ್ನು ಮುಂದಿಟ್ಟುಕೊಂಡು ಮತಯಾಚಿಸುವ ನೈತಿಕತೆ ಇಲ್ಲ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹೇಳಿದರು.

ಬಿಜೆಪಿ ರಾಜ್ಯ ಘಟಕದ ಕಚೇರಿಯಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಬಿಜೆಪಿ ಪರಿಶಿಷ್ಟ ಜಾತಿ ಮೋರ್ಚಾದ ರಾಜ್ಯ ಕಾರ್ಯಕಾರಿಣಿ ಸಭೆಯನ್ನು ವರ್ಚ್ಯುಯಲ್ ಆಗಿ ಉದ್ಘಾಟಿಸಿ ಅವರು ಮಾತನಾಡಿದರು.

ಬಿಜೆಪಿ ಎಸ್‌ಸಿ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ಎಸ್‌ಸಿ ಮೋರ್ಚಾದ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಗಳಾದ ದಿನಕರ ಬಾಬು, ಜಗದೀಶ್, ಪದಾಧಿಕಾರಿಗಳು ಇದ್ದರು.

ಕೋವಿಡ್ ವಾರಿಯರ್‌ಗಳನ್ನು ಗೌರವಿಸಲು ಸೂಚನೆ

ಬೆಂಗಳೂರು: ಕೋವಿಡ್ ರೋಗಿಗಳ ಚಿಕಿತ್ಸೆ ಮತ್ತು ಸೋಂಕು ನಿಯಂತ್ರಣಕ್ಕಾಗಿ ‘ಸೇನಾನಿ’ಗಳಂತೆ ಕೆಲಸ ಮಾಡುತ್ತಿರುವ ವೈದ್ಯರು, ಶುಶ್ರೂಷಕರು, ಪೊಲೀಸರು ಸೇರಿದಂತೆ ವಿವಿಧ ಇಲಾಖೆಗಳ ಸಿಬ್ಬಂದಿಯನ್ನು ಗುರುತಿಸಿ ಗೌರವ ಸಲ್ಲಿಸುವಂತೆ ಬಿಜೆಪಿ ಮಹಿಳಾ ಮೋರ್ಚಾ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸುಪ್ರೀತ್ ಕೌರ್ ಪಕ್ಷದ ಮಹಿಳಾ ಮೋರ್ಚಾದ ರಾಜ್ಯ ಘಟಕದ ಸದಸ್ಯರಿಗೆ ಸೂಚಿಸಿದರು.

ಬಿಜೆಪಿ ರಾಜ್ಯ ಘಟಕದ ಕಚೇರಿಯಲ್ಲಿ ಭಾನುವಾರ ನಡೆದ ಬಿಜೆಪಿ ಮಹಿಳಾ ಮೋರ್ಚಾದ ರಾಜ್ಯ ಕಾರ್ಯಕಾರಿಣಿ ಉದ್ಘಾಟಿಸಿ ಮಾತನಾಡಿದರು.

ಬಿಜೆಪಿ ರಾಜ್ಯ ಮಹಿಳಾ ಮೋರ್ಚಾ ಅಧ್ಯಕ್ಷೆ ಗೀತಾ ವಿವೇಕಾನಂದ ಅಧ್ಯಕ್ಷತೆ ವಹಿಸಿದ್ದರು. ಬಿಜೆಪಿ ರಾಜ್ಯ ಘಟಕದ ಸಂಘಟನಾ ಪ್ರಧಾನ ಕಾರ್ಯದರ್ಶಿ ಅರುಣ್ ಕುಮಾರ್, ಪ್ರಧಾನ ಕಾರ್ಯದರ್ಶಿ ಅಶ್ವತ್ಥನಾರಾಯಣ ಇದ್ದರು.

ಉತ್ತರ ಪ್ರದೇಶ: ಶಂಕಿತ ಉಗ್ರರ ಸೆರೆ

ಒಂದನೇ ಪುಟದಿಂದ

‘ಸ್ವಾತಂತ್ರ್ಯ ದಿನಾಚರಣೆಗೂ ಮುನ್ನ ರಾಜ್ಯದ ರಾಜಧಾನಿಯ ಜನನಿಬಿಡ ಪ್ರದೇಶದಲ್ಲಿ ಸ್ಫೋಟ ನಡೆಸಲು ಇವರು ಸಂಚು ರೂಪಿಸಿದ್ದರು. ಇವರ ಜತೆಗಾರರ ಬಗ್ಗೆ ಮಾಹಿತಿ ಕಲೆಹಾಕುತ್ತಿದ್ದೇವೆ. ಮತ್ತಷ್ಟು ಶಂಕಿತರನ್ನು ಬಂಧಿಸಲು ಬೇರೆ ಬೇರೆ ಪ್ರದೇಶಗಳಲ್ಲಿ ಶೋಧ ಕಾರ್ಯ ನಡೆಸಲಾಗುತ್ತಿದೆ’ ಎಂದು ಕುಮಾರ್ ಅವರು ಮಾಹಿತಿ ನೀಡಿದ್ದಾರೆ.

‘ಲಖನೌನ ಹೊರವಲಯದಲ್ಲಿ ಇರುವ ಕಾಕೋರಿ ಪ್ರದೇಶದ ಮನೆಯೊಂದರಲ್ಲಿ ಶಂಕಿತ ಉಗ್ರರು ಅಡಗಿದ್ದರು. ನಿಖರ ಮಾಹಿತಿ ಮೇರೆಗೆ ಅಲ್ಲಿ ಶೋಧ ಕಾರ್ಯ ನಡೆಸಲಾಯಿತು. ಇವರಿಬ್ಬರು ಸಿಕ್ಕಿಬಿದ್ದರು. ಬಂಧಿತ ಮಿನಾಜ್ ಮತ್ತು ಮುಶೀರ್ ಅವರಿಗೆ ಪಾಕಿಸ್ತಾನದ ಪೆಷಾವರ ಮತ್ತು ಕ್ವೆಟ್ಟಾದಿಂದ ನಿರ್ದೇಶನಗಳು ಬರುತ್ತಿದ್ದವು’ ಎಂದು ಕುಮಾರ್ ಮಾಹಿತಿ ನೀಡಿದ್ದಾರೆ.

‘ಆತ ನಮ್ಮ ಮನೆ ಹುಡುಗ, ತಪ್ಪು ಮಾಡಿದಾಗ ಹೊಡೆದೆ’

ಬೆಂಗಳೂರು: ‘ನಮ್ಮ ಮನೆ ಹುಡುಗನಿಗೆ ನಾನು ಹೊಡೆದೆ. ತಪ್ಪು ಮಾಡಿದಾಗ ನಾವು ಬಯ್ಯುತ್ತೇವೆ. ಅದು ನಮ್ಮ ನಡುವಿನ ಪ್ರೀತಿಯ ಸಂಬಂಧ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಹೆಗಲ ಮೇಲೆ ಕೈ ಇಟ್ಟ ಪಕ್ಷದ ಕಾರ್ಯಕರ್ತರೊಬ್ಬರಿಗೆ ಶಿವಕುಮಾರ್ ಏಟು ಕೊಟ್ಟ ವಿಡಿಯೊ ತುಣುಕು ಸಾಮಾಜಿಕ ಜಾಲತಾಣಗಳಲ್ಲಿ ಶನಿವಾರ ಹರಿದಾಡಿತ್ತು. ಈ ಕುರಿತು ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, ‘ಆತ ನಮ್ಮ ದೂರದ ಸಂಬಂಧಿ. ಹೆಗಲ ಮೇಲೆ ಕೈ ಹಾಕಿದಾಗ ಬೇರೆಯವರು ಏನು ತಿಳಿಯುತ್ತಾರೆ ಎಂದು ಬೈದೆ. ಜೋರಾಗಿ ಹೊಡೆದದ್ದೂ ನಿಜ. ನಿಮ್ಮ ಖುಷಿಗೆ ನೀವು (ಮಾಧ್ಯಮಗಳು) ಅದನ್ನು ತೋರಿಸುತ್ತಿದ್ದೀರಿ. ನೀವು ಅವನನ್ನು ನಾಯಕನನ್ನಾಗಿ ಮಾಡಿದ್ದೀರಿ’ ಎಂದರು.

ಯಾರೂ ಪ್ರಸ್ತಾಪಿಸಿಲ್ಲ: ‘ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ ನಾನು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದೆ. ನೀರಾವರಿ ಸಚಿವನಾಗಿಯೂ ಕೆಲಸ ಮಾಡಿದ್ದೇನೆ. ಆಗ ಅಕ್ರಮ ಗಣಿಗಾರಿಕೆ ಬಗ್ಗೆ ನನ್ನ ಬಳಿ ಯಾರೂ ಪ್ರಸ್ತಾಪ ಮಾಡಿಲ್ಲ. 10-15 ಕಿ.ಮೀ ದೂರದಲ್ಲಿ ಜಲ್ಲಿಕಲ್ಲು ಉತ್ಪಾದಿಸುವುದರಿಂದ ಹೆಚ್ಚು ವ್ಯತ್ಯಾಸವೇನೂ ಆಗುವುದಿಲ್ಲ. ಗಣಿಗಾರಿಕೆಯಿಂದ ಅಪಾಯವಿದೆ ಎಂಬ ವಿಚಾರವಾಗಿಯೂ ಯಾರೂ ಚರ್ಚೆ ಮಾಡಿಲ್ಲ’ ಎಂದರು.

‘ಗಣಿಗಾರಿಕೆಯ ಬಗ್ಗೆ ನೋಡಿಕೊಳ್ಳಲು ಗಣಿ ಸಚಿವಾಲಯ, ಭೂ ವಿಜ್ಞಾನ ಇಲಾಖೆ ಇದೆ. ನೂರಾರು ಎಂಜಿನಿಯರ್‌ಗಳೂ ಇದ್ದಾರೆ. ನಾವು ಅನಗತ್ಯವಾಗಿ ಜನರಲ್ಲಿ ಆತಂಕ ಮೂಡಿಸುವುದು ಬೇಡ. ಇಂಥ ಚಿಲ್ಲರೆ ಪ್ರಚಾರ ವಿಚಾರದ ಬಗ್ಗೆ ನಾನು ಮಾತನಾಡುವುದಿಲ್ಲ. ಇದು ಸೂಕ್ಷ್ಮ ವಿಚಾರ’ ಎಂದರು.


ರಾಜ್ಯದ ನೂತನ ರಾಜ್ಯಪಾಲರಾಗಿ ಥಾವರಚಂದ್ ಗೆಹಲೋತ್ ಅವರು ಭಾನುವಾರ ಪ್ರಮಾಣವಚನ ಸ್ವೀಕರಿಸಿದರು. ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಅಭಯ್ ಶ್ರೀನಿವಾಸ್ ಓಕಾ ಅವರು ಪ್ರಮಾಣವಚನ ಬೋಧಿಸಿದರು. ನಿರ್ಗಮಿತ ರಾಜ್ಯಪಾಲ ವಜುಭಾಯಿ ವಾಲಾ, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಇದ್ದರು

ರಾಜ್ಯಪಾಲರಾಗಿ ಥಾವರಚಂದ್ ಗೆಹಲೋತ್ ಪ್ರಮಾಣವಚನ

ಬೆಂಗಳೂರು: ರಾಜ್ಯದ ನೂತನ ರಾಜ್ಯಪಾಲರಾಗಿ ಥಾವರಚಂದ್ ಗೆಹಲೋತ್ ಅವರು ಭಾನುವಾರ ಬೆಳಿಗ್ಗೆ ಪ್ರಮಾಣವಚನ ಸ್ವೀಕರಿಸಿದರು. ಇವರು, ರಾಜ್ಯದ 19ನೇ ರಾಜ್ಯಪಾಲರು.

ರಾಜಭವನದ ಗಾಜಿನ ಮನೆಯಲ್ಲಿ ನಡೆದ ಸಮಾರಂಭದಲ್ಲಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಅಭಯ್ ಶ್ರೀನಿವಾಸ್ ಓಕಾ ಅವರು ಅಧಿಕಾರ ಮತ್ತು ಗೋಪ್ಯತೆಯ ಪ್ರಮಾಣವಚನ ಬೋಧಿಸಿದರು. ಗೆಹಲೋತ್ ಅವರು ದೇವರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದರು.

ನಿರ್ಗಮಿತ ರಾಜ್ಯಪಾಲ ವಜುಭಾಯಿ ವಾಲಾ, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಸೇರಿ ಹಲವರು ಉಪಸ್ಥಿತರಿದ್ದರು.


ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವರಾಗಿದ್ದ ಗೆಹಲೋತ್ ಅವರನ್ನು ರಾಜ್ಯದ ನೂತನ ರಾಜ್ಯಪಾಲರನ್ನಾಗಿ ಜುಲೈ 6ರಂದು ನೇಮಕ ಮಾಡಲಾಗಿತ್ತು. 2012ರಿಂದ ಅವರು ರಾಜ್ಯಸಭೆಯ ಸದಸ್ಯರಾಗಿದ್ದರು.

ಮಧ್ಯಪ್ರದೇಶದ ಉಜ್ಜೈನ್ ಜಿಲ್ಲೆಯ ನಾಗ್ಡಾ ತಾಲ್ಲೂಕಿನ ರುಪೆಟಾ ಗ್ರಾಮದಲ್ಲಿ ಜನಿಸಿದ ಗೆಹಲೋತ್, ದೀರ್ಘ ಕಾಲದಿಂದ ಬಿಜೆಪಿಯಲ್ಲಿದ್ದರು. ಮೂರು ಬಾರಿ ಮಧ್ಯಪ್ರದೇಶ ವಿಧಾನಸಭೆಗೆ, ನಾಲ್ಕು ಬಾರಿ ಲೋಕಸಭೆಗೆ ಆಯ್ಕೆಯಾಗಿದ್ದರು.

‘ಜನ ಸೇವೆಗೆ ಬದ್ಧ’

ಪ್ರಮಾಣವಚನ ಸ್ವೀಕಾರದ ಬಳಿಕ ಕನ್ನಡ ಮತ್ತು ಹಿಂದಿಯಲ್ಲಿ ಟ್ವೀಟ್ ಮಾಡಿರುವ ರಾಜ್ಯಪಾಲ ಥಾವರಚಂದ್ ಗೆಹಲೋತ್, ‘ಭಾರತ ಸಂವಿಧಾನದ ಮತ್ತು ಕಾನೂನಿನ ಪರಿರಕ್ಷಣೆ, ಸಂರಕ್ಷಣೆ ಮತ್ತು ಪ್ರತಿರಕ್ಷಣೆ ಹಾಗೂ ಕರ್ನಾಟಕ ರಾಜ್ಯದ ಜನತೆಯ ಸೇವೆ, ಯೋಗಕ್ಷೇಮಕ್ಕಾಗಿ ಪ್ರತಿಬದ್ಧನಾಗಿರುತ್ತೇನೆ ಎಂಬುದಾಗಿ ಪ್ರಮಾಣವಚನ ಸ್ವೀಕರಿಸಿದ್ದೇನೆ’ ಎಂದು ತಿಳಿಸಿದ್ದಾರೆ.

ಶತ್ರುಘ್ನ ಸಿನ್ಹಾ ಶೀಘ್ರ ಟಿಎಂಸಿಗೆ?



ಪಟ್ನಾ/ಕೋಲ್ಕತ್ತ (ಪಿಟಿಐ): ಹಿರಿಯ ಕಾಂಗ್ರೆಸ್ ಮುಖಂಡ ಶತ್ರುಘ್ನ ಸಿನ್ಹಾ ಅವರು ಶೀಘ್ರದಲ್ಲೇ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ಸೇರಲಿದ್ದಾರೆ ಎಂದು ಅವರ ಆಪ್ತ ಮೂಲಗಳು ಭಾನುವಾರ ತಿಳಿಸಿವೆ.

ಟಿಎಂಸಿಗೆ ಸೇರ್ಪಡೆಗೊಳ್ಳುವ ಸಾಧ್ಯತೆಗಳ ಕುರಿತ ವರದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಲು ನಿರಾಕರಿಸಿರುವ ಸಿನ್ಹಾ, ‘ರಾಜಕೀಯಲ್ಲಿ ಯಾವುದೇ ರೀತಿಯ ಸಾಧ್ಯತೆಗಳು ಸಂಭವಿಸಬಹುದು’ ಎಂದು ಹೇಳಿದ್ದಾರೆ.

ಸಿನ್ಹಾ ಅವರು ಮಮತಾ ಬ್ಯಾನರ್ಜಿ ಅವರೊಂದಿಗೆ ಉತ್ತಮ ಸಂಬಂಧ ಹೊಂದಿದ್ದಾರೆ. ಅವರು ಟಿಎಂಸಿಗೆ ಸೇರುವ ಸಂಬಂಧ, ಮಾತುಕತೆ ಮುಂದುವರಿದ ಹಂತದಲ್ಲಿದೆ ಎಂದು ಟಿಎಂಸಿ ನಾಯಕರು ಹೇಳಿದ್ದಾರೆ.


ಯೂತ್ ಕ್ಯಾನ್ ಲೀಡ್ ತಂಡದೊಂದಿಗೆ ಸಂಸದ ತೇಜಸ್ವಿ ಸೂರ್ಯ ಹಾಗೂ ರವಿ ಹೆಗಡೆ

‘ಯೂತ್ ಕ್ಯಾನ್ ಲೀಡ್’ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆಡಳಿತದ ವಿವಿಧ ಮಜಲುಗಳ ಬಗ್ಗೆ ಅರಿಯಲು ಹಾಗೂ ನಾಗರಿಕರ ಜವಾಬ್ದಾರಿ ಹೆಚ್ಚಿಸಲು ‘ಯೂತ್ ಕ್ಯಾನ್ ಲೀಡ್' ಅಭಿಯಾನ ಸಹಕಾರಿ. ಇಂತಹ ಅಭಿಯಾನಗಳು ಹೆಚ್ಚಾಗಬೇಕು’ ಎಂದು ಸಂಸದ ತೇಜಸ್ವಿ ಸೂರ್ಯ ಹೇಳಿದರು.

ಬೆಂಗಳೂರು ದಕ್ಷಿಣ ಸಂಸದರ ಕಚೇರಿ ಆರಂಭಿಸಿರುವ ಈ ಅಭಿಯಾನದ ಕುರಿತು ಅವರು ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಎರಡು ತಿಂಗಳ ಈ ಕಾರ್ಯಕ್ರಮದಲ್ಲಿ ಅರ್ಹ ಅಭ್ಯರ್ಥಿಗಳಿಗೆ ಸರ್ಕಾರಿ ಆಡಳಿತ ಯಂತ್ರದ ಹಲವು ಮಜಲುಗಳು, ನೀತಿನಿರೂಪಣೆಯ ವಿಧಾನ, ಸರ್ಕಾರಿ ಯೋಜನೆಗಳ ಕುರಿತಾದ ಸರ್ವೆ ಸೇರಿದಂತೆ ಹಲವು ಮಾಹಿತಿಯನ್ನು ತಜ್ಞರಿಂದ ಒದಗಿಸಲಾಗುತ್ತದೆ. ಇಂತಹ ಕಾರ್ಯಕ್ರಮಗಳು ಸಾಮಾಜಿಕ ಪರಿವರ್ತನೆಗೆ ನಾಂದಿ ಹಾಡಲಿವೆ’ ಎಂದು ತಿಳಿಸಿದರು.

ಕನ್ನಡಪ್ರಭ ಸಂಪಾದಕ ರವಿ ಹೆಗಡೆ ‘ಇಂತಹ ಕಾರ್ಯಕ್ರಮಗಳಿಂದ ನಾಗರಿಕರಲ್ಲಿ ಸಾಮಾಜಿಕ ಜವಾಬ್ದಾರಿ ಹೆಚ್ಚಿಸಲು ಸಾಧ್ಯ’ ಎಂದರು.

ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಕೋವಿಡ್ –19 ಪೀಡಿತ ಮಕ್ಕಳ ಚಿಕಿತ್ಸೆಗೆ ಸಿದ್ಧತೆ

3ನೇ ಅಲೆ: ಸಜ್ಜಾಗುತ್ತಿದೆ ಮಕ್ಕಳ ಐಸಿಯು

• ವರುಣ್ ಹೆಗಡೆ



ಕೊರೊನಾ ಸೋಂಕಿತರಿಗೆ ಚಿಕಿತ್ಸೆ ನೀಡುತ್ತಿರುವ ಕೆ.ಸಿ. ಜನರಲ್ ಆಸ್ಪತ್ರೆಯ ಐಸಿಯು ಘಟಕ – ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕೋವಿಡ್ ಮೂರನೇ ಅಲೆಯು ಮಕ್ಕಳಿಗೆ ಹೆಚ್ಚಿನ ಅಪಾಯವನ್ನು ತಂದೊಡ್ಡುವ ಸಾಧ್ಯತೆಯಿದೆ ಎಂದು ತಜ್ಞರು ಮುನ್ನೆಚ್ಚರಿಕೆ ನೀಡಿರುವ ಕಾರಣ ನಗರದ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಮಕ್ಕಳ ಚಿಕಿತ್ಸೆಗಾಗಿಯೇ 46 ಹಾಸಿಗೆಗಳ ಅತ್ಯಾಧುನಿಕ ತೀವ್ರ ನಿಗಾ ಘಟಕವನ್ನು (ಐಸಿಯು) ಸಜ್ಜುಗೊಳಿಸಲಾಗುತ್ತಿದೆ.


ಕೋವಿಡ್ ಎರಡನೇ ಅಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಯುವಜನತೆ ಹಾಗೂ ಮಧ್ಯಮ ವಯಸ್ಕರು ಸೋಂಕಿತರಾಗಿ, ಆಸ್ಪತ್ರೆಗೆ ದಾಖಲಾಗಿದ್ದರು. ಇದರಿಂದಾಗಿ ನಗರದ ಬಹುತೇಕ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಕೊರತೆ ಗಂಭೀರ ಸ್ವರೂಪ ಪಡೆದುಕೊಂಡಿತ್ತು. ಕೆಲ ಸೋಂಕಿತರು ವೈದ್ಯಕೀಯ ಆಮ್ಲಜನಕ ಸಂಪರ್ಕ ಹೊಂದಿರುವ ಹಾಸಿಗೆಗಳಿಗಾಗಿ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಟ ನಡೆಸಿದ್ದರು. ಅಕ್ಟೋಬರ್ ಅಥವಾ ನವೆಂಬರ್ ಬಳಿಕ ನಗರದಲ್ಲಿ ಕೋವಿಡ್ ಮೂರನೇ ಅಲೆ ಕಾಣಿಸಿಕೊಳ್ಳುವ ಸಾಧ್ಯತೆಯಿದೆ ಎಂದು ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಅಂದಾಜು ಮಾಡಿದೆ. ಹೀಗಾಗಿ, ಈಗಿನಿಂದಲೇ ಸರ್ಕಾರಿ ಆಸ್ಪತ್ರೆಗಳನ್ನು ಅಣಿಗೊಳಿಸಲಾಗುತ್ತಿದೆ.

ಮೂರನೇ ಅಲೆಗೆ ಸಂಬಂಧಿಸಿದಂತೆ ಡಾ. ದೇವಿಪ್ರಸಾದ್ ಶೆಟ್ಟಿ ನೇತೃತ್ವದ 18 ಮಂದಿ ತಜ್ಞ ವೈದ್ಯರ ಸಮಿತಿಯು ಸರ್ಕಾರಕ್ಕೆ ಈಗಾಗಲೇ ಪ್ರಾಥಮಿಕ ವರದಿ ಸಲ್ಲಿಸಿದೆ. ಬೆಂಗಳೂರಿನಲ್ಲಿಯೇ 45,958 ಮಕ್ಕಳು ಸೋಂಕಿತರಾಗುವ ಬಗ್ಗೆ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಸದ್ಯ ಕೋವಿಡ್ ಪೀಡಿತ ಮಕ್ಕಳ ಚಿಕಿತ್ಸೆಗೆ ಸುಮಾರು 300 ಹಾಸಿಗೆಗಳನ್ನು ನಗರದ ಆಸ್ಪತ್ರೆಗಳಲ್ಲಿ ಮೀಸಲಿಡಲಾಗಿದೆ. ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ ಈಗಾಗಲೇ ಐಸಿಯು ಹಾಸಿಗೆಗಳ ಸಂಖ್ಯೆಯನ್ನು ದ್ವಿಗುಣಗೊಳಿಸಲಾಗಿದೆ. ಅದೇ ರೀತಿ, ಕೆ.ಸಿ. ಜನರಲ್ ಆಸ್ಪತ್ರೆಯನ್ನೂ ಸಜ್ಜುಗೊಳಿಸಲಾಗುತ್ತಿದೆ.

‘ತೀವ್ರತೆ ಕಡಿಮೆಯಿದ್ದರೂ ಮುನ್ನೆಚ್ಚರಿಕೆ’

‘ಕೋವಿಡ್ ಮೂರನೇ ಅಲೆ ಮಕ್ಕಳಿಗೆ ಸಮಸ್ಯೆಯನ್ನು ತಂದೊಡ್ಡುವ ಸಾಧ್ಯತೆ ಇರುವ ಕಾರಣ ಮಕ್ಕಳ ಐಸಿಯುವನ್ನು ಬಲಗೊಳಿಸಲಾಗುತ್ತಿದೆ’ ಎಂದು ಆಸ್ಪತ್ರೆಯ ಮಕ್ಕಳ ವಿಭಾಗದ ಮುಖ್ಯಸ್ಥ ಡಾ. ಲಕ್ಷ್ಮೀಪತಿ ತಿಳಿಸಿದರು.

‘ನೂತನ ಐಸಿಯುವಿನಲ್ಲಿ ಕೇಂದ್ರೀಕೃತ ಹವಾನಿಯಂತ್ರಿತ ವ್ಯವಸ್ಥೆ ಜತೆಗೆ ಅತ್ಯಾಧುನಿಕ ವೈದ್ಯಕೀಯ ಉಪಕರಣಗಳು ಇರಲಿವೆ. ಕೋವಿಡ್‌ನಿಂದ ಚೇತರಿಸಿಕೊಂಡ ಕೆಲ ಮಕ್ಕಳಲ್ಲಿ ಬಹು ಅಂಗಾಂಗ ಉರಿಯೂತ ಸಮಸ್ಯೆ (ಮೆಸ್ಸಿ) ಕಾಣಿಸಿಕೊಳ್ಳುತ್ತಿದೆ. ಮೂರನೇ ಅಲೆಯಲ್ಲಿ ಸೋಂಕಿನಿಂದ ಚೇತರಿಸಿಕೊಂಡ ಮಕ್ಕಳಲ್ಲೂ ಇಂತಹ ಸಮಸ್ಯೆ ಕಾಣಿಸಿಕೊಳ್ಳಬಹುದು. ಚಿಕ್ಕ ಮಕ್ಕಳ ಚಿಕಿತ್ಸೆ ಸಂದರ್ಭದಲ್ಲಿ ಅವರ ಪಾಲಕರು ಕೂಡ ಆಸ್ಪತ್ರೆಯಲ್ಲಿ ಉಳಿದುಕೊಳ್ಳಬೇಕಾಗುತ್ತದೆ. ಇದಕ್ಕೂ ಸೌಕರ್ಯ ಕಲ್ಪಿಸಲಾಗುತ್ತಿದೆ’ ಎಂದು ಹೇಳಿದರು.



3ನೇ ಅಲೆ ಎದುರಿಸಲು ಮಕ್ಕಳ ಐಸಿಯುವನ್ನು ಪ್ರತ್ಯೇಕವಾಗಿ ನಿರ್ಮಿಸಲಾಗುತ್ತಿದೆ. 2 ತಿಂಗಳಲ್ಲಿ ಅದರ ನಿರ್ಮಾಣ ಕಾರ್ಯ ಪೂರ್ಣಗೊಳ್ಳಬಹುದು

ಡಾ. ಲಕ್ಷ್ಮೀಪತಿ, ಕೆ.ಸಿ. ಜನರಲ್ ಆಸ್ಪತ್ರೆಯ ಮಕ್ಕಳ ವಿಭಾಗದ ಮುಖ್ಯಸ್ಥ

ಮೂರನೇ ಅಲೆಯ ಸಂದರ್ಭದಲ್ಲಿ ಮಕ್ಕಳ ಚಿಕಿತ್ಸೆಗೆ ನಗರದ ಆಸ್ಪತ್ರೆಗಳಲ್ಲಿ 1,838ರಿಂದ 3,677 ಹಾಸಿಗೆಗಳನ್ನು ಹೊಂದುವ ಅಗತ್ಯವಿದೆ ಎಂದು ತಜ್ಞರ ಸಮಿತಿ ಶಿಫಾರಸು ಮಾಡಿದೆ. ಅದೇ ರೀತಿ, ತೀವ್ರವಾಗಿ ಅಸ್ವಸ್ಥಗೊಳ್ಳುವ ಮಕ್ಕಳ ಚಿಕಿತ್ಸೆಗೆ ಐಸಿಯು ಹಾಸಿಗೆಗಳನ್ನು ವ್ಯವಸ್ಥೆ ಮಾಡಿಕೊಳ್ಳುವಂತೆ ವರದಿಯಲ್ಲಿ ಸೂಚಿಸಲಾಗಿದೆ. ಹೀಗಾಗಿ, ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಈಗಿನ ಕಟ್ಟಡದ ಮೇಲೆಯೇ ಮತ್ತೊಂದು ಮಹಡಿ ನಿರ್ಮಿಸಲಾಗುತ್ತಿದ್ದು, ಅಲ್ಲಿ ಐಸಿಯು ಘಟಕ ಅಳವಡಿಸಲು ಯೋಜನೆ ರೂಪಿಸಲಾಗಿದೆ.

ವೆಂಟಿಲೇಟರ್ ಅಳವಡಿಕೆ: ‘ಸದ್ಯ ಮಕ್ಕಳ ಚಿಕಿತ್ಸೆಗೆ 35 ಹಾಸಿಗೆಗಳನ್ನು ಮೀಸಲಿಡಲಾಗಿದೆ. ಮೂರನೇ ಅಲೆಯ ಸಂಬಂಧ ಆ ಹಾಸಿಗೆಗಳಿಗೆ ವೆಂಟಿಲೇಟರ್ ಅಳವಡಿಕೆ ಮಾಡಲಾಗುತ್ತದೆ. ಎರಡನೇ ಅಲೆಯಲ್ಲಿ ಐಸಿಯು ಹಾಸಿಗೆಗಳ ಸಂಖ್ಯೆಯನ್ನು 100ಕ್ಕೆ ಹೆಚ್ಚಿಸಲಾಗಿತ್ತು. ಮಕ್ಕಳಿಗಾಗಿಯೇ ಸದ್ಯ ಆರು ಐಸಿಯು ಹಾಸಿಗೆಗಳಿವೆ. ಅವರ ಚಿಕಿತ್ಸೆಗೆ ಅತ್ಯಾಧುನಿಕ ವೈದ್ಯಕೀಯ ಉಪಕರಣಗಳನ್ನೂ ಅಳವಡಿಸಲಾಗುತ್ತಿದೆ’ ಎಂದು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಬಿ. ಆರ್. ವೆಂಕಟೇಶಯ್ಯ ತಿಳಿಸಿದರು.

‘ಮಕ್ಕಳ ಆರೈಕೆ ಬಗ್ಗೆ ಸಾಮಾನ್ಯ ವೈದ್ಯರಿಗೂ ತರಬೇತಿ ನೀಡಲಾಗುತ್ತದೆ. ಗುತ್ತಿಗೆ ಆಧಾರದ ಮೇಲೆ ವೈದ್ಯರು, ಶುಶ್ರೂಷಕರು ಮತ್ತು ಆರೋಗ್ಯ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲಾಗಿದೆ. ಮೂರನೇ ಅಲೆ ಎದುರಿಸಲು ಇನ್ನಷ್ಟು ಮಕ್ಕಳ ತಜ್ಞರ ನೇಮಕಕ್ಕೂ ಪ್ರಸ್ತಾವನೆ ಸಲ್ಲಿಸಲಾಗಿದೆ’ ಎಂದು ವಿವರಿಸಿದರು.

ಸುದ್ದಿ 2 ನಿಮಿಷ

ಕಾವ್ಯಕ್ಕೆ ಕರುಳಿರಬೇಕು, ಆ ಕರುಳಿಗೆ ಕಣ್ಣಿರಬೇಕು: ಬರಗೂರು

ಬೆಂಗಳೂರು: ‘ಕಾವ್ಯ ಅಥವಾ ಸಾಹಿತ್ಯಕ್ಕೆ ಕರುಳಿರಬೇಕು. ಆ ಕರುಳಿಗೆ ಕಣ್ಣಿರಬೇಕು. ಆ ಕಣ್ಣಿಗೆ ಕನಸಿರಬೇಕು. ಕನಸು ಮಣ್ಣು ಮುಟ್ಟಿದ ಮನಸ್ಸಾಗಿರಬೇಕು’ ಎಂದು ಸಾಹಿತಿ ಹಾಗೂ ಚಲನಚಿತ್ರ ನಿರ್ದೇಶಕ ಬರಗೂರು ರಾಮಚಂದ್ರಪ್ಪ ತಿಳಿಸಿದರು.

ಜರ್ಮನಿಯ ಎಷ್ಟಾರ್ನ್‌ನ ರಂಗಮಂಥನ ಸಂಸ್ಥೆಯು ಆನ್‌ಲೈನ್‌ನಲ್ಲಿ ಹಮ್ಮಿಕೊಂಡಿದ್ದ ‘ಕನ್ನಡ ಕಾವ್ಯ ಕನ್ನಡಿ’ ಕವಿಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ಉತ್ತಮ ಕಾವ್ಯಗಳ ರಚನೆಗೆ ಅನುಭವದ ಜೊತೆಗೆ ಅಧ್ಯಯನದ ಅಗತ್ಯವೂ ಹೆಚ್ಚಿದೆ. ಪರಂಪರೆಯ ಪ್ರಜ್ಞೆ ಹಾಗೂ ಸಮಕಾಲೀನ ಪ್ರಜ್ಞೆ ಸೇರಿದಾಗಲೇ ಸಾಹಿತ್ಯ ಸೃಷ್ಟಿಯ ಸಾಧ್ಯತೆಗಳು ಹೆಚ್ಚುತ್ತವೆ. ನಮ್ಮ ಸಂವೇದನಾ ಶೀಲತೆಯೂ ಹೆಚ್ಚಾಗುತ್ತದೆ. ಚಲನಶೀಲತೆಯೂ ಬರುತ್ತದೆ. ಸಾಹಿತ್ಯದ ಸಾಧ್ಯತೆಗಳು ಸ್ಥಾವರವಲ್ಲ ಅವು ಚಲನಶೀಲವಾದುವು. ನಮ್ಮ ಅಂತರಾಳದಿಂದ ಬರುವ ಎಷ್ಟೋ ಮಾತುಗಳು ಕಾವ್ಯದ ಶಕ್ತಿ ಮತ್ತು ಸ್ಪರ್ಶವನ್ನು ಹೊಂದಿರುತ್ತವೆ’ ಎಂದರು.

‘ಅಂತರಂಗದಿಂದ ಬರುವ ಗೊಣಗುವ ಮಾತುಗಳಿಗೂ ಕಾವ್ಯದ ಶಕ್ತಿ ಇರುತ್ತದೆ ಎಂದು ಕವಿಯೊಬ್ಬರು ಹೇಳುತ್ತಾರೆ. ಗದ್ಯ ಮತ್ತು ಪದ್ಯಕ್ಕೆ ವ್ಯತ್ಯಾಸವಿದೆ. ಅದನ್ನು ಅರ್ಥಮಾಡಿಕೊಳ್ಳಬೇಕು. ಕನ್ನಡವನ್ನು ಮನಸ್ಸಿನಲ್ಲಿ ಉಳಿಸಿಕೊಂಡಿರುವುದೇ ಒಂದು ಕಾವ್ಯ. ಮಾತೃ ಭಾಷೆ ಅಥವಾ ಹುಟ್ಟಿ ಬೆಳೆದ ಪ್ರದೇಶದ ಭಾಷೆ ಮತ್ತು ಅಲ್ಲಿನ ನೆನಪುಗಳನ್ನು ಉಳಿಸಿಕೊಂಡಿರುವುದೇ ಕಾವ್ಯದ ಮನಸ್ಸು, ಕವಿಯ ಮನಸ್ಸು’ ಎಂದುತಿಳಿಸಿದರು.

ವಿದುಷಿ ನಂದಿನಿ ನಾರಾಯಣ್ ಇದ್ದರು.



ಪಿಎಚ್‌.ಡಿ ಸೀಟು ಹಂಚಿಕೆ: ಕೌನ್ಸೆಲಿಂಗ್ ಇದೇ 20ಕ್ಕೆ

ಬೆಂಗಳೂರು: 2019ರಲ್ಲಿ ಪಿಎಚ್‌.ಡಿ ನೋಂದಣಿಗಾಗಿ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳಲ್ಲಿನ ಮಾರ್ಗದರ್ಶಕ ಬಳಿ ಬಾಕಿ ಉಳಿದಿರುವ ಸೀಟುಗಳ ಹಂಚಿಕೆಗಾಗಿ ಇದೇ 20ರಂದು ಎರಡನೇ ಸುತ್ತಿನ ಕೌನ್ಸೆಲಿಂಗ್ ನಡೆಯಲಿದೆ.

ಸಂಬಂಧಪಟ್ಟ ಸ್ನಾತಕೋತ್ತರ ವಿಭಾಗಗಳಲ್ಲಿ ಅಂದು ಬೆಳಿಗ್ಗೆ 9.30ಕ್ಕೆ ಕೌನ್ಸೆಲಿಂಗ್ ನಡೆಯಲಿದೆ ಎಂದು ಬೆಂಗಳೂರು ವಿಶ್ವವಿದ್ಯಾಯದ ಪ್ರಕಟಣೆ ತಿಳಿಸಿದೆ.

ಮೊದಲನೇ ಸುತ್ತಿನ ಪ್ರವೇಶ ಪ್ರಕ್ರಿಯೆಯಲ್ಲಿ ಗೈರು ಹಾಜರಾದ ಮತ್ತು ಸೀಟುಗಳು ಹಂಚಿಕೆಯಾಗದ ಅರ್ಜಿದಾರರು ಈ ಕೌನ್ಸೆಲಿಂಗ್‌ನಲ್ಲಿ ಭಾಗವಹಿಸಬಹುದಾಗಿದೆ ಎಂದು ಅದು ಹೇಳಿದೆ.

ಕಪ್ಪು ಶಿಲೀಂಧ್ರ: ವಾರದಲ್ಲಿ 17 ಮಂದಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕಪ್ಪು ಶಿಲೀಂಧ್ರ ಸೋಂಕಿನ ತೀವ್ರತೆಗೆ ಒಂದು ವಾರದಲ್ಲಿ 17 ಮಂದಿ ಮೃತಪಟ್ಟಿದ್ದು, ಈವರೆಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 104ಕ್ಕೆ ಏರಿಕೆ ಕಂಡಿದೆ.

ಹೊಸದಾಗಿ ಬೌರಿಂಗ್ ಹಾಗೂ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ತಲಾ ಎರಡು ಶಿಲೀಂಧ್ರ ಸೋಂಕು ಪ್ರಕರಣಗಳು ವರದಿಯಾಗಿವೆ. ಏಳು ದಿನಗಳಲ್ಲಿ 52 ಮಂದಿಗೆ ಸೋಂಕು ತಗುಲಿದೆ. ಈವರೆಗೆ ಈ ಸೋಂಕಿಗೆ ಒಳಗಾದವರ ಒಟ್ಟು ಸಂಖ್ಯೆ 1,120ಕ್ಕೆ ಏರಿಕೆಯಾಗಿದೆ.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಈವರೆಗೆ 208 ಪ್ರಕರಣಗಳು ವರದಿಯಾಗಿವೆ. ಅದೇ ರೀತಿ, ಬೌರಿಂಗ್ ಆಸ್ಪತ್ರೆಯಲ್ಲಿ 353, ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ನಾಲ್ಕು ಹಾಗೂ ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆಯಲ್ಲಿ ಒಂದು ಪ್ರಕರಣ ದೃಢಪಟ್ಟಿದೆ. ಕಪ್ಪು ಶಿಲೀಂಧ್ರ ಸೋಂಕಿತರಲ್ಲಿ ಈವರೆಗೆ 556 ಮಂದಿ ಸರ್ಕಾರಿ ವ್ಯವಸ್ಥೆಯಡಿ ದಾಖಲಾಗಿದ್ದಾರೆ. ಇನ್ನುಳಿದವರು ವಿವಿಧ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ.

ರಾಜ್ಯದಲ್ಲಿ ಈವರೆಗೆ 3,511 ಕಪ್ಪು ಶಿಲೀಂಧ್ರ ಪ್ರಕರಣಗಳು ದೃಢಪಟ್ಟಿವೆ. ಈ ಪೈಕಿ 303 ಮಂದಿ ಮೃತಪಟ್ಟಿದ್ದಾರೆ.

‘ಕೆಲ ದಿನಗಳಿಂದ ಶಿಲೀಂಧ್ರ ಸೋಂಕು ಹೊಸ ಪ್ರಕರಣಗಳ ಸಂಖ್ಯೆ ಇಳಿಕೆ ಕಂಡಿದೆ. ಪ್ರತಿನಿತ್ಯ ಎರಡರಿಂದ ಮೂರು ಪ್ರಕರಣಗಳು ವರದಿಯಾಗುತ್ತಿವೆ. ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಕೆಯಾಗಿರುವ ಕಾರಣ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಮಸ್ಯೆಯಿಲ್ಲ. ಕೆಲವರು ತಡವಾಗಿ ದಾಖಲಾಗುವ ಕಾರಣ ಜೀವಕ್ಕೆ ಅಪಾಯವಾಗುವ ಸಾಧ್ಯತೆ ಇರುತ್ತದೆ’ ಎಂದು ಬೆಂಗಳೂರು ನಗರ ಜಿಲ್ಲಾ ಶಸ್ತ್ರಚಿಕಿತ್ಸಕ ಅನ್ಸರ್ ಅಹಮದ್ ಹೇಳಿದರು.

ರಾಜ್ಯ ಕೋವಿಡ್ ಅಂಕಿ–ಅಂಶ

28,71,298 ▲	ಒಟ್ಟು ಸೋಂಕಿತರು (28,69,320 ನಿನ್ನೆಯ ವಿವರ)
36,737 ▼	ಸಕ್ರಿಯ ಪ್ರಕರಣಗಳು
27,98,703 ▲	ಗುಣಮುಖರಾದವರು
35,835 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,978 ▼
ಗುಣಮುಖ	2,326 ▼
ಸಾವು	56 ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

‘ಕೈಗಳ ಸ್ವಚ್ಛತೆಗೆ ಹೆಚ್ಚು ಆದ್ಯತೆ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ಸಮಯದಲ್ಲಿ ಕೈಗಳ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಈ ಅಭ್ಯಾಸ ನಮ್ಮ ದಿನಚರಿಯ ಭಾಗವಾಗಬೇಕು. ಹಾಗಾದಲ್ಲಿ ಸೋಂಕಿನ ಅಪಾಯದಿಂದ ಪಾರಾಗಬಹುದು. ಎಳೆಯ ವಯಸ್ಸಿನಿಂದಲೇ ಮಕ್ಕಳಲ್ಲಿ ಈ ಅಭ್ಯಾಸ ಬೆಳೆಸಬೇಕು’ ಎಂದು ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಸಿ. ಎನ್.ಮಂಜುನಾಥ್ ತಿಳಿಸಿದರು.

ವಸಂತ ಪ್ರಕಾಶನ ಹೊರತಂದಿರುವ ಡಾ.ವಸುಂಧರಾ ಭೂಪತಿ ಸಂಪಾದಕತ್ವದ ‘ಆರೋಗ್ಯ ಚಿಂತನ ಮಾಲಿಕೆ’ಯ ಮೂರನೇ ಕಂತಿನ 11 ಕೃತಿಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ನನಗಾಗಿ ಒಂದು ತಾಸು ಚಲಿಸು. ನಿನಗಾಗಿ ನಾನು ಮಿಡಿಯುತ್ತೇನೆ ಎಂದು ಹೃದಯ ಹೇಳುತ್ತದೆ. ಆದರೆ ಬಹುತೇಕ ಮಂದಿ 45 ನಿಮಿಷ ಮಾತನಾಡಿ ಕೇವಲ ನಾಲ್ಕು ನಿಮಿಷ ನಡೆಯುತ್ತಾರೆ. ಆರೋಗ್ಯದ ದೃಷ್ಟಿಯಿಂದ ಸಾಧ್ಯವಾದಷ್ಟು ಸಮಯವನ್ನು ನಡಿಗೆಗೆ ಮೀಸಲಿಡಬೇಕು. ಹಾಸ್ಯ ಪ್ರವೃತ್ತಿಯನ್ನೂ ಮೈಗೂಡಿಸಿಕೊಳ್ಳಬೇಕು’ ಎಂದರು.

‘ಬಹುತೇಕ ಮಂದಿ ಆಸ್ಪತ್ರೆಯ ಬಿಲ್ ಭರಿಸಿಯೇ ಬಡವರಾಗುತ್ತಿದ್ದಾರೆ. ಕೋವಿಡ್‌ನಿಂದಾಗಿ ಪ್ರತಿಯೊಬ್ಬರಿಗೂ ಆರೋಗ್ಯದ ಮಹತ್ವ ಮನದಟ್ಟಾಗಿದೆ. ಮುಖಗವಸು ಈಗ ಎಲ್ಲರ ಸಂಗಾತಿಯಾಗಿದೆ. ಕೊರೊನಾ ಸೋಂಕು ದೇಹಕ್ಕಷ್ಟೇ ಅಲ್ಲ ಮನಸ್ಸಿಗೂ ತಾಗಿದೆ. ನಮ್ಮ ನಿಜವಾದ ಬಾಳ ಸಂಗಾತಿ ದೇಹ. ಅದರ ಆರೋಗ್ಯದತ್ತ ಹೆಚ್ಚು ಕಾಳಜಿ ವಹಿಸಬೇಕು. ಇತ್ತೀಚಿನ ದಿನಗಳಲ್ಲಿ ಜೀವನಶೈಲಿ ಆಧಾರಿತ ಕಾಯಿಲೆಗಳು ಹೆಚ್ಚುತ್ತಿವೆ. ಭಾರತದಲ್ಲಿ ಶೇ 50ರಿಂದ 60ರಷ್ಟು ಮರಣ ಪ್ರಕರಣಗಳು ಈ ಕಾಯಿಲೆಗಳಿಂದ ಸಂಭವಿಸುತ್ತಿವೆ’ ಎಂದು ತಿಳಿಸಿದರು.

ನಟ ‘ಮುಖ್ಯಮಂತ್ರಿ’ ಚಂದ್ರು ‘ಮನುಷ್ಯ ಸಂಘಜೀವಿಯಾಗಿ, ಸಂತೋಷವಾಗಿ, ಕಷ್ಟ ಸುಖವನ್ನು ಸಮಾನವಾಗಿ ಸ್ವೀಕರಿಸುತ್ತಾ ಬಾಳಬೇಕು’ ಎಂದರು.

ಹಿರಿಯ ಕವಿ ಎಚ್.ಎಸ್. ವೆಂಕಟೇಶಮೂರ್ತಿ ‘ಬದುಕಿನ ಬೇರೆ ಬೇರೆ ರಂಗಗಳಲ್ಲಿ ಕೆಲಸ ಮಾಡುವ ವ್ಯಕ್ತಿಗಳು ಸಾಹಿತ್ಯ ರಚಿಸಬೇಕು. ಅದು ಕನ್ನಡದಲ್ಲಿರಬೇಕು ಎಂಬ ಕನಸು ನನ್ನಲ್ಲಿತ್ತು. ನಮ್ಮಲ್ಲಿ 100ಕ್ಕೆ 80 ಜನರು ಕನ್ನಡ ರೋಗಿಗಳು (ಕನ್ನಡದಲ್ಲಿ ವ್ಯವಹರಿಸುವವರು) ಇದ್ದಾರೆ. ಅವರಿಗೆ ಕನ್ನಡ ಮಾತನಾಡಬಲ್ಲ ವೈದ್ಯರ ಅಗತ್ಯವಿದೆ’ ಎಂದು ಹೇಳಿದರು.

ಹಿರಿಯ ಹೃದ್ರೋಗ ತಜ್ಞ ಡಾ.ಸುರೇಶ್ ಸಗರದ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಕೆ. ಎಸ್.ರವೀಂದ್ರನಾಥ್, ಡಾ.ವಸುಂಧರಾ ಭೂಪತಿ ಇದ್ದರು.

ಬಿಡುಗಡೆಯಾದ ಕೃತಿಗಳು

ಅಸಮಾಧಾನದಿಂದ ಸಮಾಧಾನದ ಕಡೆಗೆ (ಡಾ.ಸಿ.ಆರ್.ಚಂದ್ರಶೇಖರ್), ರೋಗ ನಿರೋಧಕ ಶಕ್ತಿಗೆ ಮನೆ ಔಷಧಿ, ಗಣೇಶನ ಪೂಜೆಯ 21 ಪತ್ರೆಗಳು ಮತ್ತು ಆರೋಗ್ಯ (ಡಾ.ವಸುಂಧರಾ ಭೂಪತಿ), ಕೋವಿಡ್–19, ಹೃದಯಾಘಾತ, ಕ್ಯಾನ್ಸರ್ (ಡಾ.ಪಿ.ಎಸ್.ಶಂಕರ್), ಇಮ್ಯುನಿಟಿಗಾಗಿ ಆಹಾರ (ಡಾ.ಎಚ್.ಎಸ್.ಪ್ರೇಮ), ಮನಸ್ಸಿಗೂ ಸೋಂಕು (ಡಾ.ಕೆ.ಎಸ್.ಪವಿತ್ರ), ಆರೋಗ್ಯ ಸಂಚಯ (ಡಾ.ಎನ್.ಗೋಪಾಲಕೃಷ್ಣ), ಆರೋಗ್ಯ ತರಂಗ (ಡಾ. ಪಿ.ಸತ್ಯನಾರಾಯಣ ಭಟ್), ಸ್ವಾಸ್ಥ್ಯದಾಯಕ ಯೋಗ ಪಂಚಕ (ಡಾ.ಎಸ್. ಎನ್.ಓಂಕಾರ್).

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

12,19,378 ▲ ಒಟ್ಟು ಸೋಂಕಿತರು (12,18,945 ನಿನ್ನೆಯ ವಿವರ)

13,459 ▲	11,90,182 ▲	15,736 ▲
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ಮಂಗಳವಾರದ ಏರಿಕೆ

ಹೊಸ ಪ್ರಕರಣ	433 ▼
ಗುಣಮುಖ	203 ▼
ಸಾವು	08 ▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಭೂಮಾಪಕ ಹುದ್ದೆಗೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಭೂ ಸಂಬಂಧಿ ವಿಷಯಗಳ ಕುರಿತ ದಾವೆಗಳ ಕರ್ತವ್ಯ ನಿರ್ವಹಿಸಲು ಪ್ರಥಮ ದರ್ಜೆ ಭೂಮಾಪಕ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ.

ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಈ ನೇಮಕ ಮಾಡಿಕೊಳ್ಳಲಾಗುತ್ತದೆ. ರಾಜ್ಯ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ ನಿವೃತ್ತಿ ಹೊಂದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಈ ಅಭ್ಯರ್ಥಿಗಳಿಗೆ ರಾಜ್ಯ ಸರ್ಕಾರದ ಭೂಮಾಪನ ಕಾಯ್ದೆ, ನಿಯಮಗಳು ಹಾಗೂ ಮೋಜಣಿ, ಭೂಮಿ ಹಾಗೂ ಇತರೆ ಭೂ ಸಂಬಂಧಿತ ತಂತ್ರಾಂಶದ ಬಗ್ಗೆ ಜ್ಞಾನವಿರಬೇಕು ಎಂದು ವಿಶ್ವವಿದ್ಯಾಲಯದ ಪ್ರಕಟಣೆ ತಿಳಿಸಿದೆ.

ಅರ್ಜಿ ಸಲ್ಲಿಸಲು ಇದೇ 15 ಕೊನೆಯ ದಿನ. ಮಾಹಿತಿಗೆ: www.bangaloreuniversity.ac.in ವೆಬ್‌ಸೈಟ್‌ಗೆ ಭೇಟಿ ನೀಡಬಹುದು.



ಅಂತರ ಮರೆತ ಜನ...

ಲಾಕ್‌ಡೌನ್ ಸಡಿಲಿಕೆಯ ಕಾರಣ ಚಿಕ್ಕಪೇಟೆಯ ಸಂಡೆ ಬಜಾರ್‌ನಲ್ಲಿ ವಿವಿಧ ವಸ್ತುಗಳನ್ನು ಖರೀದಿಸಲು ನಗರದ ಜನತೆ ಕೋವಿಡ್ ನಿಯಮಗಳನ್ನು ಮರೆತು ಭಾನುವಾರ ಮುಗಿಬಿದ್ದಿದ್ದರು -ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

‘ಕಾಂಗ್ರೆಸ್‌ನ ಬಣ್ಣದ ಮಾತುಗಳಿಗೆ ಮರುಳಾಗಬೇಡಿ’

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ‘ದಲಿತರಿಗೆ ಹೆಚ್ಚಿನ ಸಚಿವ ಸ್ಥಾನಗಳನ್ನು ನೀಡುವ ಮೂಲಕ ಡಾ.ಬಿ.ಆರ್.ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳನ್ನು ಪರಿಪಾಲಿಸಿ ಸಾಮಾಜಿಕ ನ್ಯಾಯ ಒದಗಿಸುವಲ್ಲಿ ಪ್ರಧಾನಿ ನರೇಂದ್ರ ಮೋದಿ ಗೆದ್ದಿದ್ದಾರೆ’ ಎಂದು ಬಿಜೆಪಿ ಎಸ್‌ಸಿ ಮೋರ್ಚಾ ಅಧ್ಯಕ್ಷ ಚಲವಾದಿ ನಾರಾಯಣಸ್ವಾಮಿ ಹೇಳಿದರು.

ಕ್ಷೇತ್ರದ ಬಿಜೆಪಿ ಕಚೇರಿಯಲ್ಲಿ ಏರ್ಪಡಿಸಿದ್ದ ಎಸ್‌ಸಿ ಮೋರ್ಚಾ ಕಾರ್ಯಕಾರಿಣಿ ಸಭೆಯಲ್ಲಿ ಮಾತನಾಡಿದ ಅವರು, ‘ಕೇಂದ್ರ ಸಚಿವ ಸಂಪುಟದಲ್ಲಿ 20 ಸಚಿವ ಸ್ಥಾನಗಳನ್ನು ದಲಿತರಿಗೆ ನೀಡಿರುವುದು ಇತಿಹಾಸದ ಪುಟಗಳಲ್ಲಿ ದಾಖಲಾಗುವ ಕಾರ್ಯವಾಗಿದೆ. ದಲಿತರಿಗೆ ಹೆಚ್ಚಿನ ಅವಕಾಶಗಳು ಸಿಗಲು ಇಷ್ಟು ವರ್ಷಗಳು ಕಾಯಬೇಕಾಯಿತು’ ಎಂದರು.

‘ದಲಿತರನ್ನು ಬಳಸಿಕೊಂಡಿರುವ ಕಾಂಗ್ರೆಸ್ ಅವರಿಗೆ ಉನ್ನತ ಸ್ಥಾನಮಾನ ನೀಡುವಲ್ಲಿ ಸಂಪೂರ್ಣವಾಗಿ ವಿಫಲಗೊಂಡಿದೆ. ದಲಿತರು ಕಾಂಗ್ರೆಸ್‌ನ ಬಣ್ಣದ ಮಾತುಗಳಿಗೆ ಬಲಿಯಾಗದೆ ಬಿಜೆಪಿಯನ್ನು ಬಲಪಡಿಸಿದರೆ ಮತ್ತಷ್ಟು ಅಭಿವೃದ್ಧಿಯ ಜೊತೆ ಉನ್ನತ ಸ್ಥಾನ ಪಡೆಯಬಹುದಾಗಿದೆ’ ಎಂದರು.

ಮೋರ್ಚಾದ ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷ ಹೂಡಿ ಮಂಜುನಾಥ್, ಕ್ಷೇತ್ರಾಧ್ಯಕ್ಷ ಮನೋಹರ್ ರೆಡ್ಡಿ, ನಟರಾಜ್, ಮುಖಂಡರಾದ ರಾಜಾರೆಡ್ಡಿ ಇದ್ದರು.

ದಾಸನಪುರ ಎಪಿಎಂಸಿ: ಗರಿಗೆದರಿದ ಚಟುವಟಿಕೆ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಯಶವಂತಪುರ ಎಪಿಎಂಸಿಯು ದಾಸನಪುರ ಗ್ರಾಮಕ್ಕೆ ಸ್ಥಳಾಂತರವಾಗಿದ್ದು ವ್ಯಾಪಾರದಲ್ಲಿ ಹೆಚ್ಚಿನ ಬೇಡಿಕೆ ಕುದುರಿರುವುದರಿಂದ ವರ್ತಕರಲ್ಲಿ ಸಂತಸ ಮೂಡಿದೆ.

ಕೋವಿಡ್ ಕಾರಣ ದಾಸನಪುರ ಕೃಷಿ ಉತ್ಪನ್ನ ಮಾರುಕಟ್ಟೆಗೆ ಈರುಳ್ಳಿ, ಆಲೂಗಡ್ಡೆಯ ಸಗಟು ವ್ಯಾಪಾರವನ್ನು ಒಂದು ತಿಂಗಳ ಹಿಂದೆ ಸ್ಥಳಾಂತರ ಮಾಡಲಾಗಿತ್ತು. 212 ಮಳಿಗೆಗಳ ಪೈಕಿ ಸುಮಾರು 150 ಮಳಿಗೆಗಳಲ್ಲಿ ವರ್ತಕರು ವ್ಯಾಪಾರವನ್ನು ಪ್ರಾರಂಭಿಸಿದರು. ಪ್ರತಿ ದಿನ ಸುಮಾರು ನೂರಕ್ಕೂ ಹೆಚ್ಚು ಲಾರಿಗಳಲ್ಲಿ ಈರುಳ್ಳಿ ಮತ್ತು ಬೆಳ್ಳುಳ್ಳಿಯನ್ನು ತಂದ ರೈತರು ವ್ಯಾಪಾರದಲ್ಲಿ ತೊಡಗಿದ ಪರಿಣಾಮ ಭರ್ಜರಿ ವಹಿವಾಟು ನಡೆಯುತ್ತಿದೆ.

‘ಹೊಸಪೇಟೆ, ಚಿತ್ರದುರ್ಗ, ಬಳ್ಳಾರಿ ಭಾಗಗಳಿಂದ ಬರುವ ರೈತರಿಗೆ ದಾಸನಪುರ ಎಪಿಎಂಸಿಯಿಂದ ಹೆಚ್ಚು ಅನುಕೂಲವಾಗಿದೆ. ಈರುಳ್ಳಿ ಮತ್ತು ಆಲೂಗಡ್ಡೆಯನ್ನು ಲಾರಿಯಿಂದ ತರುವ ರೈತರು ದಿನಗಟ್ಟಲೇ ಕಾಯಬೇಕಿಲ್ಲ. ಒಂದು ದಿನದೊಳಗೆ ತಾವು ತಂದ ಪದಾರ್ಥವನ್ನು ರೈತರು ವರ್ತಕರಿಗೆ ಕೊಟ್ಟು ವಾಪಸ್ಸು ತಮ್ಮ ಊರುಗಳಿಗೆ ಮರಳುತ್ತಿದ್ದಾರೆ’ ಎಂದು ವರ್ತಕರಾದ ಮಹೇಶ್ ತಿಳಿಸಿದರು.

‘ಹೊರ ಜಿಲ್ಲೆಗಳಿಂದ ಬರುವ ರೈತರಿಗೆ ಇಲ್ಲಿ ಮೂಲಸೌಲಭ್ಯ ಕಲ್ಪಿಸಲಾಗಿದೆ. ಕೋವಿಡ್ ಬಿಕ್ಕಟ್ಟು ಮುಗಿಯುವ ತನಕ ಇಲ್ಲಿಯೇ ವ್ಯಾಪಾರ ಮುಂದುವರಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು’ ಎಂದು ವರ್ತಕರ ಸಂಘದ ಅಧ್ಯಕ್ಷ ಬಿ.ಅರ್.ಶ್ರೀರಾಮ ರೆಡ್ಡಿ ಮನವಿ ಮಾಡಿದರು.

ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ವಿಭಾಗಗಳಲ್ಲಿ ಮತ್ತು ಯುವಿಸಿಇ ಕಾಲೇಜಿನಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕ, ಸಹ ಪ್ರಾಧ್ಯಾಪಕ ಹಾಗೂ ಪ್ರಾಧ್ಯಾಪಕ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ.

ಇವು ಬ್ಯಾಕ್‌ಲಾಗ್ ಹುದ್ದೆಗಳಾಗಿದ್ದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬಹುದು. ಹುದ್ದೆಗಳ ವಿವರ, ವಿದ್ಯಾರ್ಹತೆ, ಇನ್ನಿತರೆ ಮಾಹಿತಿಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ www.bangaloreuniversity.ac.inನಿಂದ ಪಡೆಯಬಹುದು ಎಂದು ವಿ.ವಿ ಪ್ರಕಟಣೆ ತಿಳಿಸಿದೆ. ನಿಗದಿತ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ಜುಲೈ 30 ಕೊನೆಯ ದಿನ.

ಚಿತ್ರಾವಳಿ



ಮೂಡಲಪಾಳ್ಯ ವಾರ್ಡ್‌ನ ಕಲ್ಯಾಣನಗರ ಶಕ್ತಿ ಗಾರ್ಡನ್‌ನಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರು ಹಾಗೂ ಬಡವರಿಗೆ ವಸತಿ ಸಚಿವ ವಿ.ಸೋಮಣ್ಣ ದಿನಸಿ ಕಿಟ್‌ಗಳನ್ನು ಭಾನುವಾರ ವಿತರಿಸಿದರು. ಮುಖಂಡರಾದ ವಿಶ್ವನಾಥ ಗೌಡ, ದಾಸೇಗೌಡ ಹಾಗೂ ಬಿಜೆಪಿ ಕಾರ್ಯಕರ್ತರು



ಶಾಸಕ ರವೀಂದ್ರ ಶ್ರೀಕಂಠಯ್ಯ ಹೇಳಿಕೆ ಖಂಡಿಸಿ ಅಂಬರೀಷ್ ಅಭಿಮಾನಿಗಳು ನಗರದ ಕಂಠೀರವ ಸ್ಟುಡಿಯೊ ಮುಂಭಾಗ ಭಾನುವಾರ ಪ್ರತಿಭಟನೆ ನಡೆಸಿದರು —ಪ್ರಜಾವಾಣಿ ಚಿತ್ರ



ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ ನಗರದ ಗಾಂಧಿ ಭವನದಲ್ಲಿ ಭಾನುವಾರ ಆಯೋಜಿಸಿದ ‘ಕೋವಿಡ್ ಸಂಕಷ್ಟಿತರ ಜೊತೆ ನಾವಿದ್ದೇವೆ’ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ್ ಅವರು ಕನ್ನಡ ಕೆಲಸದಲ್ಲಿ ನಿರತರಾಗಿರುವವರಿಗೆ ದಿನಸಿ ಕಿಟ್ ವಿತರಿಸಿದರು. ಕನ್ನಡ ಪರ ಹೋರಾಟಗಾರ ಪಾಲನೇತ್ರ, ಸಂಘದ ಅಧ್ಯಕ್ಷ ಎಂ. ತಿಮ್ಮಯ್ಯ ಮತ್ತು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ ಇದ್ದರು – ಪ್ರಜಾವಾಣಿ ಚಿತ್ರ

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	18.75 ಕೋಟಿ ▲	3.08 ಕೋಟಿ
ಸಕ್ರಿಯ ಪ್ರಕರಣ	1.20ಕೋಟಿ ▲	4.47 ಲಕ್ಷ ▼
ಗುಣಮುಖ	17.143 ಕೋಟಿ ▲	3.00 ಕೋಟಿ
ಸಾವು	40.46ಲಕ್ಷ ▲	4.08 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.25 ಲಕ್ಷ ▼	35,446 ▼
ಗುಣಮುಖ	3.48 ಲಕ್ಷ ▼	36,070 ▼
ಸಾವು	7,514 ▼	691 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಬ್ರಿಟನ್	ಬ್ರೆಜಿಲ್	ರಷ್ಯಾ
32,227 ▼	48,504 ▼	25,082 ▼

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರೆಜಿಲ್	ಬ್ರಿಟನ್
48.68 ▼	10.05 ▼	6.05 ▲

(*ರಾತ್ರಿ 9.30 ಗಂಟೆವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.25 ಲಕ್ಷ
ದೆಹಲಿ	25,015 ▲
ತಮಿಳುನಾಡು	33,418 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	61.57 ▲
ಕೇರಳ	30.65 ▲
ತಮಿಳುನಾಡು	25.18 ▲

ಪ್ರಜಾವಾಣಿ ಗ್ರಾಫಿಕ್ಸ್

ಬೆಂಗಳೂರಿನಲ್ಲಿ ‘ವಿಸ್ಟಾಡೋಮ್ ಕಲರವ !

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಗಳೂರಿನಿಂದ ಹೊರಟಿದ್ದ ‘ವಿಸ್ಟಾಡೋಮ್’ ಕೋಚ್ ರೈಲು ಭಾನುವಾರ ರಾತ್ರಿ 8.05ಕ್ಕೆ ನಗರದ ಯಶವಂತಪುರಕ್ಕೆ ಬಂದಿತು. ಈ ರೈಲಿನಲ್ಲಿನ ತಮ್ಮ ಮೊದಲ ಪ್ರಯಾಣದ ಅನುಭವವನ್ನು ಪ್ರಯಾಣಿಕರು ಹಂಚಿಕೊಂಡರು.

‘ನಿಸರ್ಗ ಸೌಂದರ್ಯವನ್ನು ವಿಭಿನ್ನವಾಗಿ ಕಣ್ತುಂಬಿಕೊಂಡಂತಾಯಿತು. ಹೊಸ ಹುರುಪಿನೊಂದಿಗೆ ಬೆಂಗಳೂರಿನಲ್ಲಿ ಕೆಲಸ ಮಾಡುವಷ್ಟು ಉತ್ಸಾಹವನ್ನು ಈ ಪ್ರಯಾಣ ನೀಡಿತು’ ಎಂದು ಪ್ರಯಾಣಿಕ ವಿನೋದ್ ಹೇಳಿದರು.

ಕಾರವಾರಕ್ಕೂ ಹೊರಡಲಿದೆ ‘ವಿಸ್ಟಾಡೋಮ್’

ಇದೇ ಸೋಮವಾರದಿಂದ ಯಶವಂತಪುರ-ಕಾರವಾರ ಎಕ್ಸ್‌ಪ್ರೆಸ್ ಸ್ಪೆಷಲ್ ರೈಲು ಕೂಡ ‘ವಿಸ್ಟಾಡೋಮ್ ಕೋಚ್’ ನೊಂದಿಗೆ ಪ್ರಯಾಣ ಆರಂಭಿಸಲಿದೆ. ಈ ರೈಲಿನಲ್ಲಿ ಪ್ರಯಾಣಿಸುವ ಮೂಲಕವೂ ಪಶ್ಚಿಮಘಟ್ಟದ ಪ್ರಕೃತಿ ಸೌಂದರ್ಯ ಕಣ್ತುಂಬಿಕೊಳ್ಳಬಹುದು.

ಬೆಳಿಗ್ಗೆ 7 ಗಂಟೆಗೆ ಯಶವಂತಪುರ ರೈಲು ನಿಲ್ದಾಣದಿಂದ (06211) ಈ ವಿಶೇಷ ರೈಲು ಹೊರಡಲಿದೆ. ಈ ರೈಲಿಗೆ ಎರಡು ವಿಸ್ಟಾಡೋಮ್ ಕೋಚ್ ಅಳವಡಿಸಲಾಗಿದೆ. ಪ್ರತಿ ಕೋಚ್ 44 ಆಸನ ಸಾಮರ್ಥ್ಯ ಹೊಂದಿದೆ. ಭಾನುವಾರ ರಾತ್ರಿ ಎಂಟು ಗಂಟೆ ವೇಳೆಗಾಗಲೇ 54 ಮಂದಿ ಮುಂಗಡ ಟಿಕೆಟ್ ಕಾಯ್ದಿರಿಸಿದ್ದಾರೆ.

ವಿಸ್ಟಾಡೋಮ್ ಬೆಂಗಳೂರು–ಮಂಗಳೂರು ಪ್ರಯಾಣ ದರ

ಹವಾನಿಯಂತ್ರಿತ ಬೋಗಿ	₹1,395
ಸಾಮಾನ್ಯ ಚೇರ್ ಕಾರ್	₹560
ಸಾಮಾನ್ಯ ಬೋಗಿ ದ್ವಿತೀಯ ದರ್ಜೆ	₹155

‘ವಿಸ್ಟಾಡೋಮ್’ ಬೋಗಿಗಳಲ್ಲಿ ಪ್ರಯಾಣ

ಪ್ರಕೃತಿಯ ರಮಣೀಯ ನೋಟದ ಪುಳಕ!

• ಪ್ರದೀಶ್ ಎಚ್. ಮರೋಡಿ

ಮಂಗಳೂರು: ದೃಷ್ಟಿ ಹಾಯಿಸಿದಷ್ಟು ದೂರದವರೆಗೂ ಹಸಿರ ಹೊನಲು, ಕ್ಯಾನ್ವಾಸ್‌ನಲ್ಲಿ ಮೈದಳೆದ ಚಿತ್ರಗಳಂತೆ ಕಾಣುವ ಪ್ರಕೃತಿ ಸೊಬಗು, ಧುತ್ತನೆ ಎದುರಾಗುವ ಕತ್ತಲೆಯ ಸುರಂಗ, ಮತ್ತೆ ಮೈಚಾಚಿದ ನಿಸರ್ಗ, ಗಾಜಿನ ಕಿಟಕಿಗೆ ಬಂದು ಮುತ್ತಿಕ್ಕುವ ತುಂತುರು ಹನಿ, ಮೋಡ ಮತ್ತು ಮಳೆಯ ಪರದೆಯಾಟ, ಕಡಿದಾದ ಗುಡ್ಡದ ನಡುವೆ ಬಳುಕುತ್ತಾ ಇಳಿದು ಬರುವ ಹಾಲ್ನೊರೆಯ ಸುಂದರಿಯರು...

ಮಂಗಳೂರಿನಿಂದ ಭಾನುವಾರ ಬೆಳಿಗ್ಗೆ ವಿಸ್ಟಾಡೋಮ್ ಬೋಗಿಯಲ್ಲಿ ಪ್ರಯಾಣಿಸಿದವರ ಅನುಭವವಿದು. ನೈರುತ್ಯ ರೈಲ್ವೆಯು ಇದೇ ಮೊದಲ ಬಾರಿಗೆ ರಾಜ್ಯದಲ್ಲಿ ವಿಸ್ಟಾಡೋಮ್ ಬೋಗಿಯನ್ನು ಪರಿಚಯಿಸಿದೆ. ಮಂಗಳೂರು-ಯಶವಂತಪುರ ರೈಲಿಗೆ ಅಳವಡಿಸಿದ ಎರಡು ಬೋಗಿಗಳ ಸಂಚಾರಕ್ಕೆ ಮಂಗಳೂರಿನ ಜಂಕ್ಷನ್ ರೈಲು ನಿಲ್ದಾಣದಲ್ಲಿ ಸಂಸದ ನಳಿನ್ ಕುಮಾರ್ ಕಟೀಲ್ ಹಸಿರು ನಿಶಾನೆ ತೋರಿದರು.



ವಿಸ್ಟಾಡೋಮ್ ಬೋಗಿ ಹಾಸನ ಜಿಲ್ಲೆಯ ಯಡಕುಮೇರಿ ರೈಲು ನಿಲ್ದಾಣದಲ್ಲಿ ನಿಂತಿದ್ದ ಕ್ಷಣ ಪ್ರಜಾವಾಣಿ ಚಿತ್ರ/ಇರ್ಷಾದ್ ಮಹಮ್ಮದ್

‘ವಿಸ್ಟಾಡೋಮ್ ಬೋಗಿ ಇರುವ ರೈಲಿನ ಪ್ರಯಾಣ ಅವಿಸ್ಮರಣೀಯ. ಗಾಜಿನ ಹೊದಿಕೆಯ ಬೋಗಿಯಲ್ಲಿ ಕುಳಿತು ಹಸಿರಿನ ನಡುವೆ ಸಾಗುವಾಗ ಸಿಗುವ ಖುಷಿಯೇ ದಿವ್ಯ ಅನುಭೂತಿ’ ಎಂದರು ಚಿಕ್ಕಮಗಳೂರಿನ ಲೋಕೇಶ್. ವೃತ್ತಿಯಲ್ಲಿ ಪೋಸ್ಟ್ ಮಾಸ್ಟರ್ ಆಗಿರುವ ಅವರು, ವಿಸ್ಟಾಡೋಮ್ ಪ್ರಯಾಣದ ಅನುಭವ ಪಡೆಯಲೆಂದೇ ಮಂಗಳೂರಿಗೆ ಬಂದು, ಹಾಸನ ತನಕ ಪ್ರಯಾಣಿಸಿದರು.

ಸುಳ್ಯದ ಕೆವಿಜಿ ಮೆಡಿಕಲ್ ಕಾಲೇಜಿನ ಸ್ನಾತಕೋತ್ತರ ವಿಭಾಗದ 12 ವಿದ್ಯಾರ್ಥಿಗಳು ಸುಬ್ರಹ್ಮಣ್ಯದಿಂದ ಸಕಲೇಶಪುರದವರೆಗೆ ಪ್ರಯಾಣಿಸಿ, ಪಶ್ಚಿಮಘಟ್ಟದ ಸೊಬಗನ್ನು ಕಣ್ತುಂಬಿಕೊಂಡು ವಾಪಸಾದರು.

ವಿಸ್ಟಾಡೋಮ್ ಹವಾನಿಯಂತ್ರಿತ ಬೋಗಿಗಳಲ್ಲಿ ತಲಾ 44 ಆಸನಗಳಿದ್ದು, 75 ಸೀಟುಗಳನ್ನು ಪ್ರಯಾಣಿಕರು ಮುಂಗಡವಾಗಿ ಕಾಯ್ದಿರಿಸಿದ್ದರು. ಮೊದಲ ಪ್ರಯಾಣಕ್ಕೆ ರೈಲ್ವೆ ಅಧಿಕಾರಿಗಳು, ಪೊಲೀಸ್ ಸಿಬ್ಬಂದಿಯೂ ಪ್ರಯಾಣಿಕರಿಗೆ ಸಾಥ್ ನೀಡಿದರು. ಮಂಗಳೂರಿನಿಂದ ರೈಲು ಹೊರಡುತ್ತಿದ್ದಂತೆ ಪ್ರಯಾಣಿಕರು, 180 ಡಿಗ್ರಿ ತಿರುಗಬಹುದಾದ ಆಸನವನ್ನು ತಮಗೆ-ಅನುಕೂಲವಾಗುವಂತೆ ಜೋಡಿಸಿಕೊಂಡು, ರಮಣೀಯ ದೃಶ್ಯಗಳನ್ನು ಮೊಬೈಲ್‌ನಲ್ಲಿ ಸೆರೆಹಿಡಿದರು. ಸುಬ್ರಹ್ಮಣ್ಯ ರೈಲು ನಿಲ್ದಾಣ ದಾಟುತ್ತಿದ್ದಂತೆ ಪಶ್ಚಿಮಘಟ್ಟದ ಸೊಬಗನ್ನು ಕಂಡು ರೋಮಾಂಚನಗೊಂಡರು.

ಗಾಜಿನ ಕಿಟಕಿಯ ಹಿಂದೆ, ಬೋಗಿಗಳ ಬಾಗಿಲಿನಲ್ಲಿ ನಿಂತು ಪೈಪೋಟಿಗೆ ಬಿದ್ದವರಂತೆ ಅಪೂರ್ವ ದೃಶ್ಯ ವೀಕ್ಷಿಸಿದರು. ಝರಿ–ತೊರೆಗಳನ್ನು ಕಂಡು ಕೇಕೆ ಹಾಕಿದರು. ಸುಬ್ರಹ್ಮಣ್ಯದಿಂದ ಸಕಲೇಶಪುರದವರೆಗೆ ಸುಮಾರು 57 ಸುರಂಗ ಮಾರ್ಗಗಳಿದ್ದು, ಅವುಗಳಲ್ಲಿ ರೈಲು ಸಾಗುತ್ತಿದ್ದಂತೆ ಕಗ್ಗತ್ತಲ ಅನುಭವ. ಮಂಜಿನಿಂದ ಮರೆಯಾಗಿದ್ದ ದೂರದ ಬೆಟ್ಟಗಳು ಕಣ್ಣಿಗೆ ಹಬ್ಬ ನೀಡಿದವು.

ದೊಡ್ಡಕಲ್ಲಸಂದ್ರ ಕೆರೆ ಉಳಿಸಲು ಸ್ಥಳೀಯರಿಂದ ಮೂರು ವರ್ಷಗಳ ಸತತ ಹೋರಾಟ

ಭಗೀರಥ ಪ್ರಯತ್ನದಿಂದ ಕೆರೆಯೊಡಲಿಗೆ ಮಳೆ ನೀರು

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಕೆರೆಗಳು ನಗರದ ಸ್ವತ್ತುಗಳು. ಅವುಗಳನ್ನು ಉಳಿಸಿಕೊಳ್ಳುವ ಹೊಣೆ ಸ್ಥಳೀಯರದು. ಕೊಳಚೆನೀರು ತುಂಬಿ ಅಳಿವಿನಂಚಿಗೆ ಸಾಗಿದ ಕೆರೆಗಳನ್ನು ಸ್ಥಳೀಯರು ಪಣ ತೊಟ್ಟರೆ ಮತ್ತೆ ಸಹಜ ಸ್ಥಿತಿಗೆ ಮರಳಿಸಬಹುದು ಎಂಬುದನ್ನು ದೊಡ್ಡಕಲ್ಲಸಂದ್ರ ಕೆರೆ ಪರಿಸರದ ಜನರು ತೋರಿಸಿಕೊಟ್ಟಿದ್ದಾರೆ. ಈ ಕೆರೆಯನ್ನು ಅಭಿವೃದ್ಧಿಪಡಿಸಿದರಷ್ಟೇ ಸಾಲದು, ಮಳೆ ನೀರು ಮಾತ್ರ ಅದರೊಡಲು ಸೇರುವಂತಾಗಬೇಕು ಎಂಬ ಅವರ ಹೋರಾಟ ತಕ್ಕಮಟ್ಟಿಗೆ ಫಲ ನೀಡಿದೆ.

ಕೊಳಚೆ ನೀರು ಸೇರಿ ಹದಗೆಟ್ಟಿದ್ದ ದೊಡ್ಡಕಲ್ಲಸಂದ್ರ ಕೆರೆಯು ಸ್ಥಳೀಯರು, ಸ್ವಯಂಸೇವಾ ಸಂಸ್ಥೆಯ ಹೋರಾಟದ ಫಲವಾಗಿ ಮತ್ತೆ ಗತವೈಭವಕ್ಕೆ ಮರಳುವ ಹಾದಿಯಲ್ಲಿದೆ. ಈ ಕೆರೆ ಪುನರುಜ್ಜೀವನಗೊಂಡ ಪರಿಯು ನಗರದ ಇತರ ಜಲಕಾಯಗಳನ್ನು ಉಳಿಸಿಕೊಳ್ಳುವುದಕ್ಕೂ ಪ್ರೇರಣೆಯಾಗುವಂತಿದೆ.

ಸಮೃದ್ಧ ಜೀವ ವೈವಿಧ್ಯವನ್ನು ಹೊಂದಿದ್ದ ನಗರದ ಅಪರೂಪದ ಕೆರೆಗಳಲ್ಲಿ ದೊಡ್ಡಕಲ್ಲಸಂದ್ರ ಕೆರೆಯೂ ಒಂದು. ಒಟ್ಟು 43 ಪ್ರಭೇದಗಳ 354ಕ್ಕೂ ಅಧಿಕ ಮರಗಳು, 42 ಪ್ರಭೇದಗಳ ಪೊದೆ ಜಾತಿಯ ಸಸ್ಯಗಳು, 38 ಪ್ರಭೇದಗಳ ಪಾತರಗಿತ್ತಿಗಳು, 95 ಪ್ರಭೇದಗಳ ಪಕ್ಷಿಗಳು ಈ ಕೆರೆಯ ಪರಿಸರದಲ್ಲಿ ಆಶ್ರಯ ಪಡೆದಿರುವುದು ಆ್ಯಕ್ಷನ್ ಏಯ್ಡ್ ಸಂಸ್ಥೆ ನಡೆಸಿದ ಅಧ್ಯಯನದಿಂದ ತಿಳಿದು ಬಂದಿತ್ತು. ಇಂತಿದ್ದ ಕೆರೆಯಲ್ಲಿ ಮೂರು ವರ್ಷಗಳ ಹಿಂದೆ ಏಕಾಏಕಿ ಮೀನುಗಳು ಸಾಯಲಾರಂಭಿಸಿದವು. ಈ ಕೆರೆಯ ಜೈವಿಕ ವ್ಯವಸ್ಥೆಯ ಮಹತ್ವ ಅರಿತಿದ್ದ ಆ್ಯಕ್ಷನ್ ಏಯ್ಡ್ ಸಂಸ್ಥೆಯವರು ಇದನ್ನು ಉಳಿಸಿಕೊಳ್ಳುವ ಅಗತ್ಯದ ಬಗ್ಗೆ ಸ್ಥಳೀಯರಿಗೆ ಮನವರಿಕೆ ಮಾಡಿದರು. ಅದರ ಫಲವಾಗಿ ಹುಟ್ಟಿದ್ದೇ ದೊಡ್ಡಕಲ್ಲಸಂದ್ರ ಕೆರೆ ಅಭಿವೃದ್ಧಿ ಸಮಿತಿ.





ದೊಡ್ಡಕಲ್ಲಸಂದ್ರ ಕೆರೆಯನ್ನು ಸೇರುವ ಮಳೆ ನೀರಿನಿಂದ ಹೂಳು, ಕಸ ಕಶ್ಮಲ ಬೇರ್ಪಡಿಸುವ ಕೊಳ (ಎಡಚಿತ್ರ), ಇತ್ತೀಚೆಗೆ ಸುರಿದ ಮಳೆಯ ವೇಳೆ ದೊಡ್ಡ ಕಲ್ಲಸಂದ್ರ ಕೆರೆಗೆ ಹರಿದು ಬಂದ ನೀರು

'ನಾವು ಇಲ್ಲಿಯೇ ನೆಲೆಸಿದ್ದರೂ ಈ ಕೆರೆಯ ಬಗ್ಗೆ ಮೊದಲು ಅಷ್ಟೊಂದು ಕಾಳಜಿ ವಹಿಸಿದವರಲ್ಲ. ಆದರೆ, ಆ್ಯಕ್ಷನ್ ಏಯ್ಡ್ ಸಂಸ್ಥೆಯವರ ಪ್ರೇರಣೆಯಿಂದ ಇಲ್ಲಿನ ವಿವಿಧ ಬಡಾವಣೆ ನಿವಾಸಿಗಳ ಸಂಘಗಳು ಸೇರಿಕೊಂಡು 'ದೊಡ್ಡಕಲ್ಲಸಂದ್ರ ಕೆರೆ ಅಭಿವೃದ್ಧಿ ಸಮಿತಿಯನ್ನು ರಚಿಸಿದೆವು. ಈ ಕೆರೆ ಅಭಿವೃದ್ಧಿಗೆ ಅನುದಾನ ಒದಗಿಸುವಂತೆ ಸ್ಥಳೀಯ ಶಾಸಕ ಕೆ.ಕೃಷ್ಣಪ್ಪ ಅವರಿಗೆ ಮನವಿ ಸಲ್ಲಿಸಿದೆವು. ಆಗಿನ ಪಾಲಿಕೆ ಸದಸ್ಯರೂ ಸಹಕರಿಸಿದರು. ಮೊದಲು ₹ 2 ಕೋಟಿ ಅನುದಾನವನ್ನು ಶಾಸಕರು ಒದಗಿಸಿದರು. ಅದು ಸಾಲದು ಎಂದ ಬಳಿಕ ₹ 5.93 ಕೋಟಿ ಕೊಡಿಸಿದರು' ಎಂದು ಸಮಿತಿಯ ಅಧ್ಯಕ್ಷ ಕೆ.ವಿ. ಮಂಜುನಾಥ ರೆಡ್ಡಿ ತಿಳಿಸಿದರು.

'ಕೆರೆ ಪರಿಸರದಲ್ಲಿ ಸ್ಥಳೀಯರು ನೆಟ್ಟು ಬೆಳೆಸಿದ್ದ ಮರಗಳನ್ನೆಲ್ಲ ಕಡಿದು ಕೆರೆಯ ಅಭಿವೃದ್ಧಿಗೆ ಮುಂದಾಗಿದ್ದರು. ಆಗಲೂ ನಾವು ಪ್ರತಿಭಟಿಸಿದೆವು. ಮರಗಿಡಗಳನ್ನು ಉಳಿಸಿಕೊಂಡು, ಈ ಕೆರೆಯ ಜೈವಿಕ ವ್ಯವಸ್ಥೆಗೆ ಧಕ್ಕೆ ಆಗದಂತೆ ಪುನರುಜ್ಜೀವನ ಕಾರ್ಯ ಮುಂದುವರಿಸುವಂತೆ ಒತ್ತಾಯಿಸಿದೆವು. ಈ ಸಲುವಾಗಿ ಅಭಿವೃದ್ಧಿಯ ನೀಲನಕ್ಷೆಯಲ್ಲಿ ಮಾರ್ಪಾಡು ಮಾಡುವಂತೆ ಕೋರಿದ್ದೆವು. ಆರಂಭದಲ್ಲಿ ನಮ್ಮ ಬೇಡಿಕೆಗಳು ಬಿಬಿಎಂಪಿ ಅಧಿಕಾರಿಗಳಿಗೆ ಇರಿಸು ಮುರಿಸು ತಂದಿರಬಹುದು. ಆದರೆ, ನಮ್ಮ ಕಾಳಜಿ ಅವರಿಗೆ ಮನವರಿಕೆ ಆಗತೊಡಗಿದೆ' ಎಂದು ಅವರು ತಿಳಿಸಿದರು.

'ಕೆರೆಗೆ ಮತ್ತೆ ಒಳಚರಂಡಿಯ ಕೊಳಚೆ ನೀರು ಸೇರಿದರೆ, ಇದು ಮತ್ತೆ ನಗರ ಉಳಿದ ಜಲಕಾಯಗಳಂತೆಯೇ ಆಗಲಿದೆ. ಮಳೆ ನೀರು ಮಾತ್ರ ಈ ಕೆರೆಯನ್ನು ಸೇರುವಂತಾದರೆ ಮಾತ್ರ ಈ ಕೆರೆ ಮತ್ತೆ ಹಿಂದಿನಂತೆ ಜೀವಕಳೆ ಪಡೆಯಲಿದೆ ಎಂಬ ಬಗ್ಗೆ ನಮ್ಮಲ್ಲಿ ಖಚಿತತೆ ಇತ್ತು. ಹಾಗಾಗಿ ಆಸುಪಾಸಿನಲ್ಲಿ ಕನಿಷ್ಠ ಪಕ್ಷ 500 ಮೀ ವ್ಯಾಪ್ತಿಯಲ್ಲಿ ಬೀಳುವ ಮಳೆ ನೀರು ಈ ಜಲಕಾಯದ ಒಡಲು ಸೇರುವಂತಾಗಬೇಕು ಎಂಬುದು ನಮ್ಮ ಪ್ರಮುಖ ಒತ್ತಾಯವಾಗಿತ್ತು. ಇದನ್ನು ಮನವರಿಕೆ ಮಾಡಿಕೊಟ್ಟ ಬಳಿಕ ಬಿಬಿಎಂಪಿ ಅಧಿಕಾರಿಗಳು ಆಸುಪಾಸಿನ ರಸ್ತೆಗಳ ಮಳೆನೀರು ಕೆರೆಗೆ ಹರಿದುಬರುವಂತೆ ಮಾಡಲು ನೀಲನಕ್ಷೆ ರೂಪಿಸಿದ್ದಾರೆ' ಎನ್ನುತ್ತಾರೆ ಆ್ಯಕ್ಷನ್ ಏಯ್ಡ್ ಸಂಸ್ಥೆಯ ಕಾರ್ಯಕ್ರಮ ವ್ಯವಸ್ಥಾಪಕ ರಾಘವೇಂದ್ರ ಬಿ.ಪಚ್ಚಾಪುರ್.

'ಪುನರುಜ್ಜೀವನಗೊಂಡ ಕೆರೆಗೆ ಮಳೆ ನೀರು ಮಾತ್ರ ಸೇರಬೇಕು ಎಂಬುದು ಸ್ಥಳೀಯರ ಒತ್ತಾಸೆ. ಈ ಕೆರೆಯನ್ನು ನೇರವಾಗಿ ಸಂಪರ್ಕಿಸುವ ರಾಜಕಾಲುವೆ ಇಲ್ಲ. ಹಾಗಾಗಿ ಸಮೀಪದ ಮೂರು ವಿಶಾಲ ರಸ್ತೆಗಳ ಇಕ್ಕೆಲಗಳಲ್ಲಿರುವ ಮಳೆ ನೀರು ಹರಿಯುವ ಚರಂಡಿಗಳ ನೀರನ್ನು ಕೆರೆಗೆ ಹರಿಸಲು ಅವಕಾಶ ಇದೆ. ಅಲ್ಲಿ ಸಂಗ್ರಹವಾಗುವ ಮಳೆ ನೀರು ಕೆರೆಗೆ ಸೇರುವಂತೆ ಮಾಡಲು ಯೋಜನೆ ರೂಪಿಸಿದ್ದೇವೆ. ನೀರು ಕೆರೆಯನ್ನು ಸೇರುವ ಬಳಿ ಹೂಳನ್ನು ಪ್ರತ್ಯೇಕಿಸಲು ತೊಟ್ಟಿ ಕಟ್ಟಲಿದ್ದೇವೆ' ಎಂದು ಬಿಬಿಎಂಪಿಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಶಿವಲಿಂಗಪ್ಪ ಮಾಹಿತಿ ನೀಡಿದರು.

'ಮಳೆ ನೀರಿನಿಂದ ಕೆರೆ ತುಂಬಿಸಲು ಮೊದಲ ಆದ್ಯತೆ'

ಕೆರೆಗಳನ್ನು ಅಭಿವೃದ್ಧಿಪಡಿಸಿದ ಬಳಿಕ ಅದಕ್ಕೆ ನೀರು ಹರಿದುಬರುವುದಕ್ಕೆ ವ್ಯವಸ್ಥೆ ಕಲ್ಪಿಸದಿದ್ದರೆ ಮಾಡಿದ ಕೆಲಸ ಎಲ್ಲವೂ ವ್ಯರ್ಥ. ನಗರೋತ್ಥಾನ ಹಾಗೂ ಶುಭ್ರ ಬೆಂಗಳೂರು ಯೋಜನೆಗಳ ಅಡಿ ಬಿಬಿಎಂಪಿಯು ಅನೇಕ ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಿದೆ. ಪುನರುಜ್ಜೀವನಗೊಂಡ ಕೆರೆಗಳಿಗೆ ಮಳೆ ನೀರು ಹರಿದುಬರುವುದಕ್ಕೆ ಸೂಕ್ತ ವ್ಯವಸ್ಥೆ ಕಲ್ಪಿಸುವುದಕ್ಕೆ ಆದ್ಯತೆ ನೀಡಿದ್ದೇವೆ. ಕೆರೆಗೆ ಮಳೆನೀರು ನೀರು ತುಂಬಿಸುವುದಕ್ಕೆ ಇರುವ ಎಲ್ಲ ಅವಕಾಶಗಳನ್ನೂ ಬಳಸಿಕೊಳ್ಳುವಂತೆ ಕಾಮಗಾರಿಯ ವಿನ್ಯಾಸ ರೂಪಿಸಲಾಗುತ್ತಿದೆ.


ಬಿ.ಟಿ.ಮೋಹನ ಕೃಷ್ಣ, ಸೂಪರಿಂಟೆಂಡಿಂಗ್ ಎಂಜಿನಿಯರ್, ಕೆರೆ ಅಭಿವೃದ್ಧಿ ವಿಭಾಗ, ಬಿಬಿಎಂಪಿ

'ಮಳೆ ನೀರ ಹನಿ ಹನಿಯನ್ನೂ ಕೆರೆಗೆ



'ಕರ್ನಾಟಕದ ಸರೋವರಗಳ ನೀರಿನ ಗುಣಮಟ್ಟ' ಮತ್ತು ಮಳೆ ನೀರ ಹನಿ ಹನಿಯನ್ನೂ ಕೆರೆಗೆ ಹರಿಸುವ ಕುರಿತ ಅಧ್ಯಯನಗಳನ್ನು ಆಧರಿಸಿ ಕೆರೆ ಅಭಿವೃದ್ಧಿ ಕುರಿತ ನೀತಿಗಳಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಿಕೊಳ್ಳುವಂತೆ ಆಕ್ಷನ್ ಏಯ್ಡ್ ಸಂಸ್ಥೆಯು ಬಿಬಿಎಂಪಿ ಮತ್ತು ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರಕ್ಕೆ (ಕೆಟಿಸಿಡಿಎ) ಶಿಫಾರಸು ಮಾಡಿದೆ. ಕೆರೆಗಳಿಗೆ ಮಳೆನೀರು ಹರಿವನ್ನು ಸುಗಮಗೊಳಿಸಲು ಮಾರ್ಗಸೂಚಿಗಳನ್ನು ರೂಪಿಸುವಂತೆ ಸಲಹೆ ನೀಡಿದೆ. ಪುನರುಜ್ಜೀವನಗೊಂಡ ಬಳಿಕ ಕೆರೆಗೆ ಮಳೆನೀರನ್ನು ಬಳಸಿಕೊಳ್ಳುವುದಕ್ಕೆ ಸೂಕ್ತ ವ್ಯವಸ್ಥೆ ಕಲ್ಪಿಸುವ ಕಾಮಗಾರಿಗಳ ನಕ್ಷೆಗಳನ್ನು ವಿಸ್ತೃತ ಯೋಜನಾ ವರದಿಗೆ (ಡಿಪಿಆರ್) ಅನುಮೋದನೆಗೆ ನೀಡುವ ಸಂದರ್ಭದಲ್ಲೇ ಕಡ್ಡಾಯವಾಗಿ ಹಾಜರುಪಡಿಸುವಂತೆ ಕೆಟಿಸಿಡಿಎಯನ್ನು ಕೋರಿದ್ದೇವೆ.

ರಾಘವೇಂದ್ರ ಬಿ. ಪಚ್ಚಾಪುರ್, ಕಾರ್ಯಕ್ರಮ ವ್ಯವಸ್ಥಾಪಕ, ಆಕ್ಷನ್ ಏಯ್ಡ್ ಸಂಸ್ಥೆ



21.16 ಎಕರೆ ದೊಡ್ಡಕಲ್ಲಸಂದ್ರ ಕೆರೆ ವಿಸ್ತೀರ್ಣ

₹ 5.93 ಕೋಟಿ ಕೆರೆ ಪುನರುಜ್ಜೀವನ ಕಾಮಗಾರಿಯ ಅಂದಾಜು ವೆಚ್ಚ

ಪ್ರವಾ ಗ್ರಾಫಿಕ್ಸ್

'ಜೀವವೈವಿಧ್ಯ ವೈಭವ ಮರಳಲಿ'



ಜಲಕಾಯಕ್ಕೆ ಮಳೆ ನೀರು ಹರಿಯುವಂತೆ ಮಾಡುವ ಚರಂಡಿಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವ ನಿಟ್ಟಿನಲ್ಲೂ ನಾವು ವಾರ್ಡ್ ಮಟ್ಟದ ಎಂಜಿನಿಯರ್‌ಗಳ ಜೊತೆ ಸೇರಿ ಕೆಲಸ ಮಾಡುತ್ತೇವೆ. ದೊಡ್ಡ ಕಲ್ಲಸಂದ್ರ ಕೆರೆ ಮತ್ತೆ ಮಳೆನೀರಿನಿಂದ ತುಂಬುವಂತಾಗಬೇಕು. ತನ್ಮೂಲಕ ಈ ಕೆರೆ ಪರಿಸರದಲ್ಲಿ ಮತ್ತೆ ಹಕ್ಕಿಗಳ ಕಲರವ ಮೊಳಗುವಂತಾಗಬೇಕು. ಈ ಕೆರೆ ಜೀವವೈವಿಧ್ಯದ ವೈಭವವನ್ನು ಮರಳಿ ಪಡೆಯಬೇಕು.

ಸೌಂದರಾಜನ್, ಸೌದಾಮಿನಿ ಬಡಾವಣೆ ನಿವಾಸಿ

'ಕೆರೆ, ರಾಜಕಾಲುವೆ ಒತ್ತುವರಿಯೂ ತೆರವಾಗಲಿ'

'ಈ ಕೆರೆಯ ಮೂಲ ವಿಸ್ತೀರ್ಣ 21 ಎಕರೆ 16 ಗುಂಟೆ. ಇದಕ್ಕೆ ಮಳೆ ನೀರು ಹೊತ್ತು ತರುವ 25 ಅಡಿ ಅಗಲದ ರಾಜಕಾಲುವೆಯೂ ಇದೆ. ಇದು ಒತ್ತುವರಿಯಾಗಿದೆ. ಈ ಒತ್ತುವರಿ ತೆರವುಗೊಳಿಸಬೇಕಾದರೆ ಭೂಸರ್ವೇಕ್ಷಣಾ ಇಲಾಖೆಯ ಹೆಚ್ಚುವರಿ ನಿರ್ದೇಶಕರ (ಎಡಿಎಲ್‌ಆರ್) ಕಚೇರಿಯವರು ಜಾಗದ ಸರ್ವೆ ಕಾರ್ಯ ನಡೆಸಿ ರಾಜಕಾಲುವೆಯ ಗಡಿ ಗುರುತಿನ ನಕ್ಷೆಯನ್ನು ಒದಗಿಸಬೇಕು. ಒಂದೂವರೆ ವರ್ಷಗಳಿಂದ ಎಡಿಎಲ್‌ಆರ್ ಕಚೇರಿಗೆ ಅಲೆಯುತ್ತಿದ್ದೇವೆ. ಆದರೂ ಸರ್ವೆ ನಡೆಸಲು ಈ ಕಚೇರಿಯವರು ಆಸಕ್ತಿ ತೋರಿಸುತ್ತಿಲ್ಲ.



ಕೆ.ವಿ.ಮಂಜುನಾಥ ರೆಡ್ಡಿ, ಅಧ್ಯಕ್ಷ, ದೊಡ್ಡಕಲ್ಲಸಂದ್ರ ಕೆರೆ ಅಭಿವೃದ್ಧಿ ಸಮಿತಿ



ವಾರಾಂತ್ಯ ವಿಹಾರ ಚಿಕ್ಕಬಳ್ಳಾಪುರ ತಾಲ್ಲೂಕಿನ ಪ್ರಸಿದ್ಧ ಪ್ರವಾಸಿ ತಾಣ ನಂದಿಬೆಟ್ಟಕ್ಕೆ ಭಾನುವಾರ ಬೆಳ್ಳಂಬೆಳಿಗ್ಗೆಯೇ ಪ್ರವಾಸಿಗರ ದಂಡೇ ಹರಿದು ಬಂದಿತು.

ರೌಡಿಗಳು ಪರಾರಿ: ಮುಂದುವರಿದ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ರೌಡಿಗಳನ್ನು ಮಟ್ಟಹಾಕಲು ಪೊಲೀಸರು ಚುರುಕಿನ ಕಾರ್ಯಾಚರಣೆ ನಡೆಸುತ್ತಿದ್ದು, ಪರಾರಿಯಾಗಿರುವ ರೌಡಿಗಳ ಪತ್ತೆಗಾಗಿ ಶೋಧ ಮುಂದುವರಿಸಿದ್ದಾರೆ.

ಅಪರಾಧ ಕೃತ್ಯ ಎಸಗಲು ಹಾಗೂ ಕೆಲವರ ಹತ್ಯೆ ಮಾಡಲು ಜೈಲಿನಿಂದಲೇ ಸಂಚು ರೂಪಿಸುತ್ತಿದ್ದ ಮಾಹಿತಿ ಮೇರೆಗೆ ಪೊಲೀಸರು ಶನಿವಾರ ಹಲವೆಡೆ ದಾಳಿ ನಡೆಸಿದ್ದರು.

ರೌಡಿಗಳ ಮನೆ ಹಾಗೂ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಪರಿಶೀಲನೆ ನಡೆಸಿದ್ದರು. 91 ಆಯುಧಗಳು, 12 ಕೆ.ಜಿ ಗಾಂಜಾ, ನಗದು ಹಾಗೂ ಇತರೆ ವಸ್ತುಗಳನ್ನು ಜಪ್ತಿ ಮಾಡಿದ್ದರು.

ಪೊಲೀಸರ ದಾಳಿ ಸಂದರ್ಭದಲ್ಲಿ ಕೆಲ ರೌಡಿಗಳು ಮನೆಯಲ್ಲಿ ಇರಲಿಲ್ಲ. ದಾಳಿ ಮಾಹಿತಿ ತಿಳಿಯುತ್ತಿದ್ದಂತೆ ಅವರೆಲ್ಲ ಪರಾರಿಯಾಗಿದ್ದಾರೆಂಬುದು ಗೊತ್ತಾಗಿದೆ. ಅಂಥ ರೌಡಿಗಳ ಬಗ್ಗೆ ಪೊಲೀಸರು ಮಾಹಿತಿ ಕಲೆಹಾಕುತ್ತಿದ್ದಾರೆ.

'2,144 ರೌಡಿಗಳ ಮನೆಗಳ ಮೇಲೆ ದಾಳಿ ಮಾಡಲಾಗಿತ್ತು. ಆ ಪೈಕಿ 1,548 ರೌಡಿಗಳನ್ನು ವಶಕ್ಕೆ ಪಡೆಯಲಾಗಿದೆ. ಆದರೆ, ಕೆಲ ರೌಡಿಗಳು ನಾಪತ್ತೆಯಾಗಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಲೋಕೇಶ್ ಅಲಿಯಾಸ್ ಮುಲಾಮ್, ಬೇಕರಿ ರಘು, ಸೈಲೆಂಟ್ ಸುನೀಲ್, ಗುಡ್ಡ ಭರತ್, ಗೂಳಿ ಬಸವ ಸೇರಿದಂತೆ ಹಲವು ರೌಡಿಗಳು ನಾಪತ್ತೆಯಾಗಿದ್ದಾರೆ. ಅವರನ್ನು ಪತ್ತೆ ಮಾಡಲಾಗುತ್ತಿದೆ' ಎಂದೂ ತಿಳಿಸಿದರು.

ರೌಡಿಗಳಿಗೆ ಕಮಿಷನರ್ ಎಚ್ಚರಿಕೆ: 'ನಗರದಲ್ಲಿ ರೌಡಿಗಳ ಕೃತ್ಯ ಸಹಿಸುವುದಿಲ್ಲ. ಯಾರಾದರೂ ಬಾಲ ಬಿಚ್ಚಿದರೆ, ಅಂಥವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸ್ ಕಮಿಷನರ್ ಕಮಲ್ ಪಂತ್ ಹೇಳಿದ್ದಾರೆ.

ಜೈಲು ಅಧಿಕಾರಿಗಳಿಗೆ ಪತ್ರ

ಶನಿವಾರ ನಡೆದ ದಾಳಿ ಬಗ್ಗೆ ಜೈಲಿನ ಉನ್ನತ ಅಧಿಕಾರಿಗಳಿಗೆ ನಗರ ಪೊಲೀಸರು ಪತ್ರ ಬರೆದಿದ್ದಾರೆ.

ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮೇಲೆ ನಡೆದ ದಾಳಿ ಹಾಗೂ ಕಾರಾಗೃಹದಲ್ಲಿ ಸಿಕ್ಕ ವಸ್ತುಗಳ ಬಗ್ಗೆ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.


'ಕಾರಾಗೃಹದಲ್ಲಿರುವ ರೌಡಿಗಳು ಹಾಗೂ ಇತರರ ಕೊಠಡಿಯಲ್ಲಿ ಆಯುಧಗಳು ಸಿಕ್ಕಿವೆ. ಗಾಂಜಾ ಸಹ ಪತ್ತೆಯಾಗಿದೆ. ದಾಳಿಯ ಪ್ರತಿಯೊಂದು ದೃಶ್ಯಗಳನ್ನು ಚಿತ್ರೀಕರಿಸಲಾಗಿದೆ. ಇಷ್ಟೆಲ್ಲ ಆಯುಧಗಳು ರೌಡಿಗಳ ಕೈಗೆ ಹೇಗೆ ಸಿಕ್ಕವು? ಸಂಬಂಧಪಟ್ಟ ಜೈಲಿನ ಸಿಬ್ಬಂದಿಯನ್ನು ವಿಚಾರಣೆ ನಡೆಸಬೇಕು' ಎಂದೂ ಪತ್ರದಲ್ಲಿ ಹೇಳಿರುವುದಾಗಿ ಮೂಲಗಳು ತಿಳಿಸಿವೆ.

ಎಫ್‌ಐಆರ್ ದಾಖಲು

ಕೇಂದ್ರ ಕಾರಾಗೃಹದ ಮೇಲೆ ನಡೆದ ದಾಳಿ ಬಗ್ಗೆ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಸಿಸಿಬಿ ಪೊಲೀಸರು ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆಯುಧಗಳು ಹಾಗೂ ಗಾಂಜಾ ಜೈಲಿನೊಳಗೆ ಹೋಗಿದ್ದು ಹೇಗೆ ಎಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಪಿ.ಡಿ.ವಾಲೀಕಾರ್ ಅವರಿಗೆ ಗೊರುಚ ಪ್ರಶಸ್ತಿ



ಗುಳೇದಗುಡ್ಡ (ಬಾಗಲಕೋಟೆ): ಮೈಸೂರಿನ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ನೀಡುವ 2019ನೇ ಸಾಲಿನ 'ಗೊರುಚ ಜಾನಪದ ಸಾಹಿತ್ಯ ಗ್ರಂಥ' ಪ್ರಶಸ್ತಿಗೆ ತಾಲ್ಲೂಕಿನ ಲಕ್ಕಸಕೊಪ್ಪ ಗ್ರಾಮದ ಪಿ.ಡಿ.ವಾಲೀಕಾರ ಆಯ್ಕೆಯಾಗಿದ್ದಾರೆ.

ಅವರ ಸಾಹಿತ್ಯ,ಸಾಮಾಜಿಕ ಹಾಗೂ ಶೈಕ್ಷಣಿಕ ಸಾಧನೆ ಗಮನಿಸಿ ಆಯ್ಕೆ ಮಾಡಿದ್ದಾರೆ.

ಆಗಸ್ಟ್ 1ರಂದು ಭಾನುವಾರ ಮೈಸೂರಿನ ಜೆ.ಎಸ್.ಎಸ್. ಮಹಿಳಾ ಕಾಲೇಜು ಸಭಾಭವನದಲ್ಲಿ ಜರುಗುವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಿ.ಡಿ. ವಾಲೀಕಾರ ಪ್ರಶಸ್ತಿ ಸ್ವೀಕರಿಸಲಿದ್ದಾರೆ ಎಂದು ಪರಿಷತ್‌ನ ಪ್ರಕಟಣೆ ತಿಳಿಸಿದೆ.

'ಸಿಮ್ ಕೆವೈಸಿ' ಹೆಸರಿನಲ್ಲಿ ₹ 27.04 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪರಿಚಿತ ಸಂಖ್ಯೆಯಿಂದ ಬಂದ ಕರೆ ನಂಬಿದ್ದ ವೃದ್ಧರೊಬ್ಬರು, ಸಿಮ್ ಕಾರ್ಡ್ ಕೆವೈಸಿ (ಗ್ರಾಹಕ ಮಾಹಿತಿ) ನವೀಕರಣ ಮಾಡಿಸಲು ಹೋಗಿ ₹ 27.04 ಲಕ್ಷ ಕಳೆದುಕೊಂಡಿದ್ದಾರೆ.

ಬಾಣಸವಾಡಿ ನಿವಾಸಿಯಾಗಿರುವ 80 ವರ್ಷದ ವೃದ್ಧರೊಬ್ಬರು ವಂಚನೆಗೀಡಾಗಿದ್ದು, ಅವರ ಮಗ ಪೂರ್ವ ವಿಭಾಗದ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದಾರೆ.

'ನಿವೃತ್ತ ನೌಕರರಾದ ವೃದ್ಧ, ಎಸ್‌ಬಿಐ ಶಾಖೆಯಲ್ಲಿ ಖಾತೆ ಹೊಂದಿದ್ದಾರೆ. ಜುಲೈ 4ರಂದು ವೃದ್ಧರ ಮೊಬೈಲ್‌ಗೆ ಕರೆ ಮಾಡಿದ್ದ ವಂಚಕ, 'ನಿಮ್ಮ ಮೊಬೈಲ್ ಸಿಮ್ ಕಾರ್ಡ್ ಕೆವೈಸಿ ನವೀಕರಣ ಮಾಡಿಕೊಳ್ಳಬೇಕು. ಇಲ್ಲದಿದ್ದರೆ, ಮೊಬೈಲ್ ಸಂಖ್ಯೆ ನಿಷ್ಕ್ರಿಯವಾಗಲಿದೆ' ಎಂದಿದ್ದ. ಅದನ್ನು ನಂಬಿದ್ದ ವೃದ್ಧ, ಬ್ಯಾಂಕ್ ಖಾತೆ ಮಾಹಿತಿ ಹಾಗೂ ಗೋಪ್ಯ ಸಂಖ್ಯೆಯನ್ನು ಆರೋಪಿ ಜೊತೆ ಹಂಚಿಕೊಂಡಿದ್ದರು. ಈ ಸಂಗತಿ ದೂರಿನಲ್ಲಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮಾಹಿತಿ ಪಡೆದಿದ್ದ ಆರೋಪಿ, ಬ್ಯಾಂಕ್ ಖಾತೆಯಿಂದ ಹಂತ ಹಂತವಾಗಿ ₹ 27.04 ಲಕ್ಷ ವರ್ಗಾಯಿಸಿಕೊಂಡಿದ್ದಾನೆ. ಹೊರ ರಾಜ್ಯದ ಸೈಬರ್ ವಂಚಕರು ಕೃತ್ಯ ಎಸಗಿರುವ ಅನುಮಾನವಿದೆ' ಎಂದೂ ಮೂಲಗಳು ತಿಳಿಸಿವೆ.

ವಂಚಕ ಜಾಲದ ಬಗ್ಗೆ ಎಚ್ಚರ: 'ಮೊಬೈಲ್ ಸೇವಾ ಕಂಪನಿ ಪ್ರತಿನಿಧಿಗಳು, ಕೆವೈಸಿ ಸಂಬಂಧಪಟ್ಟಂತೆ ಗ್ರಾಹಕರಿಗೆ ಯಾವುದೇ ಕರೆಗಳನ್ನು ಮಾಡುತ್ತಿಲ್ಲ. ಸಂದೇಶಗಳನ್ನೂ ಕಳುಹಿಸುತ್ತಿಲ್ಲ. ಇಂಥ ಕರೆ ಹಾಗೂ ಸಂದೇಶಗಳನ್ನು ಜನರು ನಂಬಬಾರದು' ಎಂದು ಸೈಬರ್ ಪೊಲೀಸರು ಹೇಳಿದರು.

'ಹೊರ ರಾಜ್ಯದ ಸೈಬರ್ ವಂಚಕರು, ಕೆವೈಸಿ ಹೆಸರಿನಲ್ಲಿ ಜನರಿಂದ ಬ್ಯಾಂಕ್ ಖಾತೆ ಮಾಹಿತಿ ಪಡೆದು ವಂಚಿಸುತ್ತಿದ್ದಾರೆ. ಇಂಥವರ ಬಗ್ಗೆ ಜನರು ಎಚ್ಚರಿಕೆ ವಹಿಸಬೇಕು' ಎಂದೂ ಕೋರಿದ್ದಾರೆ.

ಮುದ್ರಾ ಸಾಲದ ಆಮಿಷ: ₹ 5.17 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಪ್ರಧಾನ ಮಂತ್ರಿ ಮುದ್ರಾ ಯೋಜನೆಯಡಿ ಸಾಲ ಕೊಡಿಸುವ ಆಮಿಷವೊಡ್ಡಿ ನಗರದ ನಿವಾಸಿಯೊಬ್ಬರಿಂದ ₹ 5.17 ಲಕ್ಷ ಪಡೆದು ವಂಚಿಸಲಾಗಿದೆ. ಈ ಬಗ್ಗೆ ಕೇಂದ್ರ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಠಾಣೆ ವ್ಯಾಪ್ತಿಯ ವ್ಯಾಪಾರಿಯೊಬ್ಬರು ಸಾಲಕ್ಕಾಗಿ ಪ್ರಯತ್ನಿಸುತ್ತಿದ್ದರು. ಮುದ್ರಾ ಸಾಲ ವಿಭಾಗದಿಂದ ಮಾತನಾಡುತ್ತಿರುವುದಾಗಿ ಹೇಳಿ ಕರೆ ಮಾಡಿದ್ದ ಆರೋಪಿಗಳು, ದೂರುದಾರರಿಗೆ ಸಾಲ ಕೊಡಿಸುವ ಆಮಿಷವೊಡ್ಡಿದ್ದರು. ಅದನ್ನು ನಂಬಿದ್ದ ದೂರುದಾರ, ಆರೋಪಿಗಳು ಕೇಳಿದ್ದ ದಾಖಲೆಗಳನ್ನು ನೀಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸಾಲ ಮಂಜೂರು ಮಾಡಲು ಕೆಲ ಶುಲ್ಕಗಳನ್ನು ಪಾವತಿಸಬೇಕೆಂದು ಹೇಳಿದ್ದ ಆರೋಪಿಗಳು, ದೂರುದಾರರಿಂದ ಹಂತ ಹಂತವಾಗಿ ₹ 5.17 ಲಕ್ಷ ಪಡೆದಿದ್ದರು. ಅದಾದ ನಂತರ ಯಾವುದೇ ಸಾಲ ಮಂಜೂರಾಗಿರಲಿಲ್ಲ. ಆರೋಪಿಗಳು ಸಹ ನಾಪತ್ತೆಯಾಗಿದ್ದಾರೆ' ಎಂದು ಮೂಲಗಳು ತಿಳಿಸಿವೆ.

₹ 4 ಲಕ್ಷ ಮೌಲ್ಯದ 7 ವಾಹನಗಳ ಜಪ್ತಿ
ದ್ವಿಚಕ್ರ ವಾಹನ ಕದಿಯುತ್ತಿದ್ದವ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆ ಮುಂದೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನ ಕಳವು ಮಾಡುತ್ತಿದ್ದ ಆರೋಪದಡಿ ಹನುಮಂತ ಎಂಬಾತನನ್ನು ಅನ್ನಪೂರ್ಣೇಶ್ವರಿನಗರ ಪೊಲೀಸರು ಬಂಧಿಸಿದ್ದಾರೆ.

'ಮುದ್ದಿನಪಾಳ್ಯದಲ್ಲಿರುವ ದೂರುದಾರರ ಮನೆ ಎದುರು ನಿಲ್ಲಿಸಿದ್ದ ವಾಹನವನ್ನು ಜೂನ್ 10ರಂದು ಆರೋಪಿ ಕಳವು ಮಾಡಿದ್ದ. ಈ ಬಗ್ಗೆ ದಾಖಲಾದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ. ಆತನಿಂದ ₹ 4 ಲಕ್ಷ ಮೌಲ್ಯದ 7 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.



ಆರೋಪಿಯಿಂದ ಜಪ್ತಿ ಮಾಡಲಾದ ದ್ವಿಚಕ್ರ ವಾಹನಗಳು

'ನಕಲಿ ಕೀ ಬಳಸಿ ಹಾಗೂ ಹ್ಯಾಂಡಲ್ ಲಾಕ್ ಮುರಿದು ಆರೋಪಿ ವಾಹನಗಳನ್ನು ಕಳವು ಮಾಡುತ್ತಿದ್ದ. ಜ್ಞಾನಭಾರತಿ, ಕೆಂಗೇರಿ, ನಂದಿನಿ ಲೇಔಟ್ ಹಾಗೂ ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯಲ್ಲೂ ಆರೋಪಿ ಕೃತ್ಯ ಎಸಗಿರುವ ಮಾಹಿತಿ ಇದೆ' ಎಂದೂ ಮೂಲಗಳು ತಿಳಿಸಿವೆ.

ಅರುಣ್ ಕುಮಾರ್ ನೇಮಕ

ನವದೆಹಲಿ(ಪಿಟಿಐ): ಆರ್‌ಎಸ್‌ಎಸ್ ಭಾನುವಾರ ಕೆಲವು ಪ್ರಮುಖ ಬದಲಾವಣೆಗಳನ್ನು ಮಾಡಿದೆ.

ಜಂಟಿ ಪ್ರಧಾನ ಕಾರ್ಯದರ್ಶಿ ಅರುಣ್ ಕುಮಾರ್ ಅವರನ್ನು ಬಿಜೆಪಿ ಜತೆಗಿನ ರಾಜಕೀಯ ವಿಷಯಗಳ ಸಂಚಾಲಕರನ್ನಾಗಿ ನೇಮಿಸಲಾಗಿದೆ.

ಪಕ್ಷೇತರವಾಗಿ ಸ್ಪರ್ಧಿಸಿದರೂ ಗೆಲುವು: ಜಿ.ಟಿ.ದೇವೇಗೌಡ

ಮೈಸೂರು: 'ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ನಾನು ಮತ್ತು ನನ್ನ ಪುತ್ರ ಪಕ್ಷೇತರರಾಗಿ ಸ್ಪರ್ಧಿಸಿದರೂ ಗೆಲ್ಲುವ ವಿಶ್ವಾಸವಿದೆ' ಎಂದು ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡ ಅವರು ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

₹ 2.07 ಲಕ್ಷ ವಂಚಿಸಿದ ಆನ್‌ಲೈನ್ ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈವಾಹಿಕ ಜಾಲತಾಣ ಮೂಲಕ ಪರಿಚಯವಾಗಿದ್ದ ವ್ಯಕ್ತಿಯೊಬ್ಬ ನಗರದ ಯುವತಿಯಿಂದ ₹ 2.07 ಲಕ್ಷ ಪಡೆದು ವಂಚಿಸಿದ್ದಾನೆ.

ನಗರದ ಆಸ್ಪತ್ರೆಯೊಂದರಲ್ಲಿ ಶುಶ್ರೂಷಕಿ ಆಗಿರುವ 30 ವರ್ಷದ ಯುವತಿ ವಂಚನೆ ಬಗ್ಗೆ ದಕ್ಷಿಣ ವಿಭಾಗ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದಾರೆ.

'ವರನಿಗಾಗಿ ಹುಡುಕಾಟ ನಡೆಸುತ್ತಿದ್ದ ಯುವತಿ, ಬೆಂಗಾಲಿ ಶಾದಿ ಡಾಟ್ ಕಾಮ್ ಜಾಲತಾಣದಲ್ಲಿ ಖಾತೆ ತೆರೆದಿದ್ದರು. ಅಲ್ಲಿ ಆರೋಪಿ ಪರಿಚಯವಾಗಿತ್ತು. ವಿದೇಶದಲ್ಲಿ ಉದ್ಯೋಗದಲ್ಲಿರುವುದಾಗಿ ಹೇಳಿದ್ದ ಆರೋಪಿ, ಚಾಟಿಂಗ್ ಮಾಡಲಾರಂಭಿಸಿದ್ದ. ಮದುವೆಯಾಗುವುದಾಗಿ ಹೇಳಿದ್ದ' ಎಂದು ಮೂಲಗಳು ಹೇಳಿವೆ.

'ಇತ್ತೀಚೆಗೆ ಯುವತಿಗೆ ಕರೆ ಮಾಡಿದ್ದ ಆರೋಪಿ, 'ನನ್ನ ವೈಯಕ್ತಿಕ ಹಾಗೂ ಶೈಕ್ಷಣಿಕ ದಾಖಲೆಗಳು ದೆಹಲಿ ವಿಮಾನ ನಿಲ್ದಾಣದಲ್ಲಿವೆ. ನಾನು ದೆಹಲಿಗೆ ಬರಲು ಆಗುವುದಿಲ್ಲ. ನೀವೇ ಅವುಗಳನ್ನು ನಿಮ್ಮ ವಿಳಾಸಕ್ಕೆ ತರಿಸಿಕೊಂಡು ಇಟ್ಟುಕೊಳ್ಳಿ. ನಾನು ಬಂದಾಗ ತೆಗೆದುಕೊಂಡು ಹೋಗುತ್ತೇನೆ' ಎಂದಿದ್ದ.' 'ಕೆಲ ನಿಮಿಷಗಳ ನಂತರ ವಿಮಾನ ನಿಲ್ದಾಣ ಅಧಿಕಾರಿ ಸೋಗಿನಲ್ಲಿ ಯುವತಿಗೆ ಕರೆ ಮಾಡಿದ್ದ ಮತ್ತೊಬ್ಬ ಆರೋಪಿ, 'ದಾಖಲೆಗಳನ್ನು ನಿಮ್ಮ ವಿಳಾಸಕ್ಕೆ ಕಳುಹಿಸಲು ಶುಲ್ಕ ಪಾವತಿಸಬೇಕು' ಎಂದಿದ್ದ. ಅದನ್ನು ನಂಬಿದ್ದ ಯುವತಿ, ಆರೋಪಿ ಹೇಳಿದ್ದ ಖಾತೆಗೆ ₹ 2.07 ಲಕ್ಷ ಹಾಕಿದ್ದರು. ಅದಾದ ನಂತರ ಆರೋಪಿಗಳು ನಾಪತ್ತೆಯಾಗಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

ಹಣ ದ್ವಿಗುಣ ಆಮಿಷ; ಹೂಡಿಕೆ ಹೆಸರಲ್ಲಿ ₹ 7.30 ಲಕ್ಷ ಗುಳುಂ

ಹಣ ದ್ವಿಗುಣಗೊಳಿಸುವ ಆಮಿಷವೊಡ್ಡಿ ₹ 7.30 ಲಕ್ಷ ಹೂಡಿಕೆ ಮಾಡಿಸಿಕೊಂಡು ವಂಚಿಸಲಾಗಿದ್ದು, ಈ ಬಗ್ಗೆ ಉತ್ತರ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ದೇವನಹಳ್ಳಿಯ ಜಾಲ ಹೋಬಳಿಯ ನಿವಾಸಿಯೊಬ್ಬರು ದೂರು ನೀಡಿದ್ದಾರೆ. ಆರೋಪಿಗಳಾದ ಅಹ್ಮದ್ ಶಕೀರ್, ರಹೀಬ್ ಲಾಲ್ ಹಾಗೂ ಇರ್ಷಾದ್ ಮೊಹಮ್ಮದ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಖಾಸಗಿ ಕಂಪನಿಯಲ್ಲಿ ದೂರುದಾರ ಕೆಲಸ ಮಾಡುತ್ತಿದ್ದಾರೆ. ಅಲ್ಫಾ ಎಂಪೈರ್ ಇಂಟರ್‌ನ್ಯಾಷನಲ್ ಕಂಪನಿ ಪ್ರತಿನಿಧಿ ಸೋಗಿನಲ್ಲಿ ದೂರುದಾರರಿಗೆ ಕರೆ ಮಾಡಿದ್ದ ಆರೋಪಿಗಳು, 'ನಮ್ಮ ಕಂಪನಿಯಲ್ಲಿ ಹೂಡಿಕೆ ಮಾಡಿದರೆ, ನಿಗದಿತ ಅವಧಿಯೊಳಗೆ ಹಣ ದ್ವಿಗುಣಗೊಳ್ಳುತ್ತದೆ' ಎಂದಿದ್ದರು. ಅದನ್ನು ನಂಬಿದ್ದ ದೂರುದಾರ, ₹ 1.90 ಲಕ್ಷ ಹೂಡಿಕೆ ಮಾಡಿದ್ದರು.' 'ಮತ್ತಷ್ಟು ಮಂದಿಯಿಂದ ಹಣ ಹೂಡಿಕೆ ಮಾಡಿಸಿದರೆ ಲಾಭ ನೀಡುವುದಾಗಿ ಆರೋಪಿಗಳು ಹೇಳಿದ್ದರು. ಅದನ್ನೂ ನಂಬಿದ್ದ ದೂರುದಾರ, ಸ್ನೇಹಿತರ ಮೂಲಕ ₹ 5.40 ಲಕ್ಷ ಹೂಡಿಕೆ ಮಾಡಿಸಿದ್ದರು. ನಿಗದಿತ ದಿನದೊಳಗೆ ಕಂಪನಿ ಯಿಂದ ಯಾವುದೇ ಹಣ ವಾಪಸು ಬಂದಿಲ್ಲ. ಈ ಬಗ್ಗೆ ವಿಚಾರಿಸಿದಾಗ ಕಂಪನಿಯಿಂದ ಪ್ರತಿಕ್ರಿಯೆ ಸಿಕ್ಕಿಲ್ಲ' ಎಂದೂ ಮೂಲಗಳು ತಿಳಿಸಿವೆ.



ಅಣ್ಣಾವ್ರ ಆಶೀರ್ವಾದ... ನಟ ರಾಜ್‌ಕುಮಾರ್ ಅವರ ಅಭಿಮಾನಿಗಳಾದ ನವವಿವಾಹಿತರು ಕಂಠೀರವ ಸ್ಟುಡಿಯೋದಲ್ಲಿರುವ ರಾಜಕುಮಾರ್ ಸಮಾಧಿಗೆ ಭಾನುವಾರ ಭೇಟಿ ನೀಡಿ ಆಶೀರ್ವಾದ ಪಡೆದುಕೊಂಡರು ಪ್ರಜಾವಾಣಿ ಚಿತ್ರ

₹ 280 ಕೋಟಿ ರಾಜಧನ ಬಾಕಿ, ವಸೂಲಾಗಿದ್ದು ₹ 1.60 ಕೋಟಿ; ಬೊಕ್ಕಸಕ್ಕೆ ನಷ್ಟ

ಕರಗುತ್ತಿದೆ ಬೆಟ್ಟ, ಏರುತ್ತಿದೆ ದಂಡ!

• ಎಂ.ಎನ್.ಯೋಗೇಶ್



ಬೇಬಿಬೆಟ್ಟ ಕರಗಿ ಕೆರೆಯಾಗಿರುವ ಚಿತ್ರಣ

ಮಂಡ್ಯ: ಅಕ್ರಮ ಗಣಿಗಾರಿಕೆಯಿಂದಾಗಿ ಬೇಬಿಬೆಟ್ಟ ದಿನೇದಿನೇ ಕರಗುತ್ತಿದೆ. ಆದರೆ, ಗಣಿ ಮಾಲೀಕರು ಉಳಿಸಿಕೊಂಡಿರುವ ರಾಜಧನ ಹಾಗೂ ದಂಡದ ಬಾಕಿ ಮೊತ್ತ ಬೆಟ್ಟಕ್ಕಿಂತ ಎತ್ತರಕ್ಕೆ ಏರತೊಡಗಿದೆ.

ಬೆಟ್ಟದಲ್ಲಿ ಗಣಿ ಚಟುವಟಿಕೆ ನಡೆಸಿರುವ 30 ಕಂಪನಿಗಳು 2017ರಿಂದ ಇಲ್ಲಿವರೆಗೆ ಪರಿಸರ ಅನುಮೋದನೆ ಪಡೆಯದೆ ಲಕ್ಷಾಂತರ ಮೆಟ್ರಿಕ್ ಟನ್ ಕಲ್ಲು ಹೊರತೆಗೆದಿವೆ. ಪರಿಸರ ಅನುಮೋದನಾ ಸಮಿತಿ ನಿಗದಿಗೊಳಿಸಿದ ಮಿತಿಯಂತೆ ವರ್ಷಕ್ಕೆ ಗರಿಷ್ಠ 25 ಸಾವಿರ ಮೆಟ್ರಿಕ್ ಟನ್ ಗಣಿಗಾರಿಕೆ ನಡೆಸಬಹುದು. ಆದರೆ, ಕಂಪನಿಗಳು ಅತ್ಯಾಧುನಿಕ ಸ್ಫೋಟಕ, ಗಣಿ ಯಂತ್ರ ಬಳಸಿ ನಿಗದಿತ ಪ್ರಮಾಣಕ್ಕಿಂತ 100 ಪಟ್ಟು ಹೆಚ್ಚು ಕಲ್ಲು ತೆಗೆದಿರುವುದನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆ ಪತ್ತೆ ಮಾಡಿದೆ.

ಸಮೀಕ್ಷೆ ನಡೆಸಿದ ಗಣಿ ಇಲಾಖೆ ಮೂಲ ರಾಜಧನ ₹ 60 ಸೇರಿ ಪ್ರತಿ ಮೆಟ್ರಿಕ್ ಟನ್ ಕಲ್ಲಿಗೆ ₹ 300 ದಂಡ (ಒಟ್ಟು ₹ 360) ವಿಧಿಸಿದೆ. ಲಕ್ಷಾಂತರ ಮೆಟ್ರಿಕ್ ಟನ್ ಗಣಿಗಾರಿಕೆ ನಡೆಸಿರುವ ಹಿನ್ನೆಲೆಯಲ್ಲಿ ಬೆಟ್ಟದಲ್ಲಿನ 30 ಕಂಪನಿಗಳಿಗೆ ₹ 280 ಕೋಟಿ ದಂಡ ವಿಧಿಸಲಾಗಿದೆ. ಅದರಲ್ಲಿ ಸ್ಥಳೀಯ ಜನಪ್ರತಿನಿಧಿಯೊಬ್ಬರ ಗಣಿಗೆ ₹ 32 ಕೋಟಿ ದಂಡ ವಿಧಿಸಲಾಗಿದೆ.

₹280ಕೋಟಿದಂಡದಲ್ಲಿಗಣಿಮತ್ತು ಭೂವಿಜ್ಞಾನ ಇಲಾಖೆ ₹ 1.60 ಕೋಟಿ ದಂಡವನ್ನು ಮಾತ್ರ ವಸೂಲಿ ಮಾಡಿದೆ. 2020ರ ಜನವರಿಯಲ್ಲಿ ಈ ಕಂಪನಿಗಳ ಅನುಮತಿ ರದ್ದುಗೊಳಿಸಲಾಗಿದೆ.

ಕಲ್ಲುಗಣಿ ಸುತ್ತಮುತ್ತ

ಅಕ್ರಮವಾಗಿ ಗಣಿಗಾರಿಕೆ ನಡೆಸಿರುವ ಕಂಪನಿಗಳಿಗೆ ಈಗಾಗಲೇ ನೋಟಿಸ್ ಜಾರಿಗೊಳಿಸಲಾಗಿದೆ. ಹಂತಹಂತವಾಗಿ ದಂಡ, ರಾಜಧನ ವಸೂಲಿ ಮಾಡಲಾಗುವುದು

ಎಸ್.ಅಶ್ವತಿ, ಜಿಲ್ಲಾಧಿಕಾರಿ

ಇಲಾಖೆಯ ಆದೇಶದ ವಿರುದ್ಧ ಕಲ್ಲು ಗಣಿ ಮಾಲೀಕರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿ ದಂಡ ರದ್ದತಿಗೆ ಕೋರಿದ್ದಾರೆ. ಆದರೆ, ಇದನ್ನು ಗಂಭೀರವಾಗಿ ಪರಿಗಣಿಸಿದ ಹೈಕೋರ್ಟ್ ಡ್ರೋನ್ ಕ್ಯಾಮೆರಾ ಬಳಸಿ ಮತ್ತೆ ನಷ್ಟ ಸಮೀಕ್ಷೆ ನಡೆಸಲು ಆದೇಶಿಸಿದೆ.

ಅದರನ್ವಯ ಗಣಿ ಇಲಾಖೆ ಜೂನ್ 28ರಂದು ಡ್ರೋನ್ ಸರ್ವೆಗೆ ಟೆಂಡರ್ ಆಹ್ವಾನಿಸಿದೆ. ಗಣಿ ಮಾಲೀಕರು ಸಲ್ಲಿಸಿದ ಅರ್ಜಿ ಅವರಿಗೇ ತಿರುಗುಬಾಣವಾಗಿದ್ದು,

ಮುಖ್ಯಾಂಶಗಳು

- ಪರಿಸರ ಅನುಮೋದನೆ ಪಡೆಯದೆ ಗಣಿ ಚಟುವಟಿಕೆ
- ಜನಪ್ರತಿನಿಧಿಯೊಬ್ಬರ ಗಣಿಗೆ ₹ 32 ಕೋಟಿ ದಂಡ
- ಡ್ರೋನ್ ಸರ್ವೆ ನಡೆಸಲು ಟೆಂಡರ್ ಆಹ್ವಾನ

ಸರ್ವೆಯಿಂದ ತಪ್ಪಿಸಿಕೊಲು ಯತ್ನಿಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ಡ್ರೋನ್ ಸಮೀಕ್ಷೆಗೆ ಹೈಕೋರ್ಟ್ ಸೂಚನೆ ನೀಡಿರುವ ಕಾರಣ ಗಣಿ ಮಾಲೀಕರು ದಂಡ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಜಿಲ್ಲೆಯಲ್ಲಿ 116 ಗಣಿಗಳು ಅನಧಿಕೃತವಾಗಿ 58 ಲಕ್ಷ ಮೆಟ್ರಿಕ್ ಟನ್, ಭೂಮಿ ಒತ್ತುವರಿ ಮಾಡಿ 50 ಲಕ್ಷ ಮೆಟ್ರಿಕ್ ಟನ್ ಗಣಿಗಾರಿಕೆ ನಡೆಸಿರುವುದು ಪತ್ತೆಯಾಗಿದ್ದು, ಬೇಬಿಬೆಟ್ಟದ ₹ 280 ಕೋಟಿ ಸೇರಿದಂತೆ ಒಟ್ಟು ₹ 320 ಕೋಟಿ

ಅಂಕಿ-ಅಂಶಗಳು

₹320 ಕೋಟಿ ಜಿಲ್ಲೆಯಲ್ಲಿ ಒಟ್ಟು ದಂಡದ ಮೊತ್ತ

₹ 280 ಕೋಟಿ ಅದರಲ್ಲಿ ಬೇಬಿಬೆಟ್ಟದಲ್ಲಿ ವಿಧಿಸಲಾಗಿರುವ ದಂಡ

₹300 ಕೋಟಿ ಪಟ್ಟಾ ಭೂಮಿಯಲ್ಲಿ ಗಣಿಗಾರಿಕೆ 40 ಪ್ರಕರಣದಲ್ಲಿ ಒಟ್ಟು ದಂಡ

₹102 ಕೋಟಿ ಅದರಲ್ಲಿ ದಿಲೀಪ್ ಬಿಲ್ಡ್ ಕಾನ್ ಕಂಪನಿಗೆ

ದಂಡ ವಿಧಿಸಲಾಗಿದೆ. ಇನ್ನೂ 2 ವರ್ಷದ ಸಮೀಕ್ಷೆ ನಡೆಯಬೇಕಿದ್ದು, ಸರ್ಕಾರದ ಬೊಕ್ಕಸಕ್ಕೆ ಸಾವಿರಾರು ಕೋಟಿ ನಷ್ಟ ಉಂಟಾಗಿದೆ.

ದಿಲೀಪ್ ಬಿಲ್ಡ್ ಕಾನ್‌ಗೆ ದಂಡ: ಬೆಂಗಳೂರು– ಮೈಸೂರು ದಶಪಥ ಕಾಮಗಾರಿ ನಡೆಸುತ್ತಿರುವ ದಿಲೀಪ್ ಬಿಲ್ಡ್‌ಕಾನ್ ಕಂಪನಿ ರಸ್ತೆ ಕಾಮಗಾರಿ ಹೆಸರಿನಲ್ಲಿ ಅಕ್ರಮ ಗಣಿಗಾರಿಕೆ ನಡೆಸಿರುವುದನ್ನು ಪತ್ತೆಹಚ್ಚಲಾಗಿದೆ. ಕಾಳೇನಹಳ್ಳಿ, ಸಿದ್ದಾಪುರ ವ್ಯಾಪ್ತಿಯ ಪಟ್ಟಾ ಭೂಮಿಯಲ್ಲಿ ಗಣಿಗಾರಿಕೆ ನಡೆಸಿರುವ ಆರೋಪದ ಮೇಲೆ ₹ 102 ಕೋಟಿ ದಂಡ ವಿಧಿಸಲಾಗಿದೆ. ಒಟ್ಟು 40 ಪ್ರಕರಣ ದಾಖಲಿಸಲಾಗಿದ್ದು ಪ್ರತ್ಯೇಕವಾಗಿ ₹ 300 ಕೋಟಿ ದಂಡ ವಿಧಿಸಲಾಗಿದೆ.

‘ಗಣಿ ಮತ್ತು ಖನಿಜ ಅಭಿವೃದ್ಧಿ, ನಿಯಂತ್ರಣ ಕಾಯ್ದೆ (ಎಂಎಂಡಿಆರ್‌ಎ) 2020, ಜೂನ್ ತಿಂಗಳಲ್ಲಿ ತಿದ್ದುಪಡಿಗೆ ಒಳಗಾಗಿದೆ. ನೂತನ ತಿದ್ದುಪಡಿಯಂತೆ ಅಕ್ರಮ ಗಣಿಗಾರಿಕೆಗೆ ವಿಧಿಸುವ ದಂಡವನ್ನು ಪ್ರತಿ ಮೆಟ್ರಿಕ್ ಟನ್‌ಗೆ ₹ 1,570ಕ್ಕೆ ಹೆಚ್ಚಿಸಿದೆ. ಅದರನ್ವಯ ಸಮೀಕ್ಷೆ ನಡೆಸಿದರೆ ಜಿಲ್ಲೆಗೆ ₹ 8 ಸಾವಿರ ಕೋಟಿ, ಬೇಬಿಬೆಟ್ಟವೊಂದಕ್ಕೆ ₹ 3 ಸಾವಿರ ಕೋಟಿ ರಾಜಧನ–ದಂಡ ಬರುತ್ತದೆ’ ಎಂದು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಕೆಆರ್‌ಎಸ್ ಮಾರ್ಗದಲ್ಲಿ ಶಿಲಾ ರೇಖೆ

ಲಕ್ಷ್ಮಣ ತೀರ್ಥದಿಂದ ಕೆಆರ್‌ಎಸ್, ಬೆಂಗಳೂರಿನವರೆಗೆ ಶಿಲಾ ರೇಖೆ (ಮೆಗಾ ಲೀನ್ಯಾಮೆಂಟ್) ಇರುವುದನ್ನು ವಿಜ್ಞಾನಿಗಳು 100 ವರ್ಷದ ಹಿಂದೆಯೇ ಪತ್ತೆ ಮಾಡಿದ್ದಾರೆ. 1995ರಲ್ಲಿ ಚೆನ್ನೈನ ಭೂವಿಜ್ಞಾನಿ ಪ್ರೊ.ರಾಮಸ್ವಾಮಿ ಈ ಬಗ್ಗೆ ಅಧ್ಯಯನ ವರದಿ ಪ್ರಕಟಿಸಿದ್ದಾರೆ. ಹೀಗಾಗಿ, ಈ ಮಾರ್ಗದಲ್ಲಿ ಕಂಪನಗಳು ಘಟಿಸಬಾರದು ಎಂದು ವಿಜ್ಞಾನಿಗಳು ತಿಳಿಸುತ್ತಾರೆ.

‘ಇಸ್ರೋ ವಿಜ್ಞಾನಿಗಳ ಅಧ್ಯಯನದ ಪ್ರಕಾರ ರಾಜ್ಯದಲ್ಲಿ ಅತೀ ಪ್ರಮುಖವಾದ 3 ಶಿಲಾ ರೇಖೆಗಳಿವೆ. ಈ ಪೈಕಿ ಕೆಆರ್‌ಎಸ್ ಮಾರ್ಗದ ರೇಖೆ ದೊಡ್ಡದು. ಹೀಗಾಗಿ, ಇಲ್ಲಿ ಗಣಿಗಾರಿಕೆ ನಡೆಸಬಾರದು’ ಎಂದು ಮೈಸೂರು ವಿಶ್ವವಿದ್ಯಾಲಯದ ಭೂವಿಜ್ಞಾನ ವಿಭಾಗದ ಪ್ರಾಧ್ಯಾಪಕ ಪ್ರೊ.ಎಚ್.ಪಿ.ಬಸವರಾಜಪ್ಪ ತಿಳಿಸಿದರು.

ಪ್ರಮೋದಾದೇವಿ ಪತ್ರ ತಂದ ಬದಲಾವಣೆ

‘ಬೇಬಿಬೆಟ್ಟ ಅಮೃತ್ ಮಹಲ್ ಕಾವಲು ಪ್ರದೇಶವಾಗಿದ್ದು, ಮೈಸೂರು ರಾಜಮನೆತನದ ಖಾಸಗಿ ಆಸ್ತಿಯಾಗಿದೆ. ಸರ್ವೆ ನಂಬರ್ 1ರ 1,623 ಎಕರೆ ಪ್ರದೇಶವನ್ನು ಖಾತೆ ಮಾಡಿಕೊಡಬೇಕು’ ಎಂದು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್, ಪಾಂಡವಪುರ ತಹಶೀಲ್ದಾರ್‌ಗೆ 2017ರಲ್ಲಿ ಪತ್ರ ಬರೆದಿದ್ದರು.


ಇದನ್ನು ಗಂಭೀರವಾಗಿ ಪರಿಗಣಿಸಿದ್ದ ಕೇಂದ್ರ ಪರಿಸರ ಅನುಮೋದನಾ ಸಮಿತಿ ಬೇಬಿಬೆಟ್ಟದ 30 ಗಣಿ ಕಂಪನಿಗಳಿಗೆ ಪರಿಸರ ಅನುಮೋದನೆ ಮುಂದುವರಿಸಲು ನಿರಾಕರಿಸಿತ್ತು. ಹೀಗಾಗಿ, ಗಣಿ ಮಾಲೀಕರಿಗೆ ಈಗ ನೂರಾರು ಕೋಟಿ ದಂಡ ಕಟ್ಟುವ ಪರಿಸ್ಥಿತಿ ಬಂದೊದಗಿದೆ.

ಸುದ್ದಿ 2 ನಿಮಿಷ

ಜಾತಿ ಗಣತಿ: ಏನು ಅಡಗಿದೆಯೊ ಗೊತ್ತಿಲ್ಲ- ಡಿ.ಕೆ.ಶಿವಕುಮಾರ್

ಬೆಂಗಳೂರು: ‘ರಾಜ್ಯ ಹಿಂದುಳಿದ ವರ್ಗಗಳ ಆಯೋಗ ನಡೆಸಿದ್ದ ‘ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ’ (ಜಾತಿ ಗಣತಿ) ವರದಿಯಲ್ಲಿ ಏನು ಅಡಗಿದೆಯೊ ಎಂಬುದು ನನಗೆ ಗೊತ್ತಿಲ್ಲ. ಇಂಥ ವಿಚಾರಗಳನ್ನು ಬೇರೆಯವರು ಮಾತನಾಡಿದ ರೀತಿ ನಾನು ಮಾತನಾಡಲು ಆಗಲ್ಲ. ನಾನು ಪಕ್ಷವೊಂದರ ಅಧ್ಯಕ್ಷ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರತಿಕ್ರಿಯಿಸಿದರು.

ಜಾತಿ ಗಣತಿ ವಿಷಯವನ್ನು ಸಿದ್ದರಾಮಯ್ಯ ಮುನ್ನೆಲೆಗೆ ತಂದ ಬಗ್ಗೆ ಸುದ್ದಿಗಾರರು ಭಾನುವಾರ ಪ್ರಸ್ತಾಪಿಸಿದಾಗ, ‘ವರದಿಯ ಬಗ್ಗೆ ಹಿಂದುಳಿದ ವರ್ಗಗಳ ನಾಯಕರು ನನ್ನನ್ನೂ ಭೇಟಿ ಮಾಡಿದ್ದರು. ₹ 160 ಕೋಟಿ ವೆಚ್ಚ ಮಾಡಿದ ಹಣ ವ್ಯರ್ಥ ಆಗಬಾರದು ಎಂದು ಅವರು ಹೇಳುವುದರಲ್ಲಿ ತಪ್ಪಿಲ್ಲ’ ಎಂದರು.



‘ವರದಿ ಕುರಿತು ಪಕ್ಷದ ಅಧ್ಯಕ್ಷನಾಗಿ ಎಲ್ಲ ನಾಯಕರ ಜತೆ ಚರ್ಚೆ ಮಾಡಬೇಕಿದೆ. ವಿರೋಧ ಪಕ್ಷದ ನಾಯಕರ ಜೊತೆ ಮಾತನಾಡಿದ್ದೇನೆ. ಈ ಹಿಂದೆ ನಮ್ಮ ಸರ್ಕಾರ ಇದ್ದಾಗಲೇ ಸಮೀಕ್ಷೆ ನಡೆದಿತ್ತು. ಆಗ ಯಾಕೆ ಬಿಡುಗಡೆ ಮಾಡಿಲ್ಲ. ಬಳಿಕ ನಮ್ಮ ಪಕ್ಷದ ಬೆಂಬಲದಲ್ಲಿ ಮೈತ್ರಿ ಸರ್ಕಾರ ಅಧಿಕಾರದಲ್ಲಿತ್ತು. ಆಗ ಏನೆಲ್ಲಾ ಅಡಚಣೆಗಳಾಯಿತು ಎಂಬ ಬಗ್ಗೆ ಈಗ ಚರ್ಚೆ ಬೇಡ’ ಎಂದರು.

‘ವರದಿ ಸಿದ್ಧಪಡಿಸಿದ ಆಯೋಗದ ಅಧ್ಯಕ್ಷರಾಗಿದ್ದ ಕಾಂತರಾಜು ಬಳಿಯೇ ಒಮ್ಮೆ ನಾನು ಮಾತನಾಡಿದ್ದೆ. ವರದಿಯಲ್ಲಿ ಏನಿದೆ ಎಂದು ಕೇಳಿದಾಗ ನನ್ನ ಅಧಿಕಾರಾವಧಿ ಪೂರ್ಣಗೊಂಡಿತ್ತು. ಹೀಗಾಗಿ, ಎಲ್ಲ ಕಾಗದ ಪತ್ರಗಳನ್ನು ಆಯೋಗಕ್ಕೆ ಸಲ್ಲಿಸಿದ್ದೇನೆ. ನನ್ನ ಬಳಿಯೂ ಪೂರ್ಣ ಮಾಹಿತಿ ಇಲ್ಲ ಎಂದಿದ್ದರು. ಏನು ಕೊಟ್ಟಿದ್ದಾರೊ, ಬಿಟ್ಟಿದ್ದಾರೊ ಗೊತ್ತಿಲ್ಲ’ ಎಂದರು.

‘2023ಕ್ಕೆ ಅಯೋಧ್ಯೆಯಲ್ಲಿ ಪೂಜೆ’

ಶಿರಸಿ: '2023ರ ವರ್ಷಾಂತ್ಯಕ್ಕೆ ಅಯೋಧ್ಯೆಯ ರಾಮಮಂದಿರದಲ್ಲಿ ರಾಮನ ಮೂರ್ತಿ ಪ್ರತಿಷ್ಠಾಪಿಸಿ ಪೂಜೆ ಆರಂಭಿಸಲಾಗುವುದು' ಎಂದು ಅಯೋಧ್ಯಾ ರಾಮಮಂದಿರ ನಿರ್ಮಾಣ ಉಸ್ತುವಾರಿ ಗೋಪಾಲ ಜಿ. ಹೇಳಿದರು.

ನಗರದಲ್ಲಿ ಭಾನುವಾರ ಮಾಧ್ಯಮದವರ ಜತೆ ಮಾತನಾಡಿದ ಅವರು, ‘2023ಕ್ಕೆ ಮಂದಿರ ನಿರ್ಮಾಣ ಪೂರ್ಣಗೊಳ್ಳದು. ಆದರೆ, ಗರ್ಭಗುಡಿ ಹಾಗೂ ಒಳ ಆವರಣದ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುತ್ತದೆ’ ಎಂದರು.

‘ತಜ್ಞರ ಸಲಹೆ ಮೇರೆಗೆ, ಮಂದಿರ ನಿರ್ಮಾಣಕ್ಕೆ ಈಗಾಗಲೆ 40 ಅಡಿಯಷ್ಟು ಆಳ ಮತ್ತು 400 ಅಡಿ ಉದ್ದದ ತಳಪಾಯ ನಿರ್ಮಿಸಲಾಗಿದೆ. ಮುಂದಿನ ವರ್ಷ ದೇವಾಲಯಗಳ ನಿರ್ಮಾಣಕ್ಕೆಂದೇ ಬಳಸುವ ಬನ್ಸಿ ಪಹಾಡಪುರ ಕಲ್ಲುಗಳನ್ನು ಬಳಸಿ ಕಟ್ಟಡ ನಿರ್ಮಾಣ ಮಾಡಲಾಗುತ್ತದೆ’ ಎಂದು ತಿಳಿಸಿದರು.

‘ಮೀಸಲಾತಿ ಪ್ರಮಾಣ ಹೆಚ್ಚಳ ಅಗತ್ಯ’



ಬೆಂಗಳೂರು: ಎಲ್ಲ ಸಮುದಾಯಗಳಲ್ಲಿ ಇರುವ ಹಿಂದುಳಿದ ಮತ್ತು ಬಡ ಜನರಿಗೆ ಮೀಸಲಾತಿ ಸೌಲಭ್ಯ ದೊರೆಯಬೇಕಿದೆ. ಅದಕ್ಕೆ ಪೂರಕವಾಗಿ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಬೇಕಿದೆ ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ರಾಮದಾಸ್ ಅಠಾವಳೆ ಹೇಳಿದರು.

ಭಾನುವಾರ ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮೀಸಲಾತಿಯ ಪ್ರಮಾಣ ಶೇಕಡ 50 ರಷ್ಟನ್ನು ಮೀರಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಆದರೆ, ಶೋಷಿತ ಸಮುದಾಯಗಳಿಗೆ ನ್ಯಾಯ ಒದಗಿಸಲು ಮೀಸಲಾತಿ ಹೆಚ್ಚಿಸಲೇಬೇಕಿದೆ. ಈ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಚರ್ಚೆ ನಡೆಸಲಾಗಿದೆ' ಎಂದರು.

ಮೀಸಲಾತಿ ಪ್ರಮಾಣ ಹೆಚ್ಚಿಸಲು ಸಂವಿಧಾನದ ತಿದ್ದುಪಡಿ ಆಗಬೇಕಿದೆ. ಸಂವಿಧಾನದ 102ನೇ ವಿಧಿಯ ಪ್ರಕಾರ, ರಾಜ್ಯಗಳಿಗೂ ಮೀಸಲಾತಿ ನೀಡುವ ಅಧಿಕಾರವಿದೆ. ಈ ಎಲ್ಲವನ್ನೂ ಪರಿಶೀಲಿಸಲಾಗುತ್ತಿದೆ ಎಂದರು.

ಯಾವುದೇ ಸಮುದಾಯದ ಬಡವರು, ಹಿಂದುಳಿದವರು ಮಾತ್ರ ಮೀಸಲಾತಿ ಸೌಲಭ್ಯ ಪಡೆಯಬೇಕು. ಆದರೆ, ಅನರ್ಹರೇ ಮೀಸಲಾತಿ ಪಡೆಯುತ್ತಿರುವುದು ಹೆಚ್ಚುತ್ತಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿಯನ್ನು ಆ ವರ್ಗದಲ್ಲಿರುವ ಆರ್ಥಿಕವಾಗಿ ಬಲಾಢ್ಯರಾದವರೇ ಪಡೆಯುತ್ತಿದ್ದಾರೆ. ಅದನ್ನು ತಪ್ಪಿಸಲು ಕ್ರಮದ ಅಗತ್ಯವಿದೆ ಎಂದರು.

‘ದೇಶದಾದ್ಯಂತ ಜಾತಿವಾರು ಜನಗಣತಿ ನಡೆಸಬೇಕಿದೆ. ಅದರಿಂದ ಆಯಾ ಸಮುದಾಯಗಳ ಜನರಿಗೆ ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ನ್ಯಾಯ ದೊರಕಿಸಲು ಸಾಧ್ಯವಾಗುತ್ತದೆ. ದೇಶದಾದ್ಯಂತ ಜಾತಿವಾರು ಜನಗಣತಿ ನಡೆಸುವಂತೆ ಪ್ರಧಾನಿಯವರನ್ನು ಒತ್ತಾಯಿಸುತ್ತೇನೆ’ ಎಂದು ಹೇಳಿದರು.

ಕರ್ನಾಟಕಕ್ಕೆ ಹೆಚ್ಚಿನ ಅನುಕೂಲ: ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಏಳು ವರ್ಷಗಳನ್ನು ಪೂರೈಸಿದೆ. ಈ ಅವಧಿಯಲ್ಲಿ ಕರ್ನಾಟಕ ರಾಜ್ಯಕ್ಕೆ ಹೆಚ್ಚಿನ ಅನುಕೂಲಗಳು ಆಗಿವೆ ಎಂದು ಸಚಿವರು ತಿಳಿಸಿದರು.

‘ಅಕ್ರಮ ಗಣಿಗಾರಿಕೆ: ಸಂಸತ್ತಿನಲ್ಲಿ ಪ್ರಸ್ತಾಪ’

ಪ್ರಜಾವಾಣಿ ವಾರ್ತೆ



ಸುಮಲತಾ

ಬೆಂಗಳೂರು: ಮಂಡ್ಯ ಜಿಲ್ಲೆಯಲ್ಲಿ ನಡೆದಿರುವ ಅಕ್ರಮ ಗಣಿಗಾರಿಕೆ ಕುರಿತು ಲೋಕಸಭಾ ಅಧಿವೇಶನದಲ್ಲಿ ಪ್ರಸ್ತಾಪಿಸಿ, ಕಠಿಣ ಕ್ರಮಕ್ಕೆ ಒತ್ತಾಯಿಸಲಾಗುವುದು ಎಂದು ಸಂಸದೆ ಸುಮಲತಾ ಅಂಬರೀಷ್ ಹೇಳಿದರು.

ಭಾನುವಾರ ರಾಜಭವನದಲ್ಲಿ ನೂತನ ರಾಜ್ಯಪಾಲರ ಪ್ರಮಾಣವಚನ ಸಮಾರಂಭದಲ್ಲಿ ಪಾಲ್ಗೊಂಡ ಬಳಿಕ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, ‘ಅಕ್ರಮ ಗಣಿಗಾರಿಕೆ ಕುರಿತು ಈಗಾಗಲೇ ಎರಡು ಬಾರಿ ಸಂಸತ್ತಿನಲ್ಲಿ ಪ್ರಸ್ತಾಪಿಸಿದ್ದೇನೆ. ಮುಂದಿನ ಅಧಿವೇಶನದಲ್ಲೂ ಪ್ರಸ್ತಾಪಿಸುವೆ’ ಎಂದರು.

‘ನನ್ನದು ವೈಯಕ್ತಿಕವಾಗಿ ಎಚ್.ಡಿ.ಕುಮಾರಸ್ವಾಮಿ ಸೇರಿದಂತೆ ಯಾರದ್ದೇ ವಿರುದ್ಧದ ಹೋರಾಟ ಅಲ್ಲ. ದ್ವೇಷದ ರಾಜಕಾರಣ ಮಾಡುವುದಿಲ್ಲ. ಅಕ್ರಮ ಗಣಿಗಾರಿಕೆಯಿಂದ ಜಿಲ್ಲೆಯಲ್ಲಿ ಆಗುತ್ತಿರುವ ತೊಂದರೆ ವಿರುದ್ಧದ ಹೋರಾಟ’ ಎಂದು ಹೇಳಿದರು.

‘ಕುಮಾರಸ್ವಾಮಿ ಅಥವಾ ಅವರ ಬೆಂಬಲಿಗರ ದಾರಿಯಲ್ಲಿ ನಾವು ಸಾಗುವುದು ಬೇಡ ಎಂದು ಅಂಬರೀಷ್ ಅಭಿಮಾನಿಗಳಲ್ಲಿ ಮನವಿ ಮಾಡುವೆ. ಶಾಂತಿಯುತ ಹೋರಾಟದ ಹಾದಿಯಲ್ಲಿ ಸಾಗೋಣ ಎಂಬುದು ನನ್ನ ಮನವಿ’ ಎಂದು ಹೇಳಿದರು.

ಅಕ್ರಮ ಗಣಿಗಾರಿಕೆ ವಿರುದ್ಧ ಕ್ರಮ ಜರುಗಿಸುವ ಸಂಬಂಧ ಮುರುಗೇಶ ನಿರಾಣಿ ಅವರೊಂದಿಗೂ ಚರ್ಚಿಸಲಾಗಿದೆ. ಅಗತ್ಯ ಕಂಡುಬಂದರೆ ಮತ್ತೊಮ್ಮೆ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಲಾಗುವುದು ಎಂದು ಸುಮಲತಾ ಪ್ರತಿಕ್ರಿಯಿಸಿದರು.

ಹಲವರ ಜತೆ ಚರ್ಚೆ

ರಾಜ್ಯಪಾಲರ ಪ್ರಮಾಣವಚನ ಸಮಾರಂಭದಲ್ಲಿ ಪಾಲ್ಗೊಂಡ ಸುಮಲತಾ, ಅಲ್ಲಿಯೇ ಹಲವು ರಾಜಕೀಯ ನಾಯಕರನ್ನು ಭೇಟಿಯಾಗಿ ಚರ್ಚಿಸಿದರು. ಮಂಡ್ಯದಲ್ಲಿನ ಕಲ್ಲು ಗಣಿಗಾರಿಕೆಗೆ ಸಂಬಂಧಿಸಿದ ವಿಚಾರವೂ ಮಾತುಕತೆ ವೇಳೆ ಪ್ರಸ್ತಾಪವಾಗಿದೆ ಎಂಬ ಮಾಹಿತಿ ಲಭಿಸಿದೆ.

ಗಣಿ ಸಚಿವ ಮುರುಗೇಶ ನಿರಾಣಿ, ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಸೇರಿದಂತೆ ಹಲವು ಸಚಿವರನ್ನು ಸುಮಲತಾ ಭೇಟಿಮಾಡಿದ್ದಾರೆ. ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನೂ ಭೇಟಿಮಾಡಿದ್ದು, ಮಂಡ್ಯ ಜಿಲ್ಲಾ ಪ್ರವಾಸ ಕೈಗೊಳ್ಳುವಂತೆ ಆಹ್ವಾನ ನೀಡಿದ್ದಾರೆ ಎಂದು ಮೂಲಗಳು ಹೇಳಿವೆ.

ರಾಜಭವನದಿಂದ ಹೊರಬಂದ ಸುಮಲತಾ, ಕಂಠೀರವ ಸ್ಟುಡಿಯೊ ಆವರಣದಲ್ಲಿರುವ ಅಂಬರೀಷ್ ಅವರ ಸಮಾಧಿ ಸ್ಥಳಕ್ಕೆ ಭೇಟಿನೀಡಿದರು. ಚಿತ್ರ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಸೇರಿದಂತೆ ಹಲವರು ಅವರ ಜತೆಗಿದ್ದರು. ಕಂಠೀರವ ಸ್ಟುಡಿಯೋ ಬಳಿ ಅಂಬರೀಷ್ ಅವರ ಅಭಿಮಾನಿಗಳು ಭಾರಿ ಸಂಖ್ಯೆಯಲ್ಲಿ ಸೇರಿದ್ದರು. ಅವರೊಂದಿಗೂ ಸುಮಲತಾ ಕೆಲಕಾಲ ಸಮಾಲೋಚನೆ ನಡೆಸಿದರು.

ಸುಮಲತಾಗೆ ರೈತ ಸಂಘ ಬೆಂಬಲ

ಮೈಸೂರು: ‘ಕೆಆರ್‌ಎಸ್ ಉಳಿಸಿ ಹೋರಾಟದಲ್ಲಿ ರಾಜ್ಯ ರೈತ ಸಂಘವು ಸಂಸದೆ ಸುಮಲತಾ ಅವರಿಗೆ ಪೂರ್ಣ ಬೆಂಬಲ, ಸಹಕಾರ ಕೊಡುತ್ತದೆ’ ಎಂದು ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಭಾನುವಾರ ತಿಳಿಸಿದರು.

‘ಕೆಆರ್‌ಎಸ್‌ನ ಸುತ್ತ 20 ಕಿ.ಮೀ ವ್ಯಾಪ್ತಿಯಲ್ಲಿ ಗಣಿಗಾರಿಕೆ ಸಂಪೂರ್ಣ ನಿಷೇಧ ಆಗಬೇಕು. ಕೆಆರ್‌ಎಸ್ ಉಳಿಸಲು ಗಣಿಗಾರಿಕೆ ನಿಷೇಧಕ್ಕೆ ನಡೆಯುವ ಯಾವುದೇ ಹೋರಾಟಕ್ಕೂ ಬೆಂಬಲ ಇದೆ’ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಅಕ್ರಮ ಗಣಿಗಾರಿಕೆ ನಿಲ್ಲಿಸಿ: ಸುರೇಶ್ ಗೌಡ ಮನವಿ

ನಾಗಮಂಗಲ (ಮಂಡ್ಯ): ‘ಸುಮಲತಾ ಅಕ್ಕ ಅವರು ನನ್ನ ಕ್ಷೇತ್ರದಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಯನ್ನು ನಿಲ್ಲಿಸಿಕೊಡಲಿ’ ಎಂದು ನಾಗಮಂಗಲ ಕ್ಷೇತ್ರದ ಜೆಡಿಎಸ್ ಶಾಸಕ ಸುರೇಶ್ ಗೌಡ ಭಾನುವಾರ ಮನವಿ ಮಾಡಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಅಕ್ರಮ ಗಣಿಗಾರಿಕೆ ವಿರುದ್ಧ ಹೋರಾಟದಲ್ಲಿ ಅವರ ಜೊತೆ ನಾನೂ ಇರುತ್ತೇನೆ. ನಮ್ಮಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆ ಸ್ಥಗಿತಗೊಳಿಸಿ, ಕಾನೂನಿನ ಪ್ರಕಾರವೇ ಇರುವಂತೆ ಸಕ್ರಮ ಮಾಡಿಸಿಕೊಡಲಿ’ ಎಂದರು.

ಟ್ವಿಟರ್‌ನಲ್ಲೂ ಸಂದೇಶ: ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಜೆಡಿಎಸ್ ನಾಯಕರ ಜತೆಗಿನ ಸಂಘರ್ಷದ ಕುರಿತು ಟ್ವಿಟರ್‌ನಲ್ಲಿ ಪರೋಕ್ಷವಾಗಿ ಸಂದೇಶ ನೀಡಿರುವ ಅವರು, ‘ಬೇರೆಯವರಿಗೆ ಗಂಧ ಹಚ್ಚಲು ಪ್ರಯತ್ನಿಸಿದರೆ ಮೊದಲು ನಮ್ಮ ಕೈ ಗಂಧವಾಗುತ್ತದೆ. ಬೇರೆಯವರಿಗೆ ಕೆಸರನ್ನು ಹಚ್ಚಲು ಪ್ರಯತ್ನಿಸಿದರೆ ಮೊದಲು ನಮ್ಮ ಕೈ ಕೆಸರಾಗುತ್ತದೆ’ ಎಂದಿದ್ದಾರೆ.

ಕೃಷ್ಣಾಪುರ ಮಠದ ಕಟ್ಟಿಗೆ ಮುಹೂರ್ತ

ಪ್ರಜಾವಾಣಿ ವಾರ್ತೆ

ಉಡುಪಿ: ಮುಂದಿನ ವರ್ಷ (2022) ಜ. 18ರಂದು ಆರಂಭವಾಗಲಿರುವ ಕೃಷ್ಣಾಪುರ ಮಠದ ಪರ್ಯಾಯಕ್ಕೆ ಪೂರ್ವಭಾವಿಯಾಗಿ ಭಾನುವಾರ ಕೃಷ್ಣಮಠದಲ್ಲಿ ಕಟ್ಟಿಗೆ ಮುಹೂರ್ತ ನೆರವೇರಿತು.

ಮುಂದಿನ ಪರ್ಯಾಯ ಪೀಠಾಧಿಪತಿ ಕೃಷ್ಣಾಪುರ ಮಠದ ವಿದ್ಯಾಸಾಗರ ತೀರ್ಥ ಶ್ರೀಗಳ ಸಮ್ಮುಖದಲ್ಲಿ ಮಧ್ವಸರೋವರದ ಈಶಾನ್ಯ ಭಾಗದಲ್ಲಿ ಧಾರ್ಮಿಕ ವಿಧಾನಗಳೊಂದಿಗೆ ಕಟ್ಟಿಗೆ ಮುಹೂರ್ತ ನಡೆಯಿತು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	88.36	1,370	4,331
ಹಾರಂಗಿ	2,859	2,844.02	1,027	80
ಕಬಿನಿ	2,284.00	2,275.67	2,178	700
ಹೇಮಾವತಿ	2,922	2,896.57	2,200	200
ಲಿಂಗನಮಕ್ಕಿ	1,819	1,784.05	9,150	-
ಸೂಪಾ (ಮೀ)	564	537.65	2,700	2,700
ಮಾಣಿ	594.36	573.70	1,354	-
ತುಂಗಭದ್ರಾ	1,633	1,610.36	2,302	292
ಮಲಪ್ರಭಾ	2,079.5	2,063.30	703	194
ಘಟಪ್ರಭಾ	2,175	2,136.90	1,048	134
ಭದ್ರಾ	186	156	2,251	781
ಆಲಮಟ್ಟಿ (ಮೀ)	519.6	517.51	5,873	10,491
ನಾರಾಯಣಪುರ (ಮೀ)	492.25	491.11	15,000	-

* ನೆಲಮಟ್ಟದಿಂದ

ಸಿಡಿಲು ಬಡಿದು ತಾಯಿ, ಮಗಳು ಸಾವು

ಪ್ರಜಾವಾಣಿ ವಾರ್ತೆ

ಕಲಬುರ್ಗಿ/ಹುಬ್ಬಳ್ಳಿ: ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಖುದಾವಂದಪುರ ಗ್ರಾಮದಲ್ಲಿ ಭಾನುವಾರ ಸಿಡಿಲು ಬಡಿದು ತಾಯಿ ಭಾಗ್ಯಶ್ರೀ ಭೀಮರಾವ್ ಮೇತ್ರೆ (32) ಮತ್ತು ಅವರ ಮಗಳು ವೈಶಾಲಿ ಮೇತ್ರೆ (9) ಮೃತಪಟ್ಟಿದ್ದಾರೆ.

ಹೊಲದಲ್ಲಿ ಕೆಲಸ ಮುಗಿಸಿಕೊಂಡು ಅವರು ಮನೆಗೆ ಮರಳುತ್ತಿದ್ದ ವೇಳೆ ಘಟನೆ ನಡೆದಿದೆ ಎಂದು ಮೇಹಕರ ಠಾಣೆ ಪೊಲೀಸರು ತಿಳಿಸಿದ್ದಾರೆ. ಉಳಿದಂತೆ ರಾಜ್ಯದ ವಿವಿಧೆಡೆ ಭಾನುವಾರ ಉತ್ತಮ ಮಳೆಯಾಗಿದೆ.

ವಾರಾಂತ್ಯದ ನಿಮಿತ್ತ ಹೊಸಪೇಟೆಯ ವಿಶ್ವಪ್ರಸಿದ್ಧ ಹಂಪಿಗೆ ಅಸಂಖ್ಯ ಪ್ರವಾಸಿಗರು ಬಂದಿದ್ದರು. ಮಳೆಯಲ್ಲೇ ನೆನೆದುಕೊಂಡೇ ಸ್ಮಾರಕಗಳನ್ನು ಕಣ್ತುಂಬಿಕೊಂಡರು. ಭಾನುವಾರ ಕಲಬುರ್ಗಿ ಮತ್ತು ಬೀದರ್ ಜಿಲ್ಲೆಯ ಕೆಲ ಕಡೆ ಮಳೆಯಾಯಿತು.

ಬೆಳಗಾವಿ, ಉತ್ತರ ಕನ್ನಡ, ಹೊಸಪೇಟೆ ನಗರ, ವಿಜಯನಗರ ಜಿಲ್ಲೆಯಾದ್ಯಂತ ಭಾನುವಾರ ದಿನವಿಡೀ ಉತ್ತಮ ಮಳೆಯಾಗಿದೆ. ಬಳ್ಳಾರಿ ಜಿಲ್ಲೆಯ ಮರಿಯಮ್ಮನಹಳ್ಳಿ, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಹೂವಿನಹಡಗಲಿ, ಕೊಟ್ಟೂರು, ಹರಪನಹಳ್ಳಿಯ ಕೆಲವೆಡೆ ಮಳೆಯಾಗಿದೆ. ಬೆಳಗಾವಿ ನಗರ ಸೇರಿ ಜಿಲ್ಲೆಯ ವಿವಿಧೆಡೆ ಸಾಧಾರಣ ಮಳೆ ಬಿದ್ದಿತು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆಲವು ದಿನಗಳ ಬಳಿಕ ಮಳೆ ಮತ್ತೆ ಚುರುಕಾಗಿದ್ದು, ಕರಾವಳಿಯಾದ್ಯಂತ ದಿನವಿಡೀ ಆಗಾಗ ಜೋರಾಗಿ ಮಳೆಯಾಯಿತು. ಭಟ್ಕಳ, ಕುಮಟಾ, ಗೋಕರ್ಣ ಭಾಗದಲ್ಲಿ ರಾತ್ರಿಯಿಂದಲೇ ಮಳೆಯಾಗುತ್ತಿದೆ. ಶಿರಸಿ, ಸಿದ್ದಾಪುರ, ಜೊಯಿಡಾ ಭಾಗದಲ್ಲಿ ಸಾಧಾರಣ ಮಳೆಯಾಗಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ವಿವಿಧೆಡೆ ಸಾಧಾರಣ ಮಳೆಯಾಗಿದ್ದರೆ, ಉಡುಪಿ ಜಿಲ್ಲೆಯಾದ್ಯಂತ ಕಳೆದ ಮೂರು ದಿನಗಳಿಂದ ಮಳೆ ಬಿರುಸುಗೊಂಡಿದೆ. ಕುಂದಾಪುರ ತಾಲ್ಲೂಕಿನ ಕೋಣಿಯಲ್ಲಿ ಅತಿ ಹೆಚ್ಚು 12.6 ಸೆಂ.ಮೀ ಮಳೆಯಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭಾನುವಾರ ಆಗಾಗ ಬಿಡುವುಕೊಟ್ಟು ಬಿರುಸಿನ ಮಳೆಯಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಕೆಲವೆಡೆ ಸಾಧಾರಣ ಮಳೆಯಾಗಿದೆ. ಕೊಡಗು ಜಿಲ್ಲೆಯಲ್ಲಿ ಮಡಿಕೇರಿ, ಭಾಗಮಂಡಲ, ತಲಕಾವೇರಿ ಭಾಗದಲ್ಲಿ ಉತ್ತಮ ಮಳೆಯಾಗಿದೆ.

ಲಿಂಗನಮಕ್ಕಿಗೆ 20 ಅಡಿ ಹೆಚ್ಚು ನೀರು

ಕಾರ್ಗಲ್: ‘ಇಲ್ಲಿನ ಲಿಂಗನಮಕ್ಕಿ ಜಲಾಶಯದಲ್ಲಿ, ಕಳೆದ ಸಾಲಿಗಿಂತ ಈ ಬಾರಿ 20 ಅಡಿ ಹೆಚ್ಚು ನೀರು ಸಂಗ್ರಹವಾಗಿದೆ’ ಎಂದು ಕೆಪಿಸಿ ಅಧೀಕ್ಷಕ ಎಂಜಿನಿಯರ್ ಆರ್.ಶಿವಕುಮಾರ್ ತಿಳಿಸಿದರು.

‘ಜಲಾಶಯದ ಒಟ್ಟು ಸಾಮರ್ಥ್ಯ 1,819 ಅಡಿ ಆಗಿದ್ದು, ಭಾನುವಾರ 1,784.05 ಅಡಿ ನೀರಿತ್ತು. ಕಳೆದ ಸಾಲಿನಲ್ಲಿ ಇದೇ ದಿನ 1,765 ಅಡಿ ನೀರು ಸಂಗ್ರಹವಾಗಿತ್ತು.

ಪ್ರಸಕ್ತ ಸಾಲಿನಲ್ಲಿ ಈಗಾಗಲೇ ಜಲಾನಯನ ಪ್ರದೇಶದಲ್ಲಿ 107.1 ಸೆಂ.ಮೀ. ಮಳೆ ಸುರಿದಿದೆ. ಪುನರ್ವಸು ಮಳೆ ಮತ್ತೆ ಉತ್ತಮ ಆರಂಭ ಹೊಂದಿದ್ದು, ಆಶಾದಾಯಕ ಬೆಳವಣಿಗೆ’ ಎಂದು ತಿಳಿಸಿದರು.

ಇದೇ 16ರವರೆಗೆ ಭಾರಿ ಮಳೆಯ ಮುನ್ಸೂಚನೆ

ಬೆಂಗಳೂರು: ರಾಜ್ಯದ ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಹಲವು ಜಿಲ್ಲೆಗಳಲ್ಲಿ ಜುಲೈ 12ರಿಂದ 16ರವರೆಗೆ ಧಾರಾಕಾರ ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

‘ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಹಾಗೂ ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಹಾಸನ, ಕೊಡಗು, ಶಿವಮೊಗ್ಗ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇದ್ದು, ಈ ಜಿಲ್ಲೆಗಳಲ್ಲಿ 16ರವರೆಗೆ ‘ಆರೆಂಜ್ ಅಲರ್ಟ್’ ಘೋಷಿಸಲಾಗಿದೆ’.

‘ಕರಾವಳಿಯಲ್ಲಿ ಗಂಟೆಗೆ ಗರಿಷ್ಠ 60 ಕಿ.ಮೀ ವೇಗದಲ್ಲಿ ಗಾಳಿ ಬೀಸುತ್ತಿದ್ದು, 3.7 ಮೀಟರ್‌ಗಳಷ್ಟು ಎತ್ತರದ ಅಲೆಗಳು ಏಳುತ್ತಿರುವುದರಿಂದ ಈ ಸಮಯದಲ್ಲಿ ಮೀನುಗಾರರು ಸಮುದ್ರಕ್ಕೆ ಇಳಿಯಬಾರದು’ ಎಂದೂ ಇಲಾಖೆ ಎಚ್ಚರಿಸಿದೆ.

‘ಉತ್ತರ ಒಳನಾಡಿನ ಯಾದಗಿರಿ, ವಿಜಯಪುರ, ಕಲಬುರ್ಗಿ, ಹಾವೇರಿ, ಧಾರವಾಡ, ಬೀದರ್, ಬೆಳಗಾವಿ ಜಿಲ್ಲೆಗಳಲ್ಲೂ ಗುಡುಗು, ಸಿಡಿಲು ಸಹಿತ ವ್ಯಾಪಕ ಮಳೆ ಮುನ್ಸೂಚನೆ ಇರುವುದರಿಂದ ‘ಯೆಲ್ಲೊ ಅಲರ್ಟ್’ ನೀಡಿರುವುದಾಗಿ ತಿಳಿಸಿದೆ.

ಮಳೆ–ಎಲ್ಲಿ, ಎಷ್ಟು?: ಶಿವಮೊಗ್ಗ ಜಿಲ್ಲೆಯ ಆಗುಂಬೆ ಭಾಗದಲ್ಲಿ ಭಾನುವಾರ 13 ಸೆಂ.ಮೀ ಗರಿಷ್ಠ ಮಳೆಯಾಗಿದೆ. ಕುಂದಾಪುರ, ಭಟ್ಕಳ 10, ಮಂಗಳೂರು 9, ಪುತ್ತೂರು 6, ಸುಳ್ಯ , ಮೂಡುಬಿದರೆ, ಕಾರವಾರ, ಮಡಿಕೇರಿ 5, ಬೆಳ್ತಂಗಡಿ 4, ಕಾರ್ಕಳ, ಕಮಲಾಪುರ 3, ಚಿಂಚೋಳಿ 2, ಕೊಪ್ಪ, ಸಾಗರ ಹಾಗೂ ತುಮಕೂರಿನಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ.

ಒಳನೋಟ

ಬಾಲ್ಯ ಕಸಿದ ಬದುಕು

ಬೆಂಗಳೂರು:‘ಆಡುವ ಮಕ್ಕಳು ದುಡಿಮೆಗೆ’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯ ಭಾನುವಾರದ (ಜು.11) ಸಂಚಿಕೆಯಲ್ಲಿ ಪ್ರಕಟವಾದ ‘ಒಳನೋಟ’ ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಬಾಲ್ಯ ಕಸಿಯದಿರಲಿ



ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ಸರ್ಕಾರ ಹಲವು ಯೋಜನೆಗಳನ್ನು ರೂಪಿಸಿದೆ. ಅದನ್ನು ಮಕ್ಕಳು ಸಮರ್ಪಕವಾಗಿ ಬಳಸಿಕೊಂಡು ದುಡಿಮೆಯಿಂದ ದೂರವಾಗಬಹುದು. ಪೋಷಕರೂ ಜಾಗೃತರಾಗಿ ಮಕ್ಕಳನ್ನು ದುಡಿಮೆಯಿಂದ ಬಿಡಿಸಬೇಕು. ಆಡುವ ವಯಸ್ಸಿನಲ್ಲಿ ಮಕ್ಕಳು ಆಟವನ್ನೇ ಕಾಣಲಿ.

ಅನಿತಾ, ಗೋಕಾಕ್

ಆರ್ಥಿಕ–ಶೈಕ್ಷಣಿಕ ಬಲ ನೀಡಿ



ಕೋವಿಡ್‌ನಿಂದಾಗಿ ಬಾಲಕಾರ್ಮಿಕರ ಸಂಖ್ಯೆ ಏರುಗತಿಯಲ್ಲಿದೆ. ಶಾಲೆ ಮುಚ್ಚಿದ್ದರಿಂದ ಪೋಷಕರೂ ಮಕ್ಕಳನ್ನು ದುಡಿಮೆಗೆ ದೂಡಿರಬಹುದು. ಸರ್ಕಾರ ಇಂತಹ ಮಕ್ಕಳನ್ನು ಪತ್ತೆ ಹಚ್ಚಿ, ದುಡಿಮೆಯಿಂದ ದೂರ ಮಾಡಬೇಕು. ಆರ್ಥಿಕ ಹಾಗೂ ಶೈಕ್ಷಣಿಕವಾಗಿ ಅವರ ಬೆಂಬಲಕ್ಕೆ ನಿಲ್ಲಬೇಕು.

ಅನುಷಾ, ಕೊಪ್ಪಳ

ವಿದ್ಯಾವಂತರಿಂದ ಪೋಷಣೆ



ಸುಶಿಕ್ಷಿತ ಸಮುದಾಯದ ಜನರೇ ತಮ್ಮ ಮನೆಯ ಕೆಲಸಗಳಿಗೆ ಮಕ್ಕಳನ್ನು ಬಳಸಿಕೊಳ್ಳುತ್ತಿರುವುದು ಹೆಚ್ಚಾಗುತ್ತಿದೆ. ವಿದ್ಯಾವಂತರೇ ಬಾಲಕಾರ್ಮಿಕ ಪದ್ಧತಿಯನ್ನು ಪೋಷಿಸುತ್ತಿರುವಾಗ ಅದರ ನಿರ್ಮೂಲನೆ ಹೇಗೆ ಸಾಧ್ಯ? ಇದಕ್ಕಾಗಿ ಪ್ರಬಲ ಕಾನೂನು ಹಾಗೂ ಜನರಲ್ಲಿ ಜಾಗೃತಿ ಮೂಡುವುದು ಅಗತ್ಯ.

ಸಿ.ಆರ್.ದಿನೇಶ್, ಮೈಸೂರು

ನಮ್ಮ ಜವಾಬ್ದಾರಿಯೂ ಇರಲಿ



ಸರ್ಕಾರ ಎಷ್ಟೇ ಕಾರ್ಯಕ್ರಮಗಳನ್ನು ರೂಪಿಸಿದರೂ ಬಾಲಕಾರ್ಮಿಕ ಪದ್ಧತಿಯಿಂದ ಮಕ್ಕಳನ್ನು ರಕ್ಷಿಸಲು ಸಾಧ್ಯವಾಗುತ್ತಿಲ್ಲ. ‘ಸರ್ಕಾರ ಕಾನೂನು ಮಾಡಿದೆ’ ಎಂದು ಜನರು ಮೌನ ವಹಿಸುವುದು ಸರಿಯಲ್ಲ. ಶಾಲೆ ಬಿಟ್ಟಿರುವ ಮಕ್ಕಳನ್ನು ಗುರುತಿಸಿ ಶಾಲೆಗಳತ್ತ ಕರೆದೊಯ್ಯುವ ಜವಾಬ್ದಾರಿ ಹೊರಬೇಕು. ಶಿಕ್ಷಣಕ್ಕೆ ಒಲವು ತೋರುವ ಮಕ್ಕಳನ್ನು ಪ್ರೋತ್ಸಾಹಿಸುವ ಕೆಲಸ ನಡೆಯಲಿ.

ಚಿದಾನಂದ, ದಾವಣಗೆರೆ

ಭವಿಷ್ಯಕ್ಕೆ ಕುತ್ತು ತರಬೇಡಿ



ಪೋಷಕರಲ್ಲಿ ಅರಿವಿನ ಕೊರತೆ ಹಾಗೂ ಜೀವನೋಪಾಯಕ್ಕಾಗಿ ಮಕ್ಕಳು ದುಡಿಮೆಯತ್ತ ಮುಖ ಮಾಡುತ್ತಾರೆ. ತಾತ್ಕಾಲಿಕ ಸಮಸ್ಯೆಯ ನಿವಾರಣೆಗಾಗಿ ಮಕ್ಕಳ ಭವಿಷ್ಯ ಕತ್ತಲಿನ ಕಡೆಗೆ ಸಾಗುತ್ತಿದೆ. ಮಕ್ಕಳನ್ನು ಪೋಷಕರು ಕೆಲಸಕ್ಕೆ ಕಳುಹಿಸದಂತೆ ಬಲವಾದ ಕಾನೂನು ಜಾರಿ ಮಾಡಿ, ಅವರಲ್ಲಿ ಜಾಗೃತಿ ಮೂಡಿಸಬೇಕು.

ರಿಯಾಜ್ ಪಾಷ, ಬೀದರ್

ಜನಸಂಖ್ಯಾ ನಿಯಂತ್ರಣ ನೀತಿಗೆ ಬೆಂಬಲ

ಬೆಂಗಳೂರು: ಅಸ್ಸಾಂ ಮತ್ತು ಉತ್ತರ ಪ್ರದೇಶ ರಾಜ್ಯಗಳಲ್ಲಿ ಜನಸಂಖ್ಯಾ ನಿಯಂತ್ರಣ ನೀತಿ ಜಾರಿಗೆ ಸಿದ್ಧತೆ ನಡೆದಿರುವಾಗಲೇ ರಾಜ್ಯದ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರೂ ಜನಸಂಖ್ಯಾ ನಿಯಂತ್ರಣ ನೀತಿಯನ್ನು ಬೆಂಬಲಿಸಿ ಟ್ವೀಟ್ ಮಾಡಿದ್ದಾರೆ.

‘ಮೊದಲ ನೂರು ಕೋಟಿ ತಲುಪಲು ಸಾವಿರಾರು ವರ್ಷ ಬೇಕಾಯಿತು! 100 ರಿಂದ 700 ಕೋಟಿ ತಲುಪಲು ಕೇವಲ 200 ವರ್ಷಗಳು ಬೇಕಾಯಿತು! ನಮಗೆ ಇರುವುದೊಂದೇ ಭೂಮಿ, ನಿಯಂತ್ರಣವಿಲ್ಲದ ಜನಸಂಖ್ಯಾ ಸ್ಫೋಟ ನಿಲ್ಲಿಸೋಣ’ ಎಂದು ಸಚಿವರು ಭಾನುವಾರ ಟ್ವೀಟ್‌ನಲ್ಲಿ ಮನವಿ ಮಾಡಿದ್ದಾರೆ.

ಸಚಿವರ ಟ್ವೀಟ್‌ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ

ಓದುವ ಸರಳ ವಿಧಾನಗಳು

ಎಸ್ಸೆಸ್ಸೆಲ್ಸಿ ಪರೀಕ್ಷೆ ಮುಂದಿನ ವಾರ ನಡೆಯಲಿದ್ದು, ಈ ಬಾರಿಯ ಬದಲಾದ ಪರೀಕ್ಷಾ ವಿಧಾನಕ್ಕೆ ಹೇಗೆ ಓದಬೇಕು ಎನ್ನುವ ಬಗ್ಗೆ ಕೆಲವು ಸಲಹೆಗಳು ಇಲ್ಲಿವೆ.



ವೆಂಕಟ ಸುಬ್ಬರಾವ್. ವಿ

ಈ ವರ್ಷ ಏನು ಓದಬೇಕು? ಹೇಗೆ ಓದಬೇಕು? ಪರೀಕ್ಷೆ ಇರುತ್ತದೋ ಇಲ್ಲವೋ? ಪರೀಕ್ಷೆಗೆ ತಯಾರಿ ಹೇಗೆ? ಹೀಗೆ ಹಲವಾರು ಗೊಂದಲಗಳ ನಡುವೆಯೇ ಒಂದು ವರ್ಷ ಮುಗಿದೇ ಹೋಯಿತು ಹಾಗೂ ಪರೀಕ್ಷೆಯೂ ಬಂತು! ಯಾರೂ ಕಂಡು ಕೇಳರಿಯದ ರೀತಿಯ ಈ ಸನ್ನಿವೇಶಕ್ಕೆ ಹೊಂದಿಕೊಳ್ಳುವ ಆತಂಕದ ಮಧ್ಯದಲ್ಲಿಯೇ ಪರೀಕ್ಷೆಗೆ ತಯಾರಿ ಮಾಡಿಕೊಳ್ಳುವ ಸಂದರ್ಭ ಬಂದಿದೆ.

ಆದರೆ, ಇಂತಹ ಸನ್ನಿವೇಶದ ಮಧ್ಯೆಯೂ ಓದಿನ ಕಡೆ ಗಮನಕೊಟ್ಟು ನೀವೆಲ್ಲಾ ಚೆನ್ನಾಗಿಯೇ ಓದಿದ್ದೀರಿ. ನಿಮಗೆಲ್ಲಾ ಅಭಿನಂದನೆಗಳು.

ಈ ಬಾರಿಯ ಪರೀಕ್ಷೆಯ ರೀತಿಯೂ ಬದಲಾಗಿದೆ. ಬದಲಾದ ಪರೀಕ್ಷೆಯ ರೀತಿ, ಮಾದರಿ ಪ್ರಶ್ನೆಗಳು, ಹೀಗೆ ಹಲವಾರು ಅತಿಮುಖ್ಯವಾದ ವಿಷಯಗಳ ಬಗ್ಗೆ ಶಿಕ್ಷಕರು, ತಜ್ಞರು ಈಗಾಗಲೇ ತಿಳಿಸಿದ್ದಾರೆ ಹಾಗೂ ಎಲ್ಲರಲ್ಲೂ ಆತ್ಮವಿಶ್ವಾಸ ತುಂಬಿದ್ದಾರೆ.

ಈ ಲೇಖನದಲ್ಲಿ, ಈ ಬಾರಿಯ ಬದಲಾದ ಪರೀಕ್ಷಾ ವಿಧಾನಕ್ಕೆ ಹೇಗೆ ಓದಬೇಕು ಎನ್ನುವ ಬಗ್ಗೆ ಕೆಲವು ವಿಷಯಗಳನ್ನು ತಿಳಿಸುವ ಪ್ರಯತ್ನ ಮಾಡಲಾಗಿದೆ.


1. ಈ ವರ್ಷದ ಪರೀಕ್ಷೆಯಲ್ಲಿ ಎಲ್ಲ ಪ್ರಶ್ನೆಗಳೂ ಬಹು ಆಯ್ಕೆ ಪ್ರಶ್ನೆಗಳಾಗಿರುತ್ತವೆ. ಈ ಪ್ರಶ್ನೆಗಳನ್ನು ಸಮರ್ಥವಾಗಿ ಉತ್ತರಿಸಲು ಹೀಗೆ ಮಾಡಿ.

- ಪ್ರತಿ ಪರೀಕ್ಷಾ ಅವಧಿಯನ್ನು ಮೂರು ಭಾಗಗಳಾಗಿ ವಿಂಗಡಿಸಿಕೊಳ್ಳಿ
- ಮೊದಲ ಕೆಲವು ನಿಮಿಷಗಳನ್ನು ಪ್ರಶ್ನೆಗಳನ್ನು ಓದಲು ಮೀಸಲಿಡಿ. ಎಲ್ಲ ಪ್ರಶ್ನೆಗಳನ್ನೂ ವೇಗವಾಗಿ ಒಮ್ಮೆ ಓದಿ. ಯಾವ ಪ್ರಶ್ನೆಗಳು ಸುಲಭ, ಯಾವುವು ಕಷ್ಟ ಎನ್ನುವುದನ್ನು ಮನನ ಮಾಡಿಕೊಳ್ಳಿ.
- ನಂತರದ ಹೆಚ್ಚು ಸಮಯವನ್ನು ಸುಲಭವಾದ ಹಾಗೂ ನಿಮಗೆ ತಿಳಿದಿರುವ ಪ್ರಶ್ನೆಗಳನ್ನು ಉತ್ತರಿಸಲು ವಿನಿಯೋಗಿಸಿ.
- ಕೊನೆಯ ಕೆಲವು ನಿಮಿಷಗಳನ್ನು ನಿಮಗೆ ಕಷ್ಟವಾದ ಪ್ರಶ್ನೆಗಳನ್ನು ಉತ್ತರಿಸಲು ಬಳಸಿ.

2. ಈ ಪಾಠಗಳನ್ನು ಓದಲು ಈ ವಿಧಾನಗಳೂ ಸಹಕಾರಿಯಾಗಬಲ್ಲವು

- ಎಲ್ಲ ಪಾಠಗಳ ಮುಖ್ಯ ವಿಷಯಗಳ ಮೈಂಡ್ ಮ್ಯಾಪ್ ಮಾಡಿಕೊಳ್ಳಿ (ಇಡೀ ಪಾಠದ್ದಲ್ಲ). ಇದರಿಂದ ಇಡೀ ಪಾಠದ ಪ್ರತಿ ಮುಖ್ಯ ಅಂಶಗಳನ್ನು ಸುಲಭವಾಗಿ ನೆನಪಿನಲ್ಲಿಡಲು, ಪುನರಾವರ್ತಿಸಲು ಹಾಗೂ ಬಹು ಆಯ್ಕೆ ಪ್ರಶ್ನೋತ್ತರಗಳಿಗೆ ತಯಾರಿ ನಡೆಸಲು ಬಹಳ ಸಹಾಯವಾಗುತ್ತದೆ.

ಈ ಕೆಳಗಿನ ಉದಾಹರಣೆಯನ್ನು ಗಮನಿಸಿ. ಇಲ್ಲಿ ವಿದ್ಯುಚ್ಛಕ್ತಿ ಪಾಠದ ಒಂದು ಮುಖ್ಯ ಅಂಶವಾದ ವಿದ್ಯುತ್ ಪ್ರವಾಹದ ಬಗ್ಗೆ ಮಾತ್ರ ಮೈಂಡ್ ಮ್ಯಾಪ್ ಮಾಡಲಾಗಿದೆ.



ಎಷ್ಟು ಸರಳ ಹಾಗೂ ಉಪಯುಕ್ತ ಅಲ್ಲವೇ?

ಈ ಮೈಂಡ್ ಮ್ಯಾಪ್‌ಗಳು, ಭಾಷೆಗಳು, ವಿಜ್ಞಾನ ಹಾಗೂ ಸಮಾಜ ವಿಜ್ಞಾನ ವಿಷಯಗಳನ್ನು ಪುನರಾವರ್ತಿಸಲು, ನೆನಪಿನಲ್ಲಿಡಲು ಹೆಚ್ಚು ಉಪಯುಕ್ತ.

- ಗಣಿತ ವಿಷಯದಲ್ಲಿನ ಬಹು ಆಯ್ಕೆ ಪ್ರಶ್ನೆಗಳನ್ನು ಉತ್ತರಿಸಲು ಗಣಿತದ ಸಮಸ್ಯೆಗಳನ್ನು ಅಭ್ಯಾಸ ಮಾಡುವುದರ ಜೊತೆಗೆ ಕೆಲವು ಬಾರಿ ಹಲವು ಸರಳ, ತಾಳೆ ನೋಡುವ ವಿಧಾನಗಳೂ ಸಹಾಯಕವಾಗಬಲ್ಲವು.

ಉದಾ: ಎಲ್ಲ ಸಂಖ್ಯೆಗಳನ್ನೂ ಒಂದಂಕಿಯನ್ನಾಗಿ ಪರಿವರ್ತಿಸಿ ತಾಳೆ ನೋಡುವ ವಿಧಾನ.

ಈ ಉದಾಹರಣೆಯನ್ನು ಗಮನಿಸಿ.

ಈ ವರ್ಗ ಸಮೀಕರಣದ ಅಪವರ್ತನಗಳು ಯಾವುವು? :

$6x^2 - x - 2 = 0$

a) (3x-2) (2x + 1)
b) (3x-2) (x + 1)
c) (3x-2)(4x + 1)
d) (3x-2) (2x-1)

ಇಲ್ಲಿ ಪ್ರಶ್ನೆಯಲ್ಲಿರುವ ಅಂಕಿಗಳನ್ನು ಒಂದಂಕಿಯನ್ನಾಗಿ ಪರಿವರ್ತಿಸಿ. (ಅಂದರೆ ಎಲ್ಲ ಸಹಗುಣಕಗಳ ಮೊತ್ತವನ್ನು ಕಂಡುಹಿಡಿದು ಒಂದಂಕಿಯನ್ನಾಗಿ ಪರಿವರ್ತಿಸಿ)

ಇಲ್ಲಿ ಪ್ರಶ್ನೆಯ ಒಂದಂಕಿ 6 -1 -2 = 3 ಅಲ್ಲವೇ?

ಈಗ ಉತ್ತರಗಳನ್ನು ಒಂದಂಕಿಯನ್ನಾಗಿ ಪರಿವರ್ತಿಸಿ.

a) (3-2) (2 + 1) = 1 x 3 = 3
b) (3-2) (1 + 1) = 1 x 2 = 2
c) (3-2) (4 + 1) = 1 x 5 = 5
d) (3-2) (2-1) = 1 x 1 = 1

ಗಮನಿಸಿ, (a) ಆಯ್ಕೆಯ ಒಂದಂಕಿಯು (3), ಪ್ರಶ್ನೆಯ ಒಂದಂಕಿಗೆ ಸಮನಾಗಿದೆ (3) ಆದ್ದರಿಂದ ಸರಿಯಾದ ಆಯ್ಕೆ (a)

ಎಷ್ಟು ಸುಲಭ ಅಲ್ಲವೇ !!

(ಗಮನಿಸಿ, ಇದು ಕೇವಲ ಒಂದು ರೀತಿಯ ತಾಳೆ ನೋಡುವ ಪದ್ಧತಿ ಮಾತ್ರ. ಒಂದಕ್ಕಿಂತ ಹೆಚ್ಚು ಆಯ್ಕೆಗಳ ಒಂದಂಕಿಗಳು ಒಂದೇ ಆಗಿದ್ದರೆ ಈ ಪದ್ಧತಿಯು ಅನ್ವಯಿಸುವುದಿಲ್ಲ. ನಿಮ್ಮ ಶಿಕ್ಷಕರ ಬಳಿ ಈ ರೀತಿಯ ಹಲವು ವಿಧಾನಗಳ ಬಗ್ಗೆ ಕಲಿಯಿರಿ.)

3. ಕೊನೆಯದಾಗಿ, ನಿಮಗೆ ಉತ್ತರ ಗೊತ್ತಿಲ್ಲದ ಪ್ರಶ್ನೆಗಳ ಬಗ್ಗೆಯೂ ಯೋಚಿಸಿ ಉತ್ತರಿಸಲು ಪ್ರಯತ್ನಿಸಿ. ಈ ಪ್ರಶ್ನೆಗಳನ್ನು ಕೊನೆಯಲ್ಲಿ ಉತ್ತರಿಸಿ.

ಈ ಬಾರಿಯ ಬಹು ಆಯ್ಕೆ ಪ್ರಶ್ನೆಗಳು ನೇರವಾದ, ಸರಳವಾದ ಪ್ರಶ್ನೆಗಳೇ ಆಗಿರುವುದರಿಂದ ಆತಂಕ ಪಡಬೇಡಿ.

ಆದರೆ ಸರಿಯಾಗಿ, ಆಸಕ್ತಿಯಿಂದ, ಗಮನವಿಟ್ಟು ಓದುವುದನ್ನು ಮರೆಯಬೇಡಿ.

ಇಲ್ಲಿ ಕೆಲವೇ ಕೆಲವು ವಿಧಾನಗಳ ಬಗ್ಗೆ ತಿಳಿಸಲಾಗಿದೆ. ನಿಮ್ಮ ಶಿಕ್ಷಕರು ನಿಮಗೆ ಈಗಾಗಲೇ ಬಹಳಷ್ಟು ಸರಳ ವಿಧಾನಗಳನ್ನು ತಿಳಿಸಿರುತ್ತಾರೆ. ಅಲ್ಲವೇ? ಅವೆಲ್ಲವನ್ನೂ ಅಳವಡಿಸಿಕೊಂಡು ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆಯಿರಿ.

(ಲೇಖಕರು: ನಿರ್ದೇಶಕರು, ಸ್ಮಾರ್ಟ್ ಸೆರೆಬ್ರಮ್, ಬೆಂಗಳೂರು)

ಎಸ್ಸೆಸ್ಸೆಲ್ಸಿ ದಿಕ್ಸೂಚಿ

ವಿಷಯ: ಗಣಿತ

1) ಸಮಾಂತರ ಶ್ರೇಢಿ 13,9,5..... ರಲ್ಲಿ 13 ರ ಹಿಂದಿನ ಪದ
a) 16 b) 15 c) 17 d) 10

2) ಈ ಕೆಳಗಿನವುಗಳಲ್ಲಿ ಸಮಾಂತರ ಶ್ರೇಢಿಯು
a) 10,7,4,1,... b) 5,8,12,......
c) 0,3,6,10,...... d) 16,8,4,2

3) 5 ರಿಂದ ಭಾಗವಾಗುವ ಎರಡಂಕಿಯ ಒಟ್ಟುಸಂಖ್ಯೆಗಳು
a) 17 b) 18 c) 19 d) 20

4) ಸಮಾಂತರ ಶ್ರೇಢಿ 10,7,4, ...ರ 8ನೇ ಪದ
a) -12 b) -10 c) -9 d) -11

5) ಒಂದು ಸಮಾಂತರ ಶ್ರೇಢಿಯಲ್ಲಿ $a_5 = 12$ ಮತ್ತು $a_{10} = 27$ ಆದರೆ ಶ್ರೇಢಿಯ ಸಾಮಾನ್ಯ ವ್ಯತ್ಯಾಸ
a) 4 b) -3 c) 3 d) 15

6) ΔABCಯಲ್ಲಿ, DE||AB. CD = 3cm, EC = 4cm, BE = 6cm, ಆದಾಗ DA ಯು
a) 7.5 cm b) 3 cm
c) 4.5 cm d) 6 cm

7) ಎರಡು ಸಮರೂಪ ತ್ರಿಭುಜಗಳ ಬಾಹುಗಳ ನಡುವಿನ ಅನುಪಾತವು 4:9 ಆದರೆ ಅವುಗಳ ವಿಸ್ತೀರ್ಣಗಳ ನಡುವಿನ ಅನುಪಾತ
a) 16:81 b) 4 : 9
c) 2 : 3 d) 8:18

8) ಪ್ರತೀ ಬಾಹು 10 cm ಇರುವ ಒಂದು ಸಮಬಾಹು ತ್ರಿಭುಜದ ಎತ್ತರ
a) $5\sqrt{3}$ cm b) $10\sqrt{3}cm$
c) $\sqrt{3}$ cm d) 75cm

9) ಸಮರೂಪವಾದ ತ್ರಿಭುಜಗಳನ್ನು ರೂಪಿಸುವ ಬಾಹುಗಳ ಗುಂಪು
a) 9, 12, 18 ಮತ್ತು 3, 4, 6
b) 3, 4, 6 ಮತ್ತು 9, 10, 12
c) 8, 6, 12 ಮತ್ತು 2, 6, 3
d) 3, 4, 5 ಮತ್ತು 2, 4, 10

10) 'ಒಂದು ತ್ರಿಭುಜದ ಅತಿ ದೊಡ್ಡ ಬಾಹುವಿನ ಮೇಲಿನ ವರ್ಗವು ಉಳಿದೆರಡು ಬಾಹುಗಳ ಮೇಲಿನ ವರ್ಗಗಳ ಮೊತ್ತಕ್ಕೆ ಸಮನಾಗಿದ್ದರೆ, ಆ ಎರಡು ಬಾಹುಗಳು ಲಂಬ ಕೋನವನ್ನು ಹೊಂದಿರುತ್ತವೆ' ಇದು ಯಾವ ಹೇಳಿಕೆಯಾಗಿದೆ.
a) ಪೈಥಾಗೊರಸ್‌ನ ಪ್ರಮೇಯ
b) ಥೇಲ್ಸ್‌ನ ಪ್ರಮೇಯ
c) ಥೇಲ್ಸ್‌ನ ಪ್ರಮೇಯದ ವಿಲೋಮ
d) ಪೈಥಾಗೊರಸ್‌ನ ಪ್ರಮೇಯದ ವಿಲೋಮ



ವಿಷಯ: ವಿಜ್ಞಾನ

1. ಆಮ್ಲಗಳ ಪ್ರಬಲತೆ ಗುಣಕ್ಕೆ ಸಂಬಂಧಿಸಿದಂತೆ, ಈ ಕೆಳಗಿನ ಯಾವ ಆಯ್ಕೆ ಏರಿಕೆ ಕ್ರಮದಲ್ಲಿದೆ?
ಎ) ನೀರು < ಅಸಿಟಿಕ್ ಆಮ್ಲ < ಹೈಡ್ರೊಕ್ಲೋರಿಕ್ ಆಮ್ಲ
ಬಿ) ನೀರು < ಹೈಡ್ರೊಕ್ಲೋರಿಕ್ ಆಮ್ಲ < ಅಸಿಟಿಕ್ ಆಮ್ಲ

2. ಸತು ಸೋಡಿಯಂ ಪ್ರತ್ಯಾಮ್ಲದೊಂದಿಗೆ ವರ್ತಿಸಿ ಉಂಟುಮಾಡುವ ಉತ್ಪನ್ನ
ಎ) ಸತುವಿನ ಪ್ರತ್ಯಾಮ್ಲ ಮತ್ತು ಸೋಡಿಯಂ
ಬಿ) ಸೋಡಿಯಂಜಿಂಕೇಟ್ ಮತ್ತು ಹೈಡ್ರೋಜನ್ ಅನಿಲ
ಸಿ) ಸೋಡಿಯಂಜಿಂಕಾಕ್ಸೈಡ್ ಮತ್ತು ಹೈಡ್ರೋಜನ್ ಅನಿಲ
ಡಿ) ಸೋಡಿಯಂಜಿಂಕೇಟ್ ಮತ್ತು ನೀರು

3. ಸೋಡಿಯಂಹೈಡ್ರಾಕ್ಸೈಡ್‌ನಲ್ಲಿ ಫಿನಾಲ್ತಲೀನ್ ಬಣ್ಣ
ಎ) ಗುಲಾಬಿ ಬಿ)ಹಳದಿ
ಸಿ) ಕೆಂಪು ಡಿ) ಕಿತ್ತಳೆ

4. ಉಭಯವರ್ತಿ ಆಕ್ಸೈಡ್‌ಗೆ ಉದಾಹರಣೆ
ಎ) Na_2O ಬಿ) K_2O
ಸಿ) Al_2O_3 ಡಿ) Mgo

5. ಈ ಕೆಳಗಿನ ಯಾವ ಅಲೋಹವು ಹೊಳಪಿನಿಂದ ಕೂಡಿದೆ
ಎ)ಸಲ್ಫರ್ ಬಿ) ಫಾಸ್ಪರಸ್
ಸಿ) ಅಯೋಡಿನ್ ಡಿ) ಸಿಲಿಕಾನ್

6. ಈ ಕೆಳಗಿನವುಗಳಲ್ಲಿ ಬ್ಯೂಟನೋಯಿಕ್ ಆಮ್ಲದ ಸೂತ್ರ
ಎ) $CH_3CH_2CH_2CH_2COOH$
ಬಿ) $CH_3CH_2CH_2COOH$
ಸಿ) $CH_3CH_2CH_2CHO$
ಡಿ) $CH_3CH_2CH_2CH_2CHO$

7. ಈ ಕೆಳಗಿನ ಯಾವುದು ಸಂಕಲನ ರಾಸಾಯನಿಕ ಕ್ರಿಯೆಗೆ ಒಳಗಾಗುತ್ತದೆ?
ಎ) CH_4 ಬಿ) C_3H_8 ಸಿ) C_2H_6 ಡಿ) C_2H_4

8. ಮೆಂಡಲೀವ್ ರವರ ಸಮಯದಲ್ಲಿ ನಮಗೆ ಗೊತ್ತಿದ್ದ ಧಾತುಗಳ ಸಂಖ್ಯೆ
ಎ) 62 ಬಿ) 63 ಸಿ) 64 ಡಿ) 65

9. ಒಂದು ಧಾತುವಿನ ಎಲೆಕ್ಟ್ರಾನ್ ವಿನ್ಯಾಸ 2, 6 ಆಗಿದೆ. ಹಾಗಾದರೆ, ಆಧುನಿಕ ಆವರ್ತ ಕೋಷ್ಟಕದಲ್ಲಿ ಆ ಧಾತುವಿನ ಸ್ಥಾನ
ಎ) 2 ಗುಂಪು ಬಿ) 16 ಗುಂಪು
ಸಿ) 18 ಗುಂಪು ಡಿ) 14 ಗುಂಪು

10. ಮಾರ್ಜಕಗಳು
i) ಕಾರ್ಬಾಕ್ಸಿಲಿಕ್ ಆಮ್ಲಗಳ ಸೋಡಿಯಂ ಲವಣಗಳು
ii) ಸಲ್ಫೋನಿಕ್ ಆಮ್ಲಗಳ ಸೋಡಿಯಂ ಲವಣಗಳು
iii) ಕಾರ್ಬಾಕ್ಸಿಲಿಕ್ ಆಮ್ಲಗಳ ಪೊಟ್ಯಾಸಿಯಂ ಲವಣಗಳು
iv) ಬ್ರೋಮೈಡ್ ಅಯಾನುಗಳ ಅಮೋನಿಯಂ ಲವಣಗಳು
ಎ) i ಮತ್ತು ii, ಬಿ) ii ಮತ್ತು iii, ಸಿ) ii ಮತ್ತು iv, ಡಿ) i ಮತ್ತು iii

Subject : Second Language English

1. Mother: You must always respect your elders. The language function of the given sentence is
A. requesting B. regretting
C. Advising D. Sympathizing

2. The word which collocates with 'blood' is
A.bottle B. bank C. shop D. bunk

3. The word that has two syllables is
A. dictate B. Meditate
C. dedicate D. educate

4. He has written a story. The passive form of the given sentence is
A. A story had been written by him.
B. A story has been written by him.
C. A story will be written by him.
D. A story is being written by him

5.Mahatma Gandhiji always ______ the truth. The appropriate tense form of the verb to be used here is
A. speaks B. speaking
C. spoke D. speak

6. The appropriate prefix to form the opposite of 'noble' is
A. im B. in C. in D. ig

7. Latha heard a melodious song . The part of speech of the underlined word is a/an
A. Noun B. Adverb C. Verb D. Adjective

8. Parents _________ their children with great care . The correct phrasal verb to be used here is
A. Look upon B. look after
C. Look into D. look up

9. No other continent is as large as Asia in the world. The superlative form of the above sentence is
A. Asia is the largest continent in the world
B. Asia is a large continent .
C. Asia is larger than any other continent.
D.Asia is largest continent.

10. 'If he had eaten well, he ____________ fallen down.' The correct words to be used here to complete the sentence are
A. would be B. will be
C. wouldn't have D. will have been

(ಪ್ರಶ್ನೆಪತ್ರಿಕೆ ಸಂಯೋಜನೆ: ಸ್ವಾಮಿ ಎಚ್‌.ಆರ್./ ಎ. ಶ್ರೀನಿವಾಸ್/ ಎಚ್.ಟಿ. ಪದ್ಮಾವತಿ, ಸಹಾಯಕ ಶಿಕ್ಷಕಿ, ಕೆಪಿಎಸ್ ತ್ಯಾಮಗೊಂಡ್ಲು, ಬೆಂಗಳೂರು ಗ್ರಾಮಾಂತರ)

ಎಂಬಿಎ ಕೋರ್ಸ್ ಮಾಹಿತಿ, ಪ್ರವೇಶ ಹೇಗೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ವಿ. ಪ್ರದೀಪ್ ಕುಮಾರ್

1. ನಾನು ಸ್ನಾತಕೋತ್ತರ ಎಂಜಿನಿಯರಿಂಗ್ ಪದವಿಯನ್ನು ಮುಗಿಸಿದ್ದೇನೆ. ಎಂಬಿಎ ಕೋರ್ಸ್‌ನ ಮಾಹಿತಿ, ಪ್ರವೇಶ ಮತ್ತು ಸ್ಕಾಲರ್‌ಶಿಪ್ ಬಗ್ಗೆ ತಿಳಿಸಿ.

ಪ್ರಶಾಂತ್ ಎಂ.ಪಿ., ಊರು ತಿಳಿಸಿಲ್ಲ.

ಉದ್ಯಮಗಳ ಅಭಿವೃದ್ಧಿಗಾಗಿ, ಸಂಪನ್ಮೂಲಗಳನ್ನು ವ್ಯವಸ್ಥಿತವಾಗಿ ಉಪಯೋಗಿಸುವ ಯೋಜನೆಗಳನ್ನು ರಚಿಸಿ, ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವುದೇ ಮ್ಯಾನೇಜ್‌ಮೆಂಟ್‌ನ ಮೂಲ ಉದ್ದೇಶ. ಈ ಜವಾಬ್ದಾರಿಗಳನ್ನು ನಿರ್ವಹಿಸಲು, ಸಮಗ್ರವಾದ ಜ್ಞಾನ ಮತ್ತು ಕೌಶಲಗಳನ್ನು ಎಂಬಿಎ ಕೋರ್ಸ್‌ನಲ್ಲಿ ನೀಡಲಾಗುತ್ತದೆ. ಇದಲ್ಲದೆ, ಉದ್ಯಮಗಳಲ್ಲಿ ಪ್ರಾಯೋಗಿಕವಾದ ತರಬೇತಿಯನ್ನು ಪ್ರಾಜೆಕ್ಟ್‌ಗಳ ಮುಖಾಂತರ ನೀಡುವುದರಿಂದ ಕಲಿಕೆ ಪರಿಪೂರ್ಣವಾಗುತ್ತದೆ. ನಿಮ್ಮ ನೈಪುಣ್ಯತೆ ಮತ್ತು ಚತುರತೆಯನ್ನು ವರ್ಧಿಸಿ, ಯಾವುದೇ ಕೆಲಸವನ್ನು ನಿಭಾಯಿಸುವ ಆತ್ಮವಿಶ್ವಾಸ ಬೆಳೆಯುತ್ತದೆ. ಒಟ್ಟಾರೆ, ಎಂಬಿಎ ಕಲಿಕೆಯ ವೈವಿಧ್ಯತೆಗಳಿಂದ ನಿಮ್ಮ ವ್ಯಕ್ತಿತ್ವದ ಸರ್ವತೋಮುಖ ಬೆಳವಣಿಗೆಯಾಗುತ್ತದೆ. ಆದ್ದರಿಂದಲೇ, ಎಂಬಿಎ ಕೋರ್ಸ್ ಜನಪ್ರಿಯ. ನಮ್ಮ ದೇಶದಲ್ಲಿ ಸುಮಾರು 5000ಕ್ಕೂ ಹೆಚ್ಚಿನ ಎಂಬಿಎ ಕಾಲೇಜುಗಳಿದ್ದು, ಸಿಎಟಿ, ಪಿಜಿಸಿಇಟಿಗಳಂತಹ ಪರೀಕ್ಷೆಗಳ ಮೂಲಕ ಪ್ರವೇಶದ ಆಯ್ಕೆಯಾಗುತ್ತದೆ. ಅರ್ಹತೆ, ಆದಾಯಗಳ ಆಧಾರದ ಮೇಲೆ ಅನೇಕ ಸ್ಕಾಲರ್‌ಶಿಪ್ ಯೋಜನೆಗಳಿವೆ. ನೀವು ಈಗಾಗಲೇ ಸ್ನಾತಕೋತ್ತರ ಪದವಿಯನ್ನು ಗಳಿಸಿರುವುದರಿಂದ, ಕೆಲಸಕ್ಕೆ ಸೇರಿ ವಾರಾಂತ್ಯದ ಎಕ್ಸಿಕ್ಯೂಟಿವ್ ಎಂಬಿಎ ಕೋರ್ಸ್ ಮಾಡುವ ಅವಕಾಶವೂ ನಿಮಗಿದೆ.

2. ನನ್ನ ತಂಗಿ ದ್ವಿತೀಯ ಪಿಯುಸಿ (ಆರ್ಟ್ಸ್) ಕನ್ನಡ ಮಾಧ್ಯಮದಲ್ಲಿ ಪೂರ್ಣಗೊಳಿಸಿದ್ದು, ಮುಂದೆ ಯಾವ ಕೋರ್ಸ್ ಆಯ್ದುಕೊಳ್ಳಬಹುದು? ಏನು ಭವಿಷ್ಯವಿದೆ? ಉತ್ತಮ ಉದ್ಯೋಗವಕಾಶಗಳ ಬಗ್ಗೆ ಸಲಹೆ ನೀಡಿ.

ತೇಜಸ್ವಿ, ಶಿವಮೊಗ್ಗ

ನಿಮ್ಮ ಆದ್ಯತೆಯಂತೆ, ಕನ್ನಡ ಮಾಧ್ಯಮದಲ್ಲಿ ಶಿಕ್ಷಣವನ್ನು ಮುಂದುವರೆಸಬಹುದು ಅಥವಾ ಇಂಗ್ಲಿಷ್ ಮಾಧ್ಯಮಕ್ಕೆ ಬದಲಾಯಿಸಿಕೊಳ್ಳಬಹುದು. ಕನ್ನಡ ಭಾಷೆಯನ್ನು ಕಲಿಯುವ ಆಸಕ್ತಿಯಿದ್ದರೆ ಬಿಎ ಮಾಡಿ ಎಂಎ ಮಾಡಬಹುದು. ಸ್ವಾಭಾವಿಕ ಪ್ರತಿಭೆ ಮತ್ತು ಆಸಕ್ತಿಯಿರುವ ವಿಷಯಗಳಲ್ಲಿ ಶಿಕ್ಷಣ ಮುಂದುವರೆಸುವುದು ಉತ್ತಮ ಹಾಗೂ ಶಿಕ್ಷಣದ ನಂತರದ ಬದುಕಿನ ಕನಸುಗಳೇನು ಎನ್ನುವುದರ ಬಗ್ಗೆ ಸ್ಪಷ್ಟತೆಯಿರಬೇಕು. ಆ ಕನಸುಗಳನ್ನು ನನಸಾಗಿಸಲು ಸೂಕ್ತವಾದ ವೃತ್ತಿಯ ಬಗ್ಗೆ ಮೊದಲೇ ನಿಶ್ಚಯಿಸಬೇಕು. ಏಕೆಂದರೆ, ಯಶಸ್ಸಿನ ಹಾದಿಯಲ್ಲಿ ವೈಯಕ್ತಿಕ ಬದುಕಿನ ಕನಸುಗಳೇ ಪ್ರೇರಣೆ. ಶಿಕ್ಷಣದ ನಂತರ, ಪ್ರಿಂಟ್ ಮತ್ತು ಎಲೆಕ್ಟ್ರಾನಿಕ್ ಸೇರಿದಂತೆ ಮಾಧ್ಯಮಗಳು, ಪ್ರಕಾಶನ ಸಂಸ್ಥೆಗಳು, ಚಿತ್ರೋದ್ಯಮ, ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳು, ಖಾಸಗಿ ಸಂಸ್ಥೆಗಳು, ಇ-ಕಾಮರ್ಸ್, ಕೋಚಿಂಗ್ ತರಗತಿಗಳು, ಶಿಕ್ಷಣ ಸೇರಿದಂತೆ ಅನೇಕ ವಲಯಗಳಲ್ಲಿ ವೃತ್ತಿಯ ಅವಕಾಶಗಳಿವೆ.

3. ನನ್ನ ತಂಗಿಯ ದ್ವಿತೀಯ ಪಿಯುಸಿ ವಿದ್ಯಾಭ್ಯಾಸ ಮುಗಿದಿದೆ. ಸಿವಿಲ್ ಎಂಜಿನಿಯರಿಂಗ್ ಮಾಡಬೇಕು ಅನ್ನುವುದು ಅವಳ ಆಸೆ. ಅವಳ ಮುಂದಿನ ಮಾರ್ಗ ತಿಳಿಸಿ.

ಹೆಸರು, ಊರು ತಿಳಿಸಿಲ್ಲ.

ಸಿವಿಲ್ ಎಂಜಿನಿಯರಿಂಗ್ ಕಾಲೇಜುಗಳ ಸಂಪನ್ಮೂಲಗಳು, ವಿಷಯಕ್ಕೆ ಸಂಬಂಧಿಸಿದಂತೆ ಅಧ್ಯಾಪಕ ವರ್ಗ, ಪ್ಲೇಸ್‌ಮೆಂಟ್ ಮಾಹಿತಿ, ಗ್ರಂಥಾಲಯ, ಶುಲ್ಕಗಳು ಇತ್ಯಾದಿಗಳ ಕುರಿತು ಸಮಗ್ರವಾದ ಮಾಹಿತಿಯನ್ನು ಸಂಗ್ರಹಿಸಿ, ವಿಶ್ಲೇಷಿಸಿ. ಪದವಿಯನ್ನು ಯಾವ ಕಾಲೇಜಿನಲ್ಲಿ ಮಾಡಬೇಕೆನ್ನುವುದರ ಆದ್ಯತೆಯ ಅನುಗುಣವಾಗಿ ಪ್ರವೇಶ ಪರೀಕ್ಷೆಗಳಿಗೆ ತಯಾರಾಗುವುದೇ ಮುಂದಿನ ಹಂತ. ಉದಾಹರಣೆಗೆ ಸಿಇಟಿ, ಜೆಇಇ ಇತ್ಯಾದಿ.

ಸಿವಿಲ್ ಎಂಜಿನಿಯರಿಂಗ್ ವಲಯದಲ್ಲಿ ಅನೇಕ ವೃತ್ತಿಗಳ ಅವಕಾಶಗಳಿವೆ. ಹಾಗಾಗಿ, ವೃತ್ತಿಯ ಆಯ್ಕೆ ಮತ್ತು ವೃತ್ತಿ ಜೀವನದ ಧ್ಯೇಯಗಳನ್ನು ನಿಶ್ಚಯಿಸಿ. ಈ ಆದ್ಯತೆಗಳಂತೆ, ಯಾವ ಹಂತದವರೆಗೆ ಓದಬೇಕು ಎನ್ನುವುದನ್ನು ಈಗಲೇ ನಿರ್ಧರಿಸುವುದು ಒಳ್ಳೆಯದು. ಶುಭಹಾರೈಕೆಗಳು.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ **ವಿ. ಪ್ರದೀಪ್ ಕುಮಾರ್** ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು **shikshana@prajavani.co.in** ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಜವಾಹರ್‌ಲಾಲ್ ನೆಹರೂ ಯೂನಿವರ್ಸಿಟಿ ಸ್ಕೂಲ್ ಆಫ್ ಎನ್ವಿರಾನ್‌ಮೆಂಟ್ ಸೈನ್ಸ್ ರಿಸರ್ಚ್ ಅಸೋಸಿಯೇಟ್‌ಶಿಪ್ 2021

- **ವಿವರ:** ಎಂಎಸ್‌ಇ ಪದವೀಧರರಿಗಾಗಿ ಜೆಎನ್‌ಯು ಅರ್ಜಿಗಳನ್ನು ಆಹ್ವಾನಿಸುತ್ತಿದೆ.
- **ಅರ್ಹತೆ:** ಎನ್ವಿರಾನ್‌ಮೆಂಟ್ ಸೈನ್ಸ್, ಫಿಸಿಕಲ್ ಸೈನ್ಸ್, ಜಿಯೊಲಜಿ, ಅಪ್ಲೈಡ್ ಜಿಯೊಲಜಿ, ಕೆಮಿಸ್ಟ್ರಿ, ಬಯೊಕೆಮಿಸ್ಟ್ರಿ ವಿಭಾಗಗಳಲ್ಲಿ ಎಂಎಸ್‌ಸಿ ಪದವಿ ಪಡೆದವರು ಅರ್ಜಿ ಸಲ್ಲಿಸಬಹುದಾಗಿದೆ. ಜತೆಗೆ, ಗ್ಲೇಸಿಯಾಲಜಿ, ರಿಮೋಟ್ ಸೆನ್ಸಿಂಗ್ ಮತ್ತು ಜಿಐಎಸ್‌ನಲ್ಲಿ ಸಂಶೋಧನಾ ಅನುಭವ ಇರಬೇಕು. ಡೇಟಾ ಸಂಪಾದನೆ, ವಿಶ್ಲೇಷಣೆಯೂ ಬರಬೇಕು.
- **ಆರ್ಥಿಕ ಸಹಾಯ:** ಜೆಎನ್‌ಯು ಮತ್ತು ಮಿನಿಸ್ಟ್ರಿ ಆಫ್ ಅರ್ಥ್ ಸೈನ್ಸ್‌ನ ನಿಯಮಾನುಸಾರ
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** 15 ಜುಲೈ, 2021
- **ಅರ್ಜಿ ಸಲ್ಲಿಕೆ ವಿಧಾನ:** ಇ-ಮೇಲ್ ಮೂಲಕ ಮಾತ್ರ
- **ಹೆಚ್ಚಿನ ಮಾಹಿತಿಗೆ:** www.b4s.in/praja/JNUEA1

ಕೃಪೆ:buddy4study.com

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ -21

286. ಇವುಗಳಲ್ಲಿ ಒಂದು ವಿಘಟಕ ಜೀವಿ
ಎ) ಶಿಲೀಂಧ್ರ ಬಿ) ಶೈವಲ
ಸಿ) ಏಕಕೋಶ ಜೀವಿ ಡಿ) ಕೀಟ

287. ರುದರ್ ಫೋರ್ಡ್ ಅವರ ಚದುರುವಿಕೆಯ ಪ್ರಯೋಗದಲ್ಲಿ ಅಲ್ಫಾ ಕಣ ವಿಚಲಿತವಾಗುವುದು
ಎ) ಚಲನ ಶಕ್ತಿ ಹೆಚ್ಚಾಗಿರುವುದರಿಂದ
ಬಿ) ವಿಕರ್ಷಣ ಬಲದಿಂದ
ಡಿ) ಆಕರ್ಷಣ ಬಲದಿಂದ
ಡಿ) ಚಲನಶಕ್ತಿ ಕಡಿಮೆಯಾಗಿರುವುದರಿಂದ

288. ಸಂಗೀತ ಸ್ವರಗಳಾದ ಸ, ರಿ, ಗ, ಮ, ಪ, ದ, ನಿ, ಸ ಈ ಅಕ್ಷರಗಳಲ್ಲಿ ಮೊದಲನೇ 'ಸ' ಕೊನೆಯ 'ಸ' ಕ್ಕಿಂತ ಈ ಅಂತ್ಯದಲ್ಲಿ ಭಿನ್ನವಾಗಿರುತ್ತದೆ
ಎ) ಆವೃತ್ತಿ ಬಿ) ಕಂಪನ ವಿಸ್ತಾರ
ಸಿ) ವಾದ್ಯ ಡಿ) ವೇಗ

289. 'ಬ್ರಿಕ್ಸ್' ದೇಶಗಳು ಯಾವುವು?
ಎ) ಬಾಂಗ್ಲಾದೇಶ, ರುಮೇನಿಯಾ, ಭಾರತ, ಚೀನಾ, ಸ್ವಿಟ್ಜರ್ಲೆಂಡ್
ಬಿ) ಬ್ರೆಜಿಲ್, ರಷ್ಯಾ, ಭಾರತ, ಚೀನಾ, ದಕ್ಷಿಣ ಆಫ್ರಿಕಾ
ಸಿ) ಬ್ರೆಜಿಲ್, ರಷ್ಯಾ, ಭಾರತ, ಚೀನಾ, ಸ್ಪೇನ್
ಡಿ) ಭಾರತ, ರುಮೇನಿಯಾ, ಬಾಂಗ್ಲಾದೇಶ, ಸ್ವೀಡನ್, ಚೀನಾ

290. 'ಗ್ರಂಥಿಗಳ ರಾಜ' ಎಂದು ಈ ಗ್ರಂಥಿಯನ್ನು ಕರೆಯುತ್ತಾರೆ
ಎ) ಥೈರಾಯ್ಡ್ ಗ್ರಂಥಿ ಬಿ) ನಿರ್ನಾಳ ಗ್ರಂಥಿ
ಸಿ) ಮೇದೋಜೀರಕ ಗ್ರಂಥಿ ಡಿ) ಪಿಟ್ಯೂಟರಿ ಗ್ರಂಥಿ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 20ರ ಉತ್ತರ: 271. ಬಿ, 272. ಸಿ, 273. ಎ, 274. ಸಿ, 275. ಡಿ, 276. ಸಿ, 277. ಎ, 278. ಡಿ, 279. ಸಿ, 280. ಬಿ, 281. ಡಿ, 282. ಡಿ, 283. ಸಿ, 284. ಎ, 285. ಸಿ

ನಿರುದ್ಯೋಗದ ವಿರುದ್ಧ ಎಐಡಿವೈಒದಿಂದ ಆನ್‌ಲೈನ್ ಸಮಾವೇಶ –ಬರಗೂರು ಸಲಹೆ

ಜನ ಕೇಂದ್ರಿತ ಉದ್ಯೋಗ: ಹೋರಾಟ ಅವಶ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉದ್ಯಮಿ ಕೇಂದ್ರಿತ ಉದ್ಯೋಗರಹಿತ ಅಭಿವೃದ್ಧಿಯ ಬದಲು, ಜನಕೇಂದ್ರಿತ ಉದ್ಯೋಗ ಸೃಷ್ಟಿಗೆ ಪೂರಕವಾದ ಅಭಿವೃದ್ಧಿಗೆ ಒತ್ತಾಯಿಸಿ ಬೃಹತ್ ಹೋರಾಟ ಹಮ್ಮಿಕೊಳ್ಳಬೇಕು' ಎಂದು ಸಾಹಿತಿ ಪ್ರೊ. ಬರಗೂರು ರಾಮಚಂದ್ರಪ್ಪ ಸಲಹೆ ನೀಡಿದ್ದಾರೆ.

ನಿರುದ್ಯೋಗದ ವಿರುದ್ಧ ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್ (ಎಐಡಿವೈಒ) ರಾಜ್ಯ ಸಮಿತಿಯ ಭಾನುವಾರ ಆಯೋಜಿಸಿದ್ದ ರಾಜ್ಯಮಟ್ಟದ ಆನ್‌ಲೈನ್ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

'ದುಡಿಯುವ ಅರ್ಹತೆಯ ಪ್ರತಿಯೊಬ್ಬರಿಗೂ ಉದ್ಯೋಗ ಸೃಷ್ಟಿ ಮಾಡಬೇಕಿರುವುದು ಚುನಾಯಿತ ಸರ್ಕಾರದ ಕರ್ತವ್ಯ. ಆದರೆ, ನಮ್ಮ ಸರ್ಕಾರಗಳ ಆದ್ಯತೆ ಜನಸಾಮಾನ್ಯರ ಏಳಿಗೆಯಲ್ಲ. ಬದಲಿಗೆ ಕಾರ್ಪೊರೇಟ್ ಮನೆತನಗಳ ಸೇವೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಪ್ರೊ. ಬರಗೂರು ರಾಮಚಂದ್ರಪ್ಪ

'ದೇಶದಲ್ಲಿ ಇಂದು 65 ಕೋಟಿ ನಿರುದ್ಯೋಗಿಗಳಿದ್ದಾರೆ. ನ್ಯಾಷನಲ್ ಸ್ಯಾಂಪಲ್ ಸರ್ವೆ ಆರ್ಗನೈಸೇಷನ್ ಪ್ರಕಾರ 45 ವರ್ಷಗಳಲ್ಲೇ ಅತ್ಯಧಿಕ ಪ್ರಮಾಣದ ನಿರುದ್ಯೋಗ ದಾಖಲಾಗಿದೆ. ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 52 ಲಕ್ಷ ಹುದ್ದೆಗಳನ್ನು ಭರ್ತಿ ಮಾಡಿಲ್ಲ. ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ಹೇಳಿದ್ದ ಕೇಂದ್ರ ಸರ್ಕಾರವೇ ನೀಡಿರುವ ಅಂಕಿಅಂಶದ ಪ್ರಕಾರ 2015ರಲ್ಲಿ ಸರ್ಕಾರ ನೇಮಿಸಿದ ಹುದ್ದೆಗಳ ಸಂಖ್ಯೆ ಕೇವಲ 15,670. ಇತ್ತೀಚಿನ ವರ್ಷಗಳಲ್ಲಂತೂ ಯಾವುದೇ ನೇಮಕಾತಿಯೂ ನಡೆದಿಲ್ಲ. ಕೋವಿಡ್ ಎರಡನೇ ಅಲೆಯ ನಂತರ ಸುಮಾರು 1.47 ಕೋಟಿ ಜನರು ಉದ್ಯೋಗ ಕಳೆದುಕೊಂಡಿದ್ದಾರೆ. ಜನರ ಆದಾಯ ಪ್ರಪಾತಕ್ಕೆ ಕುಸಿದಿದೆ' ಎಂದು ಹೇಳಿದರು.

ಮುಖ್ಯ ಭಾಷಣಕಾರರಾಗಿದ್ದ ಎಐಡಿವೈಒ ರಾಷ್ಟ್ರೀಯ ಅಧ್ಯಕ್ಷ ರಾಮಾಂಜನಪ್ಪ ಆಲ್ದಳ್ಳಿ, 'ನಿರುದ್ಯೋಗದ ವಿರುದ್ಧದ ಹೋರಾಟ ಅಲ್ಪಾವಧಿಯದ್ದಲ್ಲ. ಅದು ಒಂದು ಸ್ಪಷ್ಟ ವೈಜ್ಞಾನಿಕತೆಯ ಆಧಾರದ ಮೇಲೆ ನಡೆಸಬೇಕಾದ ದೀರ್ಘಕಾಲೀನ ಹೋರಾಟ. ಸಮಸ್ಯೆಯ ಆಳ ಮತ್ತು ಮೂಲ ಗ್ರಹಿಸಬೇಕು. ಎಲ್ಲ ಕ್ಷೇತ್ರದಲ್ಲಿ ಗರಿಷ್ಠ ಉದ್ಯೋಗಗಳ ಸೃಷ್ಟಿಗಾಗಿ ಸರ್ಕಾರಗಳನ್ನು ಒತ್ತಾಯಿಸುವಂತ ಹೋರಾಟಗಳನ್ನು ಕಟ್ಟಬೇಕು' ಎಂದು ಕರೆ ನೀಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಎಐಡಿವೈಒ ರಾಜ್ಯ ಕಾರ್ಯದರ್ಶಿ ಜಿ.ಎಸ್. ಕುಮಾರ್, 'ಕೋವಿಡ್ ನಂತರದ ದಿನಗಳಲ್ಲಿ ನಿರುದ್ಯೋಗ ಸಮಸ್ಯೆ ಮತ್ತಷ್ಟು ಉಲ್ಬಣಗೊಂಡಿದ್ದು, ಯುವಜನರ ಆಕ್ರೋಶ ಸಿಡಿದೇಳುತ್ತಿದೆ. ಬಿಡಿಬಿಡಿಯಾದ ಹೋರಾಟದ ಧ್ವನಿಗಳನ್ನು ಒಂದಾಗಿಸಲು ಈ ಸಮಾವೇಶ ಭೂಮಿಕೆಯಾಗಲಿ' ಎಂದು ಆಶಿಸಿದರು.

ಅಧ್ಯಕ್ಷತೆ ವಹಿಸಿದ್ದ ಎಐಡಿವೈಒ ರಾಜ್ಯ ಘಟಕದ ಅಧ್ಯಕ್ಷೆ ಎಂ. ಉಮಾದೇವಿ, 'ಭವಿಷ್ಯದ ಕುರಿತು ಭರವಸೆಯನ್ನೇ ಕಳೆದುಕೊಂಡ ಉದ್ಯೋಗಾಕಾಂಕ್ಷಿಗಳನ್ನು ಒಗ್ಗೂಡಿಸಿ ಈ ಸಮಾವೇಶ ನಡೆಯುತ್ತಿದೆ. ಹೋರಾಟದ ಹೆಜ್ಜೆಗಳನ್ನು ನಿರ್ಧರಿಸಿ, ಮುಂದಿನ ಇಡಬೇಕಾಗಿದೆ' ಎಂದು ಹೇಳಿದರು.

ಎಐಡಿವೈಒ ಕಾರ್ಯದರ್ಶಿ ಮಂಡಳಿ ಸದಸ್ಯ ಸಿದ್ದಲಿಂಗ ಬಾಗೇವಾಡಿ ನಿರ್ವಹಿಸಿದರು. ಸಮಾವೇಶದಲ್ಲಿ ನಿರುದ್ಯೋಗದ ವಿರುದ್ಧದ ಮುಖ್ಯ ಗೊತ್ತುವಳಿಯ ಜೊತೆಗೆ ಐದು ಉಪ ಗೊತ್ತುವಳಿಗಳನ್ನು ಅಂಗೀಕರಿಸಲಾಯಿತು.

ಯುವಜನರ ಹೋರಾಟ ಸಮಿತಿ ರಚನೆ

ಸಮಾವೇಶದಲ್ಲಿ ರಾಜ್ಯಮಟ್ಟದ ನಿರುದ್ಯೋಗಿ ಯುವಜನರ ಹೋರಾಟ ಸಮಿತಿ ರಚಿಸಲಾಯಿತು. ಸಮಿತಿ ಅಧ್ಯಕ್ಷರಾಗಿ ಶರಣಪ್ಪ ಉದ್ಬಾಳ್, ಕಾರ್ಯದರ್ಶಿಯಾಗಿ ಸಿದ್ದಲಿಂಗ ಬಾಗೇವಾಡಿ, ಉಪಾಧ್ಯಕ್ಷರುಗಳಾಗಿ ಚನ್ನಬಸವ ಜಾನೇಕಲ್, ವಿನಯಸಾರಥಿ, ಸಂತೋಷ್ ಮತ್ತು ಲಕ್ಷ್ಮಣ್ ಪೀರಗಾರ್ ಆಯ್ಕೆಯಾದರು. ಜಂಟಿ ಕಾರ್ಯದರ್ಶಿಗಳಾಗಿ ಜಗನ್ನಾಥ್ ಗುಲ್ಬರ್, ಭೀಮು ವಿಜಯಪುರ, ಭುವನಶಂಕರ್ ಧಾರವಾಡ, ಕಚೇರಿ ಕಾರ್ಯದರ್ಶಿಯಾಗಿ ಜಯಣ್ಣ, ಖಜಾಂಚಿಯಾಗಿ ವಿಜಯಕುಮಾರ್ ಚಿತ್ರದುರ್ಗ, ಕಾರ್ಯಕಾರಿ ಸಮಿತಿಯ ಸದಸ್ಯರುಗಳಾಗಿ ವಿವಿಧ ಕ್ಷೇತ್ರಗಳ 19 ಮಂದಿಯನ್ನು ಆಯ್ಕೆ ಮಾಡಲಾಯಿತು.

‘ಕಾಲೋಚಿತ– ಕಲೋಚಿತ ಬದಲಾವಣೆ ಅಗತ್ಯ’

ಆಲದಮರ (ಪ್ರಜಾವಾಣಿ ಕ್ಲಬ್‌ಹೌಸ್): ಕಾಲೋಚಿತ ಮತ್ತು ಕಲೋಚಿತ ಬದಲಾವಣೆಗಳನ್ನು ಆಗಾಗ ಮಾಡಿಕೊಳ್ಳುತ್ತಲೇ ಇರಬೇಕು. ಇದು ಕಲಾ ಕ್ಷೇತ್ರದ ಆಧುನಿಕತೆ. ಆಧುನಿಕತೆಯನ್ನು ಪೂರ್ಣವಾಗಿ ನಿರಾಕರಿಸಲಾಗದು...

ಹೀಗೆ ಪ್ರಜಾವಾಣಿಯ ‘ಆಲದ ಮರ’ ದಡಿಯ ರಂಗಸ್ಥಳದಲ್ಲಿ ಭಾನುವಾರ ಯಕ್ಷಗಾನ ಮತ್ತು ಆಧುನಿಕತೆಯನ್ನು ಒಂದೇ ಸಾಲಿನಲ್ಲಿ ತೆರೆದಿಟ್ಟವರು ಖ್ಯಾತ ಅರ್ಥಧಾರಿ, ವಿಮರ್ಶಕ ಡಾ.ಎಂ.ಪ್ರಭಾಕರ ಜೋಷಿ ಅವರು.

ಸಾಮಾನ್ಯವಾಗಿ ಯಕ್ಷಗಾನ ತಾಳಮದ್ದಲೆಗಳಲ್ಲಿ ಕೌರವ, ರಾವಣನಾಗಿ ಆ ಪಾತ್ರ ಸಮರ್ಥನೆಯನ್ನು ಬಲವಾಗಿ ಮಾಡುವ ಡಾ.ಜೋಷಿ ಅವರು ‘ಆಲದ ಮರ’ದ ಅಡಿ ನಿರ್ವಹಿಸಿದ್ದು ಜ್ಞಾನವೃದ್ಧ ಭೀಷ್ಮನ ಪಾತ್ರ. ಚರ್ಚೆ ಸ್ವಲ್ಪ ತಾರಕಕ್ಕೇರುತ್ತದೆ ಎನಿಸಿದಾಗ ಅವರೇ ಸಂಧಾನಕಾರ ಕೃಷ್ಣನ ಪಾತ್ರವನ್ನೂ ನಿರ್ವಹಿಸಿದರು. ಉಳಿದ ಘಟಾನುಘಟಿ ಯಕ್ಷ ತಾರೆಯರ ಮಾತುಗಳೆಲ್ಲಾ ಮಹಾಭಾರತದ ವಿವಿಧ ಪ್ರಸಂಗಗಳಲ್ಲಿ ಆಗಾಗ ಹಲವು ತರ್ಕ ಜಿಜ್ಞಾಸೆಗಳ ಕುರಿತ ಚರ್ಚೆ ನಡೆಯುತ್ತದಲ್ಲಾ... ಹಾಗೆ ಯಕ್ಷ ಲೋಕದ ವಿಚಾರ ಮಂಡಿಸಿ ಪ್ರತಿಕ್ರಿಯೆಯನ್ನೂ ಪಡೆದರು. ನೂರಾರು ಯಕ್ಷಾಭಿಮಾನಿಗಳು ‘ಕೇಳು’ ಜನಮೇಜಯರೂ ಆದರು.

ಅಂದಹಾಗೆ ಇದೇ ವೇಳೆ ಕರಾವಳಿಯಲ್ಲಿ ಜೋರು ಮಳೆ. ಆ ಮಳೆಯ ಜೊತೆ ಸೋನೆಯಂತೆ ಪಟ್ಲ ಸತೀಶ್ ಶೆಟ್ಟಿ ಅವರ ರಾಗಧಾರೆಯೂ ಸೇರಿತು. ದಿಗ್ಗಜರ ಮಾತಿಗೆ ತಾವೂ ದನಿಗೂಡಿಸಿದರು.

ಜೋಷಿ ಅವರ ಮಾತು ಮುಂದುವರಿಯಿತು.

‘ನಾವೆಲ್ಲರೂ ಆಧುನಿಕರೆ. ನೂರು ವರ್ಷಗಳ ಹಿಂದಿನ ಜನಪದ ಜೀವನವೂ ನಮ್ಮದಲ್ಲ. ಹಾಗಾಗಿ ಅಂದಿನ ಕಲಾವಿದನ ಮಟ್ಟದ ಕಾರ್ಯಕ್ಷಮತೆ ಇಂದು ನಿರೀಕ್ಷಿಸಲೂ ಅಸಾಧ್ಯ. ಯಕ್ಷಗಾನದ ಮೇಲೆ ಬೇರೆ ಮಾಧ್ಯಮಗಳ ಪರಿಣಾಮವೂ ಇದೆ. ನಮ್ಮಲ್ಲಿ ಇನ್ನೂ ಕಲೆಯ ಶಿಸ್ತು ಬಂದಿಲ್ಲ. ರಂಗಸ್ಥಳದಲ್ಲಿ ಮದುವೆ ಮಂಟಪ, ಫ್ಯಾನ್ಸಿ ಅಂಗಡಿ, ಸರ್ಕಸ್ ಕಂಪನಿಯ ಸರಕುಗಳನ್ನು ತಂದು ಅಲ್ಲಿಯ ಪರಿಕಲ್ಪನೆಗಳನ್ನು ಅಳವಡಿಸಿಕೊಂಡು ಬಿಟ್ಟಿದ್ದೇವೆ....’ ಹೀಗೆ ಮಾತು ಮುಂದುವರಿಯುತ್ತಲೇ ಇತ್ತು.



ಡಾ.ಪ್ರಭಾಕರ ಜೋಷಿ

ಮೇಳದ ಯಜಮಾನರಾಗಿ ಮಾತನಾಡಿದ ಕಿಶನ್ ಹೆಗ್ಡೆ (ಸಾಲಿಗ್ರಾಮ ಮೇಳ), ‘ಯಾವುದೇ ಪ್ರಸಂಗ ಇರಲಿ. ಯಕ್ಷಮಾತೆಗೆ ಅಪಚಾರ ಆಗದಂತೆ ಗರಿಷ್ಠ ಎಚ್ಚರ ವಹಿಸುತ್ತೇವೆ. ಸದ್ಯ ಕರಾವಳಿಯಲ್ಲಿ ಉಳಿದಿರುವ ಎರಡೇ ಡೇರೆ ಮೇಳಗಳ ಅಸ್ತಿತ್ವ ಉಳಿಸಲು ಏನಾದರೂ ಮಾಡಬೇಕಿದೆ. ಉದಾಹರಣೆಗೆ ಅರ್ಧಚಂದ್ರಾಕೃತಿಯ ರಂಗಸ್ಥಳ ವಿನ್ಯಾಸಗೊಳಿಸಿದೆವು. ಚೌಕಿಯಲ್ಲಿ ಬದಲಾವಣೆ ಮಾಡಿದೆವು. ಆಸನಗಳ ವ್ಯವಸ್ಥೆ ಬದಲಾಯಿಸಿದೆವು. ದೈವಾರಾಧನೆ ಸಂಬಂಧಿಸಿದ ಪಾತ್ರಗಳನ್ನು ಯಥಾವತ್ತಾಗಿ ಅಣಿ ಸಹಿತ) ವೇದಿಕೆಗೆ ತರಲು ನಾವು ಬಿಡುವುದಿಲ್ಲ. ಏಕೆಂದರೆ ದೈವಗಳನ್ನು ಆ ರೀತಿ ಪಾತ್ರಗಳನ್ನಾಗಿ ಬಿಂಬಿಸುವುದಿಲ್ಲ. ಅಂಥ ಪ್ರದರ್ಶನಗಳನ್ನೇ ನಿರಾಕರಿಸಿದ್ದೇವೆ’ ಎಂದರು.

ಚರ್ಚೆಗೆ ನಾಂದಿಹಾಡಿದ ಕಲಾವಿದ, ವಿಮರ್ಶಕ ರಾಘವ ನಂಬಿಯಾರ್, ‘ಆಧುನೀಕರಣ ಸುಮಾರು 50 ವರ್ಷಗಳ ಹಿಂದೆಯೇ ಆಗಿದೆ. ಡಾ.ಕೆ. ಶಿವರಾಮ ಕಾರಂತರ ಆದಿಯಾಗಿ ಎಲ್ಲರೂ ಕೂಡಾ ಆಧುನಿಕತೆಗೆ ಒಗ್ಗಿಕೊಂಡವರೇ. ಅದೆಲ್ಲಾ ಸರಿ. ಆದರೆ, ಹೊಸಬರು ಈ ಹಳೆಯ ಪರಂಪರೆಯ, ಬದಲಾವಣೆಯ ಅಧ್ಯಯನ ಮಾಡಬೇಕು’ ಎಂದು ಅಭಿಪ್ರಾಯಪಟ್ಟರು.



ರಾಮ–ಹನುಮಂತ ಪಾತ್ರದಲ್ಲಿ ಕೊಂಡದಕುಳಿ ರಾಮಚಂದ್ರ ಹೆಗಡೆ ಹಾಗೂ ತೋಟಿಮನೆ ಗಣಪತಿ ಹೆಗಡೆ (ಸಾಂದರ್ಭಿಕ ಚಿತ್ರ)

‘ವೇಷಭೂಷಣಗಳ ಭಾರ ಕೂಡಾ ಭಾವಾಭಿನಯಕ್ಕೆ ಪೂರಕ. ಆದರೆ, ಹೊಸಬರು ಹಗುರ ಎನ್ನುವ ಕಾರಣಕ್ಕೆ ಥರ್ಮಾಕೋಲ್‌ನಿಂದ ತಯಾರಾದ ರೆಡಿಮೇಡ್ ವೇಷಭೂಷಣ ಬಳಸುತ್ತಾರೆ. ಪ್ರದರ್ಶನದ ಅವಧಿ ಕಿರಿದಾಗಿಸುವುದು, ಮೇಳದ ಕಲಾವಿದರನ್ನು ಕಡಿಮೆ ಮಾಡುವುದು ಆಧುನೀಕರಣ ಅಲ್ಲವೇ ಅಲ್ಲ. ಅನಗತ್ಯ ಅಂಶಗಳನ್ನು ತೆಗೆದು ಹಾಕಿ, ಪ್ರದರ್ಶನದಲ್ಲಿ ನಿಯಂತ್ರಣ ಸಾಧಿಸುವುದೇ ಆಧುನೀಕರಣ’ ಎಂದು ವ್ಯಾಖ್ಯಾನಿಸಿದರು.

ಕೊಂಡದಕುಳಿ ರಾಮಚಂದ್ರ ಹೆಗಡೆ ಅವರು ಪ್ರತಿಕ್ರಿಯಿಸಿ, ‘ಹೊಸ ಕಲಾವಿದರೇನೋ ಓದಿಕೊಂಡಿದ್ದಾರೆ. ಆದರೆ ಆಧುನೀಕರಣಕ್ಕೆ ತೆರೆದುಕೊಳ್ಳುತ್ತಿಲ್ಲ. ವಿಮರ್ಶಕರು ಹಳೆಯದು – ಹೊಸದನ್ನು ಹೋಲಿಸುತ್ತಿದ್ದಾರೆ. ದೇಹದ ಆಕಾರ ಬೆಳವಣಿಗೆಗೆ ತಕ್ಕಂತೆ ಹೇಗೆ ಬಟ್ಟೆಬರೆ ಹಾಕಿಕೊಳ್ಳುತ್ತೇವೋ ಅದೇ ರೀತಿ ಕಾಲಕ್ಕೆ ತಕ್ಕಂತೆ ಕಲಾಕ್ಷೇತ್ರದಲ್ಲೂ ಒಳ್ಳೆಯ ಬೆಳವಣಿಗೆಗಳು ಆಗಬೇಕು’ ಎಂದರು.

ಯಜಮಾನರು– ಕಲಾವಿದರು– ಪ್ರೇಕ್ಷಕರು – ವಿಮರ್ಶಕರು ಮತ್ತು ಮಾಧ್ಯಮಗಳು ಒಟ್ಟಾಗಿ ಕಲೆತು ಕಲಾ ಕ್ಷೇತ್ರದ ಉಳಿವು ಮತ್ತು ಸುಧಾರಣೆಯ ಬಗ್ಗೆ ಸಮಗ್ರವಾಗಿ ಚರ್ಚಿಸಿ ಒಂದಷ್ಟು ಸೂತ್ರಗಳನ್ನು ರೂಪಿಸಿದರೆ ಪರಂಪರೆಯ ಉಳಿವು ಹಾಗೂ ಆಧುನಿಕ ಸ್ಪರ್ಶ ಒಟ್ಟಾಗಿಯೇ ಮಾಡಬಹುದು ಎಂದು ಒಮ್ಮತದ ಅಭಿಪ್ರಾಯದೊಂದಿಗೆ ಚರ್ಚೆಗೆ ತೆರೆ ಬಿತ್ತು.

ತಿರುವನಂತಪುರ– ಬೆಂಗಳೂರು ಬಸ್ ಸೇವೆ ಆರಂಭ



ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇರಳ ರಾಜ್ಯ ಸಾರಿಗೆ ಸಂಸ್ಥೆ ತಿರುವನಂತಪುರ–ಬೆಂಗಳೂರು ನಡುವೆ ಭಾನುವಾರದಿಂದ ಬಸ್ ಸೇವೆಯನ್ನು ಆರಂಭಿಸಿದೆ.

ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿದ್ದ ಕಾರಣ ಏಪ್ರಿಲ್ 9ರಿಂದ ಉಭಯ ರಾಜ್ಯಗಳ ನಡುವೆ ಬಸ್‌ಗಳ ಸಂಚಾರವನ್ನು ಸ್ಥಗಿತಗೊಳಿಸಲಾಗಿತ್ತು.

www.online.keralartc.com ಮೂಲಕ ಟಿಕೆಟ್‌ಗಳನ್ನು ಮುಂಗಡ ಕಾಯ್ದಿರಬಹುದು ಎಂದು ಸಾರಿಗೆ ಸಂಸ್ಥೆ ತಿಳಿಸಿದೆ.

ನಟ ದರ್ಶನ್ ಹೆಸರಲ್ಲಿ ವಂಚನೆ ಆರೋಪ; ದೂರು ದಾಖಲು

ಪ್ರಜಾವಾಣಿ ವಾರ್ತೆ

ಮೈಸೂರು: ನಟ ದರ್ಶನ್ ಅವರ ಹೆಸರನ್ನು ದುರ್ಬಳಕೆಮಾಡಿಕೊಂಡು ನಗರದ ಹರ್ಷ ಮೆಲಂತಾ ಎಂಬುವವರಿಗೆ ₹ 25 ಲಕ್ಷ ಹಣಕ್ಕಾಗಿ ಬ್ಲಾಕ್‌ಮೇಲ್ ಮಾಡಿದ ಸಂಬಂಧ ಅರುಣ ಕುಮಾರಿ ಎಂಬುವರ ವಿರುದ್ಧ ಹೆಬ್ಬಾಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈ ಸಂಬಂಧ ಭಾನುವಾರ ದರ್ಶನ್ ಹಾಗೂ ನಿರ್ಮಾಪಕ ಉಮಾಪತಿ ಇಲ್ಲಿನ ಎನ್.ಆರ್.ವಿಭಾಗದ ಎಸಿಪಿ ಕಚೇರಿಗೆ ಹಾಜರಾಗಿದ್ದರು.

ಏನಿದು ಪ್ರಕರಣ?: ನಗರದ ಹೆಬ್ಬಾಳದಲ್ಲಿ ‘ಮೈಸೂರು ಯೂನಿಯನ್’ ಕ್ಲಬ್ ನಡೆಸುತ್ತಿರುವ ಹರ್ಷ ಅವರನ್ನು ಜೂನ್ 16ರಂದು ಆರೋಪಿ ಅರುಣಕುಮಾರಿ ಭೇಟಿಯಾಗುತ್ತಾರೆ.

ಬ್ಯಾಂಕ್‌ನ ವ್ಯವಸ್ಥಾಪಕಿ ಎಂದು ಪರಿಚಯಿಸಿಕೊಂಡು, ‘ಬೆಂಗಳೂರಿನ ಸೌತ್‌ಎಂಡ್ ವೃತ್ತದಲ್ಲಿರುವ ಕೆನರಾ ಬ್ಯಾಂಕಿನಲ್ಲಿ ₹ 25 ಕೋಟಿ ಸಾಲಕ್ಕೆ ತಾವು ಅರ್ಜಿ ಸಲ್ಲಿಸಿದ್ದೀರಿ. ಅದರಲ್ಲಿ ನಟ ದರ್ಶನ್ ಅವರ ಆಸ್ತಿಯ ನಕಲಿ ದಾಖಲೆ ಒದಗಿಸಿದ್ದೀರಿ. ಅವರ ಸಹಿ ನಕಲು ಮಾಡಿರುತ್ತೀರಿ’ ಎನ್ನುತ್ತಾರೆ. ಇದನ್ನು ಬಹಿರಂಗಪಡಿಸಬಾರದು ಎಂದರೆ ₹ 25 ಲಕ್ಷ ನೀಡಬೇಕು ಎನ್ನುತ್ತಾರೆ. ಮಹಿಳೆ ನಕಲಿ ಅಧಿಕಾರಿ ಎಂಬುದು ಗೊತ್ತಾಗುತ್ತಿದ್ದಂತೆ, ಜುಲೈ 3ರಂದು ಹರ್ಷ ದೂರು ದಾಖಲಿಸುತ್ತಾರೆ.



ದರ್ಶನ್

ನಿರ್ಮಾಪಕ ಉಮಾಪತಿ ಅವರಿಗೂ ಇದೇ ಮಹಿಳೆ ಕರೆ ಮಾಡಿದ್ದು ಅನುಮಾನಗೊಂಡ ಉಮಾಪತಿ, ಬೆಂಗಳೂರಿನ ಜಯನಗರ ಪೊಲೀಸ್ ಠಾಣೆಗೆ ಜೂನ್ 17ರಂದು ದೂರು ನೀಡಿದ್ದರು.

ತಲೆ ತೆಗೆಯುತ್ತೇನೆ– ದರ್ಶನ್ ಗುಡುಗು: ಭಾನುವಾರ ಇಲ್ಲಿನ ನರಸಿಂಹರಾಜ ಉಪವಿಭಾಗದ ಎಸಿಪಿ ಕಚೇರಿಗೆ ಬಂದ ದರ್ಶನ್ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ‘ಯಾರೇ ನನ್ನ ಹೆಸರನ್ನು ದುರುಪಯೋಗಪಡಿಸಿಕೊಂಡರೂ, ಅವರ ರೆಕ್ಕೆಯನ್ನಲ್ಲ; ತಲೆಯನ್ನೇ ತೆಗೆಯುತ್ತೇನೆ’ ಎಂದು ಗುಡುಗಿದರು.

‘ನನಗೆ ಯಾರೂ ಬ್ಲಾಕ್‌ಮೇಲ್ ಮಾಡಿಲ್ಲ. ನನ್ನ ಮೇಲೆ ಗೂಬೆ ಕೂರಿಸುವ ಯತ್ನ ನಡೆದಿದೆ. ತನಿಖೆ ಪೂರ್ಣಗೊಂಡ ಬಳಿಕ ವಿವರ ನೀಡುತ್ತೇನೆ’ ಎಂದರು.

‘ಯಾರನ್ನೂ ವಶಕ್ಕೆ ಪಡೆದಿಲ್ಲ, ವಿಚಾರಣೆಗೂ ಕರೆದಿಲ್ಲ’ ಎಂದು ಡಿಸಿಪಿ ಪ್ರದೀಪ್ ಗುಂಟಿ ಪ್ರತಿಕ್ರಿಯಿಸಿದ್ದಾರೆ.

ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಅಧ್ಯಕ್ಷತೆ

ಯೋಜನೆ ಸ್ಥಗಿತಗೊಳಿಸಲು ರಾಜ್ಯ ಸರ್ಕಾರ ಕೈಗೊಂಡಿರುವ ಪ್ರಯತ್ನಗಳನ್ನು ಸ್ಟಾಲಿನ್ ಅವರು ಸಭೆಯಲ್ಲಿ ವಿವರಿಸಲಿದ್ದಾರೆ.

ಮೇಕೆದಾಟು ಯೋಜನೆ: ಇಂದು ಸರ್ವಪಕ್ಷಗಳ ಸಭೆ

ಚೆನ್ನೈ: ಮೇಕೆದಾಟು ಯೋಜನೆ ಕುರಿತು ಮುಂದಿನ ಕಾರ್ಯತಂತ್ರ ರೂಪಿಸುವ ಕುರಿತು ಚರ್ಚಿಸಲು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅಧ್ಯಕ್ಷತೆಯಲ್ಲಿ ಸೋಮವಾರ ಸರ್ವಪಕ್ಷಗಳ ಸಭೆ ನಡೆಯಲಿದೆ.

ಈ ಯೋಜನೆಯನ್ನು ಮುಂದುವರಿಸಲು ಬದ್ಧವಾಗಿರುವುದಾಗಿ ಕರ್ನಾಟಕ ಘೋಷಿಸಿರುವುದರಿಂದ ಎಲ್ಲ ರಾಜಕೀಯ ಪಕ್ಷಗಳ ಅಭಿಪ್ರಾಯ ಪಡೆಯಲು ಈ ಸಭೆ ಕರೆಯಲಾಗಿದೆ. ಜತೆಗೆ, ಕರ್ನಾಟಕದ ನಿರ್ಧಾರವನ್ನು ಖಂಡಿಸಿ ನಿರ್ಣಯವನ್ನು ಕೈಗೊಳ್ಳುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.



ತಮಿಳುನಾಡಿನ ಅನುಮತಿ ಇಲ್ಲದೆಯೇ ಮೇಕೆದಾಟು ಅಣೆಕಟ್ಟು ನಿರ್ಮಿಸಲು ಕರ್ನಾಟಕಕ್ಕೆ ಅವಕಾಶ ಕಲ್ಪಿಸಬಾರದು. ಈ ಬಗ್ಗೆ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ರಾಜಕೀಯ ಪಕ್ಷಗಳು ಒತ್ತಾಯಿಸುವ ಸಾಧ್ಯತೆ ಇದೆ. ಜತೆಗೆ, ಈ ವಿಷಯದ ಬಗ್ಗೆ ಪ್ರಧಾನಿ ಅವರ ಬಳಿ ಸರ್ವಪಕ್ಷಗಳ ನಿಯೋಗವನ್ನು ಕೊಂಡೊಯ್ಯಬೇಕು ಎಂದು ಎಐಎಡಿಎಂಕೆ ಒತ್ತಾಯಿಸಲಿದೆ.

ತಮಿಳುನಾಡು ಸರ್ಕಾರದ ಜಲಸಂಪನ್ಮೂಲ ಸಚಿವ ದುರೈ ಮುರುಗನ್ ಅವರು ಕೇಂದ್ರದ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರನ್ನು ಇತ್ತೀಚೆಗೆ ದೆಹಲಿಯಲ್ಲಿ ಭೇಟಿಯಾಗಿ, ಮೇಕೆದಾಟು ಯೋಜನೆಯನ್ನು ಸ್ಥಗಿತಗೊಳಿಸುವಂತೆ ಕೇಂದ್ರ ಸರ್ಕಾರವು ಕರ್ನಾಟಕಕ್ಕೆ ನಿರ್ದೇಶನ ನೀಡಬೇಕು ಎಂದು ಒತ್ತಾಯಿಸಿದ್ದರು. ಈ ಭೇಟಿಯ ಬಳಿಕ ಸರ್ವಪಕ್ಷಗಳ ಸಭೆಯನ್ನು ಕರೆಯಲಾಗಿದೆ.

ಕಾಂಗ್ರೆಸ್‌ನ ಆಂತರಿಕ ಭಿನ್ನಾಭಿಪ್ರಾಯಗಳಿಗೆ ತೆರೆ ಎಳೆಯುವ ಉದ್ದೇಶ

ರಾಜ್ಯಕ್ಕೆ ಸುರ್ಜೇವಾಲಾ ಶೀಘ್ರ ಭೇಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂದಿನ ಮುಖ್ಯಮಂತ್ರಿ ಅಭ್ಯರ್ಥಿ ಯಾರು ಎಂಬ ವಿಷಯವಾಗಿ ಕಾಂಗ್ರೆಸ್‌ನ ಕರ್ನಾಟಕ ಘಟಕದಲ್ಲಿ ಸೃಷ್ಟಿಯಾಗಿರುವ ಆಂತರಿಕ ಕಚ್ಚಾಟಕ್ಕೆ ಅಂತ್ಯ ಹಾಡಲು, ಉಸ್ತುವಾರಿಯಾದ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್‌ಸಿಂಗ್ ಸುರ್ಜೇವಾಲಾ ಅವರು ಶೀಘ್ರವೇ ಆ ರಾಜ್ಯಕ್ಕೆ ಭೇಟಿ ನೀಡಲಿದ್ದಾರೆ.

‘ಸುರ್ಜೇವಾಲಾ ಅವರು ಕರ್ನಾಟಕಕ್ಕೆ ಭೇಟಿ ನೀಡುವ ದಿನಾಂಕ ಇನ್ನೂ ಅಂತಿಮವಾಗಿಲ್ಲ. ರಾಜ್ಯ ಪ್ರವಾಸದ ವಿವರಗಳನ್ನು ಶೀಘ್ರವೇ ತಿಳಿಸುವುದಾಗಿ ಅವರು ಮಾಹಿತಿ ನೀಡಿದ್ದಾರೆ’ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.



ರಣದೀಪ್‌ಸಿಂಗ್ ಸುರ್ಜೇವಾಲಾ

‘ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಿಂದುಳಿದ ವರ್ಗಗಳ ರ್‍ಯಾಲಿ ಆಯೋಜಿಸಲು ಸಿದ್ಧತೆ ನಡೆಸುತ್ತಿದ್ದಾರೆ. ಆ ಮೂಲಕ ಅವರು ತಮ್ಮ ಶಕ್ತಿ ಪ್ರದರ್ಶನಕ್ಕೆ ಮುಂದಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಆದಷ್ಟು ಶೀಘ್ರವೇ ರಾಜ್ಯಕ್ಕೆ ಭೇಟಿ ನೀಡಿ, ಆಂತರಿಕ ಕಚ್ಚಾಟವನ್ನು ಬಗೆಹರಿಸಬೇಕು ಎಂಬುದಾಗಿ ರಾಜ್ಯದ ಕೆಲವು ಮುಖಂಡರು ಸುರ್ಜೇವಾಲಾ ಅವರಿಗೆ ಮನವಿ ಮಾಡಿದ್ದಾರೆ’ ಎಂದು ಇವೇ ಮೂಲಗಳು ತಿಳಿಸಿವೆ.

ಮುಂದಿನ ಮುಖ್ಯಮಂತ್ರಿ ಅಭ್ಯರ್ಥಿ ಕುರಿತು ಯಾರೂ ಚರ್ಚಿಸಬಾರದು ಎಂದು ಕಾಂಗ್ರೆಸ್ ಹೈಕಮಾಂಡ್ ಕಟ್ಟುನಿಟ್ಟಿನ ಸೂಚನೆ ನೀಡಿದೆ. ಆದರೂ, ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಬೆಂಬಲಿಗರು ತಮ್ಮ ನಾಯಕರ ಪರವಾಗಿಯೇ ಬಹಿರಂಗ ಹೇಳಿಕೆಗಳನ್ನು ನೀಡುವುದನ್ನು ನಿಲ್ಲಿಸಿಲ್ಲ. ಈ ಹಿನ್ನೆಲೆಯಲ್ಲಿ ಸುರ್ಜೇವಾಲಾ ಅವರ ಭೇಟಿಗೆ ಮಹತ್ವದ ಬಂದಿದೆ.

ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ, ಬಿಬಿಎಂಪಿ ಚುನಾವಣೆಗಳು ಸಮೀಪಿಸುತ್ತಿವೆ. ಈ ಹಿನ್ನೆಲೆಯಲ್ಲಿ ರಾಜ್ಯ ಘಟಕವನ್ನು ಪುನರ್ ರಚಿಸಬೇಕು ಎಂಬುದು ಹಿರಿಯ ನಾಯಕರ ಬೇಡಿಕೆಯಾಗಿದೆ. ಈ ಸಂಬಂಧ ಅವರು ಮುಖಂಡರೊಂದಿಗೆ ಚರ್ಚಿಸುವ ಸಾಧ್ಯತೆಗಳು ಇವೆ ಎನ್ನಲಾಗಿದೆ.

ಪಕ್ಷದಲ್ಲಿ ಹಳಬರು ಹಾಗೂ ಹೊಸಬರು ಎಂಬ ಕಂದಕ ಸೃಷ್ಟಿಯಾಗಿರುವುದು ಸಹ ಹೈಕಮಾಂಡ್‌ನ ತಲೆನೋವನ್ನು ಹೆಚ್ಚಿಸಿದೆ ಎಂದು ಮೂಲಗಳು ಹೇಳಿವೆ.



ರಥೋತ್ಸವಕ್ಕೆ ಸಿದ್ಧತೆ

ಪುರಿ ಜಗನ್ನಾಥ ರಥಯಾತ್ರೆ ಹಿನ್ನೆಲೆಯಲ್ಲಿ ಅಲಂಕೃತಗೊಂಡ ರಥವನ್ನು ಭಕ್ತರು ಭಾನುವಾರ ದೇವಸ್ಥಾನದ ಮುಂಭಾಗಕ್ಕೆ ಎಳೆದು ತಂದರು –ಪಿಟಿಐ ಚಿತ್ರ

‘ಸಿಬಿಎಸ್‌ಇ: ಶುಲ್ಕ ನಿಗದಿ ಅಧಿಕಾರ ರಾಜ್ಯ ಸರ್ಕಾರದ್ದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿ (ಸಿಬಿಎಸ್‌ಇ) ಜೊತೆ ಸಂಯೋಜನೆಗೊಂಡಿರುವ ಶಾಲೆಗಳಲ್ಲಿ ಶುಲ್ಕ ನಿಗದಿಪಡಿಸುವ ಅಧಿಕಾರವನ್ನು ರಾಜ್ಯ ಸರ್ಕಾರ ಹೊಂದಿದೆ ಎಂದು ಮಂಡಳಿ ಸ್ಪಷ್ಟಪಡಿಸಿದೆ.

ರಾಜ್ಯದಲ್ಲಿರುವ ಸಿಬಿಎಸ್‌ಇ ಶಾಲೆಗಳಲ್ಲಿನ ಶುಲ್ಕ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಸ್ಪಷ್ಟನೆ ಕೇಳಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಮಾರ್ಚ್ 12ರಂದು ಮಂಡಳಿಗೆ ಪತ್ರ ಬರೆದಿದ್ದರು. ಆ ಪತ್ರಕ್ಕೆ ಇದೇ 9ರಂದು ಪ್ರತಿಕ್ರಿಯಿಸಿರುವ ಮಂಡಳಿಯ ಜಂಟಿ ಕಾರ್ಯದರ್ಶಿ, ‘ಶುಲ್ಕ ಎಷ್ಟಿರಬೇಕೆಂದು ನಿರ್ಣಯಿಸುವ ಅಧಿಕಾರ ರಾಜ್ಯ ಸರ್ಕಾರಗಳದ್ದು’ ಎಂದಿದ್ದಾರೆ.

ಈ ಬಗ್ಗೆ ಸಿಬಿಎಸ್‌ಇ ಸಂಯೋಜಿತ ಶಾಲೆಗಳ ಬೈಲಾ –2018ರಲ್ಲಿರುವ ನಿಯಮವನ್ನು ಪತ್ರದಲ್ಲಿ ಉಲ್ಲೇಖಿಸಿರುವ ಅವರು, ‘ನಿಯಮ 7.3ರ ಪ್ರಕಾರ ರಾಜ್ಯ ಸರ್ಕಾರಗಳ ಶಿಕ್ಷಣ ಇಲಾಖೆಗಳು ಸೂಚಿಸಿರುವ ಮುಖ್ಯಸ್ಥರು ಶುಲ್ಕ ನಿಗದಿಪಡಿಸಬಹುದು. ನಿಯಮ 7.8ರ ಪ್ರಕಾರ, ರಾಜ್ಯಗಳಲ್ಲಿರುವ ಶಾಲೆಗಳ ಕೆಟಗರಿಗಳಿಗೆ ಅನುಗುಣವಾಗಿ ಶುಲ್ಕ ನಿಗದಿಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೂಪಿಸುವ ಕಾಯ್ದೆಗಳು ಮತ್ತು ನಿಯಂತ್ರಣಗಳು, ಸಿಬಿಎಸ್‌ಇ ಮಂಡಳಿಯ ಜೊತೆ ಸಂಯೋಜಿತ ಶಾಲೆಗಳಿಗೂ ಅನ್ವಯವಾಗಲಿದೆ’ ಎಂದು ಸ್ಪಷ್ಟಪಡಿಸಿದ್ದಾರೆ.

ಆದರೆ, ರಾಜ್ಯ ಸರ್ಕಾರ ನಿಗದಿಪಡಿಸಿದ ಶುಲ್ಕವನ್ನು ಒಪ್ಪಲು ಸಿಬಿಎಸ್‌ಇ ಪಠ್ಯ ಕ್ರಮ ಬೋಧಿಸುವ ಶಾಲಾ ಆಡಳಿತ ಮಂಡಳಿಗಳು ತಯಾರಿಲ್ಲ. ‘ಸಿಬಿಎಸ್‌ಇ ಪಠ್ಯಕ್ರಮ ಬೋಧಿಸುವ ಶಾಲೆಗಳು ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವುದಿಲ್ಲ. ಹೀಗಾಗಿ, ಶುಲ್ಕ ನಿಗದಿಪಡಿಸುವ ಅಧಿಕಾರ ರಾಜ್ಯ ಸರ್ಕಾರಗಳಿಗೆ ಇಲ್ಲ’ ಎಂದೂ ಹೇಳುತ್ತಿವೆ.

ಕೋವಿಡ್ ಕಾರಣದಿಂದ ಶಾಲೆಗಳು ಮುಚ್ಚಿದ್ದು, ಖಾಸಗಿ ಶಾಲಾ ಆಡಳಿತ ಮಂಡಳಿಗಳು ಪೂರ್ಣ ಶುಲ್ಕ ಪಡೆಯುವ ಬಗ್ಗೆ ಪೋಷಕರು ಆಕ್ಷೇಪ ವ್ಯಕ್ತಪಡಿಸಿದ್ದರು. ಶುಲ್ಕದ ವಿಚಾರದಲ್ಲಿ ಉಂಟಾಗಿದ್ದ ಗೊಂದಲ ಪರಿಹರಿಸಲು 2021 ಜ. 29ರಂದು ಸುತ್ತೋಲೆ ಹೊರಡಿಸಿದ್ದ ರಾಜ್ಯ ಸರ್ಕಾರ, 2020–21ನೇ ಸಾಲಿಗೆ ಮಾತ್ರ ಅನ್ವಯಿಸುವಂತೆ ಶೇ 70 ರಷ್ಟು ಬೋಧನಾ ಶುಲ್ಕ ಮಾತ್ರ ಪಡೆಯಬೇಕು ಎಂದು ಆದೇಶಿಸಿತ್ತು. ಸರ್ಕಾರದ ಈ ಆದೇಶವನ್ನು ಪ್ರಶ್ನಿಸಿ ಖಾಸಗಿ ಶಾಲಾ ಆಡಳಿತ ಮಂಡಳಿಗಳು ಹೈಕೋರ್ಟ್ ಮೆಟ್ಟಿಲೇರಿದ್ದು, ಪ್ರಕರಣ ವಿಚಾರಣೆಯ ಹಂತದಲ್ಲಿದೆ.

ಈ ಮಧ್ಯೆ, ಶುಲ್ಕದ ಗೊಂದಲ ಪರಿಹರಿಸಲು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಸಮಿತಿ ರಚಿಸುವ ಪ್ರಸ್ತಾಪವನ್ನು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಸಲ್ಲಿಸಿದೆ. ಶುಲ್ಕದಲ್ಲಿ ಶೇ 30 ರಷ್ಟು ಕಡಿತ ಮಾಡಿದ್ದ ಸರ್ಕಾರದ ಆದೇಶ ಪ್ರಶ್ನಿಸಿ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಪ್ರತಿಕ್ರಿಯೆಯಾಗಿ ಮಧ್ಯಂತರ ಅರ್ಜಿಯನ್ನು (ಐ.ಎ) ಸರ್ಕಾರ ಸಲ್ಲಿಸಿದೆ.

ಕೋವಿಡ್: ಸ್ವಯಂಸೇವಕರಿಗೆ ತರಬೇತಿ– ಆರ್‌ಎಸ್‌ಎಸ್ ನಿರ್ಧಾರ

ನವದೆಹಲಿ: ದೇಶದಲ್ಲಿ ಕೋವಿಡ್–19ನ 3ನೇ ಅಲೆ ಕಾಣಿಸಿಕೊಳ್ಳುವ ಸಂಭವ ಇರುವುದರಿಂದ, ಪರಿಹಾರ ಕಾರ್ಯದಲ್ಲಿ ನೆರವಾಗಲು ಸ್ವಯಂ ಸೇವಕರಿಗೆ ತರಬೇತಿ ನೀಡಲು ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ನಿರ್ಧರಿಸಿದೆ.

ಮಧ್ಯಪ್ರದೇಶದ ಚಿತ್ರಕೂಟದಲ್ಲಿ ನಡೆಯುತ್ತಿರುವ ಸಂಘಟನೆಯ ಅಖಿಲ ಭಾರತೀಯ ಪ್ರಾಂತ್ಯ ಪ್ರಚಾರಕರ ಸಮಾವೇಶದಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ.

ಆಸ್ಟ್ರೇಲಿಯಾ: ಕೋವಿಡ್‌ಗೆ ವರ್ಷದ ಮೊದಲ ಬಲಿ

ಸಿಡ್ನಿ (ಎಎಫ್‌ಪಿ): ಆಸ್ಟ್ರೇಲಿಯಾದಲ್ಲಿ 90 ವರ್ಷದ ವೃದ್ಧೆಯೊಬ್ಬರು ಕೋವಿಡ್‌ನಿಂದಾಗಿ ಶನಿವಾರ ಮೃತಪಟ್ಟಿದ್ದಾರೆ. ಇದು ಈ ವರ್ಷ ಸೋಂಕಿನಿಂದಾಗಿ ಸಂಭವಿಸಿದ ಮೊದಲ ಸಾವು.

ಸಿಡ್ನಿಯಲ್ಲಿ ಡೆಲ್ಟಾ ರೂಪಾಂತರ ತಳಿಯು ವೇಗವಾಗಿ ಹರಡುತ್ತಿದೆ. ಈ ನಡುವೆ ಮಹಿಳೆಯೊಬ್ಬರು ಸೋಂಕು ದೃಢಗೊಂಡ ಕೆಲವು ಗಂಟೆಗಳ ಬಳಿಕ ಸಾವಿಗೀಡಾಗಿದ್ದಾರೆ.

‘ನಗರದಲ್ಲಿ 77 ಹೊಸ ಪ್ರಕರಣಗಳು ವರದಿಯಾಗಿವೆ. ಸೋಮವಾರದ ವೇಳೆಗೆ ಈ ಸಂಖ್ಯೆಯು 100ಕ್ಕೆ ಏರಿಕೆಯಾಗುವ ಸಾಧ್ಯತೆಗಳಿವೆ’ ಎಂದು ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

ಸಿಡ್ನಿಯಲ್ಲಿ ಮೂರನೇ ವಾರವೂ ಲಾಕ್‌ಡೌನ್ ಮುಂದುವರಿದಿದೆ. ಆದರೂ ಹೊಸ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆಯಾಗಿದೆ. ಲಸಿಕೆ ಪಡೆಯದ ಜನರಲ್ಲಿ ಸೋಂಕು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ.

2 ಸಾವಿರದ ಗಡಿಯೊಳಗೆ ಹೊಸ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 1,978 ಮಂದಿ ಕೋವಿಡ್ ಪೀಡಿತರಾಗಿರುವುದು ಭಾನುವಾರ ದೃಢಪಟ್ಟಿದೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 28.71 ಲಕ್ಷ ದಾಟಿದೆ.

ಒಂದು ದಿನದ ಅವಧಿಯಲ್ಲಿ 1.58 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದ್ದು, ಸೋಂಕು ದೃಢ ಪ್ರಮಾಣವು ಶೇ 1.24ಕ್ಕೆ ಇಳಿಕೆ ಕಂಡಿದೆ. ಬೆಂಗಳೂರಿನಲ್ಲಿ 433, ಮೈಸೂರಿನಲ್ಲಿ 261, ದಕ್ಷಿಣ ಕನ್ನಡದಲ್ಲಿ 195, ಹಾಸನದಲ್ಲಿ 132, ಶಿವಮೊಗ್ಗದಲ್ಲಿ 124, ಬೆಳಗಾವಿಯಲ್ಲಿ 112 ಹಾಗೂ ತುಮಕೂರಿನಲ್ಲಿ 100 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ವರದಿಯಾಗಿವೆ. 14 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ ಹಾಗೂ 8 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ.

ಸೋಂಕಿತರಲ್ಲಿ 2,326 ಮಂದಿಗೆ ಕಾಯಿಲೆ ವಾಸಿಯಾಗಿದೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 27.98 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆಯಾಗಿದ್ದು, 36,737 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.



ಕೊರೊನಾ ಸೋಂಕಿತರಲ್ಲಿ 56 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ರಾಜ್ಯದ 20 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ 8, ದಕ್ಷಿಣ ಕನ್ನಡದಲ್ಲಿ 7, ಬೆಳಗಾವಿಯಲ್ಲಿ 6, ಹಾಸನ ಹಾಗೂ ಕೋಲಾರದಲ್ಲಿ ತಲಾ 5 ಮಂದಿ ಸಾವಿಗೀಡಾಗಿರುವುದು ದೃಢಪಟ್ಟಿದೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 5ಕ್ಕಿಂತ ಕಡಿಮೆಯಿದೆ. ಮರಣ ಪ್ರಮಾಣ ದರವು ಶೇ 2.83ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 35,835ಕ್ಕೆ ತಲುಪಿದೆ.

ಕೇರಳ: ಹೆಚ್ಚುತ್ತಿರುವ ಕೋವಿಡ್, ತಲೆನೋವಾಗಿರುವ ಝಿಕಾ

ತಿರುವನಂತಪುರ (ಪಿಟಿಐ): ಕೇರಳದಲ್ಲಿ ಇತ್ತೀಚೆಗೆ ಕೋವಿಡ್ ಮತ್ತು ಝಿಕಾ ವೈರಸ್ ಪ್ರಕರಣಗಳು ಹೆಚ್ಚುತ್ತಿರುವುದು ಆತಂಕ ಮೂಡಿಸಿದೆ.

ಕೇರಳದಲ್ಲಿ ಮತ್ತೆ ಮೂವರು ವ್ಯಕ್ತಿಗಳಲ್ಲಿ ಝಿಕಾ ವೈರಸ್ ಪತ್ತೆಯಾಗಿದೆ. ಇದರಿಂದಾಗಿ ಈ ವೈರಸ್‌ಗೆ ಸೋಂಕಿತರಾದವರ ಸಂಖ್ಯೆ 18ಕ್ಕೆ ಏರಿದೆ.

ಭಾನುವಾರ ಸೋಂಕಿತರಾದವರಲ್ಲಿ ಎರಡು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಗುವೂ ಸೇರಿದೆ. ಎಲ್ಲ ಸೋಂಕಿತರ ಆರೋಗ್ಯ ಪರಿಸ್ಥಿತಿ ಸ್ಥಿರವಾಗಿದೆ ಎಂದು ಆರೋಗ್ಯ ಇಲಾಖೆಯ ಮೂಲಗಳು ತಿಳಿಸಿವೆ.

ಝಿಕಾ ವೈರಸ್‌ನಿಂದ ಉಂಟಾದ ಪರಿಸ್ಥಿತಿ ಬಗ್ಗೆ ತಿಳಿದುಕೊಳ್ಳಲು ಕೇಂದ್ರ ಸರ್ಕಾರದ ತಂಡ ಕೇರಳಕ್ಕೆ ಭೇಟಿ ನೀಡಿದೆ.

ಅಸ್ಸಾಂ: ವಿಧವೆಯರಿಗೆ ಆರ್ಥಿಕ ನೆರವು

ಪ್ರಜಾವಾಣಿ ವಾರ್ತೆ

ಗುವಾಹಟಿ: ಅಸ್ಸಾಮಿನಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗದಿಂದಾಗಿ ಸುಮಾರು ಎರಡು ಸಾವಿರ ಮಹಿಳೆಯರು ವಿಧವೆಯರಾಗಿದ್ದು, ಈ ಮಹಿಳೆಯರ ಆರ್ಥಿಕ ಸಹಾಯಕ್ಕಾಗಿ ಅಲ್ಲಿನ ಸರ್ಕಾರ ಹೊಸ ಯೋಜನೆಯೊಂದನ್ನು ಅನುಷ್ಠಾನಗೊಳಿಸಿದೆ.

ವಿಧವೆಯರಿಗೆ ಆರ್ಥಿಕ ಸಹಾಯದ ಯೋಜನೆಯನ್ನು ಉದ್ಘಾಟಿಸಿ, ಅರ್ಹರಿಗೆ ₹ 2.5 ಲಕ್ಷ ಮೊತ್ತದ ಚೆಕ್ ಹಸ್ತಾಂತರಿಸಿ ಮಾತನಾಡಿದ ಅಸ್ಸಾಂ ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಶರ್ಮ, ಕುಟುಂಬದ ವಾರ್ಷಿಕ ಆದಾಯ ₹ 5 ಲಕ್ಷಕ್ಕಿಂತ ಕಡಿಮೆ ಇದ್ದವರು ಈ ಯೋಜನೆಗೆ ಅರ್ಹರು ಎಂದು ತಿಳಿಸಿದರು.

ವಿಧವೆಯರಿಗೆ ಆರ್ಥಿಕ ಬೆಂಬಲ ಯೋಜನೆಯಡಿ ಇದುವರೆಗೆ 883 ಮಹಿಳೆಯರನ್ನು ಗುರುತಿಸಲಾಗಿದ್ದು, ಈ ಪೈಕಿ 176 ವಿಧವೆಯರಿಗೆ ಗುವಾಹಟಿಯಲ್ಲಿ ಚೆಕ್ ಹಸ್ತಾಂತರಿಸಲಾಯಿತು.

ಎಂಎಸ್‌ಪಿ ಅಕ್ಕಿ ಸಾಗಣೆಯಲ್ಲಿ ಅಕ್ರಮ?

ಒಂದನೇ ಪುಟದಿಂದ...

ತನಿಖೆ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ರಾಮೇಶ್ವರಪ್ಪ, ‘ಭತ್ತದ ಖರೀದಿ, ಹಲ್ಲಿಂಗ್‌ಗೆ ಸಾಗಿಸಿರುವುದು ಮತ್ತು ಅಕ್ಕಿ ಸಾಗಣೆಗೆ ಸಂಬಂಧಿಸಿದ ಸಮಗ್ರ ಮಾಹಿತಿಯುಳ್ಳ ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸಲಾಗಿದೆ. ದಾಖಲೆಗಳನ್ನು ಪೂರ್ಣ ಪ್ರಮಾಣದಲ್ಲಿ ಸಂಗ್ರಹಿಸಿ, ಪರಿಶೀಲಿಸಿದ ಬಳಿಕ ಅಕ್ಕಿ ಸಾಗಣೆಯಲ್ಲಿ ಅಕ್ರಮ ನಡೆದಿದೆಯೇ ಎಂಬುದು ಖಚಿತವಾಗಲಿದೆ’ ಎಂದರು.

ಮಂಡ್ಯದಿಂದ ಅಕ್ಕಿ ಸಾಗಿಸುವ ಮೊದಲು ಗುಣಮಟ್ಟ ಪರೀಕ್ಷೆ ನಡೆಸಿರಲಿಲ್ಲ ಹಾಗೂ ಕಂಪ್ಯೂಟರೀಕೃತ ತೂಕದ ರಸೀದಿಗಳನ್ನು ಪಡೆದಿಲ್ಲ ಎಂಬುದನ್ನು ಆಹಾರ ನಿಗಮದ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ಗೋದಾಮುಗಳ ವ್ಯವಸ್ಥಾಪಕರು ಒಪ್ಪಿಕೊಳ್ಳುತ್ತಾರೆ. ‘ಗೋದಾಮುಗಳಿಗೆ ತಂದ ಬಳಿಕವೇ ಗುಣಮಟ್ಟ ಪರೀಕ್ಷಿಸಲಾಗಿದೆ. ಕಂಪ್ಯೂಟರೀಕೃತ ವೇ ಬ್ರಿಡ್ಜ್‌ಗಳು ಅಕ್ಕಿ ಗಿರಣಿಗಳು ಮತ್ತು ಗೋದಾಮುಗಳ ಸಮೀಪದಲ್ಲಿ ಇಲ್ಲ. ಹೀಗಾಗಿ ಟ್ರಕ್ ಶೀಟ್ ಆಧಾರದಲ್ಲೇ ಅಕ್ಕಿಯನ್ನು ಗೋದಾಮುಗಳಿಗೆ ತುಂಬಿಸಲಾಗಿತ್ತು’ ಎಂದು ಹಲವು ಅಧಿಕಾರಿಗಳು ಸಮರ್ಥಿಸಿಕೊಳ್ಳುತ್ತಾರೆ.

ಕಾಳಸಂತೆ ಪಾಲು

‘ಕೆಲವು ಗೋದಾಮುಗಳ ಅಧಿಕಾರಿಗಳು ತಮಗೆ ಹಂಚಿಕೆಯಾಗಿದ್ದ ಪೂರ್ಣ ಪ್ರಮಾಣದ ಅಕ್ಕಿಯನ್ನು ಗಿರಣಿಗಳಿಂದ ಎತ್ತುವಳಿ ಮಾಡಿಲ್ಲ ಎಂಬ ಆರೋಪವಿದೆ. ಇನ್ನು ಕೆಲವು ಗೋದಾಮುಗಳಿಗೆ ಸಾಗಿಸಬೇಕಿದ್ದ ಅಕ್ಕಿಯನ್ನು ಕಾಳಸಂತೆಗೆ ಕೊಂಡೊಯ್ದಿರುವ ಅನುಮಾನವೂ ಇದೆ. ಈ ಎಲ್ಲದರ ಕುರಿತೂ ತನಿಖೆಗೆ ಸಿದ್ಧತೆ ನಡೆದಿದೆ’ ಎಂದು ಮೂಲಗಳು ತಿಳಿಸಿವೆ.

ಟ್ವಿಟರ್: ಕೊನೆಗೂ ಸ್ಥಾನಿಕ ಕುಂದುಕೊರತೆ ಅಧಿಕಾರಿ ನೇಮಕ

ವಿನಯ್ ಪ್ರಕಾಶ್ ಭಾರತದ ಆರ್‌ಜಿಒ

ನವದೆಹಲಿ (ಪಿಟಿಐ): ಭಾರತದ ಸ್ಥಾನಿಕ ಕುಂದುಕೊರತೆ ಅಧಿಕಾರಿಯನ್ನಾಗಿ ವಿನಯ್ ಪ್ರಕಾಶ್ ಅವರನ್ನು ನೇಮಿಸಿರುವುದಾಗಿ ಟ್ವಿಟರ್ ಭಾನುವಾರ ತಿಳಿಸಿದೆ.

ಭಾರತದ ಹೊಸ ಐಟಿ ನಿಯಮಗಳ ಪಾಲನೆ ವಿಷಯದಲ್ಲಿ ಕೇಂದ್ರ ಸರ್ಕಾರದ ಕಂಗೆಣ್ಣಿಗೆ ಗುರಿಯಾಗಿದ್ದ ಟ್ವಿಟರ್ ಇದೀಗ ಸ್ಥಾನಿಕ ಕುಂದುಕೊರತೆ ಅಧಿಕಾರಿ ನೇಮಕ ಮಾಡಿದೆ.

'ವಿನಯ್ ಪ್ರಕಾಶ್ ಭಾರತದ ಸ್ಥಾನಿಕ ಕುಂದುಕೊರತೆ ಅಧಿಕಾರಿ (ಆರ್‌ಜಿಒ). ಅವರನ್ನು ವೆಬ್‌ಸೈಟ್‌ನಲ್ಲಿ ನೀಡಲಾಗಿರುವ ಇ-ಮೇಲ್ ಐಡಿ ಬಳಸಿ ಬಳಕೆದಾರರು ಸಂಪರ್ಕಿಸಬಹುದು' ಎಂದು ವೆಬ್‌ಸೈಟ್‌ನಲ್ಲಿ ತಿಳಿಸಲಾಗಿದೆ.

ಟ್ವಿಟರ್ ಅನ್ನು '4ನೇ ಮಹಡಿ, ದಿ ಎಸ್ಟೇಟ್, 121 ಡಿಕೆನ್ಸನ್ ರಸ್ತೆ, ಬೆಂಗಳೂರು- 560042' ವಿಳಾಸದಲ್ಲಿ ಸಂಪರ್ಕಿಸಬಹುದು ಎಂದು ವೆಬ್‌ಸೈಟ್‌ನಲ್ಲಿ ಹೇಳಲಾಗಿದೆ.

ಟ್ವಿಟರ್ ಈ ಹಿಂದೆ ಧರ್ಮೇಂದ್ರ ಚತುರ್ ಅವರನ್ನು ಭಾರತಕ್ಕೆ ಮಧ್ಯಂತರ ಸ್ಥಾನಿಕ ಕುಂದುಕೊರತೆ ಅಧಿಕಾರಿಯಾಗಿ ನೇಮಿಸಿತ್ತು. ಆದರೆ, ಕಳೆದ ತಿಂಗಳು ಅವರು ಈ ಸ್ಥಾನ ತ್ಯಜಿಸಿದ್ದರು.

ಇದೇ ವೇಳೆ, ಕಂಪನಿಯು 2021ರ ಮೇ 26ರಿಂದ ಜೂನ್ 25ರವರೆಗಿನ ಕಾನೂನು ಪಾಲನಾ ವರದಿಯನ್ನೂ ಪ್ರಕಟಿಸಿದೆ. ಮೇ 26ರಂದು ಜಾರಿಗೆ ಬಂದಿರುವ ಐಟಿ ನಿಯಮಗಳ ಪ್ರಕಾರ ಕಾನೂನು ಪಾಲನಾ ವರದಿ ಪ್ರಕಟಿಸುವುದು ಪ್ರಮುಖಾಂಶವಾಗಿದೆ.

94 ಕುಂದುಕೊರತೆಗಳನ್ನು ಸ್ವೀಕರಿಸಿರುವುದಾಗಿ ಟ್ವಿಟರ್ ತಿಳಿಸಿದೆ. ಇವುಗಳಲ್ಲಿ ಮಾನನಷ್ಟ, ನಿಂದನೆ ಅಥವಾ ಕಿರುಕುಳ, ವಯಸ್ಕರಿಗೆ ಸಂಬಂಧಿಸಿದ ವಿಷಯಗಳು, ನಕಲಿ ಖಾತೆ, ಖಾಸಗಿ ವಿಷಯಗಳು ಮತ್ತು ತಪ್ಪು ಹಾಗೂ ತಿರುಚಿದ ಮಾಹಿತಿಗಳಿಗೆ ಸಂಬಂಧಿಸಿದ್ದಾಗಿವೆ ಎಂದು ತಿಳಿಸಿದೆ.

ಮಕ್ಕಳ ಲೈಂಗಿಕ ದೌರ್ಜನ್ಯ ಸೇರಿದಂತೆ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ 18,385 ಖಾತೆಗಳನ್ನು ಅಮಾನತುಗೊಳಿಸಲಾಗಿದೆ. ಭಯೋತ್ಪಾದನೆಗೆ ಉತ್ತೇಜನ ನೀಡಿದ ಕಾರಣಕ್ಕೆ 4,179 ಖಾತೆಗಳನ್ನು ಅಮಾನತುಗೊಳಿಸಲಾಗಿದೆ ಎಂದು ಟ್ವಿಟರ್ ತಿಳಿಸಿದೆ.

ಪ್ರತಿ ತಿಂಗಳು ಈ ರೀತಿಯ ವರದಿ ಪ್ರಕಟಿಸುವುದಾಗಿ ಟ್ವಿಟರ್ ತಿಳಿಸಿದೆ.

ಸಾಮಾಜಿಕ ಮಾಧ್ಯಮಗಳಿಗೆ ಸಂಬಂಧಿಸಿದ ಹೊಸ ನಿಯಮಗಳ ಬಗ್ಗೆ ಟ್ವಿಟರ್ ಭಾರತ ಸರ್ಕಾರದೊಂದಿಗೆ ಭಿನ್ನಾಭಿಪ್ರಾಯ ವ್ಯಕ್ತಪಡಿಸಿತ್ತು. ಕೇಂದ್ರ ಸರ್ಕಾರವು ಪದೇ ಪದೇ ಸೂಚನೆ ನೀಡಿದ ಬಳಿಕವೂ, ನಿಯಮ ಪಾಲನೆಗೆ ಟ್ವಿಟರ್ ಅಸಡ್ಡೆ ತೋರಿಸಿತ್ತು. ಇದು ಕೇಂದ್ರ ಸರ್ಕಾರ ಮತ್ತು ಟ್ವಿಟರ್ ನಡುವೆ ಜಟಾಪಟಿಗೂ ಕಾರಣವಾಗಿತ್ತು.

ಭಾರತದಲ್ಲಿ ಅಂದಾಜು 1.75 ಕೋಟಿ ಬಳಕೆದಾರರನ್ನು ಟ್ವಿಟರ್ ಹೊಂದಿದೆ. 50 ಲಕ್ಷಕ್ಕೂ ಹೆಚ್ಚು ಬಳಕೆದಾರರನ್ನು ಹೊಂದಿರುವ ಸಾಮಾಜಿಕ ಮಾಧ್ಯಮ ವೇದಿಕೆಗಳು ಹೊಸ ಐಟಿ ನಿಯಮದ ಪ್ರಕಾರ ಕಡ್ಡಾಯವಾಗಿ ಮುಖ್ಯ ಕಾನೂನು ಪಾಲನಾ ಅಧಿಕಾರಿ, ನೋಡಲ್ ಅಧಿಕಾರಿ ಮತ್ತು ಸ್ಥಾನಿಕ ಕುಂದುಕೊರತೆ ಅಧಿಕಾರಿಗಳನ್ನು ನೇಮಿಸಬೇಕು. ಈ ಮೂವರೂ ಭಾರತದ ನಿವಾಸಿಗಳಾಗಿರಬೇಕು.

ಭಾರತದ ನಿವಾಸಿಯೊಬ್ಬರನ್ನು ಮಧ್ಯಂತರ ಮುಖ್ಯ ಕಾನೂನು ಪಾಲನಾ ಅಧಿಕಾರಿಯಾಗಿ ನೇಮಿಸಲಾಗಿದ್ದು, ಎಂಟು ವಾರಗಳಲ್ಲಿ ಕಾಯಂ ನೇಮಕಾತಿ ಮಾಡಲಾಗುವುದು ಎಂದು ಇತ್ತೀಚೆಗೆ ಟ್ವಿಟರ್ ದೆಹಲಿ ಹೈಕೋರ್ಟ್‌ಗೆ ತಿಳಿಸಿತ್ತು. ಇದೇ ವೇಳೆ ಜುಲೈ 11ರೊಳಗೆ ಭಾರತಕ್ಕೆ ಸ್ಥಾನಿಕ ಕುಂದು ಕೊರತೆ ಅಧಿಕಾರಿ ನೇಮಿಸುವುದಾಗಿ ಹೇಳಿತ್ತು.

ಉಗ್ರ ಸಂಘಟನೆಗಳಿಗೆ ಆರ್ಥಿಕ ನೆರವು: ಆರು ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಶ್ರೀನಗರ: ಉಗ್ರರ ಸಂಘಟನೆಗಳಿಗೆ ಹಣಕಾಸು ನೆರವು ನೀಡಿದ ಪ್ರಕರಣಗಳಿಗೆ ಸಂಬಂಧಿಸಿ ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಸಿಬ್ಬಂದಿ ಭಾನುವಾರ ಕಾಶ್ಮೀರದ ವಿವಿಧೆಡೆ ದಾಳಿ ನಡೆಸಿದ್ದು, ಆರು ಜನರನ್ನು ಬಂಧಿಸಿದ್ದಾರೆ. ಬಂಧಿತರಲ್ಲಿ ಧಾರ್ಮಿಕ ಸಂಸ್ಥೆಯೊಂದರ ಅಧ್ಯಕ್ಷ ಕೂಡಾ ಸೇರಿದ್ದಾರೆ.

ಧಾರ್ಮಿಕ ಸಂಸ್ಥೆ ಸಿರಾಜ್ ಉಲ್ ಉಲೂಮ್‌ಗೆ ಸೇರಿದ ದಲಾಲ್ ಮೊಹಲ್ಲಾ, ನವಾಬ್ ಬಜಾರ್ ಮತ್ತು ಓಲ್ಡ್ ಸಿಟಿಯಲ್ಲಿ ಇರುವ, ಕಚೇರಿಗಳ ಮೇಲೆ ದಾಳಿ ನಡೆದಿದ್ದು, ಕೆಲ ದಾಖಲೆಗಳನ್ನು ಜಪ್ತಿ ಮಾಡಲಾಯಿತು. ಎನ್‌ಐಎ ಮೂಲಗಳ ಪ್ರಕಾರ, ಉಗ್ರರ ಸಂಘಟನೆಗಳಿಗೆ ಹಣಕಾಸು ನೆರವು ಪ್ರಕರಣ ಸಂಬಂಧ ದಾಳಿ ನಡೆದಿದೆ.

ಉತ್ತರಪ್ರದೇಶದ ಇಸ್ಲಾಮಿಕ್ ಧಾರ್ಮಿಕ ಸಂಸ್ಥೆಯ ಮಾನ್ಯತೆ ಪಡೆದಿದ್ದ ಈ ಸಂಸ್ಥೆಯ ಅಧ್ಯಕ್ಷ ಅದ್ನನ್ ಅಹ್ಮದ್ ನದ್ವಿ ಅವರನ್ನು ಬಂಧಿಸಲಾಗಿದೆ. ದಾಳಿಗೆ ಸಿಆರ್‌ಪಿಎಫ್ ಸಿಬ್ಬಂದಿ, ಪೊಲೀಸರ ಸಹಯೋಗ ಪಡೆಯಲಾಗಿತ್ತು.

ಅಲ್ಲದೆ, ಅನಂತನಾಗ್ ಜಿಲ್ಲೆಯಲ್ಲಿ ವಿವಿಧೆಡೆಯೂ ದಾಳಿ ನಡೆದಿದ್ದು, ವ್ಯಾಪಾರಿಗಳಾದ ಉಮರ್ ಭಟ್, ತನ್ವೀರ್ ಭಟ್, ಜಾವೇದ್ ಭಟ್, ವೈದ್ಯಕೀಯ ಪ್ರಯೋಗಾಲಯದ ತಂತ್ರಜ್ಞ ಒವೈಸಿ ಭಟ್, ಔಷಧ ವ್ಯಾಪಾರಿ ಜೀಶನ್ ಮಲಿಕ್ ಅವರನ್ನು ಬಂಧಿಸಲಾಗಿದೆ. ಬಾರಾಮುಲ್ಲಾ ಜಿಲ್ಲೆಯ ವಿವಿಧೆಡೆ ಕೂಡ ದಾಳಿ ನಡೆಸಲಾಗಿದೆ.

ಬಂಧಿತರಿಂದ ಮೊಬೈಲ್ ಫೋನ್‌ಗಳು, ಲ್ಯಾಪ್‌ಟಾಪ್‌ಗಳು, ಆಧಾರ್ ಕಾರ್ಡ್ ಹಾಗೂ ಇತರೆ ದಾಖಲೆಗಳನ್ನು ಜಪ್ತಿ ಮಾಡಲಾಗಿದೆ.

ದೇಶ ವಿರೋಧಿ ಮತ್ತು ಭಯೋತ್ಪಾದಕ ಚಟುವಟಿಕೆಗಳ ಆರೋಪದ ಮೇಲೆ ಪಾಕಿಸ್ತಾನ ಮೂಲದ ಹಿಜ್ಬುಲ್ ಮುಜಾಹಿದ್ದೀನ್ ಮುಖ್ಯಸ್ಥ ಸೈಯದ್ ಸಲಾಹುದ್ದೀನ್ ಅವರ ಇಬ್ಬರು ಪುತ್ರರು ಸೇರಿದಂತೆ 11 ನೌಕರರನ್ನು, ಜಮ್ಮು ಮತ್ತು ಕಾಶ್ಮೀರ ಸರ್ಕಾರ ಸರ್ಕಾರಿ ಸೇವೆಯಿಂದ ವಜಾ ಮಾಡಿದ್ದ ಹಿಂದೆಯೇ ಈ ದಾಳಿ ನಡೆದಿದೆ.

ಸಲಾಹುದ್ದೀನ್ ಅವರ ಪುತ್ರರಾದ ಸೈಯದ್ ಶಕೀಲ್ ಮತ್ತು ಸೈಯದ್ ಶಾಹೀದ್ ಅವರನ್ನು ಕ್ರಮವಾಗಿ ಉಗ್ರರಿಗೆ ಹಣಕಾಸು ನೆರವು ಆರೋಪದ ಮೇಲೆ ಕ್ರಮವಾಗಿ 2017 ಮತ್ತು 2020ರಲ್ಲಿ ಬಂಧಿಸಲಾಗಿತ್ತು. ಅಲ್ಲದೆ, ಆಗಸ್ಟ್ 29, 2018ರಂದು ತನಿಖಾ ಸಂಸ್ಥೆಯು ಕಾರಾಗೃಹದ ಉಪ ಸೂಪರಿಂಟೆಂಡೆಂಟ್ ಅನ್ನು ಶ್ರೀನಗರದ ಜೈಲಿನ ಒಳಗಡೆ ಸಂಚು ನಡೆಸಿದ್ದ ಪ್ರಕರಣ ಸಂಬಂಧ ಎನ್‌ಐಎ ಬಂಧಿಸಿತ್ತು.

ಕೋಲ್ಕತ್ತ: ಮೂವರು ಶಂಕಿತ ಉಗ್ರರ ಸೆರೆ

ಕೋಲ್ಕತ್ತ (ಪಿಟಿಐ): ಜಮಾತ್ ಉಲ್ ಮುಜಾಹಿದ್ದೀನ್ ಬಾಂಗ್ಲಾದೇಶ (ಜೆಎಂಬಿ) ಸಂಘಟನೆಯ ಸದಸ್ಯರಾಗಿರುವ ಮೂವರು ಶಂಕಿತ ಉಗ್ರರನ್ನು ಇಲ್ಲಿನ ಹರಿದೇವ್‌ಪುರ್ ಪ್ರದೇಶದಲ್ಲಿ ಪೊಲೀಸರು ಬಂಧಿಸಿದ್ದಾರೆ.

ಕೋಲ್ಕತ್ತ ಪೊಲೀಸ್‌ನ ವಿಶೇಷ ಕಾರ್ಯಪಡೆ (ಎಸ್‌ಟಿಎಫ್) ಸಿಬ್ಬಂದಿ ಖಚಿತ ಸುಳಿವು ಆಧರಿಸಿ ದಾಳಿ ನಡೆಸಿ ಶಂಕಿತ ಉಗ್ರರನ್ನು ಬಂಧಿಸಿದರು. ಬಂಧಿತರು ಕೆಲ ತಿಂಗಳಿನಿಂದ ಬಾಡಿಗೆ ಮನೆಯೊಂದರರಲ್ಲಿ ವಾಸವಿದ್ದರು.

ಪ್ರಕರಣದ ತನಿಖೆಯು ಇನ್ನೂ ಅರಂಭಿಕ ಹಂತದಲ್ಲಿದ್ದು, ಬಂಧಿತರನ್ನು ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಡ್ರೋನ್ ದಾಳಿ: ಪಾಕ್ ಕೈವಾಡದ ಸಾಧ್ಯತೆ

ಜಮ್ಮು/ನವದೆಹಲಿ (ಪಿಟಿಐ): ಜಮ್ಮುವಿನಲ್ಲಿರುವ ವಾಯುಪಡೆಯ ವಾಯುನೆಲೆ ಮೇಲೆ ಇತ್ತೀಚೆಗೆ ಡ್ರೋನ್ ಮೂಲಕ ಹಾಕಿದ್ದ ಬಾಂಬ್‌ಗಳಲ್ಲಿ 'ಪ್ರೆಶರ್ ಫ್ಯೂಸ್'ಗಳನ್ನು ಬಳಸಲಾಗಿದೆ. ಈ ಭಯೋತ್ಪಾದಕ ದಾಳಿಯಲ್ಲಿ ಪಾಕಿಸ್ತಾನದ ಮಿಲಿಟರಿ ಅಥವಾ ಲಷ್ಕರ್-ಎ-ತಯಬಾ ಸಂಘಟನೆಯ ಕೈವಾಡ ಇರುವುದನ್ನು ಇದು ತೋರಿಸುತ್ತದೆ ಎಂದು ಭದ್ರತಾ ಪಡೆ ಮೂಲಗಳು ಹೇಳಿವೆ.

'ಈ ರೀತಿಯ ಭಯೋತ್ಪಾದಕ ದಾಳಿ ನಡೆದಿರುವುದು ಇದೇ ಮೊದಲು. ಸುಧಾರಿತ ಸ್ಫೋಟಕ ಸಾಧನ (ಐಇಡಿ) ತಯಾರಿಸಲು ಎಲ್‌ಇಟಿಗೆ ಐಎಸ್‌ಐ ನೆರವು ನೀಡಿರುವ ಸಾಧ್ಯತೆಗಳೇ ಹೆಚ್ಚು' ಎಂದು ಇವೇ ಮೂಲಗಳು ಹೇಳಿವೆ.

'ವಾಯುನೆಲೆಯ ಚಾವಣಿಯನ್ನು ಕೊರೆದಿದ್ದ ಐಇಡಿಯಲ್ಲಿ ಆರ್‌ಡಿಎಕ್ಸ್ ಹಾಗೂ ಇತರ ರಾಸಾಯನಿಕಗಳ ಮಿಶ್ರಣ ಇತ್ತು. ಈ ಸ್ಫೋಟಕಗಳ ಒಟ್ಟು ತೂಕ ಒಂದು ಕೆ.ಜಿ ಗಿಂತಲೂ ಕಡಿಮೆ ಇತ್ತು. ನೆಲದ ಮೇಲೆ ಬಿದ್ದಿದ್ದ ಐಇಡಿಯಲ್ಲಿ ಒಂದು ಕೆ.ಜಿಗಿಂತ ತುಸು ಹೆಚ್ಚು ತೂಕದ ಸ್ಫೋಟಕಗಳಿದ್ದವು' ಎಂದು ಮೂಲಗಳು ಹೇಳಿವೆ.

ಟ್ಯಾಂಕ್ ಪ್ರತಿರೋಧಕ ಶಸ್ತ್ರಾಸ್ತ್ರಗಳಲ್ಲಿ, ಗಣಿಗಾರಿಕೆಯಲ್ಲಿ ಈ 'ಪ್ರೆಶರ್ ಫ್ಯೂಸ್'ಗಳನ್ನು ಬಳಸಲಾಗುತ್ತದೆ. ಈ 'ಫ್ಯೂಸ್'ಗಳನ್ನು ಅಳವಡಿಸಿದ ಸ್ಫೋಟಕ ಸಾಧನ ರಭಸದಿಂದ ಕೆಳಕ್ಕೆ ಬಿದ್ದಾಗ, ಇಲ್ಲವೇ ಅವುಗಳ ಮೇಲೆ ವ್ಯಕ್ತಿ, ವಾಹನ ಹಾಯ್ದು ಹೋದಾಗ ಸ್ಫೋಟ ಸಂಭವಿಸುತ್ತದೆ.



ಮಾತು–ಮಂಥನ ನೂತನ ಸಚಿವೆಯರಿಗಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ನವದೆಹಲಿಯ ತಮ್ಮ ನಿವಾಸದಲ್ಲಿ ಭಾನುವಾರ ಚಹಾಕೂಟ ಆಯೋಜಿಸಿದ್ದರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಸ್ಮೃತಿ ಇರಾನಿ ಇದ್ದರು – ಪಿಟಿಐ ಚಿತ್ರ

ಜನಸಂಖ್ಯಾ ನಿಯಂತ್ರಣ ನೀತಿ ಪ್ರಕಟಿಸಿದ ಯೋಗಿ

ಲಖನೌ (ಪಿಟಿಐ): ಬೆಳೆಯುತ್ತಿರುವ ಜನಸಂಖ್ಯೆಯು ಅಭಿವೃದ್ಧಿಗೆ ಅಡ್ಡಿ ಎಂದು ಕರೆದಿರುವ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಜನಸಂಖ್ಯಾ ನಿಯಂತ್ರಣಕ್ಕೆ ಯೋಜನೆಯನ್ನು ಪ್ರಕಟಿಸಿದ್ದಾರೆ. ಉತ್ತರ ಪ್ರದೇಶದಲ್ಲಿ ಜನಸಂಖ್ಯೆಯನ್ನು ಸ್ಥಿರಗೊಳಿಸುವ ಮತ್ತು ತಾಯಿ ಹಾಗೂ ಶಿಶು ಮರಣವನ್ನು ತಡೆಯುವ ಉದ್ದೇಶದ ನೀತಿಯನ್ನು ಅನಾವರಣಗೊಳಿಸಿದ್ದಾರೆ. ಇದಕ್ಕೆ ಕಾಲಮಿತಿಯನ್ನೂ ನಿಗದಿಪಡಿಸಿದ್ದಾರೆ.

ಉತ್ತರ ಪ್ರದೇಶ ಜನಸಂಖ್ಯಾ ನೀತಿ 2021-2030 ಅನ್ನು ವಿಶ್ವ ಜನಸಂಖ್ಯಾ ದಿನದಂದು ಪ್ರಕಟಿಸಲಾಗಿದೆ. ಫಲವತ್ತತೆ ಪ್ರಮಾಣವನ್ನು 2026ರ ವೇಳೆಗೆ 2.1ಕ್ಕೆ ಮತ್ತು 2030ರ ವೇಳೆಗೆ 1.9ಕ್ಕೆ ಇಳಿಸುವ ಗುರಿಯನ್ನು ನೀತಿಯು ಹೊಂದಿದೆ.

ಜನಸಂಖ್ಯೆ ನಿಯಂತ್ರಣದ ಕರಡು ಮಸೂದೆಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ್ದ ಉತ್ತರ ಪ್ರದೇಶದ ಕಾನೂನು ಆಯೋಗ, ಜುಲೈ 19ರೊಳಗೆ ಸಾರ್ವಜನಿಕರಿಂದ ಸಲಹೆಗಳನ್ನು ಆಹ್ವಾನಿಸಿತ್ತು. ಇದರ ಪ್ರಕಾರ, ಉತ್ತರ ಪ್ರದೇಶದಲ್ಲಿ ಎರಡು ಮಕ್ಕಳಿಗಿಂತ ಹೆಚ್ಚು ಮಕ್ಕಳನ್ನು ಹೊಂದಿರುವ ಜನರು ಸ್ಥಳೀಯ ಸಂಸ್ಥೆ ಚುನಾವಣೆಗೆ ಸ್ಪರ್ಧಿಸುವುದನ್ನು ನಿರ್ಬಂಧಿಸಲಾಗಿದೆ.

ಸರ್ಕಾರಿ ಉದ್ಯೋಗಗಳಿಗೆ ಅರ್ಜಿ ಸಲ್ಲಿಸುವುದು ಅಥವಾ ಯಾವುದೇ ರೀತಿಯ ಸಬ್ಸಿಡಿ ಪಡೆಯುವುದನ್ನೂ ಇದು ನಿರ್ಬಂಧಿಸುತ್ತದೆ. ಜತೆಗೆ ಸರ್ಕಾರಿ ಉದ್ಯೋಗಗಳಲ್ಲಿ ಬಡ್ತಿ ನೀಡುವುದನ್ನು ನಿಷೇಧಿಸುವ ಪ್ರಸ್ತಾವ ಇರಿಸಿದೆ. ಎರಡು ಮಕ್ಕಳಿಗೆ ತಮ್ಮ ಕುಟುಂಬವನ್ನು ಸೀಮಿತಗೊಳಿಸುವ ದಂಪತಿಗೆ ಪ್ರೋತ್ಸಾಹ ಧನ ನೀಡುವ ಉದ್ದೇಶವನ್ನು ಹೊಂದಲಾಗಿದೆ.

'ಈ ದಿಕ್ಕಿನಲ್ಲಿ ಪ್ರಯತ್ನಗಳನ್ನು ಮಾಡಿದ ದೇಶಗಳು ಮತ್ತು ರಾಜ್ಯಗಳು ಸಕಾರಾತ್ಮಕ ಫಲಿತಾಂಶಗಳನ್ನು ಕಂಡಿವೆ. ಆದಾಗ್ಯೂ, ಹೆಚ್ಚಿನ ಪ್ರಯತ್ನಗಳು ಬೇಕು' ಎಂದು ಯೋಗಿ ಅವರು ಹೇಳಿದ್ದು, ಉತ್ತರ ಪ್ರದೇಶ ಸರ್ಕಾರವು ಸಮಾಜದ ಎಲ್ಲಾ ವರ್ಗಗಳನ್ನು ಗಮನದಲ್ಲಿಟ್ಟುಕೊಂಡು ಈ ನೀತಿಯನ್ನು ಜಾರಿಗೆ ತರುತ್ತಿದೆ ಎಂದರು.

ಅಫ್ಗಾನಿಸ್ತಾನದಲ್ಲಿ ಹೆಚ್ಚುತ್ತಿರುವ ತಾಲಿಬಾನ್ ಹಿಡಿತ

ಕಂದಹಾರ್‌ನ ಕಾನ್ಸುಲೇಟ್ ಕಚೇರಿ ಸಿಬ್ಬಂದಿ ವಾಪಸ್‌ಗೆ ಭಾರತ ಕ್ರಮ

ನವದೆಹಲಿ (ಪಿಟಿಐ): ಅಫ್ಗಾನಿಸ್ತಾನದ ವಿವಿಧ ಪ್ರದೇಶಗಳ ಮೇಲೆ ತಾಲಿಬಾನ್ ತನ್ನ ಹಿಡಿತ ಸಾಧಿಸುತ್ತಿರುವುದನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವ ಭಾರತ, ಅಫ್ಗಾನಿಸ್ತಾನದ ಕಂದಹಾರ್‌ನಲ್ಲಿರುವ ತನ್ನ ಕಾನ್ಸುಲೇಟ್ ಕಚೇರಿಯ 50 ರಾಜತಾಂತ್ರಿಕ ಮತ್ತು ಭದ್ರತಾ ಸಿಬ್ಬಂದಿಯನ್ನು ಹಿಂದಕ್ಕೆ ಕರೆಸಿಕೊಳ್ಳಲು ಮುಂದಾಗಿದೆ.



ಸಾಂದರ್ಭಿಕ ಚಿತ್ರ

ಅಫ್ಗಾನಿಸ್ತಾನದ ಪಶ್ಚಿಮ ಭಾಗದ ಬಹುತೇಕ ಭಾಗವನ್ನು ವಶಪಡಿಸಿಕೊಂಡಿರುವ ತಾಲಿಬಾನ್, ದಕ್ಷಿಣ ಭಾಗದ ಪ್ರದೇಶಗಳನ್ನೂ ತನ್ನ ಹಿಡಿತಕ್ಕೆ ತೆಗೆದುಕೊಳ್ಳುತ್ತಿರುವ ಬೆನ್ನಲ್ಲೇ ಭಾರತ ತನ್ನ ಕಾನ್ಸುಲೇಟ್ ಕಚೇರಿಯನ್ನು ತಾತ್ಕಾಲಿಕವಾಗಿ ಮುಚ್ಚುವ ಕ್ರಮಕ್ಕೆ ಮುಂದಾಗಿದೆ ಎಂದು ಮೂಲಗಳು ತಿಳಿಸಿವೆ.

ಇಂಡೊ- ಟಿಬೆಟಿಯನ್ ಗಡಿ ಪೊಲೀಸ್ ಸಿಬ್ಬಂದಿ ಸೇರಿದಂತೆ ಭಾರತೀಯ ರಾಜತಾಂತ್ರಿಕರು, ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯನ್ನು ವಾಪಸ್ ಕರೆತರಲು ಭಾರತೀಯ ವಾಯುಪಡೆಯ ವಿಶೇಷ ವಿಮಾನವನ್ನು ಶನಿವಾರ ಕಳುಹಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಕಾಬೂಲ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಕಳೆದ ಮಂಗಳವಾರವಷ್ಟೇ ಕಂದಹಾರ್ ಮತ್ತು ಮುಜಾರ್-ಎ-ಷರೀಫ್‌ನಲ್ಲಿರುವ ಕಾನ್ಸುಲೇಟ್ ಕಚೇರಿಗಳನ್ನು ಮುಚ್ಚುವ ಯೋಜನೆ ಇಲ್ಲ ಎಂದು ಹೇಳಿತ್ತು.

ಅಫ್ಗಾನಿಸ್ತಾನದಲ್ಲಿ ಹದಗೆಡುತ್ತಿರುವ ಭದ್ರತಾ ಪರಿಸ್ಥಿತಿ ಮತ್ತು ಅಲ್ಲಿರುವ ಭಾರತೀಯ ಪ್ರಜೆಗಳ ಸುರಕ್ಷತೆಯ ವಿಷಯವನ್ನು ಭಾರತ ಸೂಕ್ಷ್ಮವಾಗಿ ಗಮನಿಸುತ್ತಿದೆ. ಸರಿಯಾದ ಸಮಯದಲ್ಲಿ ಸೂಕ್ತ ನಿರ್ಧಾರವನ್ನು ಭಾರತ ತೆಗೆದುಕೊಳ್ಳುತ್ತದೆ ಎಂದು ಗುರುವಾರವಷ್ಟೇ ಭಾರತೀಯ ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ತಿಳಿಸಿದ್ದರು.

ಶಾಂತಿ ಸ್ಥಾಪನೆ ಉದ್ದೇಶದಿಂದ ಎರಡು ದಶಕಗಳಿಂದ ಇಲ್ಲಿ ನೆಲೆಯೂರಿದ್ದ ಅಮೆರಿಕ ಪಡೆಗಳು ವಾಪಸಾಗುತ್ತಿವೆ. ಆಗಸ್ಟ್ ವೇಳೆಗೆ ಪೂರ್ಣ ಪ್ರಮಾಣದಲ್ಲಿ ಅಮೆರಿಕ ಪಡೆಗಳು ಹಿಂದಿರುಗಲಿವೆ. ಇದರ ಬೆನ್ನಲ್ಲೇ ಕಳೆದ ವಾರ ಅಫ್ಗಾನಿಸ್ತಾನದಲ್ಲಿ ಸರಣಿ ಭಯೋತ್ಪಾದಕ ದಾಳಿಗಳು ನಡೆದಿವೆ.

ಡೆಹ್ರಾಡೂನ್: 'ಗುಪ್ತಪುಷ್ಪಿ ಉದ್ಯಾನ' ಉದ್ಘಾಟನೆ

ಡೆಹ್ರಾಡೂನ್ (ಪಿಟಿಐ): ಪಾಚಿ, ಜರೀಗಿಡ (ಕಲ್ಲುಹೂವುಗಳು) ಹಾಗೂ ಶಿಲೀಂಧ್ರಗಳು ಸೇರಿದಂತೆ ಏಕಕೋಶೀಯ ಸಸ್ಯಗಳಿರುವ ದೇಶದ ಮೊದಲ 'ಗುಪ್ತಪುಷ್ಪಿ ಉದ್ಯಾನ'ವನ್ನು (ಕ್ರಿಪ್ಟೋಗ್ಯಾಮಿಕ್ ಗಾರ್ಡನ್) ಡೆಹ್ರಾಡೂನ್ ಜಿಲ್ಲೆಯ ಚಕರಾತಾ ಪಟ್ಟಣದಲ್ಲಿ ಭಾನುವಾರ ಉದ್ಘಾಟಿಸಲಾಯಿತು.

ಪಟ್ಟಣದ ದೇವವನದಲ್ಲಿ 50 ಪ್ರಭೇದಗಳಿಗೆ ಸೇರಿದ ಇಂಥ ಸಸ್ಯಗಳನ್ನು ಬೆಳೆಸಲಾಗಿದೆ. 9 ಸಾವಿರ ಅಡಿ ಎತ್ತರದ ಪ್ರದೇಶದಲ್ಲಿ ಅಭಿವೃದ್ಧಿಪಡಿಸಿರುವ ಈ ಉದ್ಯಾನವನ್ನು ಸಾಮಾಜಿಕ ಕಾರ್ಯಕರ್ತ ಅನೂಪ್ ನೌತಿಯಾಲ್ ಉದ್ಘಾಟಿಸಿದರು.

ಸಸ್ಯಶಾಸ್ತ್ರದ ಪ್ರಕಾರ ಪಾಚಿ, ಶಿಲೀಂಧ್ರ, ಜರೀಗಿಡಗಳು 'ಕ್ರಿಪ್ಟೋಗ್ಯಾಮ' ಪ್ರಭೇದಕ್ಕೆ ಸೇರಿದವುಗಳಾಗಿವೆ. ಇವುಗಳು ಹೂವು, ಬೀಜಗಳನ್ನು ಸೃಷ್ಟಿಸುವುದಿಲ್ಲ. ಈ ಸಸ್ಯಗಳು ಕಾಂಡ, ಎಲೆ ಮತ್ತು ಬೇರಿನಂತಹ ಏಕಕೋಶಿಯ ರಚನೆಯನ್ನು ಹೊಂದಿರುತ್ತವೆ. ಹೀಗಾಗಿ ಇವುಗಳನ್ನು 'ಗುಪ್ತಪುಷ್ಪಿ' ಎಂದೂ ಕರೆಯಲಾಗುತ್ತದೆ. ಹಿಮಾಲಯದಲ್ಲಿ ಇಂಥ ಸಸ್ಯಗಳು ಸಾಕಷ್ಟು ಸಂಖ್ಯೆಯಲ್ಲಿ ಸಿಗುತ್ತವೆ.

'ದೇವವನದಲ್ಲಿ ಮಾಲಿನ್ಯದ ಪ್ರಮಾಣ ಕಡಿಮೆ. ಇಲ್ಲಿನ ತೇವಾಂಶ ಸಹ ಇಂಥ ಸಸ್ಯಗಳನ್ನು ಬೆಳೆಯಲು ಸೂಕ್ತವಾದುದು. ಹೀಗಾಗಿ ಈ ಉದ್ಯಾನದ ಮೂರು ಎಕರೆ ಪ್ರದೇಶದಲ್ಲಿ ಈ ಸಸ್ಯಗಳನ್ನು ಬೆಳೆಸಲಾಗಿದೆ' ಎಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಂಶೋಧನೆ) ಸಂಜೀವ್ ಚತುರ್ವೇದಿ ವಿವರಿಸಿದರು.

'ದೇವವನ ಪ್ರದೇಶದಲ್ಲಿ ದೇವದಾರು ಹಾಗೂ ಓಕ್ ಮರಗಳೇ ಹೆಚ್ಚಾಗಿರುವ ಅರಣ್ಯಗಳಿವೆ. ಇಂಥ ಪ್ರದೇಶಗಳು ಪಾಚಿ, ಶಿಲೀಂಧ್ರಗಳಿಗೆ ನೈಸರ್ಗಿಕ ಆಶ್ರಯ ತಾಣಗಳಾಗುತ್ತವೆ' ಎಂದೂ ಹೇಳಿದರು.

ಪುದುಚೇರಿ: ಮುಖ್ಯಮಂತ್ರಿ ರಂಗಸ್ವಾಮಿ ಬಳಿ 13 ಖಾತೆಗಳು

ಪುದುಚೇರಿ (ಪಿಟಿಐ): ಮುಖ್ಯಮಂತ್ರಿ ಎನ್.ರಂಗಸ್ವಾಮಿ ಅವರು ಸಂಪುಟದ ಸಚಿವರಿಗೆ ಭಾನುವಾರ ಖಾತೆಗಳ ಹಂಚಿಕೆ ಮಾಡಿದ್ದಾರೆ. ಅವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇರಿದಂತೆ ಒಟ್ಟು 13 ಖಾತೆಗಳನ್ನು ತಮ್ಮ ಬಳಿ ಇಟ್ಟುಕೊಂಡಿದ್ದಾರೆ.

ಆಲ್ ಇಂಡಿಯಾ ಎನ್‌ಆರ್ ಕಾಂಗ್ರೆಸ್ (ಎಐಎನ್‌ಆರ್‌ಸಿ) ಮತ್ತು ಬಿಜೆಪಿ ಮೈತ್ರಿಕೂಟವು ಪುದುಚೇರಿಯಲ್ಲಿ ಸರ್ಕಾರ ರಚಿಸಿದೆ.

ಮುಖ್ಯಮಂತ್ರಿ ರಂಗಸ್ವಾಮಿ ಅವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ; ಕಂದಾಯ ಮತ್ತು ಅಬಕಾರಿ; ಸಹಕಾರ; ಸಾರ್ವಜನಿಕ ಆಡಳಿತ; ಹಿಂದೂ ಧಾರ್ಮಿಕ ಸಂಸ್ಥೆಗಳು; ವಕ್ಫ್ ಬೋರ್ಡ್; ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ; ನಗರ ಯೋಜನಾ ಖಾತೆ ಸೇರಿ ಒಟ್ಟು 13 ಖಾತೆಗಳನ್ನು ಹೊಂದಿದ್ದಾರೆ. ಉಳಿದ ಎಲ್ಲ ಸಚಿವರಿಗೆ ತಲಾ ಆರು ಖಾತೆಗಳನ್ನು ಹಂಚಿಕೆ ಮಾಡಲಾಗಿದೆ.

ಬಿಜೆಪಿಯ ಎ.ನಮಶಿವಾಯಂ ಅವರಿಗೆ ಗೃಹ ಖಾತೆ ನೀಡಲಾಗಿದೆ. ಜೊತೆಗೆ ಇಂಧನ, ಕೈಗಾರಿಕೆ, ವಾಣಿಜ್ಯ, ಶಿಕ್ಷಣ, ಕ್ರೀಡೆ ಮತ್ತು ಯುವಜನ ಹಾಗೂ ಸೈನಿಕ ಕಲ್ಯಾಣ ಖಾತೆಗಳ ಜವಾಬ್ದಾರಿಯನ್ನು ಅವರಿಗೆ ವಹಿಸಲಾಗಿದೆ. ಬಿಜೆಪಿಯ ಸಾಯಿ ಸರವಣನ್ ಕುಮಾರ್, ಎಐಎನ್‌ಆರ್‌ಸಿಯ ಕೆ.ಲಕ್ಷ್ಮೀನಾರಾಯಣನ್, ಸಿ.ಡಿಜೀಕೌಮರ್ ಅವರಿಗೆ ತಲಾ 6 ಖಾತೆಗಳು ಹಂಚಿಕೆಯಾಗಿವೆ.



ಪುದುಚೇರಿ ಲೆಫ್ಟಿನೆಂಟ್ ಗವರ್ನರ್ ತಮಿಳಿಸೈ ಸೌಂದರರಾಜನ್ ಅವರಿಗೆ ಸಚಿವರ ಖಾತೆ ಹಂಚಿಕೆಗೆ ಸಂಬಂಧಿಸಿದ ಶಿಫಾರಸು ಪಟ್ಟಿಯನ್ನು ಸಲ್ಲಿಸಿದ ಮುಖ್ಯಮಂತ್ರಿ ಎನ್‌.ರಂಗಸ್ವಾಮಿ

ಪುದುಚೇರಿ ಕೇಂದ್ರಾಡಳಿತ ಪ್ರದೇಶದ ಮೊದಲ ಮಹಿಳಾ ಸಚಿವೆ ಚಂದಿರಾ ಪ್ರಿಯಾಂಕ ಅವರಿಗೆ ಸಾರಿಗೆ ಖಾತೆ ಹೊಣೆ ನೀಡಲಾಗಿದೆ. ಆದಿ ದ್ರಾವಿಡ ಕಲ್ಯಾಣಾಭಿವೃದ್ಧಿ, ವಸತಿ, ಕಾರ್ಮಿಕ ಮತ್ತು ಉದ್ಯೋಗ, ಕಲೆ ಮತ್ತು ಸಂಸ್ಕೃತಿ ಹಾಗೂ ಆರ್ಥಿಕತೆ ಮತ್ತು ಸಾಂಖ್ಯಿಕ ಖಾತೆಗಳನ್ನು ಸಹ ನಿರ್ವಹಿಸಲಿದ್ದಾರೆ.

ಕಾಬೂಲ್ ವಿಮಾನ ನಿಲ್ದಾಣ: ರಾಕೆಟ್ ದಾಳಿ ತಡೆ ವ್ಯವಸ್ಥೆ ಅಳವಡಿಕೆ

ಕಾಬೂಲ್ (ಎಎಫ್‌ಪಿ): ಸಂಭವನೀಯ ರಾಕೆಟ್ ದಾಳಿಯ ವಿರುದ್ಧ ರಕ್ಷಣೆ ಕ್ರಮವಾಗಿ ಅಫ್ಗಾನಿಸ್ತಾನದ ಕಾಬೂಲ್ ವಿಮಾನನಿಲ್ದಾಣದಲ್ಲಿ ನೂತನ ವಾಯುರಕ್ಷಣಾ ವ್ಯವಸ್ಥೆ ಅಳವಡಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ದೇಶದಾದ್ಯಂತ ತಾಲಿಬಾನ್ ಆಕ್ರಮಣಕಾರಿ ಪ್ರವೃತ್ತಿಯನ್ನು ಹೆಚ್ಚಿಸಿರುವಂತೆಯೇ ಈ ಕ್ರಮ ಕೈಗೊಳ್ಳಲಾಗಿದೆ.


ಅಮೆರಿಕ ಮತ್ತು ಅದರ ಮೈತ್ರಿ ದೇಶಗಳು ಅಫ್ಗಾನಿಸ್ತಾನದ ನೆಲದಿಂದ ತನ್ನ ಸೇನೆಗಳನ್ನು ಹಿಂಪಡೆಯುವ ಪ್ರಕ್ರಿಯೆಯನ್ನು ಆಗಸ್ಟ್ ಅಂತ್ಯದ ವೇಳೆಗೆ ಪೂರ್ಣಗೊಳಿಸಲಿವೆ. ಈ ಮಧ್ಯೆ ಅಫ್ಗಾನಿಸ್ತಾನದ ಶೇ 85ರಷ್ಟು ಭಾಗವನ್ನು ಆಕ್ರಮಿಸಿರುವುದಾಗಿ ತಾಲಿಬಾನ್ ಹೇಳಿಕೊಂಡಿದೆ. ಆದರೆ, ಇದನ್ನು ಸರ್ಕಾರ ಅಲ್ಲಗಳೆದಿದೆ.

ಹೊಸದಾಗಿ ಸ್ಥಾಪಿಸಲಾಗಿರುವ ವಾಯುರಕ್ಷಣಾ ವ್ಯವಸ್ಥೆಯು ಕಾಬೂಲ್‌ನಲ್ಲಿ ಭಾನುವಾರದಿಂದ ಕಾರ್ಯಾರಂಭ ಮಾಡಿದೆ.ರಾಕೆಟ್ ಮತ್ತು ಕ್ಷಿಪಣಿ ದಾಳಿ ತಡೆಯಲು ಇದು ಸಹಕಾರಿ ಎಂದು ಅಧಿಕಾರಿಗಳು ಪ್ರತಿಪಾದಿಸಿದ್ದಾರೆ.

ಆಂತರಿಕ ರಕ್ಷಣಾ ಸಚಿವಾಲಯದ ವಕ್ತಾರ ತಾರಿಖ್ ಅರಿಯನ್ ಅವರು, ವಿಮಾನನಿಲ್ದಾಣದಲ್ಲಿ ಹೊಸ ವ್ಯವಸ್ಥೆ ಅಳವಡಿಸಲಾಗಿದೆ ಎಂದು ತಿಳಿಸಿದ್ದು ಅದರ ಕಾರ್ಯವೈಖರಿ ಮತ್ತು ಸ್ವರೂಪವನ್ನು ವಿವರಿಸಲು ನಿರಾಕರಿಸಿದರು.

ಇಸ್ಲಾಮಿಕ್ ಮೂಲಭೂತವಾದಿ ಸಂಘಟನೆಯು ಇತ್ತೀಚಿನ ದಿನಗಳಲ್ಲಿ ರಾಜಧಾನಿ ಕಾಬೂಲ್ ಮತ್ತು ಇಲ್ಲಿನ ವಿಮಾನನಿಲ್ದಾಣದಲ್ಲಿ ಭೀತಿಯ ವಾತಾವರಣವನ್ನು ಮೂಡಿಸಿದೆ. ವಿದೇಶಗಳ ರಾಜತಾಂತ್ರಿಕರು ಮತ್ತು ಸಿಬ್ಬಂದಿ ಸುರಕ್ಷಿತವಾಗಿ ಹೊರಹೋಗಲು ನಿರ್ಗಮನ ಮಾರ್ಗದಲ್ಲಿ 'ನ್ಯಾಟೊ' ಅಗತ್ಯ ಕ್ರಮವನ್ನು ಕೈಗೊಂಡಿದೆ.

'ಪದ್ಮ' ಪ್ರಶಸ್ತಿಗಳಿಗೆ ಸಾಧಕರ ನಾಮನಿರ್ದೇಶನ: ಪ್ರಧಾನಿ ಮನವಿ



ನವದೆಹಲಿ: ವಿವಿಧ ಕ್ಷೇತ್ರಗಳಲ್ಲಿ ಅದ್ಭುತ ಸಾಧನೆ ಮಾಡಿರುವವರನ್ನು 'ಪದ್ಮ' ಪ್ರಶಸ್ತಿಗಳಿಗಾಗಿ ನಾಮನಿರ್ದೇಶನ ಮಾಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಜನರಿಗೆ ಭಾನುವಾರ ಮನವಿ ಮಾಡಿದ್ದಾರೆ.

ಈ ಸಂಬಂಧ ಅವರು 'ಪೀಪಲ್ಸ್ ಪದ್ಮ' ಹ್ಯಾಶ್‌ಟ್ಯಾಗ್‌ನೊಂದಿಗೆ ಟ್ವೀಟ್ ಮಾಡಿದ್ದಾರೆ.

'ಭಾರತ ಅನೇಕ ಪ್ರತಿಭಾವಂತರನ್ನು ಒಳಗೊಂಡಿದೆ. ಅವರು ತಳಮಟ್ಟದಲ್ಲಿ ಅಸಾಧಾರಣ ಕೆಲಸ ಮಾಡುತ್ತಿದ್ದಾರೆ. ಅವರು ಇತರರಿಗೂ ಸ್ಫೂರ್ತಿದಾಯಕ. ಆದರೆ, ಅವರ ಬಗ್ಗೆ ನಮಗೆ ಮಾಹಿತಿ ಇರುವುದಿಲ್ಲ. ಅಂಥ ಸಾಧಕರ ಬಗ್ಗೆ ನಿಮಗೆ ತಿಳಿದಿದೆಯೇ? ಹಾಗಿದ್ದಲ್ಲಿ, ಅವರನ್ನು ಪದ್ಮ ಪ್ರಶಸ್ತಿಗೆ ನಾಮ ನಿರ್ದೇಶನ ಮಾಡಬಹುದು' ಎಂದು ಅವರು ವಿನಂತಿಸಿದ್ದಾರೆ.

ಸೆಪ್ಟೆಂಬರ್ 15 ಕೊನೆಯ ದಿನವಾಗಿದ್ದು, https://padmaawards.gov.in ವೆಬ್‌ಸೈಟ್‌ಗೆ ಭೇಟಿ ನಾಮ ನಿರ್ದೇಶನ ಮಾಡಬಹುದು.

ಸಹಕಾರ ಸಚಿವಾಲಯ ರಚನೆ: ಕಾಂಗ್ರೆಸ್ ವಾಗ್ದಾಳಿ

ತಿರುವನಂತಪುರ (ಪಿಟಿಐ): ಕೇಂದ್ರ ಸರ್ಕಾರವು ಹೊಸದಾಗಿ ಸಹಕಾರ ಸಚಿವಾಲಯ ರಚಿಸಿದ ಕ್ರಮವನ್ನು ಕಾಂಗ್ರೆಸ್ ಮುಖಂಡ ರಮೇಶ್ ಚೆನ್ನಿತ್ತಲ ಟೀಕಿಸಿದ್ದಾರೆ. ಕೇಂದ್ರ ಸರ್ಕಾರದ ಈ ಕ್ರಮದ ವಿರುದ್ಧ ಜಾತ್ಯತೀತ ಪಕ್ಷಗಳು ಒಂದಾಗಿ ಹೋರಾಟ ನಡೆಸಬೇಕಿದೆ ಎಂದು ಅವರು ಆಗ್ರಹಿಸಿದ್ದಾರೆ.

ಸಹಕಾರ ಕ್ಷೇತ್ರವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಬಿಜೆಪಿ ಮತ್ತು ಸಂಘ ಪರಿವಾರ ಮುಂದಾಗಿದೆ ಎಂದು ಅವರು ದೂರಿದ್ದಾರೆ.

ಸಹಕಾರ ಚಳವಳಿ ಪ್ರಬಲವಾಗಿರುವ ಕೇರಳ, ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಸಹಕಾರಿ ಸಂಘಗಳು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿವೆ. ಇವುಗಳ ಮೇಲೆ ತನ್ನ ನಿಯಂತ್ರಣ ಸಾಧಿಸುವ ಉದ್ದೇಶದಿಂದ ಮೋದಿ ಸರ್ಕಾರ ಕೈಗೊಂಡಿರುವ ಈ ನಡೆ ಸಂವಿಧಾನಬಾಹಿರವಾಗಿದೆ. ಇದು ಕೋಮುವಾದಿ ಕ್ರಮವೂ ಆಗಿದೆ ಎಂದು ಅವರು ಟೀಕಿಸಿದ್ದಾರೆ.

ಕೇಂದ್ರ ಸರ್ಕಾರದ ಈ ನಡೆಯನ್ನು ವಿರೋಧಿಸಿ ಎಲ್ಲ ವಿರೋಧ ಪಕ್ಷಗಳು ತುರ್ತಾಗಿ ರಾಷ್ಟ್ರಪತಿ ಅವರನ್ನು ಭೇಟಿಯಾಗಿ, ಮಧ್ಯಪ್ರವೇಶಿಸುವಂತೆ ಕೋರಬೇಕು ಎಂದು ಆಗ್ರಹಿಸಿದ್ದಾರೆ.

ಸಂವಿಧಾನದ ರಾಜ್ಯ ಪಟ್ಟಿಯಲ್ಲಿ ಸಹಕಾರ ಸಂಘಗಳ ವಿಷಯ ಬರುವುದರಿಂದ ಈ ಕುರಿತು ಕಾನೂನು ಹೋರಾಟಕ್ಕೂ ಮುಂದಾಗಬೇಕು ಎಂದು ಅವರು ವಿರೋಧ ಪಕ್ಷಗಳಿಗೆ ಸಲಹೆ ನೀಡಿದ್ದಾರೆ.

ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಸಹಕಾರಿ ಸಂಘಗಳ ವಿಷಯವು ರಾಜ್ಯಗಳ ಪಟ್ಟಿಗೆ ಬರುವುದರಿಂದ ಇವುಗಳ ಮೇಲೆ ರಾಜ್ಯಗಳಿಗೆ ಸಹಜವಾಗಿಯೇ ಕಾಳಜಿ ಇರುತ್ತದೆ. ಹೀಗಿರುವಾಗ ಕೇಂದ್ರ ಸರ್ಕಾರದ ನಡೆಯನ್ನು ಸೂಕ್ಷ್ಮವಾಗಿ ಗಮನಿಸಬೇಕಾದ ಅಗತ್ಯವಿದೆ ಎಂದು ಹೇಳಿದ್ದರು. ಅದರ ಬೆನ್ನಲ್ಲೇ ಚೆನ್ನಿತ್ತಾಲ ಅವರು ಪ್ರತಿಕ್ರಿಯೆ ನೀಡಿದ್ದಾರೆ.

ಗುತ್ತಿಗೆದಾರರಿಗೆ ₹ 15 ಸಾವಿರ ಕೋಟಿ ಬಿಲ್ ಬಾಕಿ

● ಅಕ್ರಂ ಮೊಹಮ್ಮದ್

ಬೆಂಗಳೂರು: ಕಳೆದ ಎರಡು ವರ್ಷಗಳಿಂದ ರಾಜ್ಯ ಸರ್ಕಾರ ತೀವ್ರ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿದ್ದು, ವಿವಿಧ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಗುತ್ತಿಗೆದಾರರಿಗೆ ₹ 15 ಸಾವಿರ ಕೋಟಿಗೂ ಹೆಚ್ಚು ಬಿಲ್ ಪಾವತಿಸದೇ ಬಾಕಿ ಉಳಿಸಿಕೊಂಡಿದೆ ಎಂದು ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ.

ಮೂಲಗಳ ಪ್ರಕಾರ, ಅತಿ ಹೆಚ್ಚು ಬಿಲ್ ₹ 4,500 ಕೋಟಿ ಲೋಕೋಪಯೋಗಿ ಇಲಾಖೆಯಲ್ಲಿ ಬಾಕಿ ಇದೆ. ಉಳಿದಂತೆ, ಜಲ ಸಂಪನ್ಮೂಲ ಇಲಾಖೆ ಮತ್ತು ಬೃಹತ್ ಬೆಂಗಳೂರು ಮಹಾನಗರಪಾಲಿಕೆಯಲ್ಲಿ (ಬಿಬಿಎಂಪಿ) ಅಂದಾಜು ತಲಾ ₹ 3,000 ಕೋಟಿ ಬಾಕಿ ಇದೆ.

ರಾಜ್ಯ ಗುತ್ತಿಗೆದಾರರ ಸಂಘದ ಪ್ರತಿನಿಧಿಗಳ ಪ್ರಕಾರ, ಹಿಂದೆಂದೂ ಇಷ್ಟೊಂದು ದೊಡ್ಡ ಮೊತ್ತ ಬಾಕಿ ಇರಲಿಲ್ಲ. 'ಬಿಲ್ ಬಾಕಿ ಸಾಮಾನ್ಯವಾಗಿದ್ದು, ಪಾವತಿಗೆ ಉಳಿದುಕೊಂಡಿರುವ ಮೊತ್ತವನ್ನು ಪಾವತಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ. 2018–19 ರಿಂದಲೇ ಬಿಲ್ ಬಾಕಿ ಉಳಿದುಕೊಂಡಿದೆ' ಎಂದು ಸರ್ಕಾರದ ಉನ್ನತ ಮೂಲಗಳು ಹೇಳಿವೆ.

ಎಚ್.ಡಿ. ಕುಮಾರಸ್ವಾಮಿ ನೇತೃತ್ವತ್ವದ ಜೆಡಿಎಸ್- ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಪತನಗೊಳ್ಳುವ ವೇಳೆಗೆ ವಿವಿಧ ಕಾಮಗಾರಿಗಳನ್ನು ನಿರ್ವಹಿಸಿದ ಗುತ್ತಿಗೆದಾರರ ಬಾಕಿ ಮೊತ್ತ ₹ 4,500 ಕೋಟಿಯಿಂದ ₹ 5,000 ಕೋಟಿಯಷ್ಟಿತ್ತು. ನಂತರದ ದಿನಗಳಲ್ಲಿ ಈ ಮೊತ್ತ ಹೆಚ್ಚುತ್ತಲೇ ಹೋಗಿದೆ. ಅಲ್ಲದೆ, ಕೋವಿಡ್ ಮತ್ತು ಲಾಕ್‌ಡೌನ್ ಕಾರಣ ವರಮಾನದಲ್ಲಿ ಕುಸಿತ ಉಂಟಾಗಿದೆ. ಅದರಲ್ಲೂ ಕಳೆದ ಎರಡು ಆರ್ಥಿಕ ವರ್ಷಗಳಲ್ಲಿ ಭಾರಿ ಕೊರತೆ ಆಗಿದೆ. ಹೀಗಾಗಿ, ಬಿಲ್ ಪಾವತಿಗೆ ಉಳಿದ ಮೊತ್ತವೂ ಏರಿಕೆ ಆಗಿದೆ ಎಂದೂ ಮೂಲಗಳು ತಿಳಿಸಿವೆ.

ಗುತ್ತಿಗೆದಾರರಿಗೆ 2019 ರ ಜುಲೈ ತಿಂಗಳಲ್ಲಿ ಲೋಕೋಪಯೋಗಿ ಇಲಾಖೆ ಪಾವತಿಸಬೇಕಾದ ಮೊತ್ತ ಸುಮಾರು ₹ 1,300 ಕೋಟಿಯಿಂದ ₹ 1,500 ಕೋಟಿಯಷ್ಟಿತ್ತು. ಕಳೆದ ಎರಡು ವರ್ಷಗಳಲ್ಲಿ ಈ ಮೊತ್ತ ಮೂರು ಪಟ್ಟು ಹೆಚ್ಚಿದೆ. ಹೆಚ್ಚಿನ ಇಲಾಖೆಗಳಲ್ಲಿ ಬಿಲ್‌ಗಳು ಬಾಕಿ ಉಳಿದುಕೊಂಡಿದೆ. ಅತೀ ಹೆಚ್ಚು ಮೊತ್ತ ಪಾವತಿಗೆ ಬಾಕಿ ಇರುವ ಇಲಾಖೆಗಳಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಕೂಡಾ ಸೇರಿದೆ.

'ಈ ಹಿಂದಿನ ವರ್ಷಗಳಲ್ಲಿ ಬಿಲ್ ಪಾವತಿ ವಿಳಂಬವಾಗುತ್ತಿದ್ದರೂ ಇಷ್ಟೊಂದು ದೊಡ್ಡ ಪ್ರಮಾಣಕ್ಕೆ ತಲುಪಿದ ಬಗ್ಗೆ ನನಗಂತೂ ಗೊತ್ತಿಲ್ಲ' ಎಂದು ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಹೇಳಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ, 'ಬಿಲ್‌ಗಳು ಪಾವತಿಗೆ ಬಾಕಿ ಇದ್ದರೂ, ಇದು ಸಹಜ ಪ್ರಕ್ರಿಯೆ. ಪಾವತಿಗೆ ಬಾಕಿ ಇರುವ ₹ 15 ಸಾವಿರ ಕೋಟಿಯಲ್ಲಿ ಬಹುತೇಕ ಬಿಲ್‌ಗಳು ಹಿಂದಿನ ಸರ್ಕಾರದ ಅವಧಿಯದ್ದು. ಎಲ್ಲ ಬಾಕಿ ಬಿಲ್‌ಗಳನ್ನು ನಾವು ಪಾವತಿಸುತ್ತಿದ್ದೇವೆ' ಎಂದರು.

'ವಿವಿಧ ಮೂಲಗಳಿಂದ ಬರಬೇಕಾಗಿದ್ದ ರಾಜ್ಯದ ವರಮಾನದಲ್ಲಿ ಕುಂಠಿತವಾಗಿದೆ. ಇದು ಆರ್ಥಿಕ ಪರಿಸ್ಥಿತಿಯ ಮೇಲೆ ಪರಿಣಾಮ ಬೀರಿದ್ದು, ಬಿಲ್ ಪಾವತಿಯ ಮೇಲೆಯೂ ಪರಿಣಾಮ ಬೀರಿದೆ' ಎಂದು ಅವರು ಸ್ಪಷ್ಟಪಡಿಸಿದರು.

ಭಾರತ ಮೂಲದ ಸಿರಿಶಾ ಬಾಂದ್ಲಾ ಸೇರಿ ಐವರು ಸಾಹಸಯಾತ್ರೆಯಲ್ಲಿ ಭಾಗಿ

ರಿಚರ್ಡ್ ಬ್ರಾನ್ಸನ್‌ರಿಂದ ಗಗನಯಾನ ಯಶಸ್ವಿ

ಅಮೆರಿಕ (ಎಪಿ): ಬ್ರಿಟನ್ ಮೂಲದ ಕೋಟ್ಯಧಿಪತಿ ಉದ್ಯಮಿ ರಿಚರ್ಡ್ ಬ್ರಾನ್ಸನ್ ಹಾಗೂ ಇತರ ಐವರು ಗಗನಯಾತ್ರಿಗಳು ಭಾನುವಾರ ಯಶಸ್ವಿಯಾಗಿ ಬಾಹ್ಯಾಕಾಶಯಾನ ಪೂರ್ಣಗೊಳಿಸಿದರು.

ಬ್ರಾನ್ಸನ್ ಹಾಗೂ ಇತರರನ್ನು ಹೊತ್ತ 'ವಿಎಸ್‌ಎಸ್ ಯುನಿಟಿ' ವ್ಯೋಹನೌಕೆ ನ್ಯೂ ಮೆಕ್ಸಿಕೊದಿಂದ ನಭಕ್ಕೆ ಚಿಮ್ಮಿತು. ನ್ಯೂ ಮೆಕ್ಸಿಕೊ ಮರುಭೂಮಿಯ ಮೇಲೆ 88 ಕಿ.ಮೀ. ಅಂತರದಲ್ಲಿ ಗಗನನೌಕೆ ಭೂಮಿ ವಾತಾವರಣವನ್ನು ದಾಟಿದ ನಂತರ, ಗಗನಯಾನಿಗಳು 3–4 ನಿಮಿಷಗಳ ಕಾಲ ತೂಕವಿಲ್ಲದ ಸ್ಥಿತಿಯನ್ನು ಅನುಭವಿಸಿದರು.

ಭೂಮಿಯ ವಕ್ರತೆಯನ್ನು ಸಹ ಅವರು ಕಣ್ತುಂಬಿಕೊಂಡು, ರೋಮಾಂಚನಗೊಂಡರು. ನಂತರ, ಅವರನ್ನು ಹೊತ್ತ ಗಗನನೌಕೆ ಸುರಕ್ಷಿತವಾಗಿ ಮರುಭೂಮಿಯಲ್ಲಿ ನಿರ್ಮಿಸಿದ್ದ ರನ್‌ವೇನಲ್ಲಿ ಇಳಿಯಿತು.

ಭಾರತ ಮೂಲದ ಏರೋನಾಟಿಕಲ್ ಎಂಜಿನಿಯರ್ 34ರ ಹರೆಯದ ಸಿರಿಶಾ ಬಾಂದ್ಲಾ ಸಹ ಈ ಯಾನದಲ್ಲಿ ಪಾಲ್ಗೊಂಡಿದ್ದರು.



ಉದ್ಯಮಿ ರಿಚರ್ಡ್ ಬ್ರಾನ್ಸನ್ ಹಾಗೂ ಇತರ ಐವರು ಗಗನಯಾನಿಗಳನ್ನು ಹೊತ್ತ ಗಗನನೌಕೆ 'ವಿಎಸ್‌ಎಸ್ ಯುನಿಟಿ' ಬಾಹ್ಯಾಕಾಶದ ಅಂಚು ತಲುಪಿ ಮರು ಪ್ರಯಾಣ ಬೆಳೆಸಿತು –ರಾಯಿಟರ್ಸ್ ಚಿತ್ರ

ರಿಚರ್ಡ್ ಬ್ರಾನ್ಸನ್ ಒಡೆತನದ 'ವರ್ಜಿನ್ ಗ್ಯಾಲಾಕ್ಟಿಕ್' ಕಂಪನಿ ಈ ಗಗನನೌಕೆಯನ್ನು ಅಭಿವೃದ್ಧಿಪಡಿಸಿದೆ. ಮುಂದಿನ ವರ್ಷ ಬಾಹ್ಯಾಕಾಶ ಪ್ರವಾಸೋದ್ಯಮ ಆರಂಭಿಸುವ ಮಹತ್ವಾಕಾಂಕ್ಷಿ ಯೋಜನೆಯ ಭಾಗವಾಗಿ ಅವರು ಈ ಗಗನಯಾನ ಕೈಗೊಂಡಿದ್ದಾರೆ. ಈಗಾಗಲೇ 600ಕ್ಕೂ ಹೆಚ್ಚು ಜನರು ಈ ಸಾಹಸ ಯಾತ್ರೆಗೆ ನೋಂದಣಿ ಮಾಡಿಸಿದ್ದಾರೆ. ಆನ್‌ಲೈನ್ ಮಾರಾಟ ಕ್ಷೇತ್ರದ ದೈತ್ಯ ಕಂಪನಿ ಅಮೆಜಾನ್‌ನ ಸಂಸ್ಥಾಪಕ ಜೆಫ್ ಬಿಜೋಸ್ ಸಹ ಬಾಹ್ಯಾಕಾಶ ಪ್ರಯಾಣ ಕೈಗೊಳ್ಳಲು ಸಿದ್ಧತೆ ನಡೆಸಿದ್ದು, ಜುಲೈ 19ರಂದು ಅವರು ಈ ಸಾಹಸ ಯಾತ್ರೆ ನಡೆಸುವ ನಿರೀಕ್ಷೆ ಇದೆ.

ಭಾರತದಲ್ಲೇ ಜನಿಸಿ ಬಾಹ್ಯಾಕಾಶ ಯಾನ ಕೈಗೊಂಡ ಎರಡನೇ ಮಹಿಳೆ ಸಿರಿಶಾ

ಹೈದರಾಬಾದ್: ಬಾಹ್ಯಾಕಾಶ ಪ್ರವೇಶಿಸಿದ ಭಾರತ ಮೂಲದವರಲ್ಲಿ ಸಿರಿಶಾ ಬಾಂದ್ಲಾ ನಾಲ್ಕನೇಯವರಾಗಿದ್ದಾರೆ. ರಾಕೇಶ್ ಶರ್ಮಾ, ಕಲ್ಪನಾ ಚಾವ್ಲಾ ಮತ್ತು ಸುನೀತಾ ವಿಲಿಯಮ್ಸ್ ಬಾಹ್ಯಾಕಾಶ ಯಾನ ಕೈಗೊಂಡಿದ್ದರು.

ಭಾರತದಲ್ಲೇ ಜನಿಸಿ ಬಾಹ್ಯಾಕಾಶ ಯಾನ ಕೈಗೊಂಡವರಲ್ಲಿ ಕಲ್ಪನಾ ಚಾವ್ಲಾ ನಂತರ ಎರಡನೇ ಮಹಿಳೆ ಎನ್ನುವ ಕೀರ್ತಿಗೂ ಸಿರಿಶಾ ಪಾತ್ರರಾಗಿದ್ದಾರೆ.

ಆಂಧ್ರಪ್ರದೇಶದ ಗುಂಟೂರು ಮೂಲದ ಸಿರಿಶಾ ಅವರ ಪೋಷಕರು, ಅಮೆರಿಕದಲ್ಲೇ ನೆಲೆಸಿದ್ದಾರೆ. ಸಿರಿಶಾ ನಾಲ್ಕು ವರ್ಷವಳಿದ್ದಾಗ ಅಮೆರಿಕಕ್ಕೆ ತೆರಳಿದ್ದರು. ಹ್ಯೂಸ್ಟನ್‌ನಲ್ಲಿ ಬೆಳೆದಿರುವ ಸಿರಿಶಾ, 2011ರಲ್ಲಿ ಪರ್‌ಡ್ಯು ಯೂನಿವರ್ಸಿಟಿಯಿಂದ ಸ್ಕೂಲ್ ಏರೊನಾಟಿಕ್ಸ್ ಮತ್ತು ಅಸ್ಟ್ರೊನಾಟಿಕ್ಸ್‌ನಿಂದ ಬಿ.ಎಸ್ಸಿ. ಪದವಿ ಪಡೆದಿದ್ದಾರೆ. ನಂತರ, 2015ರಲ್ಲಿ ಜಾರ್ಜ್ ವಾಷಿಂಗ್ಟನ್ ಯೂನಿವರ್ಸಿಟಿಯಿಂದ ಎಂಬಿಎ ಪದವಿ ಪಡೆದಿದ್ದಾರೆ.

ನಾಸಾದಲ್ಲಿ ಗಗನಯಾನಿಯಾಗಬೇಕು ಎನ್ನುವುದು ಸಿರಿಶಾ ಬಯಕೆಯಾಗಿತ್ತು. ಆದರೆ, ದೃಷ್ಟಿ ದೋಷದಿಂದ ಪೈಲಟ್ ಅಥವಾ ಗಗನಯಾನಿಯಾಗಲು ಅಗತ್ಯ ಇರುವ ಮಾನದಂಡಗಳನ್ನು ಪೂರೈಸಲು ಸಾಧ್ಯವಾಗಲಿಲ್ಲ. ಬಳಿಕ, ವಾಣಿಜ್ಯ ಬಾಹ್ಯಾಕಾಶ ಯಾನದ ಮಾಹಿತಿ ಪಡೆದು ಸಿರಿಶಾ, ತನ್ನ ಕನಸನ್ನು ನನಸು ಮಾಡಿಕೊಂಡಿದ್ದಾರೆ.



ಸುಭಾಷಿತ

ಬದುಕಿನಲ್ಲಿ ಎದುರಾಗುವ ಸವಾಲುಗಳನ್ನು ನೀವು ಸೃಜನಶೀಲವಾದ ರೀತಿಯಲ್ಲಿ ಎದುರಿಸಿದ್ದೇ ಆದಲ್ಲಿ, ಜೀವನವು ಹೆಚ್ಚು ಆನಂದದಾಯಕ ಆಗಿರುತ್ತದೆ.

-ಬಿಲ್ ಗೇಟ್ಸ್

ಜನಸಂಖ್ಯೆ ನಿಯಂತ್ರಣ: ದೋಷಪೂರಿತ ನೀತಿಯಿಂದ ವ್ಯತಿರಿಕ್ತ ಪರಿಣಾಮ

ಜನಸಂಖ್ಯೆಯ ನಿಯಂತ್ರಣಕ್ಕಾಗಿ ಉತ್ತರಪ್ರದೇಶ ಸರ್ಕಾರವು ಕರಡು ಮಸೂದೆಯೊಂದನ್ನು ರೂಪಿಸಿದೆ. 'ಉತ್ತರಪ್ರದೇಶ ಜನಸಂಖ್ಯಾ (ನಿಯಂತ್ರಣ, ಸ್ಥಿರತೆ ಮತ್ತು ಕಲ್ಯಾಣ) ಮಸೂದೆ-2021' ಹೆಸರಿನ ಈ ಕರಡುವಿನ ಪ್ರಕಾರ, 'ಇಬ್ಬರಿಗಿಂತ ಹೆಚ್ಚು ಮಕ್ಕಳನ್ನು ಹೊಂದಿದವರಿಗೆ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಸ್ಪರ್ಧಿಸಲು ಅವಕಾಶವಿಲ್ಲ. ಅವರು ಸರ್ಕಾರಿ ನೌಕರಿಗೆ ಅರ್ಜಿ ಸಲ್ಲಿಸುವಂತಿಲ್ಲ. ಅವರಿಗೆ ಬಡ್ತಿ ಮತ್ತು ರಾಜ್ಯ ಸರ್ಕಾರದ ಯಾವುದೇ ಸಹಾಯಧನ ದೊರೆಯುವುದಿಲ್ಲ'. ಈ ಕರಡು ಮಸೂದೆಯನ್ನು ಬಿಡುಗಡೆ ಮಾಡಿರುವ ಸರ್ಕಾರವು ಸಾರ್ವಜನಿಕರಿಂದ ಸಲಹೆಗಳನ್ನು ಆಹ್ವಾನಿಸಿದೆ. 'ರಾಜ್ಯದ ನೈಸರ್ಗಿಕ ಮತ್ತು ಆರ್ಥಿಕ ಸಂಪನ್ಮೂಲಗಳು ಸೀಮಿತವಾದವು. ಜನಸಂಖ್ಯೆಯ ನಿಯಂತ್ರಣದಿಂದ ಮಾತ್ರವೇ ಈ ಸಂಪನ್ಮೂಲಗಳನ್ನು ಸಮಾನವಾಗಿ ಹಂಚಿಕೆ ಮಾಡಲು ಸಾಧ್ಯ' ಎಂದೂ ಕರಡುವಿನಲ್ಲಿ ಹೇಳಲಾಗಿದೆ. ಹಾಗೆಯೇ ಎರಡು ಮಕ್ಕಳ ನೀತಿಯನ್ನು ಪಾಲಿಸುವ ಸರ್ಕಾರಿ ನೌಕರರಿಗೆ ಉತ್ತೇಜನ ನೀಡುವ ಸಲುವಾಗಿ ಹಲವು ಉಪಕ್ರಮಗಳನ್ನೂ ಸರ್ಕಾರ ಪ್ರಕಟಿಸಿದೆ. ಅಸ್ಸಾಂ ಸರ್ಕಾರ ಈ ಹಿಂದೆಯೇ ಈ ದಿಕ್ಕಿನಲ್ಲಿ ಪ್ರಯತ್ನ ನಡೆಸಿದೆ. 'ಇಬ್ಬರು ಮಕ್ಕಳ ಜನಸಂಖ್ಯೆ ನೀತಿಯನ್ನು ಸರ್ಕಾರಿ ಸೌಲಭ್ಯಗಳಿಗೆ ಕೊಂಡಿಯಾಗಿಸಿ ಹಂತ ಹಂತವಾಗಿ ಜಾರಿಗೊಳಿಸಲಾಗುವುದು' ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಹೇಳಿದ್ದಾರೆ. ಬಿಜೆಪಿ ನೇತೃತ್ವದ ಸರ್ಕಾರವನ್ನು ಈ ಎರಡೂ ರಾಜ್ಯಗಳು ಹೊಂದಿವೆ. ಇಬ್ಬರಿಗಿಂತ ಹೆಚ್ಚು ಮಕ್ಕಳನ್ನು ಹೊಂದಿದವರಿಗೆ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನಿರಾಕರಿಸುವ ನಿಯಮವನ್ನು ಕೆಲವು ರಾಜ್ಯ ಸರ್ಕಾರಗಳು ಈಗಾಗಲೇ ಜಾರಿಗೊಳಿಸಿ ಚುನಾವಣೆಗೆ ಸ್ಪರ್ಧಿಸುವ ಜನರ ಹಕ್ಕನ್ನು ಮೊಟಕುಗೊಳಿಸಿವೆ.



ಜನಸಂಖ್ಯೆ ಬೆಳವಣಿಗೆಯನ್ನು ನಿಯಂತ್ರಿಸುವ ಉದ್ದೇಶದಿಂದ ಸರ್ಕಾರಿ ನೌಕರಿ ನಿರಾಕರಣೆ, ಸೌಕರ್ಯ ಕಡಿತ ಮತ್ತು ಪ್ರಜಾತಾಂತ್ರಿಕ ಹಕ್ಕುಗಳನ್ನು ಮೊಟಕುಗೊಳಿಸುವ ನೀತಿಯು ದೋಷಪೂರಿತವಾದುದು

ಸರ್ಕಾರಿ ಸವಲತ್ತುಗಳಿಗೂ ಮಕ್ಕಳ ಸಂಖ್ಯೆಗೂ ನಂಟು ಕಲ್ಪಿಸುವಂತಹ ಪ್ರಯತ್ನವು ಜನಸಂಖ್ಯಾ ಬೆಳವಣಿಗೆಯನ್ನು ತಪ್ಪಾಗಿ ಗ್ರಹಿಸಿದ ಪರಿಣಾಮ ಎನ್ನದೆ ವಿಧಿಯಿಲ್ಲ. ಇದು ಅವೈಜ್ಞಾನಿಕವೂ ಹೌದು. ಜೊತೆಗೆ ಇದು ಕೋಮು ಆಯಾಮವನ್ನೂ ಹೊಂದಿದೆ. ಅಸ್ಸಾಂ ಮುಖ್ಯಮಂತ್ರಿ ಶರ್ಮಾ ಅವರು ಜನಸಂಖ್ಯಾ ನೀತಿ ಕುರಿತು ವಿವರಿಸುವಾಗ ಮುಸ್ಲಿಂ ಸಮುದಾಯದ ಬಗೆಗೆ ನೇರವಾಗಿ ಪ್ರಸ್ತಾಪಿಸಿರುವುದು ಈ ಅಂಶವನ್ನು ದೃಢಪಡಿಸುತ್ತದೆ. ಜನಸಂಖ್ಯೆ ಹೆಚ್ಚಳದ ಬಗ್ಗೆ ಕಳೆದ ಶತಮಾನದಲ್ಲಿ ಕಂಡುಬಂದಂತಹ ಆತಂಕ ಈಗಿಲ್ಲ. ಏಕೆಂದರೆ ಜನಸಂಖ್ಯೆ ಏರಿದಂತೆಯೇ ಒಂದು ನಿರ್ದಿಷ್ಟ ಹಂತದಲ್ಲಿ ಇಳಿಕೆಯೂ ಆಗುತ್ತದೆ ಎನ್ನುವುದು ಈಗ ಸಮಾಜ ವಿಜ್ಞಾನಿಗಳು ಕಂಡುಕೊಂಡಿರುವ ಸತ್ಯ. ಭಾರತದ ಜನಸಂಖ್ಯೆ 2050ರ ಹೊತ್ತಿಗೆ ಶೃಂಗಕ್ಕೇರಲಿದ್ದು, ಬಳಿಕ ಇಳಿಕೆಯಾಗಲಿದೆ ಎಂದು ಅಂದಾಜಿಸಲಾಗಿದೆ. ಇದಕ್ಕೆ ಮುಖ್ಯವಾಗಿ ಕಡಿಮೆಯಾಗುತ್ತಿರುವ ಮನುಷ್ಯ ಫಲವತ್ತತೆಯ ದರ ಕಾರಣವಾಗಲಿದೆ. 1992-93ರಲ್ಲಿ ಭಾರತದಲ್ಲಿ ಒಟ್ಟು ಫಲವತ್ತತೆ ದರ (ಟಿಎಫ್‌ಆರ್) 3.4ರಷ್ಟು ಇದ್ದುದು, 2015-16ರ ಹೊತ್ತಿಗೆ 2.2ಕ್ಕೆ ಇಳಿದಿದೆ ಎಂದು ರಾಷ್ಟ್ರೀಯ ಕುಟುಂಬ ಮತ್ತು ಆರೋಗ್ಯ ಸಮೀಕ್ಷೆಯೇ ಪ್ರಕಟಿಸಿದೆ. ಫಲವತ್ತತೆ ದರ ಕಡಿಮೆಯಾಗಿರುವ ಈ ವಿದ್ಯಮಾನವು ಹಿಂದೂಗಳು, ಮುಸ್ಲಿಮರು ಸೇರಿದಂತೆ ಎಲ್ಲ ಧರ್ಮೀಯರಲ್ಲೂ ಕಂಡುಬಂದಿದೆ ಎಂದು ಆ ಸಮೀಕ್ಷೆ ಗುರುತಿಸಿದೆ. ಫಲವತ್ತತೆಯ ದರ ಕಡಿಮೆಯಾಗಿರುವುದು ಹಿಂದೂಗಳಿಗಿಂತ ಮುಸ್ಲಿಮರಲ್ಲೇ ಅಧಿಕ ಎಂದೂ ಸಮೀಕ್ಷೆ ಹೇಳಿದೆ. ತಮಿಳುನಾಡು ಮತ್ತು ಆಂಧ್ರ ಪ್ರದೇಶದಲ್ಲಿ ಫಲವತ್ತತೆಯ ದರವು ಮುಸ್ಲಿಮರಲ್ಲಿ, ಜನಸಂಖ್ಯೆ ಪ್ರಮಾಣ ಕಾಯ್ದುಕೊಳ್ಳುವಿಕೆ ದರವಾದ 2.1ರಷ್ಟು ಅಥವಾ ಅದಕ್ಕಿಂತ ಕಡಿಮೆ ಇದೆ. ಇನ್ನೂ ಹಲವು ರಾಜ್ಯಗಳಲ್ಲಿ ಪರಿಸ್ಥಿತಿ ಇದಕ್ಕಿಂತ ಭಿನ್ನವಿಲ್ಲ. ಮುಸ್ಲಿಮರ ವಿದ್ಯಾಭ್ಯಾಸ ಮಟ್ಟ ಕಡಿಮೆಯಾಗಿದ್ದು, ಬಡತನ ಮತ್ತು ಆರೋಗ್ಯ ಸೌಲಭ್ಯಗಳ ಕೊರತೆ ಇರುವ ಕೆಲವು ಪ್ರದೇಶಗಳಲ್ಲಿ ಆ ಸಮುದಾಯದ ಫಲವತ್ತತೆ ದರ ಹೆಚ್ಚು ಇದೆ ಎಂಬುದು ಗಮನಾರ್ಹ ಸಂಗತಿ. ಈ ವಿಷಯಗಳನ್ನು ಗಮನಿಸಿದಾಗ, ದೇಶದಲ್ಲಿ ಮುಸ್ಲಿಮರ ಜನಸಂಖ್ಯೆಯಲ್ಲಿ ತೀವ್ರಗತಿಯಲ್ಲಿ ಏರಿಕೆ ಆಗುತ್ತಿದೆ ಎಂಬ ಸಂಕಥನದಲ್ಲಿ ಹುರುಳಿಲ್ಲ ಎಂಬುದು ಗೊತ್ತಾಗುತ್ತದೆ.

ಜನಸಂಖ್ಯೆ ಬೆಳವಣಿಗೆ ಹೆಚ್ಚಿದ್ದ ಸಂದರ್ಭಗಳಲ್ಲೂ ನಿಯಂತ್ರಣ ಕ್ರಮಗಳನ್ನು ಬಲವಂತವಾಗಿ ಹೇರಿದ್ದರ ಪರಿಣಾಮಗಳು ಕೆಟ್ಟದಾಗಿವೆ ಎಂಬುದು ಜಾಗತಿಕ ವಿದ್ಯಮಾನಗಳನ್ನು ಗಮನಿಸಿದಾಗ ತಿಳಿಯುತ್ತದೆ. ಚೀನಾದಲ್ಲಿ 'ಒಂದು ಕುಟುಂಬಕ್ಕೆ ಒಂದೇ ಮಗು' ಎಂಬ ಕಠಿಣ ನೀತಿಯನ್ನು ಸರ್ಕಾರ ಸಡಿಲಿಸಿ ಐದು ವರ್ಷಗಳೇ ಉರುಳಿವೆ. ಈಗ ಅಲ್ಲಿ ಒಂದು ಕುಟುಂಬ ಮೂವರು ಮಕ್ಕಳನ್ನು ಹೊಂದುವುದಕ್ಕೆ ಅನುಮತಿ ನೀಡಲಾಗಿದೆ. ಜನಸಂಖ್ಯೆ ಬೆಳವಣಿಗೆಯನ್ನು ನಿಯಂತ್ರಿಸುವ ಉದ್ದೇಶದಿಂದ ಸರ್ಕಾರಿ ನೌಕರಿ ನಿರಾಕರಣೆ, ಸೌಕರ್ಯ ಕಡಿತ ಮತ್ತು ಪ್ರಜಾತಾಂತ್ರಿಕ ಹಕ್ಕುಗಳನ್ನು ಮೊಟಕುಗೊಳಿಸುವ ನೀತಿಯು ದೋಷಪೂರಿತವಾದುದು. ಕೆಟ್ಟ ಪರಿಣಾಮಗಳಿಗೆ ಕಾರಣವಾಗುವಂತಹುದು. ಬಡವರಿಗೆ, ತುಳಿತಕ್ಕೆ ಒಳಗಾದವರಿಗೆ ಹಾಗೂ ಶಿಕ್ಷಣಮಟ್ಟ ಕಡಿಮೆ ಇರುವ ಕುಟುಂಬಗಳಿಗೆ ಸರ್ಕಾರದ ಸೌಲಭ್ಯಗಳ ಅಗತ್ಯ ಹೆಚ್ಚು. ಇಂತಹ ಕುಟುಂಬಗಳ ಸಾಮಾಜಿಕ- ಆರ್ಥಿಕ ಬಲವರ್ಧನೆಗೆ ಸರ್ಕಾರಗಳು ಶ್ರಮಿಸಬೇಕು. ಮಕ್ಕಳ ಸಂಖ್ಯೆಯ ಹೆಸರಿನಲ್ಲಿ ಸವಲತ್ತು ನಿರಾಕರಿಸುವುದು ತರವಲ್ಲ. ದುರ್ಬಲ ವರ್ಗಗಳ ಸಾಮಾಜಿಕ-ಆರ್ಥಿಕ ಮಟ್ಟವನ್ನು ಎತ್ತರಿಸಲು ಆರೋಗ್ಯ, ಮಾನವ ಸಂಪನ್ಮೂಲ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಬಂಡವಾಳ ಹೂಡುವುದೇ ಸರ್ಕಾರವೊಂದರ ಅತ್ಯುತ್ತಮ ಜನಸಂಖ್ಯಾ ನೀತಿ ಎನ್ನುವುದನ್ನು ಮರೆಯಬಾರದು. ಉತ್ತರಪ್ರದೇಶ ಸರ್ಕಾರ ಮತ್ತು ಅಸ್ಸಾಂ ಸರ್ಕಾರದ ಉದ್ದೇಶಿತ ಜನಸಂಖ್ಯಾ ನೀತಿಯು ರಾಜಕೀಯ ಪ್ರೇರಿತವಾದದ್ದೇ ವಿನಾ ಜನರ ಜೀವನಮಟ್ಟ ಹೆಚ್ಚಿಸುವ ಉದ್ದೇಶದ್ದಲ್ಲ ಎನ್ನುವುದು ಮೇಲ್ನೋಟಕ್ಕೇ ಎದ್ದು ಕಾಣಿಸುತ್ತಿದೆ.

ದಿನದ ಟ್ವೀಟ್



ಒಳಗೊಳ್ಳುವ ಸಮಾಜವಾಗಲಿ

ಕರ್ನಾಟಕದಲ್ಲಿ ಹುಟ್ಟಿ, ಬೆಳೆದು ತನ್ನನ್ನು ತಾನು ಕರ್ನಾಟಕದವನು ಎಂದೆನಿಸಿಕೊಂಡವರಿಗೆ, ಅವರ ಮನೆಯಲ್ಲಿ ಆಡುವ ಮಾತಿನ ಆಧಾರದ ಮೇಲೆ ಪರರಾಜ್ಯದವನು, ನಮ್ಮವನಲ್ಲ ಎಂಬ ರೀತಿಯಲ್ಲಿ ಮಾತನಾಡುವುದು, ರಾಜಕೀಯ ಕೆಸರೆರಚಾಟಕ್ಕೋಸ್ಕರ ಭೇದಭಾವ ತೋರುವುದು ತರವಲ್ಲ. ಕನ್ನಡ ಸಮಾಜ ಸೆಳೆದು ಒಳಗೊಳ್ಳುವ ಸಮಾಜ ಆಗಬೇಕೇ ವಿನಾ ವಿಘಟನೆಗೊಳ್ಳುವುದಲ್ಲ.

ಕಿರಣ್ ಕೊಡ್ಲಾಡಿ, ನಾಗರಿಕ

ಕಿಡಿನುಡಿ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಆರ್ಥಿಕವಾಗಿ ಬಲಾಢ್ಯರಾಗಿ ಇರುವವರೇ ಮೀಸಲಾತಿಯ ಲಾಭವನ್ನು ಹೆಚ್ಚು ಪಡೆಯುತ್ತಿದ್ದಾರೆ. ಇದು ನಿಲ್ಲಬೇಕು. ಯಾರಿಗೆ ಅಗತ್ಯವಿದೆಯೋ ಯಾರು ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿದ್ದಾರೋ ಅವರಿಗೇ ಮೀಸಲಾತಿಯ ಫಲ ದೊರಕುವಂತಾಗಬೇಕು.



ರಾಮದಾಸ್ ಅಠಾವಳೆ, ಕೇಂದ್ರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ, 12-7-1996

- **ಮುಂದುವರಿದ ಪ್ರತಿಭಟನೆ: ರಾಜ್ಯಸಭೆ ಮುಂದಕ್ಕೆ**

ನವದೆಹಲಿ, ಜುಲೈ 11 (ಯುಎನ್ಐ, ಪಿಟಿಐ): ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆಯು ಸಂಸತ್ತಿನ ಅಧಿವೇಶನದ ಎರಡನೆಯ ದಿನವಾದ ಇಂದೂ ಕಲಾಪವನ್ನು ಗೊಂದಲದಲ್ಲಿ ಮುಳುಗಿಸಿತು. ಲೋಕಸಭೆಯಲ್ಲಿ ಬಿಜೆಪಿಯು ಮಂಡಿಸಲು ಯತ್ನಿಸಿದ ಹೊಸ ನಿಲುವಳಿ ಸೂಚನೆಯನ್ನು ಸ್ಪೀಕರ್ ಅವರು ತಿರಸ್ಕರಿಸಿದರೆ, ರಾಜ್ಯಸಭೆಯಲ್ಲಿ ತೀವ್ರ ಗದ್ದಲ ಉಂಟಾಗಿ ಸದನವನ್ನು ನಾಳೆಗೆ ಮುಂದೂಡಲಾಯಿತು.

ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆಯ ಹಿನ್ನೆಲೆಯಲ್ಲಿ ಲೋಕಸಭೆಯಲ್ಲಿ ಹೊಸ ನಿಲುವಳಿ ಸೂಚನೆಯನ್ನು ಮಂಡಿಸಲು ಬಿಜೆಪಿ ನಾಯಕ ಜಸ್ವಂತ್ ಸಿಂಗ್ ಯತ್ನಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 12-7-1971

- **ಸಾರ್ವತ್ರಿಕ ಆರೋಗ್ಯ ವಿಮೆ ಜಾರಿಗೆ ತರಲು ರಾಷ್ಟ್ರಪತಿ ಗಿರಿ ಸಲಹೆ**


ಬೆಂಗಳೂರು, ಜುಲೈ 11– ಈ ದೇಶದ ಕೋಟ್ಯಂತರ ಮಂದಿಗೆ ಹೊಂದುವಂತಹ ಸಂಯೋಜಿತ ವೈದ್ಯ ವ್ಯವಸ್ಥೆಯನ್ನು ರೂಪಿಸ ಬೇಕಾಗಿದೆ ಎಂದು ರಾಷ್ಟ್ರಪತಿ ಶ್ರೀ ವಿ.ವಿ. ಗಿರಿಯವರು ಇಂದು ಇಲ್ಲಿ ಸಲಹೆ ಮಾಡಿದರು.

'ನಮ್ಮಲ್ಲಿರುವ ಅಲೋಪಥಿಕ್ ವೈದ್ಯರ ಸಂಖ್ಯೆ ಕಡಿಮೆ. ರೋಗಿಗಳ ಸಂಖ್ಯೆಗೆ ಅನುಗುಣವಾದ ಸಂಖ್ಯೆಯಲ್ಲಿ ವೈದ್ಯರನ್ನು ಹೊಂದಲು ಇನ್ನೂ ದೀರ್ಘಕಾಲ ಹಿಡಿಯುತ್ತದೆ' ಎಂದರು.

ನಗರದ ವಿಕ್ಟೋರಿಯಾ ಆಸ್ಪತ್ರೆಯ ವಜ್ರಮಹೋತ್ಸವವನ್ನು ಉದ್ಘಾಟಿಸಿದ ರಾಷ್ಟ್ರಪತಿಯವರು, 'ನಾವು ಭಾರತೀಯ ವೈದ್ಯ ಮತ್ತು ಹೋಮಿಯೋಪಥಿ ಪದ್ಧತಿಯನ್ನು ಪೂರ್ಣ ಉಪಯೋಗಿಸಿಕೊಳ್ಳಬೇಕೆಂಬುದು ನನ್ನ ಭಾವನೆ' ಎಂದರು.

ಜ್ಞಾನದ ಒರತೆಗೆ ಪ್ರತೀ ತಲೆಮಾರೂ ತನ್ನದೇ ಆದ ಕೊಡುಗೆ ನೀಡಿದೆ

ನಾವು ಮೊದಲಿನಿಂದಲೂ ಪ್ರಶ್ನಿಸುತ್ತ ಬಂದವರು...



ವಿಶ್ಲೇಷಣೆ

ಕ್ಯಾಪ್ಟನ್ ಜಿ.ಆರ್.ಗೋಪಿನಾಥ್

ಪ್ರಧಾನಿ ನರೇಂದ್ರ ಮೋದಿ ಅವರು ಆಧುನಿಕರಂತೆ ಕಾಣಿಸುತ್ತಾರೆ. ಮೂಢನಂಬಿಕೆಗಳಲ್ಲಿ ಮುಳುಗಿರುವವರಂತೆಯೂ ಕಾಣಿಸುತ್ತಾರೆ. ಚಂದ್ರನಲ್ಲಿ ಶೋಧ ಕೈಗೊಳ್ಳುವುದನ್ನು ಬೆಂಬಲಿಸುತ್ತಾರೆ, ಅತ್ಯಾಧುನಿಕ ಯುದ್ಧ ವಿಮಾನ ಖರೀದಿಗೆ ಆದೇಶಿಸುತ್ತಾರೆ, ದೇಶದ ಮೊದಲ ಬುಲೆಟ್ ರೈಲು ಯೋಜನೆ ಆರಂಭಿಸುತ್ತಾರೆ, ಭಾರತವು ವಿಶ್ವಕ್ಕೆ ಲಸಿಕೆಗಳನ್ನು ಪೂರೈಸುವ ಶಕ್ತಿಕೇಂದ್ರವೆಂದು ಹೆಮ್ಮೆಯಿಂದ ಹೇಳುತ್ತಾರೆ. ಇವೆಲ್ಲವೂ ಆಧುನಿಕ ವಿಜ್ಞಾನದ ಕೊಡುಗೆಗಳು.

ಮೋದಿ ಅವರು ನಕಲಿ ವಿಜ್ಞಾನದ ಬೆನ್ನನ್ನೂ ತಟ್ಟುತ್ತಾರೆ. ಪುರಾತನ ಸಂಖ್ಯಾಶಾಸ್ತ್ರ ಆಧರಿಸಿ, ಕೊರೊನಾ ವೈರಾಣು ಹೊಡೆದೋಡಿಸಲು ಶುಭ ವೇಳೆಯಲ್ಲಿ ಗಂಟೆ ಬಡಿಯಬೇಕು, ಶಂಖ ಊದಬೇಕು ಎಂದು ಅವರು ಜನರಲ್ಲಿ ಹೇಳುತ್ತಾರೆ. ಪುರಾಣ ಕಾಲದಲ್ಲಿ ಭಾರತವು ವೈಜ್ಞಾನಿಕವಾಗಿ ಬಹಳಷ್ಟು ಸಾಧನೆ ಮಾಡಿತ್ತು ಎಂದು ಉತ್ಸಾಹದಿಂದ ಅವರು ಹೇಳುತ್ತಾರೆ. ಗಣಪತಿಗೆ ಆನೆಯ ತಲೆಯನ್ನು ಜೋಡಿಸಿದ್ದು ಪ್ಲಾಸ್ಟಿಕ್ ಸರ್ಜರಿಯನ್ನು ಪಶ್ಚಿಮದ ದೇಶಗಳು ಅನ್ವೇಷಿಸುವುದಕ್ಕೂ ಮೊದಲೇ ಆಗಿದ್ದ ಬಹುದೊಡ್ಡ ಬೆಳವಣಿಗೆ ಎಂದು ಮೋದಿ ಅವರು ಹೇಳುತ್ತಾರೆ.

ತಮ್ಮಲ್ಲಿ ವಿಶೇಷ ಶಕ್ತಿ ಇದೆ ಎಂದು ಹೇಳಿಕೊಳ್ಳುವವರ ಸಂಖ್ಯೆ ಭಾರತದಲ್ಲಿ ಜಾಸ್ತಿಯೇ ಇದೆ. ಬೇರೆ ಬೇರೆ ವರ್ಗಗಳಿಗೆ ಸೇರಿದ ದೇವಮಾನವರು, ಸಾಧುಗಳು ಇದ್ದಾರೆ, ಪ್ರಾದೇಶಿಕ ಆಹಾರ ಪದ್ಧತಿಯನ್ನು ಪ್ರತಿಪಾದಿಸುತ್ತ ಸ್ವಯಂಘೋಷಿತ ವೈದ್ಯರಾಗಿರುವವರು ಇದ್ದಾರೆ, ಕಾಯಿಲೆಗಳಿಗೆ ತಮ್ಮಲ್ಲಿ ಔಷಧಿ ಇದೆ ಎಂದು ಸುಳ್ಳು ಹೇಳುವವರು ಇದ್ದಾರೆ. ಪಾರಂಪರಿಕ ವೈದ್ಯ ಪದ್ಧತಿ ಅನುಸರಿಸುವ ಕೆಲವರು ಸಣ್ಣ ಪ್ರಮಾಣದಲ್ಲಿಯಾದರೂ ಪ್ರಯೋಗಾಲಯ ಸ್ಥಾಪಿಸಿ, ರಕ್ತದೊತ್ತಡ ಹಾಗೂ ಕೊಬ್ಬಿನ ಅಂಶವನ್ನು ಪತ್ತೆ ಮಾಡುತ್ತಾರೆ. ಪಾಶ್ಚಿಮಾತ್ಯ ವೈದ್ಯ ಪದ್ಧತಿಯಲ್ಲಿ ಇರುವಂತೆ ತಾವೂ ಎಕ್ಸ್‌-ರೇ ಯಂತ್ರಗಳನ್ನು ಹಾಗೂ ಇಸಿಜಿ ಯಂತ್ರಗಳನ್ನು ಇಟ್ಟುಕೊಂಡು ತಾವು ಅನುಸರಿಸುತ್ತಿರುವುದಕ್ಕೆ ವಿಜ್ಞಾನದ ಹೊದಿಕೆ ಹಾಕಲು ಯತ್ನಿಸುತ್ತಾರೆ. ಕೆಲವರಿಗೆ ಮಾತ್ರ ಅರ್ಥವಾಗುವ ಆಹಾರ ಕ್ರಮವನ್ನು ಪ್ರತಿಪಾದಿಸುವುದರಿಂದ ಆರಂಭಿಸಿ, ಸಗಣಿ ಹಾಗೂ ಗೋಮೂತ್ರದವರೆಗೆ ಸಲಹೆ ನೀಡುತ್ತಾರೆ. ಇವು ಕೋವಿಡ್-19 ಸೇರಿದಂತೆ ಎಲ್ಲ ಕಾಯಿಲೆಗಳನ್ನೂ ಗುಣಪಡಿಸಬಲ್ಲವು ಎಂದು ಹೇಳುತ್ತಾರೆ. ರೋಗನಿರೋಧಕ ಶಕ್ತಿಯನ್ನು, ಪುರುಷರ ಲೈಂಗಿಕ ಸಾಮರ್ಥ್ಯವನ್ನು ಹೆಚ್ಚಿಸಲು ವೇದಗಳಲ್ಲಿ ಉಲ್ಲೇಖವಾಗಿವೆ ಎನ್ನಲಾದ ಔಷಧಗಳನ್ನು ಕೂಡ ಇವರು ಮಧ್ಯಮ ವರ್ಗದ ಜನರಿಗೆ ನೀಡುತ್ತಾರೆ. ತಕ್ಷಣವೇ 'ನಿರ್ವಾಣ'ವನ್ನು ನೀಡುವ ಶಕ್ತಿಯೂ ತಾವು ಕೊಡುವ ಔಷಧಿಗಳಿಗೆ ಇದೆ ಎನ್ನುತ್ತಾರೆ.

ಕೆಲವು ಮನೆ ಮದ್ದುಗಳು ಬಹಳ ಪ್ರಯೋಜನಕಾರಿ ಎಂಬುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ತೀರಾ ಕೆಟ್ಟ ಶೀತವಿದ್ದರೆ, ಬಿಸಿ ಹಾಲಿಗೆ ಕಾಳುಮೆಣಸಿನ ಪುಡಿ ಹಾಗೂ ಅರಿಸಿನ ಬೆರೆಸಿ ಕುಡಿದರೆ ಆರಾಮ ಆಗುತ್ತದೆ. ಹೊಟ್ಟೆ ಉಬ್ಬಿದಾಗ ಮಜ್ಜಿಗೆಗೆ ಬೆಳ್ಳುಳ್ಳಿ ಮತ್ತು ಶುಂಠಿ ಬೆರೆಸಿ ಸೇವಿಸಿದರೆ ಸಮಾಧಾನ ಸಿಗುತ್ತದೆ. ಅಂಗಾಲಿನಲ್ಲಿ ಒಂದು ಬಗೆಯ ಗಡ್ಡೆ ಆದಾಗ ಅಲ್ಲಿಗೆ ಸುಣ್ಣ ಹಚ್ಚಿ, ಬಾಳೆಹಣ್ಣಿನ ಸಿಪ್ಪೆಯನ್ನು ಪಟ್ಟಿಯ ರೀತಿಯಲ್ಲಿ ಕಟ್ಟಿಕೊಂಡರೆ ಗುಣವಾಗುವುದಿದೆ. ಕಾಯಿಲೆಗಳನ್ನು ಗುಣಪಡಿಸಲು ಮನೆ ಮದ್ದುಗಳು, ಆಯುರ್ವೇದ ಔಷಧಿಗಳು ಇವೆ. ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಬಳಕೆಯಲ್ಲಿರುವ ಪರ್ಯಾಯ ವೈದ್ಯ ಪದ್ಧತಿಗಳು, ಆದಿವಾಸಿ ಸಮುದಾಯಗಳು ಬಳಸುವ ಕೆಲವು ಔಷಧಿಗಳು ಪ್ರಯೋಜನಕಾರಿ ಹೌದು, ಅವುಗಳು ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ದಾಟಿಕೊಂಡು ಬಂದಿವೆ. ಆದರೆ ಇಂತಹ ಔಷಧಿಗಳ ಮಿತಿಗಳನ್ನು ಗುರುತಿಸಿ, ಒಪ್ಪಿಕೊಳ್ಳುವ ಕೆಲಸ ಆಗಬೇಕು. ವಿಜ್ಞಾನದ ಕವಲಾಗಿರುವ ಆಧುನಿಕ ವೈದ್ಯಪದ್ಧತಿಯು ನಂಬಿಕೆಗಳು, ಆಚರಣೆಗಳನ್ನು ಪ್ರಶ್ನಿಸಿತು, ಔಷಧವು ಕೆಲಸ ಮಾಡುತ್ತದೆಯೋ ಇಲ್ಲವೋ ಎಂಬು ದನ್ನು ಕಂಡುಕೊಳ್ಳಲು ಪ್ರಯೋಗಗಳನ್ನು ಕೈಗೊಳ್ಳುವ ಮಾರ್ಗವನ್ನು ಹುಡುಕಿಕೊಂಡಿತು. ಔಷಧವೊಂದು ಪ್ರಯೋಜನಕಾರಿ ಅಲ್ಲವೆಂದಾದರೆ, ಹೊಸದಾಗಿ ಏನು ಮಾಡಬಹುದು ಎಂಬುದನ್ನು ಶೋಧಿಸಲು ಉತ್ತೇಜನ ನೀಡಿತು.

ವಿಜ್ಞಾನಿಗಳು ತಮಗೆ ಗೊತ್ತಿಲ್ಲದ ಸಂಗತಿಗಳನ್ನು 'ಗೊತ್ತಿಲ್ಲ' ಎಂದು ಒಪ್ಪಿಕೊಂಡಿದ್ದರಿಂದಾಗಿ, ಕೆಲವು ಸಂಗತಿಗಳ ಬಗ್ಗೆ ಪ್ರಶ್ನಿಸಲು ಹಿಂಜರಿಯದೆ ಇದ್ದ ಕಾರಣದಿಂದಾಗಿ ವೈಜ್ಞಾನಿಕ ಕ್ಷೇತ್ರದಲ್ಲಿ ಪ್ರಗತಿ ಸಾಧ್ಯವಾಗಿದೆ. ಜ್ಞಾನದ ಒರತೆಗೆ ಪ್ರತೀ ತಲೆಮಾರು ಕೂಡ ತನ್ನದೇ ಆದ ಕೊಡುಗೆ ನೀಡಿದೆ. ಆದರೆ, ನಕಲಿ ವಿಜ್ಞಾನಿಗಳು ಸಮಾಜಕ್ಕೆ ಅಪಾಯಕಾರಿ. ಅವರು ತಮ್ಮ ನಕಲಿ ನಂಬಿಕೆಗಳ ಬಗ್ಗೆಯೇ ಅಪಾರವಾದ ವಿಶ್ವಾಸ ಹೊಂದಿರುತ್ತಾರೆ. ಅನುಮಾನಗಳು ಹಾಗೂ ಅನಿಶ್ಚಿತತೆಗಳು ಅವರಿಗೆ ಇಷ್ಟವಾಗುವುದಿಲ್ಲ. ಒಂದು ವಿಚಾರ ನಮಗೆ ಪೂರ್ತಿಯಾಗಿ ಗೊತ್ತಿಲ್ಲ ಎಂಬುದರಲ್ಲಿ ತಪ್ಪು ಇಲ್ಲ. ಎಲ್ಲವೂ ಗೊತ್ತಿದೆ ಎಂಬ ಮನೋಭಾವವು ತಪ್ಪುಗಳನ್ನು ಸರಿ ಮಾಡಿಕೊಳ್ಳುವ ಅವಕಾಶಗಳನ್ನೇ ಇಲ್ಲವಾಗಿಸುತ್ತದೆ, ಪ್ರಗತಿಗೆ ಅಡ್ಡಿಯಾಗುತ್ತದೆ. ಇದು ನಾಗರಿಕತೆಗೇ ಮುಳುವಾಗಬಹುದು.

ಈಗ, ಮೊದಲು ಪ್ರಸ್ತಾಪಿಸಿದ್ದ ವಿಷಯಕ್ಕೆ ಮರಳೋಣ. ಮೋದಿ ಅವರು ವಿಜ್ಞಾನವನ್ನು ಪ್ರತಿಪಾದಿಸುವ ವ್ಯಕ್ತಿಯೋ ನಕಲಿ ವಿಜ್ಞಾನವನ್ನು ನಂಬುವ ವ್ಯಕ್ತಿಯೋ ಎಂಬ ಪ್ರಶ್ನೆ ಮೂಡುತ್ತದೆ. ಅವರು ವಿಜ್ಞಾನವನ್ನೂ ನಕಲಿ ವಿಜ್ಞಾನವನ್ನೂ ಬೇರೆ ಬೇರೆ ಸಂದರ್ಭಗಳಲ್ಲಿ ಏಕೆ ಜನರ ಮುಂದಿರಿಸುತ್ತಿದ್ದಾರೆ? ಆಧುನಿಕ ಹಾಗೂ ವಿಚಾರವಾದಿ ಮತದಾರರನ್ನು, ಸಾಂಪ್ರದಾಯಿಕ ಮತ್ತು ಮೂಢನಂಬಿಕೆಗಳಲ್ಲಿ ನಂಬಿಕೆ ಹೊಂದಿರುವ ಮತದಾರರನ್ನು ಗಮನದಲ್ಲಿ ಇರಿಸಿಕೊಂಡು, ಅವರಿಬ್ಬರನ್ನೂ ಸೆಳೆಯುವ ಉದ್ದೇಶದಿಂದ ಮಾಡಿದ ರಾಜಕೀಯ ತಂತ್ರ ಇದು ಎನ್ನುವುದಾದರೆ, ಈಚೆಗಿನ ಕೆಲವು ವಿಧಾನಸಭಾ ಚುನಾವಣೆಗಳ ಫಲಿತಾಂಶ ಗಮನಿಸಿದರೆ ಈ ತಂತ್ರ ನಿರೀಕ್ಷಿತ ಯಶಸ್ಸು ಕಂಡಿಲ್ಲ ಎನ್ನಬೇಕಾಗುತ್ತದೆ. ಭಾರತವನ್ನು ತಾಂತ್ರಿಕವಾಗಿ ಉನ್ನತ ಮಟ್ಟಕ್ಕೇರಿದ ದೇಶಗಳ ಸಾಲಿಗೆ ಕೊಂಡೊಯ್ಯುವ ಅವಸರದಲ್ಲಿ ಇರುವ ವ್ಯಕ್ತಿ ತಾವು ಎಂಬ ಚಿತ್ರಣವನ್ನು ಅವರು ತಮ್ಮ ಬಗ್ಗೆ ಕಟ್ಟಿಕೊಂಡಿದ್ದಾರೆ. ಅವರು ಎರಡೆರಡು ಬಗೆಯ ಸಂದೇಶಗಳನ್ನು ರವಾನಿಸುವುದು, ಮನುಷ್ಯನ ತರ್ಕಕ್ಕೆ ಮೀರಿದ ಸಂಗತಿಗಳನ್ನು ಸಾಂಕೇತಿಕವಾಗಿ ಆಚರಿಸುವುದು ತಮ್ಮ ಬಗ್ಗೆ ಕಟ್ಟಿಕೊಂಡಿರುವ ಚಿತ್ರಣಕ್ಕೆ ಸರಿಹೊಂದುವುದಿಲ್ಲ.

ಕೇಸರಿ ಸಂಘಟನೆಯ ಒಳಗೆ ಹಾಗೂ ಇತರೆಡೆಗಳಲ್ಲಿನ ಮೋದಿ ನಿಷ್ಠರು ಭಾರತವನ್ನು ಕೆಟ್ಟದ್ದಾಗಿ ತೋರಿಸುತ್ತಿದ್ದಾರೆ, ಅಜ್ಞಾನ ಹಾಗೂ ಮೂಢನಂಬಿಕೆಗಳಲ್ಲಿ ಮುಳುಗಿಹೋಗಿರುವ ದೇಶ ಭಾರತ ಎಂಬಂತೆ ಚಿತ್ರಿಸುತ್ತಿದ್ದಾರೆ, ಭಾರತವು ಮತ್ತೆ ಮಧ್ಯಯುಗಕ್ಕೆ ಮರಳುತ್ತಿದೆ ಎಂಬಂತಹ ಭಾವನೆ ಮೂಡಿಸುತ್ತಿದ್ದಾರೆ. ಇದೇ ವೇಳೆ ಮೋದಿ ಅವರ ನೇತೃತ್ವದ ಸರ್ಕಾರದಲ್ಲಿನ ಆಡಳಿತಗಾರರು ಹಾಗೂ ನೀತಿ ನಿರೂಪಕರು ಪ್ರತಿಗಾಮಿ ಶಕ್ತಿಗಳ ಕಾರಣದಿಂದಾಗಿ ಪಾರ್ಶ್ವವಾಯುವಿಗೆ ತುತ್ತಾದವರಂತೆ ಆಗಿದ್ದಾರೆ. ಅವರಿಗೆ ಭಾರತವನ್ನು ಅಭಿವೃದ್ಧಿ ಹೊಂದಿದ ದೇಶಗಳ ಸಾಲಿಗೆ ಸೇರಿಸಲು ಅಗತ್ಯವಿರುವ ವೈಜ್ಞಾನಿಕ ಪ್ರಗತಿಗೆ ಒತ್ತು ನೀಡಲು ಅಥವಾ ಮೂಲಸೌಕರ್ಯ ಅಭಿವೃದ್ಧಿಪಡಿಸಲು ಆಗುತ್ತಿಲ್ಲ. ಭಾರತವು ಇದುವರೆಗೆ ಒಂದು ಮುಂಚೂಣಿಗೆ ಬರುತ್ತಿದ್ದ ಶಕ್ತಿಯಂತೆ ಕಾಣಿಸುತ್ತಿತ್ತು. ಆದರೆ, ವಿಕೋಪದ ಈ ಹೊತ್ತಿನಲ್ಲಿ ದೇಶವು ನಕಲಿ ವಿಜ್ಞಾನದ ಸಾಗರದಲ್ಲಿ ದಿಕ್ಕೆಟ್ಟು ಚಲಿಸುತ್ತಿರುವ, ತೂತು ಬಿದ್ದ ನೌಕೆಯಂತೆ ಆಗಿದೆ.

ಬದುಕಿನ ಅರ್ಥವನ್ನು ಶೋಧಿಸುವ ಕೆಲಸವನ್ನು ಭಾರತದ ನಾಗರಿಕತೆ ಮಾಡಿದೆ. ಆಧುನಿಕ ವಿಜ್ಞಾನವು ಭಾರತೀಯ ಚಿಂತನೆಗಳಿಗೆ ವಿರುದ್ಧವಾದುದಲ್ಲ. ಪ್ರಶ್ನೆ ಮಾಡುವ ಮನೋಭಾವ, ಹೊಸ ಆಲೋಚನೆಗಳನ್ನು ಸ್ವೀಕರಿಸುವುದು, ಹೊಸ ಜ್ಞಾನ ಸಂಪಾದನೆಯ ಮೂಲಕ ವಿಕಾಸ ಹೊಂದುತ್ತ ಸಾಗುವುದು ಉಪನಿಷತ್ತುಗಳ ಕಾಲದಿಂದಲೂ ಭಾರತೀಯರ ಬದುಕಿನ ಮೂಲದ್ರವ್ಯ. ಮೋದಿ ಅವರು ಸಮಯ ವ್ಯರ್ಥ ಮಾಡದೆಯೇ ದೇಶವನ್ನು ವಿಜ್ಞಾನದ ಪಥದಲ್ಲಿ ಮುಂದಕ್ಕೆ ಒಯ್ಯಬೇಕು.



ಚುರುಮುರಿ



ನಾವು 'ಸಿ' ಗ್ರೇಡಿಗರು!

• ಸುಮಂಗಲಾ

ಬೆಕ್ಕಣ್ಣನಿಗೆ ಎಸ್‌ಎಸ್‌ಎಲ್‌ಸಿ ಓದುವ ಹುಕಿ ಬಂದಿತ್ತು. ಕಳೆದ ವರ್ಷದ ಆರಂಭದಲ್ಲಿ ಪಕ್ಕದಲ್ಲಿದ್ದ ಸರ್ಕಾರಿ ಸ್ಕೂಲಿಗೆ ಸೇರಿಸಿದ್ದೆ. ಮೊದಲು ನಾಕಾರು ತಿಂಗಳು ವಿದ್ಯಾಗಮ ಆಯಿತು. ಆಮೇಲೆ ಒಂದೆರಡು ತಿಂಗಳು ತರಗತಿಗಳೂ ನಡೆದವು. ಮಹಾ ಕುಡುಮಿಯಂತೆ ನಟಿಸುತ್ತ ಏನೋ ಓದಿಕೊಳ್ಳುತ್ತಿದ್ದ ಬೆಕ್ಕಣ್ಣ ಮೊನ್ನೆಯಿಂದ ತೀರಾ ಹ್ಯಾಪು ಮೋರೆ ಮಾಡಿತ್ತು.

'ನಾ ಎಷ್ಟ್ ಬಡಕೊಂಡೆ... ನನ್ನೂ ಛಲೋ ಪ್ರೈವೇಟ್ ಸ್ಕೂಲಿಗೆ ಸಿಬಿಎಸ್‌ಇ ಅಥವಾ ಐಸಿಎಸ್‌ಇ ಸಿಲಬಸ್ ಇರೂ ಸ್ಕೂಲಿಗೆ ಸೇರಿಸು ಅಂತ. ಡೊನೇಶನ್ ತುಂಬಾಕೆ ರೊಕ್ಕ ಎಲ್ಲಿಂದ ತರೂದು ಅಂತ್ಹೇಳಿ ಸರ್ಕಾರಿ ಸ್ಕೂಲಿಗೆ ಸೇರಿಸಿದೆ. ಈಗ ನೋಡು... ಸಿಬಿಎಸ್‌ಇ ಅವ್ರಿಗೆಲ್ಲ ಪರೀಕ್ಷೆನೆ ಇಲ್ಲ. ನಮಗ ಸ್ಟೇಟ್ ಸಿಲಬಸ್ಸಿನೋರಿಗೆ ಮಾತ್ರ ಪರೀಕ್ಷೆ ಮಾಡೇಮಾಡ್ತೀವಿ ಅಂತ ನಮ್ಮ ಪರೀಕ್ಷಾ ಸಚಿವರು ಟೊಂಕ ಕಟ್ಟಿ ನಿಂತಾರ' ಎಂದು ಉದ್ದಕ್ಕೆ ವದರುತ್ತ ಅಳುಮೋರೆ ಮಾಡಿತು.

'ಪರೀಕ್ಷೆ ಮಾಡೂದು ನಿಮ್ಮ ವಳ್ಳೇದಕ್ಕೆ ಅಲ್ಲೇನು... ಮತ್ತ ಪರೀಕ್ಷೆಲಿ ಹೆಂಗಿದ್ರೂ ಯಾರೂ ಫೇಲೇ ಆಗಂಗಿಲ್ಲ, ಫೇಲಾಗೋರಿನ್ನೂ ಸಿ ಗ್ರೇಡಿನಾಗೆ ಪಾಸ್ ಮಾಡ್ತೀನಿ ಅಂದಾರಲ್ಲ' ನಾನು ಸಮಾಧಾನಿಸಲು ನೋಡಿದೆ.

'ಹಳ್ಳಿ ಹುಡುಗರಿಗೆ ಒಎಂಆರ್ ಶೀಟ್ ಹೆಂಗಿರತೈತಿ ಅಂತ್ಲೇ ಗೊತ್ತಿಲ್ಲ. ಖಾಸಗಿ ಸ್ಕೂಲಿಗ್ಹೋಗೋ ಉಳ್ಳವರ ಮಕ್ಕಳೆಲ್ಲ ಒಎಂಆರ್ ಶೀಟಿನಾಗೆ ಛಲೋ ಉತ್ತರ ಬರದು ಎ ಗ್ರೇಡ್ ತಗೋತಾರ, ನನ್ನಂಗ ಸರ್ಕಾರಿ ಸ್ಕೂಲಿನಾಗೆ ಓದಿದವರು ಸಿ ಗ್ರೇಡ್ ಅಂದ್ಹಂಗ ಆತಿಲ್ಲೋ' ಬೆಕ್ಕಣ್ಣ ಭಾರೀ ಆ್ಯಕ್ಟಿವಿಸ್ಟ್ ದನಿಯಲ್ಲಿ ಕೇಳಿತು.

'ಅಲ್ಲಲೇ... ನಿಮ್ಮ ಸದಾನಂದ ಮಾಮಾಗೆ ನೋಡಿ ಕಲತುಕೋ. ಮೋದಿಮಾಮಾ ಅವ್ರನ್ನ ಸಿ ಗ್ರೇಡಿನಾಗೆ ಪಾಸು ಮಾಡಿ ಮನಿಗಿ ಕಳಿಸಿದ್ರೂ, 'ನಗು ನಗುತಾ ನಲಿ ನಲಿ... ಎಲ್ಲಾ ವಿಶ್ವಗುರುವಿನ ಲೀಲೆ' ಅಂತ ಹಾಡ್ಕೋತ, ನಕ್ಕೋತ ಮನಿಗೆ ಬಂದಾರೆ. ನೀವೂ ಸಿ ಗ್ರೇಡ್ ತಗಂಡು ಹಾಡ್ಕೋತ ಕುಂದುರ್ರಿ' ಎಂದಿದ್ದೇ ಬಾಲ ಮುದುರಿ ಕೂತಿತು!

ಚರ್ಚೆ

ಸಂಶೋಧನೆ: ದಕ್ಕಿದೆಯೇ ಗಾಂಭೀರ್ಯ?

ಪಿಎಚ್‌.ಡಿ ಮಾಡದೇ ಅತ್ಯುತ್ತಮ ಶಿಕ್ಷಕರಾಗಬಹುದು, ವಿ.ವಿ. ಹೊರಗೂ ಉತ್ತಮ ಸಂಶೋಧನೆಗಳಾಗಬಹುದು

• ಡಾ. ಜ್ಯೋತಿ

ಒಂದಂತೂ ಸತ್ಯ, ಪ್ರಸಕ್ತ ನಮ್ಮ ಹೆಚ್ಚಿನ ವಿಶ್ವವಿದ್ಯಾಲಯಗಳಲ್ಲಿ ಗಂಭೀರವಾದ ಸಂಶೋಧನೆಗಳು ನಡೆಯುತ್ತಿಲ್ಲ. ಪಾಶ್ಚಾತ್ಯ ವಿಶ್ವವಿದ್ಯಾಲಯಗಳಿಂದ ಯಥಾವತ್ತಾಗಿ ಎರವಲು ತಂದಿರುವ ಉನ್ನತ ಶಿಕ್ಷಣದ ಸಂಶೋಧನಾ ವಿಧಿ ವಿಧಾನವನ್ನು, ಇಲ್ಲಿ ಸಹಜ ಪ್ರಕ್ರಿಯೆಯಂತೆ ಬೆಳೆಸುವುದಕ್ಕೆ ಪೂರಕವಾದ ವಾತಾವರಣವನ್ನು ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಅಳವಡಿಸಿಕೊಳ್ಳದೆ ಇದ್ದುದೇ, ಇಂದು ನಮ್ಮ ಸಂಶೋಧನಾ ಕ್ಷೇತ್ರ ಇಷ್ಟೊಂದು ಗೊಂದಲಮಯ ಹಾಗೂ ನಿರುಪಯುಕ್ತ ಚಟುವಟಿಕೆಯಾಗಿ ಮಾರ್ಪಡಲು ಮುಖ್ಯ ಕಾರಣ.

ಪ್ರಸಕ್ತ, ಮಾರ್ಗದರ್ಶಕರು ಸಂಶೋಧನಾರ್ಥಿಗಳನ್ನು ದೂಷಿಸುವುದು, ಸಂಶೋಧನಾರ್ಥಿಗಳು ಮಾರ್ಗದರ್ಶಕರನ್ನು ಹೀಯಾಳಿಸುವುದು ಅಥವಾ ಎರಡೂ ಕಡೆಯವರು ಕೂಡಿ ವ್ಯವಸ್ಥೆಯ ಲೋಪದೋಷಗಳನ್ನು ವಿಮರ್ಶಿಸುವುದರ ಬದಲಾಗಿ ಸ್ವವಿಮರ್ಶೆ ಮಾಡಿಕೊಂಡರೆ, ಹೆಚ್ಚಿನ ಸಮಸ್ಯೆಗಳಿಗೆ ಉತ್ತರ ಸಿಗಬಹುದು. ಈ ದಿಸೆಯಲ್ಲಿ, ನಾವು ಚರ್ಚಿಸಬೇಕಾದ ಮೂರು ಆಯಾಮಗಳೆಂದರೆ, ಸಂಶೋಧನಾರ್ಥಿಗಳು, ಮಾರ್ಗದರ್ಶಕರು ಮತ್ತು ಉನ್ನತ ಶಿಕ್ಷಣ ವ್ಯವಸ್ಥೆ.

ಮೊದಲನೆಯದಾಗಿ, ಸಂಶೋಧನಾರ್ಥಿಗಳು ಸಂಶೋಧನೆಯನ್ನು ಯಾಕೆ ಕೈಗೊಳ್ಳುತ್ತಾರೆ?- ಒಂದು ವಿಷಯದ ಕುರಿತ ಸ್ವಆಸಕ್ತಿಯಿಂದಲೋ ಅಲ್ಲಿ ಕಾಡುವ ಬೌದ್ಧಿಕ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲೋ ಪದೋನ್ನತಿಗಾಗಿಯೋ ಹೆಸರಿನ ಮುಂದೆ ತಗಲಿಸಿಕೊಳ್ಳುವ ಡಾಕ್ಟರ್ ಪದವಿಗಾಗಿಯೋ ಅಥವಾ ಉದ್ಯೋಗ ಗಿಟ್ಟಿಸಿಕೊಳ್ಳಲು ಇದೊಂದು ಕಡ್ಡಾಯ ಪದವಿಯಾಗುವ ಸಾಧ್ಯತೆ ಇರುವುದರಿಂದಲೋ? ಯಾವುದೇ ಒಂದು ವಿಷಯದಲ್ಲಿ ಸ್ವಆಸಕ್ತಿಯಿಂದ ಪ್ರೇರಿತವಾದ ಆಳದ ಓದಿನ ಮೂಲಕ, ಹುಟ್ಟುವ ಬೌದ್ಧಿಕ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಹೆಬ್ಬಯಕೆಯೊಂದೇ ಸಂಶೋಧನಾರ್ಥಿಯ ಉನ್ನತ ಶಿಕ್ಷಣದ ಸಂಶೋಧನಾ ವಿಭಾಗದ ಪ್ರವೇಶಕ್ಕೆ ಅರ್ಹತೆಯಾಗಬೇಕಾದುದು. ಉಳಿದವೆಲ್ಲಾ ಇಲ್ಲಿ ನಗಣ್ಯ.

ಎರಡನೆಯದು, ನಮ್ಮ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನಾ ಮಾರ್ಗದರ್ಶಕರಾಗಿ ಇರುವವರಲ್ಲಿ ಎಷ್ಟು ಮಂದಿ ಸ್ವಸಾಮರ್ಥ್ಯದ ಜ್ಞಾನ ಸೃಷ್ಟಿಯಿಂದ ಸಂಶೋಧನಾರ್ಥಿಗಳನ್ನು ತಮ್ಮತ್ತ ಸೆಳೆಯಲು ಅರ್ಹರಾಗಿದ್ದಾರೆ? ಹೆಚ್ಚಿನ ಸಂದರ್ಭಗಳಲ್ಲಿ, ಮಾರ್ಗದರ್ಶಕರಿಗೆ ಅವರ ಸಂಶೋಧನಾ ಮಾರ್ಗದರ್ಶಕರು ಹೇಗೆ ಬೌದ್ಧಿಕವಾಗಿ ಬೆಳೆಸಿದರು ಅಥವಾ ಕೇವಲ ವೈಯಕ್ತಿಕ ಕೆಲಸ ಮಾಡಿಸಿಕೊಂಡಿದ್ದರು ಎನ್ನುವ ಸ್ವ ಅನುಭವದ ಪರಂಪರೆ ಮುಂದುವರಿಯುವ ಸಾಧ್ಯತೆಯೇ ಹೆಚ್ಚು.

ಹೆಚ್ಚಿನ ಮಾರ್ಗದರ್ಶಕರ ಸ್ವಕಲಿಕೆ ಡಾಕ್ಟರೇಟ್ ಪಡೆಯುವುದರೊಂದಿಗೆ ಮುಗಿದುಹೋಗಿದ್ದು, ಮುಂದೇನಿದ್ದರೂ ಆ ಪದವಿಯ ಆಧಾರದ ಮೇಲೆ ಪದೋನ್ನತಿ ಮತ್ತು ಹೆಸರು ಗಳಿಕೆಯ ಕಾಯಕ ಮಾತ್ರ. ಜ್ಞಾನಾರ್ಜನೆಗೆ ಗೌರವ ಕೊಡುವ ಮಾರ್ಗದರ್ಶಕ ಎಂದಿಗೂ ಶೋಷಣೆ ಮಾಡಲಾರ, ಬದಲಾಗಿ ಶಿಷ್ಯನ ಉನ್ನತಿಗೆ ಸದಾ ಬೆಂಬಲವಾಗಿರುತ್ತಾನೆ.

ಇನ್ನು ನಮ್ಮ ಪ್ರಸಕ್ತ ಉನ್ನತ ಶಿಕ್ಷಣ ಕ್ಷೇತ್ರದ ಸಂಶೋಧನಾ ಕಾರ್ಯವೈಖರಿ ಮತ್ತು ಮಾರ್ಗಸೂಚಿಗಳಂತೂ ಗಂಭೀರ ಸಂಶೋಧನೆಗೆ ಹೇಳಿಮಾಡಿಸಿದವಲ್ಲ. ನಿಜ ಹೇಳಬೇಕೆಂದರೆ, ಇಲ್ಲಿ ಪರಸ್ಪರ ಆಯ್ಕೆ ಸಂಶೋಧನಾರ್ಥಿಗೂ ಇಲ್ಲ, ಹಾಗೆಯೇ ಮಾರ್ಗದರ್ಶಕರಿಗೂ ಬಹುತೇಕ ಇಲ್ಲವೆಂದೇ ಹೇಳಬಹುದು. ಇಲ್ಲಿ ಅದನ್ನು, ವಿಭಾಗದಲ್ಲಿ ಖಾಲಿಯಿರುವ ಸಂಖ್ಯೆ, ರೋಸ್ಟರ್ ವಿಧಾನ ಹಾಗೂ ಕೆಲವೊಮ್ಮೆ ಸಂಶೋಧನಾರ್ಥಿಯ ಪ್ರಭಾವ, ಸ್ಥಾನ ನಿಗದಿಗೊಳಿಸುತ್ತವೆ. ಇವುಗಳ ನಡುವೆ, ನಿಜವಾಗಿ ಪರಿಗಣಿಸಲ್ಪಡಬೇಕಾದ, ಸಂಶೋಧನಾರ್ಥಿಯ ಆಸಕ್ತ ಕ್ಷೇತ್ರ ಹಾಗೂ ಅದಕ್ಕೆ ಪೂರಕವಾದ ವಿದ್ವತ್ ಹೊಂದಿರುವ ಮಾರ್ಗದರ್ಶಕರ ಮುಖಾಮುಖಿಯಾಗುವುದಿಲ್ಲ. ವ್ಯವಸ್ಥೆಯ ಎಲ್ಲಾ ವಿಧಿವಿಧಾನಗಳ ಒಮ್ಮತವಾದ ಮೇಲಷ್ಟೇ, ಇವರಿಬ್ಬರು ಸಂಶೋಧನೆಯ ವಿಷಯವನ್ನು ಪ್ರಥಮ ಬಾರಿಗೆ ಚರ್ಚಿಸುತ್ತಾರೆ. ಇದೊಂದು ಬಲವಂತದ ವಿವಾಹದಂತೆ. ಆಮೇಲೆ, ಹೊಂದಾಣಿಕೆ ಮಾಡಿಕೊಂಡು ಕೈಗೊಂಡ ಕಾಯಕ ಪೂರ್ಣಗೊಳಿಸಬಹುದು ಅಥವಾ ಕಿತ್ತಾಟದ ವಿಚ್ಛೇದನವೂ ಆಗಬಹುದು. ಆದರೆ, ಮಹತ್ತರ ಸಂಶೋಧನೆ ಆಗುವುದಂತೂ ಅಪರೂಪ.



ಹಾಗೆಯೇ, ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಗಿಟ್ಟಿಸಿಕೊಳ್ಳಲು ಅಥವಾ ಪ್ರಮೋಷನ್ ಪಡೆಯಲು ಪಿಎಚ್‌.ಡಿ ಕಡ್ಡಾಯಗೊಳಿಸಿರುವುದು ಸಂಶೋಧನೆಯ ಗಾಂಭೀರ್ಯ ಕಳೆದುಹೋಗಲು ಪ್ರಮುಖ ಕಾರಣ. ಹಾಗಂತ, ನಮ್ಮ ವಿಶ್ವವಿದ್ಯಾಲಯಗಳಲ್ಲಿ ಶ್ರೇಷ್ಠ ಮಟ್ಟದ ಸಂಶೋಧನೆ ನಡೆದೇ ಇಲ್ಲವೆಂದಲ್ಲ. ನಮ್ಮ ವಿಶ್ವವಿದ್ಯಾಲಯಗಳ ಆರಂಭಿಕ ದಿನಗಳಲ್ಲಿ ಶ್ರೇಷ್ಠ ಸಂಶೋಧನಾ ಗ್ರಂಥಗಳು, ಮಾರ್ಗದರ್ಶಕರ ವಿದ್ವತ್ತಿನಿಂದಲೇ ಗುರುತಿಸಲ್ಪಟ್ಟ ವಿಭಾಗಗಳು, ಅವರು ಸಿದ್ಧಪಡಿಸಿರುವ ಸಂಶೋಧನಾ ಪರಂಪರೆ ಹಾಗೂ ಅದನ್ನು ಮುಂದುವರಿಸಿದ ಶಿಷ್ಯವೃಂದ, ಹೀಗೆ ನಡೆದಿರುವುದರ ಬಹಳಷ್ಟು ಕುರುಹುಗಳಿವೆ. ಹಾಗಾಗಿ, ಬದಲಾದ ಈ ಪರಿಸ್ಥಿತಿಗೆ, ಸಂಶೋಧಕರು, ಮಾರ್ಗದರ್ಶಕರು ಹಾಗೂ ಇವರನ್ನು ನಿಯಂತ್ರಿಸುವ ಉನ್ನತ ಶಿಕ್ಷಣ ವ್ಯವಸ್ಥೆ, ಸ್ವವಿಮರ್ಶೆಯೊಂದಿಗೆ ಜೊತೆಯಾಗಿ ಪರಿಹಾರ ಕಂಡುಕೊಳ್ಳಬೇಕಿದೆ.

ಕೊನೆಯದಾಗಿ, ನಿಜವಾದ ಸಂಶೋಧನೆಯನ್ನು ಪಾರ್ಟ್ ಟೈಂನಲ್ಲಿ ಮಾಡಲಾಗುವುದಿಲ್ಲ. ಒಂದು ಶ್ರೇಷ್ಠ ಸಂಶೋಧನೆಗೆ ಸಂಶೋಧನಾರ್ಥಿಯ ತನು, ಮನ, ಧನ, ಸಮಯ, ಏಕಾಗ್ರತೆ ಎಲ್ಲವನ್ನೂ ಸಮರ್ಪಿಸಬೇಕಾಗುತ್ತದೆ. ವ್ಯವಸ್ಥೆಯ ಲಾಭ ಪಡೆಯುವವರ ಮಧ್ಯೆಯೂ ನಮಗೆ ಇಂತಹ ಶ್ರೇಷ್ಠ ಸಂಶೋಧಕರು ಹಾಗೂ ಬೆನ್ನು ತಟ್ಟುವ ಮಾರ್ಗದರ್ಶಕರು ವಿರಳವಾಗಿಯಾದರೂ ಇನ್ನೂ ಕಾಣಸಿಗುತ್ತಾರೆ ಎನ್ನುವುದು ಸಮಾಧಾನದ ಸಂಗತಿ.

ವಾಚಕರ ವಾಣಿ

ಅಧಿಕಾರ ಪಡೆಯಲು ಅನರ್ಹರು

ಜಗತ್ತು ಕಂಡ ಮಹಾ ರಾಜನೀತಿಶಾಸ್ತ್ರಜ್ಞ ಪ್ಲೇಟೊನ 'ಆದರ್ಶ ರಾಜ ಮತ್ತು ಆದರ್ಶ ರಾಜ್ಯ' ಕಲ್ಪನೆಯು ರಾಜನಾದವ ಶ್ರೀಸಾಮಾನ್ಯನ ಸೇವಕ ಎನ್ನುವ ತತ್ವವನ್ನು ಪ್ರತಿಬಿಂಬಿಸುತ್ತದೆ. ಇಂಗ್ಲಿಷ್ ಭಾಷೆಯ ಜನಪ್ರಿಯ ನುಡಿಮುತ್ತು 'ಸಿಂಪಲ್ ಲಿವಿಂಗ್ ಆ್ಯಂಡ್ ಹೈ ಥಿಂಕಿಂಗ್' ಎಂಬುದನ್ನು ಕೇಳುತ್ತಾ ಬೆಳೆದವರು ನಾವು. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು ಎಂಬ ಸತ್ಯ ಅಡಗಿರುವುದು ಮಿಥ್ಯವೇನಲ್ಲ. ಆದರೆ, ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ಹೊಂದಿರುವ ದೇಶಗಳ ಸಾಲಿನಲ್ಲಿರುವ ಭಾರತೀಯರಾದ ನಾವು ಇವೆಲ್ಲವನ್ನೂ ಮರೆತಂತಿದೆ.

ಒಮ್ಮೆ ಕರ್ನಾಟಕದ ಸಚಿವರೊಬ್ಬರು ತಮ್ಮ ಕಾರನ್ನು ಹಿಂದಿಕ್ಕಿದ ಎನ್ನುವ ಕಾರಣಕ್ಕೆ ಹಿಂದಿಕ್ಕಿದ ಕಾರನ್ನು ಹಿಂಬಾಲಿಸಿ ಹೋಗಿ ಹಲ್ಲೆ ಮಾಡಿದ್ದರು. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಮ್ಮ ಬೆಂಬಲಿಗನಿಗೆ ಕಪಾಳಮೋಕ್ಷ ಮಾಡಿದ್ದು ಜನರ ಮನದಿಂದ ಮರೆಯಾಗಿಲ್ಲ. ನಮ್ಮ ದೇಶದಲ್ಲಿ ಮಹಿಳಾ ರಾಜಕಾರಣಿಗಳನ್ನೊಳಗೊಂಡು ಹಲವಾರು ರಾಜಕಾರಣಿಗಳು ಶ್ರೀಸಾಮಾನ್ಯನ ಮೇಲೆ ಹಲ್ಲೆ ಮಾಡಿದ ಅನೇಕ ಉದಾಹರಣೆಗಳಿವೆ. ಇಂತಹ ಹಲ್ಲೆಗಳು ಎಲ್ಲ ರಾಜಕೀಯ ಪಕ್ಷಗಳಿಂದಲೂ ಆಗಿವೆ. ಈಗ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಪಕ್ಷದ ಕಾರ್ಯಕರ್ತನ ಕೆನ್ನೆಗೆ ಬಾರಿಸುವ ಮೂಲಕ ಮತ್ತೆ ಸುದ್ದಿ ಮಾಡಿದ್ದಾರೆ.

ಈ ಬಗೆಯ ಘಟನೆಗಳು ಪ್ರಜಾಪ್ರಭುತ್ವ ವಿರೋಧಿಯಾಗಿದ್ದು, ನಿರಂಕುಶ ಪ್ರಭುತ್ವವನ್ನು ನೆನಪಿಸುತ್ತವೆ. ಇವುಗಳ ಮೇಲೆ ನಿಯಂತ್ರಣದ ಅಗತ್ಯವಿದೆಯಲ್ಲದೆ ಇಂತಹವರು ಪ್ರಜಾಪ್ರಭುತ್ವದಲ್ಲಿ ಅಧಿಕಾರ ಪಡೆಯಲು ಅನರ್ಹರು ಕೂಡ.

ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ

ಗಟ್ಟಿ ನೀತಿ ಜಾರಿಗೆ ಬರಲಿ

ಕನ್ನಂಬಾಡಿ ಕಟ್ಟೆಯ ಸುರಕ್ಷತೆ ಮತ್ತು ಸುತ್ತಮುತ್ತಲಿನ ಗಣಿಗಾರಿಕೆಯ ಬಗ್ಗೆ ಕೆಲವು ದಿನಗಳಿಂದ ನಡೆಯುತ್ತಿರುವ ಚರ್ಚೆಯು ಜನರಿಗೆ ನಿಷ್ಪ್ರಯೋಜಕವಾದುದಾಗಿದೆ. ಒಂದು ಗಂಭೀರ ವಿಷಯವು ಮನರಂಜನೆಯ ವಿಷಯವಾಗಿರುವುದು ದುರದೃಷ್ಟಕರ. ಕನ್ನಂಬಾಡಿ ಕಟ್ಟೆಗೆ ಶೇ 1ರಷ್ಟು ಅಪಾಯ ಇದೆ ಎಂಬ ಅನುಮಾನವಿದ್ದರೂ ಸುತ್ತಮುತ್ತಲಿನ ಪ್ರದೇಶಗಳ ಗಣಿಗಾರಿಕೆ ನಿಲ್ಲಬೇಕು. ಅದಕ್ಕೆ ಪರೀಕ್ಷೆ, ತಜ್ಞರ ವರದಿ ಇಂತಹವುಗಳ ಅಗತ್ಯವೇ ಇಲ್ಲ.

ಬೃಹತ್ ಯಂತ್ರಗಳ ನೆರವಿನಿಂದ ಈಗ ನಡೆಯುತ್ತಿರುವ ಗಣಿಗಾರಿಕೆ ಹಿಂದಿನಂತಿಲ್ಲ. ರಾಜ್ಯದಾದ್ಯಂತ ಬೇರೆ ಬೇರೆ ರೀತಿಯ ಗಣಿಗಾರಿಕೆಗಳು ನಡೆಯುತ್ತಿವೆ. ಇವು ತಂದೊಡ್ಡುವ ಅಪಾಯ, ಅಧಿಕಾರಿಗಳು, ರಾಜಕಾರಣಿಗಳಿಗೆ ದೊರೆಯುತ್ತಿರುವ ಅಕ್ರಮ ಹಣ ಹಾಗೂ ಮಾಲೀಕರಿಗೆ ದೊರೆಯುತ್ತಿರುವ ಕಪ್ಪುಹಣ ಇವುಗಳಿಗೆ ಹೋಲಿಸಿದರೆ ಸರ್ಕಾರಕ್ಕೆ ದೊರೆಯುತ್ತಿರುವ ರಾಯಧನ ಹಾಗೂ ಅದು ಸೃಷ್ಟಿಸುತ್ತಿರುವ ಉದ್ಯೋಗ ನಗಣ್ಯ. ನಮ್ಮಲ್ಲಿ ಕಪ್ಪು ಶಿಲೆಯನ್ನು ಹೊತ್ತು ಸಾಗುತ್ತಿರುವ ಟ್ರಕ್‌ಗಳಿಂದ ರಸ್ತೆಗೆ ತೀವ್ರ ಹಾನಿಯಾಗುತ್ತಿದೆ.

ಕಳೆದ ನಲವತ್ತು ವರ್ಷಗಳಿಂದ ನಡೆಯುತ್ತಿರುವ ಕರಿಕಲ್ಲು ಗಣಿಗಾರಿಕೆ ಇಲ್ಲಿಯ ಕಾಡು, ಪಶ್ಚಿಮಘಟ್ಟಗಳ ಮೇಲೆ ವ್ಯತಿರಿಕ್ತ ಪರಿಣಾಮ ಉಂಟುಮಾಡಿದೆ. ಯಾವಾಗ ಬೇಕಾದರೂ ಮತ್ತೂ ಹೆಚ್ಚು ಅಪಾಯ ತಂದೊಡ್ಡಬಹುದಾದ ಭೀತಿ ಇದೆ. ಈಗಲಾದರೂ ಸರ್ಕಾರ ಕೂದಲು ಸೀಳುವ ತರ್ಕವನ್ನು ಆಶ್ರಯಿಸದೆ, ಸಾಮಾನ್ಯ ತಿಳಿವಳಿಕೆ ಬಳಸಿ ಸೂಕ್ತವಾದ ಗಟ್ಟಿ ನೀತಿ ರೂಪಿಸಲಿ.

ಕೆ.ವೆಂಕಟರಾಜು, ಚಾಮರಾಜನಗರ

ಅಂಬಿ ಅಸಹಾಯಕತೆ

ಆಗ ಕಲಹಗಳು ನಡೆದಾಗ 'ಅಂಬಿ'
ರಾಜಿ ಮಾಡಿಸುತ್ತಿದ್ದರು,
ಸೌಹಾರ್ದ ವಾತಾವರಣ ಏರ್ಪಡುತ್ತಿತ್ತು
ಈಗ, ನಾಯಕರ ವಾಕ್ಸಮರ
ಕಚ್ಚಾಟದ ಮಾತುಗಳು ತಾರಕಕ್ಕೇರಿವೆ
ದಿವಂಗತ ಅಂಬಿಯನ್ನೂ ಬಿಡದೆ!
ಅತ್ತ ಅಂಬಿ 'ಯಾಕ್ರೋ...? ಏನ್ರೋ?
ಹೀಗಾಗ್ ಬಿಟ್ರಲ್ಲ...' ಎಂದು
ಅಸಹಾಯಕತೆಯಿಂದ ಪರಿತಪಿಸುತ್ತಿರಬಹುದು!

ನಗರ ಗುರುದೇವ್ ಭಂಡಾರ್ಕರ್
ಹೊಸನಗರ

ಹೇಳಿಕೆ ಕುರಿತು ತಪ್ಪು ಮಾಹಿತಿ

ಗೋರಕ್ಷಣೆ ಹೆಸರಿನಲ್ಲಿ ಮುಸ್ಲಿಮರ ಮೇಲೆ ನಡೆದ ಗುಂಪುದಾಳಿಗೆ ಸಂಬಂಧಿಸಿದಂತೆ ಮೋಹನ ಭಾಗವತ್ ಅವರ ಹೇಳಿಕೆಯ ಕುರಿತು ಆರ್ಗನೈಸರ್ ಪತ್ರಿಕೆಯ ಮಾಜಿ ಸಂಪಾದಕ ಡಾ. ಆರ್.ಬಾಲಶಂಕರ್ ಅವರ ವಿಶ್ಲೇಷಣೆಯಲ್ಲಿ (ಪ್ರ.ವಾ., ಜುಲೈ 10) ತಪ್ಪು ಮಾಹಿತಿ ಇದೆ. ಆರ್‌ಎಸ್‌ಎಸ್ ಮತ್ತು ಅದರ ಪರಿವಾರದ ಮೇಲೆ ಇರುವ ಗುರುತರವಾದ ಆರೋಪವೇ ಇತಿಹಾಸವನ್ನು ತಿರುಚುತ್ತಾರೆ ಎಂಬುದು. ಅದನ್ನು ಸಂಘದ ಮುಖವಾಣಿ ಪತ್ರಿಕೆಯ ಮಾಜಿ ಸಂಪಾದಕರು ಗಾಂಧೀಜಿ ಮತ್ತು ಜಿನ್ನಾ ಅವರ ಕುರಿತಾದ ತಿರುಚಿದ ಮಾಹಿತಿಯನ್ನು ಉಲ್ಲೇಖಿಸಿ ಸಾಬೀತು ಮಾಡಿದ್ದಾರೆ. 1916ರ ಲಖನೌ ಒಪ್ಪಂದವು ಗಾಂಧೀಜಿ ಮತ್ತು ಜಿನ್ನಾ ಅವರ ನಡುವೆ ಆಯಿತು. ಮಾಂಸಕ್ಕಾಗಿ ಮುಸ್ಲಿಮರು ಗೋಹತ್ಯೆ ಮಾಡುವುದನ್ನು ನಿಷೇಧಿಸುವುದು ಈ ಒಪ್ಪಂದದ 16 ಅಂಶಗಳಲ್ಲಿ ಸೇರಿತ್ತು ಎಂದು ಲೇಖಕರು ತಿಳಿಸಿದ್ದಾರೆ.

ನಿಜ ಸಂಗತಿ ಎಂದರೆ, ಲಖನೌ ಒಪ್ಪಂದದ ಸಂದರ್ಭದಲ್ಲಿ ಗಾಂಧೀಜಿ ಅವರು ಸ್ವಾತಂತ್ರ್ಯ ಚಳವಳಿಯಲ್ಲಿ ಇನ್ನೂ ಪ್ರಾಮುಖ್ಯವನ್ನೇ ಪಡೆದಿರಲಿಲ್ಲ. ಅವರು ಬರೀ ಒಬ್ಬ ಸದಸ್ಯನಾಗಿ ಲಖನೌ ಒಪ್ಪಂದದಲ್ಲಿ ಭಾಗವಹಿಸಿದ್ದರು. ಲಖನೌ ಒಪ್ಪಂದ ಹಿಂದೂ- ಮುಸ್ಲಿಂ ಸಾಮರಸ್ಯಕ್ಕಾಗಿ ಕಾಂಗ್ರೆಸ್‌ನ ನಾಯಕ ಬಾಲಗಂಗಾಧರ ತಿಲಕ್ ಹಾಗೂ ಮುಸ್ಲಿಂ ಲೀಗ್‌ನ ಪರವಾಗಿ ಜಿನ್ನಾ ಅವರ ನಡುವೆ ಆದ ಒಪ್ಪಂದವಾಗಿರುತ್ತದೆ. ಜನರಿಗೆ ತಪ್ಪು ಮಾಹಿತಿ ನೀಡುವ ಕಾಯಕವು ಈ ಲೇಖನದಲ್ಲೂ ಮುಂದುವರಿದಿದೆ. ತಮ್ಮ ಸಂಘದ ಮುಖ್ಯಸ್ಥರ ಹೇಳಿಕೆಯನ್ನು ಸಮರ್ಥನೆ ಮಾಡಿಕೊಳ್ಳುವ ಮುಖ್ಯ ಉದ್ದೇಶದ ಈಡೇರಿಕೆಗೆ ಓದುಗರಿಗೆ ಇತಿಹಾಸದ ಕುರಿತು ಅಸತ್ಯ ತಿಳಿಸಬಾರದು.

ಸೂರ್ಯ ಮುಕುಂದರಾಜ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಅಫ್ಗಾನಿಸ್ತಾನದ ಬಹುಭಾಗದ ನಿಯಂತ್ರಣ ಪಡೆದ ಉಗ್ರಗಾಮಿ ಸಂಘಟನೆ

ತಾಲಿಬಾನ್ ಕರಿನೆರಳು


ಅಫ್ಗಾನಿಸ್ತಾನದ ಹೋರಾಟಗಾರರ ಗುಂಪುಗಳು ತಮ್ಮ ಆಯುಧಗಳನ್ನು ಸಿದ್ಧಪಡಿಸಿಕೊಂಡು ಸರ್ಕಾರದ ಬೆಂಬಲಕ್ಕೆ ಸಜ್ಜಾಗಿವೆ – ಎಎಫ್‌ಪಿ ಚಿತ್ರ

2,500 ಪ್ರಸ್ತುತ ಅಫ್ಗಾನಿಸ್ತಾನದಲ್ಲಿರುವ ಅಮೆರಿಕ ಯೋಧರ ಸಂಖ್ಯೆ

8,000 ಈಗ ಅಫ್ಗಾನಿಸ್ತಾನದಲ್ಲಿರುವ 'ನ್ಯಾಟೊ' ಸೈನಿಕರ ಸಂಖ್ಯೆ

ಸುಶ್ರಾವ್ಯ ಸಂಗೀತದ ಮೂಲಕ ಜನರನ್ನು ಸದಾ ಮುದಗೊಳಿಸುತ್ತಿದ್ದ ಅಫ್ಗಾನಿಸ್ತಾನದ ಬಾಲ್ಕ್ ಜಿಲ್ಲೆಯಲ್ಲಿ ಇರುವ ಏಕೈಕ ಎಫ್‌ಎಂ ರೇಡಿಯೊದಲ್ಲಿ ಈಗ ಹಾಡುಗಳು ಬಿತ್ತರವಾಗುತ್ತಿಲ್ಲ. ಬದಲಿಗೆ ಧಾರ್ಮಿಕತೆಯನ್ನು ಹೆಚ್ಚಿಸುವ ಉದ್ದೇಶದ ಪಠಣಗಳು, ಸರ್ಕಾರದ ವಿರುದ್ಧದ ಹೇಳಿಕೆಗಳು ಮಾತ್ರ ಪ್ರಸಾರ ಆಗುತ್ತಿವೆ. ಇಡೀ ದೇಶದ ಸ್ಥಿತಿಯ ರೂಪಕದಂತೆ ಇದು ಕಾಣಿಸುತ್ತಿದೆ.

ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಉಗ್ರಗಾಮಿ ಸಂಘಟನೆಯನ್ನು ಹದ್ದುಬಸ್ತಿನಲ್ಲಿ ಇರಿಸಲು ನಿಯೋಜಿಸಲಾಗಿದ್ದ ಅಮೆರಿಕ ಸೇನೆಯನ್ನು ಅಲ್ಲಿಂದ ಬಹುತೇಕ ತೆರವು ಮಾಡಲಾಗಿದೆ. ಸೇನೆಯನ್ನು ಸೆಪ್ಟೆಂಬರ್ ಹೊತ್ತಿಗೆ ಹಿಂದಕ್ಕೆ ಕರೆಸಿಕೊಳ್ಳಲಾಗುವುದು ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಘೋಷಿಸಿದಾಗಿನಿಂದಲೇ ತಾಲಿಬಾನ್ ತನ್ನ ಬಾಹುಗಳನ್ನು ಅಗಲಿಸಲು ಆರಂಭಿಸಿತ್ತು. ಅಮೆರಿಕ ಸೇನೆಯು ಹಿಂದಕ್ಕೆ ಸರಿಯುವುದು ಆರಂಭವಾದ ಬಳಿಕ ತಾಲಿಬಾನ್ ಆಕ್ರಮಣವು ತೀವ್ರಗೊಂಡಿದೆ.

1996ರಿಂದ 2001ರವರೆಗೆ ಅಫ್ಗಾನಿಸ್ತಾನವನ್ನು ಆಳಿದ್ದ ಮೂಲಭೂತವಾದಿ ತಾಲಿಬಾನ್, ಜನರ ಮೇಲೆ ಕಠಿಣ ನಿರ್ಬಂಧಗಳನ್ನು ಹೇರಿತ್ತು. ಮತ್ತೆ, ಅದೇ ಆಳ್ವಿಕೆ ಬೇರೊಂದು ರೀತಿಯಲ್ಲಿ ಅಫ್ಗಾನಿಸ್ತಾನದಲ್ಲಿ ಸ್ಥಾಪನೆಯಾಗುವ ಲಕ್ಷಣಗಳು ಕಾಣಿಸುತ್ತಿವೆ.

ಒಂದರ ನಂತರ ಒಂದರಂತೆ ಜಿಲ್ಲೆಗಳನ್ನು ತಾಲಿಬಾನ್ ವಶಕ್ಕೆ ಪಡೆಯುತ್ತಿದೆ. ಅಫ್ಗಾನಿಸ್ತಾನ ಸರ್ಕಾರದ ಸೇನೆಯು ಅಲ್ಲಲ್ಲಿ ನಡೆದ ಯುದ್ಧದಲ್ಲಿ ಸೋಲು ಒಪ್ಪಿಕೊಳ್ಳುತ್ತಿದೆ ಅಥವಾ ಪರಾರಿಯಾಗುತ್ತಿದೆ. ದೇಶದ ಶೇ 85ರಷ್ಟು ಭಾಗ ತನ್ನ ನಿಯಂತ್ರಣದಲ್ಲಿ ಇದೆ ಎಂದು ತಾಲಿಬಾನ್ ಹೇಳಿಕೊಳ್ಳುತ್ತಿದೆ. ಇದನ್ನು ಸ್ವತಂತ್ರವಾಗಿ ದೃಢಪಡಿಸಿಕೊಳ್ಳಲು ಸಾಧ್ಯವೇನೂ ಇಲ್ಲ ಎಂದು ಬಿಬಿಸಿ ವರದಿ ಮಾಡಿದೆ.

ರಾಜಧಾನಿ ಕಾಬೂಲ್ ಮತ್ತು ಸುತ್ತಲಿನ ಪ್ರದೇಶಗಳಷ್ಟೇ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಸರ್ಕಾರದ ನಿಯಂತ್ರಣದಲ್ಲಿ ಇದೆ ಎಂಬ ವರದಿಗಳೂ ಇವೆ. ಅಫ್ಗಾನಿಸ್ತಾನವು ಸಂಪೂರ್ಣವಾಗಿ ತಾಲಿಬಾನ್ ನಿಯಂತ್ರಣಕ್ಕೆ ಒಳಪಡಲು ಕೆಲವೇ ದಿನಗಳು ಸಾಕು ಎಂದೂ ವಿಶ್ಲೇಷಕರು ಹೇಳುತ್ತಿದ್ದಾರೆ.

ಪ್ರಜಾಪ್ರಭುತ್ವ ದೇಶವಾಗಿರುವ ಅಫ್ಗಾನಿಸ್ತಾನವನ್ನು ಮುಸ್ಲಿಂ ರಾಷ್ಟ್ರವಾಗಿ ಪರಿವರ್ತಿಸಬೇಕು ಎಂಬುದು ತಾಲಿಬಾನ್‌ನ ಗುರಿ. ಅಮೆರಿಕದ ಮಧ್ಯ ಪ್ರವೇಶದಿಂದಾಗಿ ತಾಲಿಬಾನ್ ಪಡೆಗಳಿಗೆ 2001ರಲ್ಲಿ ಸೋಲಾಯಿತು. ಆದರೆ, ಸಂಘಟನೆಯು ತನ್ನ ನೆಲೆಯನ್ನು ಸಂಪೂರ್ಣವಾಗಿ ಕಳೆದುಕೊಳ್ಳಲಿಲ್ಲ. ಅಳಿದುಳಿದ ಬಲವನ್ನು ಕ್ರೋಡೀಕರಿಸಿಕೊಂಡ ಉಗ್ರಗಾಮಿ ಸಂಘಟನೆಯು, ಅಮೆರಿಕ ಅಥವಾ ಬೇರಾವುದೇ ದೇಶದ ಸೇನೆಯು ಅಫ್ಗಾನಿಸ್ತಾನದಲ್ಲಿ ಇಲ್ಲದ ಕಾರಣ ಹೆಚ್ಚು ಬಲಯುತವಾಗಿದೆ.

ಮೂಲಭೂತವಾದಿ ಆಳ್ವಿಕೆಯು ಮತ್ತೆ ನೆಲೆಯೂರಲಿದೆ ಎಂಬುದರ ಸುಳಿವುಗಳು ಈಗಾಗಲೇ ಕಾಣಿಸಿಕೊಂಡಿವೆ. ತಾಲಿಬಾನ್ ನಿಲುವು ಮೃದುವಾಗಬಹುದು ಎಂಬ ನಿರೀಕ್ಷೆ ಅಲ್ಲಿನ ಜನರಲ್ಲಿ ಇತ್ತು. ಆದರೆ, ತನ್ನ ಸಂಪೂರ್ಣ ನಿಯಂತ್ರಣಕ್ಕೆ ಒಳಪಟ್ಟ ಪ್ರದೇಶಗಳಲ್ಲಿ ಹಲವು ನಿರ್ಬಂಧಗಳನ್ನು ತಾಲಿಬಾನ್ ಹೇರಿದೆ. ಈ ಹಿಂದೆ ಅಧಿಕಾರದಲ್ಲಿ ಇದ್ದಾಗ ಜಾರಿಯಲ್ಲಿದ್ದ ರೀತಿಯ ನಿಯಮಗಳನ್ನು ಅನುಸರಿಸಬೇಕು ಎಂಬ ಕರಪತ್ರಗಳನ್ನು ಉಗ್ರರು ಹಂಚಿದ್ದಾರೆ ಎಂದು ಕೆಲವು ಪ್ರದೇಶಗಳ ಜನರು ಹೇಳಿದ್ದಾಗಿ ವರದಿಯಾಗಿದೆ.

ಮಹಿಳೆಯರು ಮನೆಯಿಂದ ಹೊರಗೆ ಬರುವಾಗ ಕಾಲಿನಿಂದ ತಲೆಯವರೆಗೆ ವಸ್ತ್ರದಲ್ಲಿ ಮುಚ್ಚಿಕೊಳ್ಳಬೇಕು, ಜತೆಗೆ ಒಬ್ಬ ಪುರುಷ ಇರಲೇಬೇಕು ಎಂಬಂತಹ ನಿಯಮಗಳು ಹಿಂದೆ ಜಾರಿಯಲ್ಲಿ ಇದ್ದವು. ಮತ್ತೆ ಅದೇ ಯುಗಕ್ಕೆ ಮರಳಬೇಕಾಗಬಹುದು ಎಂಬ ಕಳವಳ ಜನರಲ್ಲಿ ಮೂಡಿದೆ.

ಹೆಜ್ಜೆ ಹಿಂದಿಕ್ಕಿದ ಅಮೆರಿಕ

ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ವಿರುದ್ಧ ಎರಡು ದಶಕದಿಂದ ಹೋರಾಟದಲ್ಲಿ ತೊಡಗಿಸಿಕೊಂಡಿದ್ದ ಅಮೆರಿಕದ ಸೇನಾ ಕಾರ್ಯಾಚರಣೆ ಕೊನೆಯಾಗಲಿದೆ. ಇದೇ ಆಗಸ್ಟ್ 31ರಂದು ಸೇನೆಯು ಅಲ್ಲಿಂದ ವಾಪಾಸಗಲಿದೆ. ಈ ಪ್ರಕ್ರಿಯೆ ಸುರಕ್ಷಿತ ಮತ್ತು ಕ್ರಮಬದ್ಧ ರೀತಿಯಲ್ಲಿ ಆಗಲಿದೆ ಎಂದು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ಎರಡು ದಿನಗಳ ಹಿಂದಷ್ಟೇ ಘೋಷಣೆ ಮಾಡಿದ್ದರು.

ಅಮೆರಿಕವು ಅಂದುಕೊಂಡ ರೀತಿ ತನ್ನ ಗುರಿಗಳನ್ನು ಸಾಧಿಸಿದ್ದು, ಸೇನೆ ಹಿಂತೆಗೆದುಕೊಳ್ಳಲು ಇದು ಸೂಕ್ತ ಸಮಯ ಎಂದು ಬೈಡನ್ ಹೇಳಿದ್ದರು. ಅಮೆರಿಕದ ಸೈನ್ಯವನ್ನು ಹಿಂತೆಗೆದುಕೊಂಡ ಕೂಡಲೇ ತಾಲಿಬಾನ್ ಉಗ್ರರು ಅಫ್ಗಾನಿಸ್ತಾನವನ್ನು ಸ್ವಾಧೀನಪಡಿಸಿಕೊಳ್ಳಲಿದ್ದಾರೆ ಎಂಬ ವರದಿಗಳನ್ನು ಬೈಡನ್ ಅವರು ತಳ್ಳಿಹಾಕಿದ್ದರು. ಆದರೆ ಈ ಘೋಷಣೆ ಮಾಡಿದ ಕೂಡಲೇ ತಾಲಿಬಾನ್ ತನ್ನ ಚಟುವಟಿಕೆಗಳನ್ನು ಸಕ್ರಿಯಗೊಳಿಸಿದೆ.

'ಅಫ್ಗಾನಿಸ್ತಾನ ಸರ್ಕಾರ ಮತ್ತು ಅಲ್ಲಿನ ನಾಯಕತ್ವ ಜೊತೆಯಾಗಿ ಕೆಲಸ ಮಾಡಬೇಕಿದೆ. ಅವರಿಗೆ ಆಡಳಿತ ನಡೆಸುವ ಸಾಮರ್ಥ್ಯಕ್ಕೆ ತಕ್ಕ ಸೇನೆ ಇದೆ. ಸಾಕಷ್ಟು ಸವಲತ್ತುಗಳಿವೆ. ಆದರೆ ಅವರು ಅದನ್ನು ಮಾಡುತ್ತಾರೆಯೇ ಎಂಬುದು ಪ್ರಶ್ನೆ. ಅಗತ್ಯ ಬಿದ್ದಾಗ ಎಲ್ಲಕ್ಷೇತ್ರಗಳಲ್ಲೂ ನಾವು ಸಹಾಯಕ್ಕೆ ನಿಲ್ಲುತ್ತೇವೆ' ಎಂದು ಅವರು ತಿಳಿಸಿದ್ದಾರೆ.

ನ್ಯಾಟೊ ಮಿತ್ರರಾಷ್ಟ್ರಗಳು ಸೇರಿ 'ಅಫ್ಗಾನ್ ರಾಷ್ಟ್ರೀಯ ಸೇನೆ'ಯಲ್ಲಿ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಸುಮಾರು 3 ಲಕ್ಷ ಸೇನಾ ಸಿಬ್ಬಂದಿಯನ್ನು ತರಬೇತುಗೊಳಿಸಿವೆ.

ಸೇನಾ ವಾಪಸಾತಿಯ ಬಳಿಕ ಅಫ್ಗಾನ್‌ನಲ್ಲಿ ರಾಜತಾಂತ್ರಿಕ ಹಿಡಿತ ಮುಂದುವರಿಸುವುದು, ತಾಲಿಬಾನ್ ಹಿಡಿತಕ್ಕೆ ಸಿಗದಂತೆ ನೋಡಿಕೊಳ್ಳುವುದು ಹಾಗೂ ವಿಮಾನ ನಿಲ್ದಾಣವನ್ನು ರಕ್ಷಿಸುವ ಜವಾಬ್ದಾರಿಗಳು ಅಮೆರಿಕಕ್ಕೆ ಆದ್ಯತೆಯ ವಿಷಯಗಳಾಗಿವೆ.

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕೆನ್ ಮತ್ತು ಅಫ್ಗಾನಿಸ್ತಾನಕ್ಕೆ ಅಮೆರಿಕ ನೇಮಿಸಿರುವ ವಿಶೇಷ ಪ್ರತಿನಿಧಿ ಜಲ್ಮೇ ಖಲೀಲ್‌ಜಾದ್ ಅವರು ಸೇನಾ ವಾಪಸಾತಿ ಪ್ರಕ್ರಿಯೆಯ ಮುಂಚೂಣಿಯಲ್ಲಿ ಕೆಲಸ ಮಾಡಿದ್ದಾರೆ. ಪ್ರಾದೇಶಿಕ ಮತ್ತು ಅಂತರರಾಷ್ಟ್ರೀಯ ಮಧ್ಯಸ್ಥಗಾರರೊಂದಿಗೆ ಮಾತುಕತೆ ನಡೆಸಿ ಪರಿಹಾರ ಕಂಡುಕೊಳ್ಳುವ ಜವಾಬ್ದಾರಿಯನ್ನು ಇವರಿಗೆ ವಹಿಸಲಾಗಿತ್ತು.

ತಾಲಿಬಾನ್ ಜತೆಗೆ ಜೈಶಂಕರ್ ಮಾತುಕತೆ?

ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ತಾಲಿಬಾನ್ ಜೊತೆ ಮಾತುಕತೆ ನಡೆಸಿದ್ದಾರೆ ಎಂಬ ಸುದ್ದಿ ಕೆಲವು ದಿನಗಳಿಂದ ಹರಿದಾಡುತ್ತಿದೆ. ತಾಲಿಬಾನ್ ಪ್ರತಿನಿಧಿಗಳ ಗುಂಪನ್ನು ಭಾರತದ ನಿಯೋಗವು ಭೇಟಿಯಾಗಿದೆ. ಕತಾರ್‌ನ ಸಚಿವರ ಮೂಲಕ ದೋಹಾದಲ್ಲಿ ಈ ಭೇಟಿ ನಡೆದಿದೆ ಎಂಬ ಊಹಾಪೋಹ ಹಬ್ಬಿದೆ.

ಜಮ್ಮು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಹಾಗೂ ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಇತ್ತೀಚೆಗೆ ನೀಡಿದ್ದ ಹೇಳಿಕೆ ಇದಕ್ಕೆ ಪುಷ್ಟಿ ನೀಡಿತ್ತು. 'ತಾಲಿಬಾನ್ ಜೊತೆ ಭಾರತ ಮಾತುಕತೆ ನಡೆಸುವುದಾದರೆ, ಪಾಕಿಸ್ತಾನದ ಜೊತೆ ಏಕೆ ಮಾತನಾಡಬಾರದು' ಎಂದು ಅವರು ಪ್ರಶ್ನಿಸಿದ್ದರು.

ಈ ವರದಿಯನ್ನು ಕೇಂದ್ರ ಸರ್ಕಾರ ಅಲ್ಲಗಳೆದಿದೆ. 'ಮಾತುಕತೆ ನಡೆದಿದೆ ಎಂಬುದಾಗಿ ಕೆಲವು ಪತ್ರಕರ್ತರು ಮಾಡಿದ ಟ್ವೀಟ್‌ಗಳನ್ನು ಆಧರಿಸಿ ಮಾಧ್ಯಮಗಳು ಮಾಡಿರುವ ವರದಿಗಳು ತಪ್ಪಿನಿಂದ ಕೂಡಿವೆ' ಎಂದು ವಿದೇಶಾಂಗ ಇಲಾಖೆ ವಕ್ತಾರ ಅರಿಂದಮ್ ಬಗ್ಚಿ ತಿಳಿಸಿದ್ದಾರೆ.

ಉಗ್ರರ ಏಳು-ಬೀಳು

- 1979–1989ರ ಅವಧಿಯಲ್ಲಿ ಅಫ್ಗಾನಿಸ್ತಾನವು ಸೋವಿಯತ್ ರಷ್ಯಾ ಅಧೀನದಲ್ಲಿತ್ತು. ಆ ಕಾಲದಲ್ಲಿ, ಪಾಕಿಸ್ತಾನದ ಸುನ್ನಿ ಮುಸ್ಲಿಂ ಶಾಲೆಗಳಲ್ಲಿ ಕಲಿತ ಯುವಕರು ಅಫ್ಗಾನಿಸ್ತಾನದಿಂದ ಪರಾರಿಯಾದರು
- 1990ರ ದಶಕದಲ್ಲಿ ಅಫ್ಗಾನಿಸ್ತಾನವು ಆಂತರಿಕ ಯುದ್ಧದಿಂದಾಗಿ ಕ್ಷೋಭೆಗೊಂಡಿತ್ತು. ಒಕ್ಕಣ್ಣ ಯೋಧ ಮುಲ್ಲಾ ಒಮರ್‌ನ ನೇತೃತ್ವದಲ್ಲಿ ಕಾಂದಹಾರ್‌ನಲ್ಲಿ ತಾಲಿಬಾನ್ ರೂಪುಗೊಂಡಿತು
- ಸುವ್ಯವಸ್ಥೆ, ನ್ಯಾಯ ಸ್ಥಾಪನೆಯ ಭರವಸೆಯಿಂದಾಗಿ ತಾಲಿಬಾನ್‌ನ ಜನಪ್ರಿಯತೆ ಹೆಚ್ಚಿತು, 1994ರಲ್ಲಿ ಕಾಂದಹಾರ್ ನಗರವು ತಾಲಿಬಾನ್ ಕೈವಶವಾಯಿತು, 1996ರಲ್ಲಿ ರಾಜಧಾನಿ ಕಾಬೂಲ್ ವಶವಾಯಿತು
- 2001ರ ಅಕ್ಟೋಬರ್‌ನಲ್ಲಿ ಅಮೆರಿಕ ಮತ್ತು ಮಿತ್ರಕೂಟವು ತಾಲಿಬಾನ್ ವಿರುದ್ಧ ವಾಯುದಾಳಿ ಆರಂಭಿಸಿತು. ಡಿಸೆಂಬರ್ ಹೊತ್ತಿಗೆ ತಾಲಿಬಾನ್ ನಾಯಕರು ಪಾಕಿಸ್ತಾನದ ಬುಡಕಟ್ಟು ಪ್ರದೇಶಗಳಿಗೆ ಪರಾರಿಯಾದರು
- 2013ರಲ್ಲಿ ಒಮರ್ ಸತ್ತ. ಅಲ್ಲಿಯವರೆಗೆ ತಾಲಿಬಾನ್‌ಗೆ ಆತನದೇ ನಾಯಕತ್ವ. ಈಗ, ಹೈಬತ್ ಉಲ್ಲಾ ಅಖುಂದ್‌ಜಾದಾ ನಾಯಕನಾಗಿದ್ದಾನೆ
- ಅಮೆರಿಕದ ಸೇನೆಯನ್ನು ಹಿಂದಕ್ಕೆ ಕರೆಸಿಕೊಳ್ಳುವ ಸಂಬಂಧ 2020ರ ಫೆಬ್ರುವರಿ 29ರಂದು ಅಮೆರಿಕ ಮತ್ತು ತಾಲಿಬಾನ್ ನಡುವೆ ಒಪ್ಪಂದಾಯಿತು. ಇದು ತಾಲಿಬಾನ್ ಮತ್ತೆ ತಲೆ ಎತ್ತಲು ಅನುವು ಮಾಡಿಕೊಟ್ಟಿತು

ಚೀನಾ ಜತೆಗೆ ಸರಸ

ತಾಲಿಬಾನಿಗಳ ಮೇಲುಗೈಯಿಂದಾಗಿ ಭಾರತಕ್ಕೆ ಹಿನ್ನಡೆಯಾದಂತೆ ಆಗಿದೆ. 20 ವರ್ಷಗಳ ಹಿಂದೆ ತಾಲಿಬಾನಿಗಳ ಬಲ ಕುಗ್ಗಿದ ನಂತರ, ಅಫ್ಗಾನಿಸ್ತಾನ ಮರುನಿರ್ಮಾಣಕ್ಕೆ ಅಲ್ಲಿನ ಸರ್ಕಾರದ ಜತೆ ಭಾರತ ಕೈಜೋಡಿಸಿತ್ತು. ನೂತನ ಸಂಸತ್ ಭವನ, ಹೆದ್ದಾರಿಗಳು, ಜಲಾಶಯಗಳು, ಜಲವಿದ್ಯುತ್ ಘಟಕಗಳ ನಿರ್ಮಾಣಕ್ಕಾಗಿ ಭಾರತ ಸರ್ಕಾರವು ಸಾವಿರಾರು ಕೋಟಿ ರೂಪಾಯಿ ವೆಚ್ಚ ಮಾಡಿದೆ.

ಭಾರತ ನಿರ್ಮಾಣ ಮಾಡಿದ್ದ ಸಂಸತ್ ಭವನವನ್ನು, ತಾಲಿಬಾನಿಗಳು ಧ್ವಂಸ ಮಾಡಿದ್ದರು. ಆ ಸಂಸತ್ ಭವನವನ್ನು ಎರಡನೇ ಬಾರಿಗೆ ನಿರ್ಮಾಣ ಮಾಡಿಕೊಟ್ಟಿದೆ. ಭಾರತ-ಅಫ್ಗಾನಿಸ್ತಾನದ ಮಧ್ಯೆ ವಾಣಿಜ್ಯ ಸಂಬಂಧ ಮತ್ತು ಸರಕು ಸಾಗಣೆಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಇರಾನ್ ಮೂಲಕ ವಾಣಿಜ್ಯ ಕಾರಿಡಾರ್ ನಿರ್ಮಾಣಕ್ಕೆ ನೆರವು ನೀಡುತ್ತಿದೆ. ಇಂತಹ ಸಂದರ್ಭದಲ್ಲೇ ತಾಲಿಬಾಲಿಗಳು ಮೇಲುಗೈ ಸಾಧಿಸಿದ್ದಾರೆ. ಭಾರತವು ನಿರ್ಮಾಣ ಮಾಡಿಕೊಟ್ಟಿದ್ದ ಬಹುತೇಕ ಸವಲತ್ತುಗಳನ್ನು ಈಗ ತಾಲಿಬಾನಿಗಳು ವಶಕ್ಕೆ ಪಡೆದಿದ್ದಾರೆ. ಇದು ಭಾರತಕ್ಕೆ ಆಗಿರುವ ದೊಡ್ಡ ಹಿನ್ನಡೆ.

ಇದೇ ಸಂದರ್ಭದಲ್ಲಿ ಅಫ್ಗಾನಿಸ್ತಾನದ ಮರುನಿರ್ಮಾಣಕ್ಕೆ ಚೀನಾದ ಬಂಡವಾಳವನ್ನು ತಾಲಿಬಾನಿಗಳು ಆಹ್ವಾನಿಸಿದ್ದಾರೆ. ಈಚೆಗೆ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ತಾಲಿಬಾನ್ ವಕ್ತಾರ ಸುಹೇಲ್ ಶಹೀನ್, 'ನಾವು ಚೀನಾವನ್ನು ಸ್ನೇಹಿತ ಎಂದು ಪರಿಗಣಿಸುತ್ತೇವೆ. ಅಫ್ಗಾನಿಸ್ತಾನದ ಮರುನಿರ್ಮಾಣದಲ್ಲಿ ಚೀನಾವು ಬಂಡವಾಳ ಹೂಡಬಹುದು. ಚೀನಾ ಬಂಡವಾಳ ಹೂಡಿದರೆ, ಅವರ ಇಲ್ಲಿನ ಎಲ್ಲಾ ಸ್ವತ್ತುಗಳು, ನೌಕರರು ಮತ್ತು ನಾಗರಿಕರಿಗೆ ಏನೂ ಆಗುವುದಿಲ್ಲ ಎಂಬ ಭರವಸೆಯನ್ನು ನಾವು ನೀಡುತ್ತೇವೆ. ಅವರಿಗೆ ಭದ್ರತೆ ಒದಗಿಸುತ್ತೇವೆ' ಎಂದು ಹೇಳಿದ್ದಾರೆ.

ಈ ಆಹ್ವಾನವನ್ನು ತಿರಸ್ಕರಿಸದಿರುವ ಮೂಲಕ ಚೀನಾ ಜಾಣ್ಮೆ ತೋರಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ. ಅಫ್ಗಾನಿಸ್ತಾನದಲ್ಲಿ ತಾಮ್ರ, ಕಲ್ಲಿದ್ದಲು, ಕಬ್ಬಿಣ, ಕೋಬಾಲ್ಟ್, ಪಾದರಸ, ಚಿನ್ನ, ಲಿಥಿಯಂ ಮತ್ತು ತೋರಿಯಂನ ಭಾರಿ ನಿಕ್ಷೇಪಗಳಿವೆ. ಅದರ ಮೇಲೆ ಚೀನಾ ಕಣ್ಣಿಟ್ಟಿದೆ. ಹೀಗಾಗಿಯೇ ತಾಲಿಬಾನ್ ಆಹ್ವಾನವನ್ನು ಚೀನಾ ಒಪ್ಪಿಕೊಳ್ಳುವ ಸಾಧ್ಯತೆ ಅತ್ಯಧಿಕವಾಗಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಆಧಾರ: ರಾಯಿಟರ್ಸ್, ಎಎಫ್‌ಪಿ, ಬಿಬಿಸಿ

ಪಂಚಾಯಿತಿಗಿಂತ ಭಿನ್ನ ವಿಧಾನಸಭೆ ಫಲಿತಾಂಶ

• ಸಂಜಯ್ ಪಾಂಡೆ

ಲಖನೌ: ವ್ಯಾಪಕ ಹಿಂಸಾಚಾರಗಳ ನಡುವೆಯೂ ಉತ್ತರ ಪ್ರದೇಶದ ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಬಿಜೆಪಿ ಒಟ್ಟು 74 ಸ್ಥಾನಗಳಲ್ಲಿ 67 ಸ್ಥಾನಗಳನ್ನು ಗೆದ್ದಿದೆ ಎಂದು ಆ ಪಕ್ಷವು ಹೇಳಿಕೊಳ್ಳುತ್ತಿದೆ. ಇದರಿಂದಾಗಿ, ಮುಂದಿನ ವರ್ಷ ನಡೆಯಲಿರುವ ವಿಧಾನಸಭೆ ಚುನಾವಣೆಯಲ್ಲೂ ಇಂಥದ್ದೇ ಫಲಿತಾಂಶ ಬರಬಹುದು ಎಂಬ ನಿರೀಕ್ಷೆಗಳು ಬಿಜೆಪಿಯಲ್ಲಿ ಗರಿಗೆದರಿವೆ. ಆದರೆ ಇತಿಹಾಸ ಬೇರೆಯದ್ದೇ ಚಿತ್ರಣವನ್ನು ನೀಡುತ್ತದೆ.

ರಾಜ್ಯದಲ್ಲಿ ಕಳೆದ ಎರಡು ಜಿಲ್ಲಾ ಪಂಚಾಯಿತಿ ಚುನಾವಣೆಗಳಲ್ಲಿಯೂ ಆಡಳಿತಾರೂಢ ಪಕ್ಷಗಳೇ ಗೆದ್ದಿವೆ. ಆದರೆ ಆ ಚುನಾವಣೆಗಳ ಬಳಿಕ ಮರುವರ್ಷವೇ ನಡೆದ ವಿಧಾನಸಭೆ ಚುನಾವಣೆಗಳಲ್ಲಿ ಆಡಳಿತಾರೂಢ ಪಕ್ಷಗಳು ಸೋತಿದ್ದವು.

2010ರಲ್ಲಿ ರಾಜ್ಯದಲ್ಲಿ ಬಿಎಸ್‌ಪಿ ಅಧಿಕಾರದಲ್ಲಿ ಇತ್ತು. ಆಗ ನಡೆದ ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಒಟ್ಟು 71 ಜಿಲ್ಲೆಗಳ ಪಂಚಾಯಿತಿಯ ಅಧ್ಯಕ್ಷ ಸ್ಥಾನಗಳಲ್ಲಿ 60 ಸ್ಥಾನಗಳನ್ನು ಬಿಎಸ್‌ಪಿ ಗೆದ್ದಿತ್ತು. ಆದರೆ 2012ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಒಟ್ಟು 403 ಸ್ಥಾನಗಳಲ್ಲಿ 80 ಕ್ಷೇತ್ರಗಳಲ್ಲಿ ಮಾತ್ರ ಗೆಲ್ಲಲು ಬಿಎಸ್‌ಪಿಗೆ ಸಾಧ್ಯವಾಗಿತ್ತು. ಮೂರು ಪಂಚಾಯಿತಿಗಳಲ್ಲಿ ಮಾತ್ರ ಗೆದ್ದಿದ್ದ ಸಮಾಜವಾದಿ ಪಕ್ಷ ವಿಧಾನಸಭೆ ಚುನಾವಣೆಯಲ್ಲಿ 224 ಸ್ಥಾನಗಳನ್ನು ಗೆದ್ದು ಅಧಿಕಾರಕ್ಕೇರಿತ್ತು.

ಅದೇ ರೀತಿ, 2016ರಲ್ಲಿ ನಡೆದಿದ್ದ ಪಂಚಾಯಿತಿ ಚುನಾವಣೆಯಲ್ಲಿ ಆಡಳಿತಾರೂಢ ಸಮಾಜವಾದಿ ಪಕ್ಷ 74 ಜಿಲ್ಲಾ ಪಂಚಾಯಿತಿಗಳ ಪೈಕಿ 63ರ ಅಧ್ಯಕ್ಷ ಸ್ಥಾನಗಳನ್ನು ಗೆದ್ದಿತ್ತು. ಆಗ ಬಿಜೆಪಿ ಕೇವಲ ಐದು ಸ್ಥಾನಗಳನ್ನು ಗೆದ್ದಿತ್ತು. ಆದರೆ ಮರುವರ್ಷವೇ ನಡೆದ ವಿಧಾನಸಭಾ ಚುನಾವಣೆಯಲ್ಲಿ ಅಚ್ಚರಿಯ ರೀತಿಯಲ್ಲಿ ಬಿಜೆಪಿ ಭಾರಿ ದೊಡ್ಡ ಅಂತರದ ಜಯ ಸಾಧಿಸಿತ್ತು. 403 ಸ್ಥಾನಗಳಲ್ಲಿ 325 ಸ್ಥಾನಗಳು ಬಿಜೆಪಿಯ ತೆಕ್ಕೆಗೆ ಬಿದ್ದಿದ್ದವು. ಸಮಾಜವಾದಿ ಪಕ್ಷಕ್ಕೆ 49 ಸ್ಥಾನಗಳನ್ನು ಗೆಲ್ಲಲು ಮಾತ್ರ ಸಾಧ್ಯವಾಗಿತ್ತು. ಈ ಬಾರಿ ಆಡಳಿತಾರೂಢ ಬಿಜೆಪಿ ಕೂಡಾ ಪಂಚಾಯಿತಿ ಚುನಾವಣೆಯಲ್ಲಿ ಅಂಥದ್ದೇ ದೊಡ್ಡ ಗೆಲುವು ಸಾಧಿಸಿದೆ.

ಆಡಳಿತಾರೂಢ ಪಕ್ಷಗಳೇ ಯಾವಾಗಲೂ ಪಂಚಾಯಿತಿ ಚುನಾವಣೆಗಳನ್ನು ಗೆದ್ದಿವೆ. ಸ್ಥಳೀಯ ಆಡಳಿತ ಹಲವಾರು ಸ್ಪಷ್ಟ ಕಾರಣಗಳಿಗಾಗಿ ಆಡಳಿತಾರೂಢ ಪಕ್ಷದ ಪರವಾಗಿ ಜನರು ನಿಲ್ಲುತ್ತಾರೆ ಎಂದು ಲಖನೌ ಮೂಲದ ಮಾಧ್ಯಮ ವಿಶ್ಲೇಷಕರು ಹೇಳಿದ್ದಾರೆ.

ಹಿಂಸೆ ತಾಂಡವದ ಆರೋಪ

ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆ ವೇಳೆ ವ್ಯಾಪಕವಾದ ಹಿಂಸಾಚಾರ ನಡೆದಿದೆ ಎಂಬ ವರದಿಗಳು ಬಂದಿವೆ. ಜೊತೆಗೆ, ಹಲವಾರು ಸ್ಥಳಗಳಲ್ಲಿ ವಿರೋಧ ಪಕ್ಷದ ಅಭ್ಯರ್ಥಿಗಳಿಗೆ ನಾಮಪತ್ರ ಸಲ್ಲಿಸಲು ಅಡ್ಡಿ ಮಾಡಲಾಗಿದೆ ಮತ್ತು ಮತ ಚಲಾವಣೆಯನ್ನು ತಪ್ಪಿಸುವ ಸಲುವಾಗಿ ತಾಲ್ಲೂಕು ಅಭಿವೃದ್ಧಿ ಸಮಿತಿ ಸದಸ್ಯರನ್ನು ಅಪಹರಿಸಿರುವ ವರದಿಗಳೂ ಬಂದಿವೆ.

ಬಿಜೆಪಿ ಮುಖಂಡರು ಎದುರಾಳಿಗಳನ್ನು ಥಳಿಸುತ್ತಿರುವುದನ್ನು ಚಿತ್ರೀಕರಣ ಮಾಡುತ್ತಿದ್ದ ಸ್ಥಳೀಯ ಸುದ್ದಿ ವಾಹಿನಿಯೊಂದರ ಛಾಯಾಗ್ರಾಹಕನನ್ನು ಮುಖ್ಯ ಅಭಿವೃದ್ಧಿ ಅಧಿಕಾರಿ (ಸಿಡಿಒ) ಬೆನ್ನಟ್ಟಿ ಹೋಗಿ ಥಳಿಸಿರುವುದು ಉನ್ನಾವ್‌ನಲ್ಲಿ ನಡೆದಿದೆ ಎನ್ನಲಾಗಿದೆ. ಇಟಾವಾದಲ್ಲಿ ಬಿಜೆಪಿ ಮುಖಂಡನ ಬೆಂಬಲಿಗರು ಬಾಂಬ್‌ಗಳನ್ನು ಎಸೆಯುತ್ತಿದ್ದರು ಮತ್ತು ಮತಗಟ್ಟೆಗೆ ಪ್ರವೇಶಿಸಲು ಯತ್ನಿಸಿದರು. ಅವರನ್ನು ತಡೆಯಲು ಮುಂದಾದ ಹಿರಿಯ ಪೊಲೀಸ್ ಅಧಿಕಾರಿಗೆ ಬಿಜೆಪಿ ಮುಖಂಡ ಕಪಾಳಮೋಕ್ಷ ಮಾಡಿದ್ದರು. ಲಖಿಂಪುರ್ ಖೇರಿಯಲ್ಲಿ ಮಹಿಳಾ ಅಭ್ಯರ್ಥಿಯ ಮೇಲೆ ದಾಳಿ ನಡೆಸಿ ಅವರ ಸೀರೆ ಎಳೆದಿರುವ ಘಟನೆ ನಡೆದಿತ್ತು ಎಂದೂ ಆರೋಪಿಸಲಾಗಿದೆ.


ಪಂಚಾಯಿತಿ ಚುನಾವಣೆಯಲ್ಲಿ ಭಾರಿ ಗೆಲುವು ಸಿಕ್ಕ ಸಂಭ್ರಮದಲ್ಲಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಮತ್ತು ಉತ್ತರ ಪ್ರದೇಶ ಬಿಜೆಪಿ ಅಧ್ಯಕ್ಷ ಸ್ವತಂತ್ರ ದೇವ್ ಸಿಂಗ್

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

'ಅಯೋಧ್ಯೆಯ ರೈಲು ನಿಲ್ದಾಣವನ್ನು ವಿಶ್ವದರ್ಜೆಗೆ ಏರಿಸಲಾಗಿದೆ. ನಿಲ್ದಾಣದಲ್ಲಿ ಜನರಿಗಾಗಿ ಅಂತರರಾಷ್ಟ್ರೀಯ ಗುಣಮಟ್ಟದ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಜನರ ಸೇವೆಗೆ ಈ ರೈಲು ನಿಲ್ದಾಣ ಸಿದ್ಧವಾಗಿದೆ. ಯೋಗಿ ಆದಿತ್ಯನಾಥ ಅವರ ಬಿಜೆಪಿ ಸರ್ಕಾರವು ರೈಲು ನಿಲ್ದಾಣವನ್ನು ಈ ಗುಣಮಟ್ಟದಲ್ಲಿ ಅಭಿವೃದ್ಧಿಪಡಿಸಿದೆ' ಎಂಬ ವಿವರ ಇರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ರೈಲು ನಿಲ್ದಾಣ, ಪ್ಲಾಟ್‌ಫಾರಂ, ಟಿಕೆಟ್ ಕೌಂಟರ್, ಶೌಚಾಲಯ ಮತ್ತು ವೈಫೈ ವ್ಯವಸ್ಥೆಯ ದೃಶ್ಯಗಳು ವಿಡಿಯೊದಲ್ಲಿ ಇವೆ. ಟ್ವಿಟರ್‌ನಲ್ಲಿ ಈ ವಿಡಿಯೊವನ್ನು 30,000ಕ್ಕೂ ಹೆಚ್ಚು ಬಾರಿ ಹಂಚಿಕೊಳ್ಳಲಾಗಿದೆ. ಫೇಸ್‌ಬುಕ್‌ನಲ್ಲಿ 20,000ಕ್ಕೂ ಹೆಚ್ಚು ಬಾರಿ ಹಂಚಿಕೊಳ್ಳಲಾಗಿದೆ. ವಾಟ್ಸ್‌ಆ್ಯಪ್‌ನಲ್ಲಿಯೂ ವಿಡಿಯೊ ವೈರಲ್ ಆಗಿದೆ.

ಆದರೆ ಇದು ಸುಳ್ಳು ಸುದ್ದಿ ಎಂದು ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 'ವೈರಲ್ ಆಗಿರುವ ವಿಡಿಯೊ ಅಯೋಧ್ಯೆ ರೈಲು ನಿಲ್ದಾಣಕ್ಕೆ ಸಂಬಂಧಿಸಿದ್ದು ಅಲ್ಲ. ಅದು ಗುಜರಾತ್‌ನ ಗಾಂಧಿನಗರ ರೈಲುನಿಲ್ದಾಣದ್ದು. ವೈರಲ್ ಆಗಿರುವ ವಿಡಿಯೊವನ್ನು ಪ್ರಯಾಣಿಕರೊಬ್ಬರು ಜುಲೈ 4ರಂದು ಮೊದಲ ಬಾರಿ ಯೂಟ್ಯೂಬ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಅದು ಗಾಂಧಿನಗರದ ರೈಲು ನಿಲ್ದಾಣ ಎಂಬುದನ್ನು ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಜತೆಗೆ ವಿಡಿಯೊದಲ್ಲಿನ ಒಂದು ದೃಶ್ಯದಲ್ಲಿ 'ಗುಜರಾತ್ ಟೂರಿಸಂ' ಎಂಬ ಲಾಂಛನ ಕಾಣಿಸುತ್ತದೆ. ನಮ್ಮ ಸಿಬ್ಬಂದಿ ಸ್ವತಃ ಗಾಂಧಿನಗರ ರೈಲು ನಿಲ್ದಾಣಕ್ಕೆ ಭೇಟಿ ನೀಡಿ, ವಿಡಿಯೊದಲ್ಲಿ ಇರುವ ರೈಲು ನಿಲ್ದಾಣ ಅಲ್ಲಿನದ್ದೇ ಎಂಬುದನ್ನು ಖಚಿತಪಡಿಸಿಕೊಂಡಿದ್ದಾರೆ. ಗಾಂಧಿನಗರ ರೈಲು ನಿಲ್ದಾಣದ ವಿಡಿಯೊವನ್ನು, ಅಯೋಧ್ಯೆ ರೈಲು ನಿಲ್ದಾಣ ಎಂದು ತಪ್ಪಾಗಿ ಹಂಚಿಕೊಳ್ಳಲಾಗಿದೆ' ಎಂದು ಆಲ್ಟ್‌ನ್ಯೂಸ್ ವಿವರಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಸುಕೃತಿ

ಶಕ್ತಿ ಕರಣಕ್ಕಿರಲಿ, ರಸ ಸಂಗ್ರಹಣ ಶಕ್ತಿ |
ಯುಕ್ತವದರೊಡನಿರಲಿ ಭೋಗದಿ ವಿರಕ್ತಿ ||
ಶಕ್ತಿ ತನ್ನೊಳಗಿದ್ದು ರಕ್ತಮನನಾಗದನೆ |
ಉತ್ತಮೋತ್ತಮ ಸುಕೃತಿ – ಮಂಕುತಿಮ್ಮ || 437 ||

ಪದ-ಅರ್ಥ: ಕರಣ = ಇಂದ್ರಿಯ, ಯುಕ್ತವದರೊಡನಿರಲಿ = ಯುಕ್ತ (ಯೋಗ್ಯ, ಅರ್ಹ) + ಅದರೊಡನೆ + ಇರಲಿ, ರಕ್ತಮನನಾಗದೆ = ರಕ್ತಮನನ್ (ತುಂಬ ಆಸಕ್ತಿಯುಳ್ಳವನು) + ಆಗದೆ, ಸುಕೃತಿ = ಒಳ್ಳೆಯ ಕೆಲಸಗಳನ್ನು ಮಾಡಿದವನು.

ವಾಚ್ಯಾರ್ಥ: ಇಂದ್ರಿಯಗಳಿಗೆ ಶಕ್ತಿ ಇರಲಿ. ಅವುಗಳಲ್ಲಿ ಸ್ವಾರಸ್ಯವನ್ನು ಸವಿಯುವ ಶಕ್ತಿಯೂ ಇರಲಿ. ಆದರೆ ಅದರೊಡನೆ ಅತಿಯಾದ ಭೋಗದಲ್ಲಿ ವಿರಕ್ತಿಯೂ ಇರಲಿ. ಅಪಾರವಾದ ಶಕ್ತಿಯನ್ನು ಹೊಂದಿಯೂ ಮೈಮರೆಸುವ ಆಸಕ್ತಿಯನ್ನು ಹೊಂದದೆ ನಿಗ್ರಹ ಶಕ್ತಿಯನ್ನು ಹೊಂದಿದವನು ಶ್ರೇಷ್ಠ ಸುಕೃತಿ.

ವಿವರಣೆ: ಸ್ವಾಮಿ ವಿವೇಕಾನಂದರು 'ಶಕ್ತಿ ಎಂದರೆ ಬದುಕು, ದುರ್ಬಲತೆ ಸಾವು' ಎಂದರು. 'ನಿಮ್ಮ ದೇಹದ ಮಾಂಸ, ರಜ್ಜುಗಳಲ್ಲಿ ಶಕ್ತಿ ಹೆಚ್ಚಾದರೆ ಭಗವದ್ಗೀತೆ ಇನ್ನೂ ಚೆನ್ನಾಗಿ ಅರ್ಥವಾಗುತ್ತದೆ' ಎಂದೂ ಹೇಳಿದರು. ಹಾಗೆಂದರೆ ನಮ್ಮ ಶರೀರ ಬಲಿಷ್ಠವಾಗಿರಬೇಕು, ಶಕ್ತಿಯಿಂದ ತುಂಬಿರಬೇಕು. ಇದೊಂದು ಅತ್ಯುತ್ತಮ ವಾಹನ. ನಮ್ಮನ್ನು ಗುರಿಯೆಡೆಗೆ ಕರೆದುಕೊಂಡು ಹೋಗಲು ಇದೊಂದೇ ವಾಹನ ನಮಗಿರುವುದು. ಅದು ಅಶಕ್ತವಾಗಿದ್ದರೆ, ದೋಷಪೂರಿತವಾಗಿದ್ದರೆ ಗುರಿ ತಲುಪುವುದು ಹೇಗೆ? ನಮ್ಮ ಸಾಧನೆಗೆ ಅನುವಾಗುವಂತೆ ಇಂದ್ರಿಯಗಳು ಶಕ್ತಿಯುತವಾಗಿರಬೇಕು. ಈ ಇಂದ್ರಿಯಗಳಿಂದಲೇ ನಮಗೆ ಪ್ರಪಂಚದ ಸ್ವಾರಸ್ಯದ ಅರಿವಾಗುವುದು.

ದೇಹ ದುರ್ಬಲವಾಗಿದ್ದರೆ, ಇಂದ್ರಿಯಗಳು ಪಟುತ್ವವನ್ನು ಕಳೆದುಕೊಂಡಿದ್ದರೆ, ವಿಷಯ ಸಂಗ್ರಹಣೆ ಆಗುವುದು ಹೇಗೆ? ಬದುಕಿನ ಸ್ವಾರಸ್ಯವೇ ಕಳೆದು ಹೋಗುತ್ತದೆ. ಇಲ್ಲೊಂದು ಎಚ್ಚರಿಕೆ ಇದೆ. ಭೋಗ ಬೇಕು. ಅದು ನಿಷಿದ್ಧವಲ್ಲ. ಆದರೆ, ಅತಿಯಾದ ಭೋಗ ಮೈಮರೆಸುತ್ತದೆ. ಅತಿಯಾದ ಶಕ್ತಿಯ ಸಾಹಸ, ಸಾವಕಾಶದ ವಿಷಾದಕ್ಕೆ ಎಡೆಯಾಗುತ್ತದೆ. ಇಂತಹುದನ್ನು ಇತಿಹಾಸ ಅನೇಕ ಬಾರಿ ದಾಖಲು ಮಾಡಿದೆ. ನಮ್ಮ ಮಹಾಭಾರತದ ಯುದ್ಧಕ್ಕೆ ಕೊಂಚ ಸಂವಾದಿಯಾಗಿರುವುದು ಗ್ರೀಸ್ ದೇಶದ ಹೋಮರ್ ಮಹಾಕವಿಯ ಇಲಿಯಡ್ ಕಾವ್ಯದ ಪುರಾಣಯುದ್ಧ. ಅದರಲ್ಲಿ ಟ್ರಾಯ್‌ಗೂ ಗ್ರೀಸಿಗೂ ಯುದ್ಧ ಬಲಿಯಿತು. ಎರಡು ಪಕ್ಷಗಳಲ್ಲೂ ಮಿತ್ರರಾಜರು ಸೇರಿಕೊಂಡರು. ಗ್ರೀಕರ ಪಕ್ಷದ ಶೂರ ಅಕಿಲಸ್. ಅವನ ಶೌರ್ಯವೇ ಗ್ರೀಕರ ಮುಖ್ಯ ಬಂಡವಾಳ. ಆದರೆ ಅವನಿಗೂ, ಅವನ ಪಕ್ಷದ ಮೂಲನಾಯಕ ಆಗಮೆಮ್ನನಿಗೂ ಮನಸ್ತಾಪ ಬಂದಿತು. ಅಕಿಲಸ್‌ನ ಕೋಪ, ಯುದ್ಧದಿಂದ ವಿರಮಿಸಿದ್ದು, ನಂತರ ಮತ್ತೆ ಯುದ್ಧಕ್ಕೆ ಧುಮಿಕಿ ಅಪಾರ ಜೀವಗಳ ಹನನ ಮಾಡಿದ್ದು ಶೌರ್ಯದ ದುರಂತ. ದುರ್ಯೋಧನ, ದುಶ್ಯಾಸನ, ಕರ್ಣ, ಆಗಮೆಮ್ನನ್, ಅಕಿಲಸ್ ಎಲ್ಲರೂ ಒಬ್ಬೊಬ್ಬ ವ್ಯಕ್ತಿಗಳು, ಅಪಾರ ಶಕ್ತಿಯನ್ನು ಹೊಂದಿದ ವ್ಯಕ್ತಿಗಳು. ಆದರೆ ತಮ್ಮ ಶಕ್ತಿಯ ಬಳಕೆಯ ಮಿತಿಯನ್ನು ಅರಿಯದೆ ಹೋದವರು. ಅವರ ಶಕ್ತಿಪರೀಕ್ಷೆಯ ಕರ್ಮದಿಂದ ಲಕ್ಷೋಪಲಕ್ಷ ನಿರಪರಾಧಿಗಳನ್ನು ವಿಧಿ ರಕ್ತದ ಮಡುವಿನೊಳಗೆ ಎಳೆದು ಮುಳುಗಿಸಿ ಬಿಟ್ಟಿತು. ಆದ್ದರಿಂದ ಶಕ್ತಿ ಅವಶ್ಯಕ. ಅದರೊಂದಿಗೆ ಶಕ್ತಿಯನ್ನು ಮಿತಿಯೊಳಗೆ ಬಳಸುವ ವಿವೇಕವೂ ಮುಖ್ಯ. ಅದನ್ನೇ ಕಗ್ಗ ಹೇಳುತ್ತದೆ. ಶಕ್ತಿ ಒಳಗಿದ್ದು ಅದರ ಬಳಕೆಯಲ್ಲಿ ಅತಿಯಾದ ಆಸಕ್ತಿಯನ್ನು ತೋರದೆ ನಿಗ್ರಹಿಸಿಕೊಳ್ಳುವವನು ನಿಜವಾಗಿಯೂ ಸುಕೃತಿ ಎನ್ನುತ್ತದೆ. ಅಂತಹ ಸುಕೃತದಿಂದ ಲೋಕಕ್ಷೇಮ. ❖

ದಿನ ಭವಿಷ್ಯ

ಸೋಮವಾರ ಜುಲೈ 12, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ಆಷಾಢ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಪುನರ್ವಸು ದ್ವಿತೀಯ ಗಂ. 2-2 (ಬೆ. 6-56) ಸೋಮವಾರ ನಿತ್ಯ ನಕ್ಷತ್ರ ಆಶ್ಲೇಷಾ ಗಂ. 51-4 (ರಾ 2-34) ವಜ್ರ ನಾಮ ಯೋಗ ಗಂ. 24-48 ಕೌಲವ ಕರಣ ಗಂ. 2-2 ವಿಷ ಗಂ. 21-54 ಅಮೃತ ಗಂ. 46-27 ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 ಸೂರ್ಯೋದಯ: 6-04 ಸೂರ್ಯಾಸ್ತ: 6-46 ಅದೃಷ್ಟ ಸಂಖ್ಯೆ 3 7

ಮೇಷ: ಇಡೀ ದಿನವೂ ಸಂತಸದ ದಿನವಾಗಿ ಪರಿಣಮಿಸಲಿದೆ. ಕುಟುಂಬದಲ್ಲಿ ವಿಷಯವೊಂದರ ಬಗ್ಗೆ ಒಮ್ಮತದ ಅಭಿಪ್ರಾಯಕ್ಕೆ ಬರಲಿದ್ದೀರಿ. ಕಾರ್ಯದಲ್ಲಿ ಸಫಲತೆ. ಲೇವಾದೇವಿ ವ್ಯವಹಾರದಲ್ಲಿ ಉತ್ತಮ ಲಾಭ ದೊರಕಲಿದೆ.

ವೃಷಭ: ಕೆಲಸ ಕಾರ್ಯಗಳಲ್ಲಿ ನಿರೀಕ್ಷಿತ ಯಶ ಸಾಧ್ಯವಾಗದು. ವ್ಯವಹಾರದಲ್ಲಿ ನಷ್ಟದ ಸಾಧ್ಯತೆ. ತಂದೆಯ ಮೇಲೆ ವಿನಾಕಾರಣ ಮುನಿಸು. ತಾಳ್ಮೆಯ ನಡೆಯಿಂದಾಗಿ ನೆಮ್ಮದಿ. ಸಂಗಾತಿಯ ಪ್ರೀತಿ ಬೆಂಗಾವಲಾಗಲಿದೆ.

ಮಿಥುನ: ಕಾರ್ಯ ಕಲಾಪಗಳು ಸರಾಗವಾಗಿ ನಡೆಯುವುದು. ವ್ಯಾಪಾರದಲ್ಲಿನ ಲಾಭದಲ್ಲಿ ಹೆಚ್ಚಳವನ್ನು ಕಾಣಲಿದ್ದೀರಿ. ಸ್ವಂತ ಉದ್ಯಮಿಗಳಿಗೆ ಅನುಕೂಲಕರ ವಾತಾವರಣ. ತಂಟೆ ತಗಾದೆಗಳಲ್ಲಿ ಜಯವನ್ನು ಕಾಣಲಿದ್ದೀರಿ.

ಕರ್ಕಾಟಕ: ವ್ಯವಹಾರದಲ್ಲಿ ಅನುಕೂಲತೆಯುಂಟಾಗಿ ಅಭಿವೃದ್ಧಿ ಸಾಧಿಸಲಿದ್ದೀರಿ. ಹಿತಕರ ಘಟನೆಗಳು ಸಂಭವಿಸಲಿವೆ. ಅಧ್ಯಯನದಲ್ಲಿ ಪ್ರಗತಿ. ಮಂತ್ರಾಲೋಚನೆಯ ಫಲವಾಗಿ ಶತ್ರುಭೀತಿ ದೂರ.

ಸಿಂಹ: ವ್ಯಪಾರ ವ್ಯವಹಾರಗಳಲ್ಲಿನ ಲಾಭದಲ್ಲಿ ಸ್ಥಿರತೆ ಕಂಡುಬರಲಿದೆ. ಪ್ರೀತಿಪಾತ್ರರೊಬ್ಬರ ಭೇಟಿಯಾಗುವ ಸಾಧ್ಯತೆ. ಗೃಹಿಣಿಯರಿಗೆ ಕೆಲಸದ ಒತ್ತಡದಿಂದಾಗಿ ಆರೋಗ್ಯದಲ್ಲಿ ವ್ಯತ್ಯಯ. ವಿಶೇಷ ಭೋಜನ ಸವಿಯಲಿದ್ದೀರಿ.

ಕನ್ಯಾ: ಸಮಯಕ್ಕೆ ಸರಿಯಾಗಿ ಕೆಲಸ ಕಾರ್ಯಗಳು ಪೂರ್ಣಗೊಳ್ಳದೆ ಒತ್ತಡ. ಲೇವಾದೇವಿ ವ್ಯವಹಾರದಲ್ಲಿ ಹಾನಿಯುಂಟಾದೀತು. ತಾಳ್ಮೆಯಿಂದ ನೆಮ್ಮದಿ. ಹಿರಿಯರಿಗೆ ಆರೋಗ್ಯದಲ್ಲಿ ತೊಂದರೆ ಕಂಡುಬಂದೀತು.

ತುಲಾ: ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಪ್ರಗತಿ ಕಂಡುಕೊಳ್ಳುವಿರಿ. ಲೆಕ್ಕ ಪತ್ರ ವ್ಯವಹಾರಗಳಲ್ಲಿನ ಗೊಂದಲ ನಿವಾರಣೆ. ವ್ಯಾಪಾರಸ್ಥರಿಗೆ ನಿರೀಕ್ಷಿತ ಲಾಭ. ಕುಟುಂಬ ಸದಸ್ಯರಲ್ಲಿ ಹೊಂದಾಣಿಕೆ ಕಂಡುಕೊಳ್ಳುವಿರಿ.

ವೃಶ್ಚಿಕ: ಕೆಲಸ ಕಾರ್ಯಗಳಲ್ಲಿ ನಿರೀಕ್ಷಿತ ಯಶಸ್ಸು ದೊರೆತು ನೆಮ್ಮದಿ. ವ್ಯವಹಾರದಲ್ಲಿ ಹೊಸ ನೀತಿಯಿಂದಾಗಿ ಖರೀದಿ ಮಾರಾಟ ವ್ಯವಹಾರದಿಂದ ಅಧಿಕ ಲಾಭ ನಿರೀಕ್ಷೆ. ಬರಬೇಕಾದ ಹಣ ಹಿಂತಿರುಗಿ ಬರಲಿದೆ.

ಧನು: ಕೆಲಸ ಕಾರ್ಯಗಳಲ್ಲಿ ಸಾಫಲ್ಯತೆಯನ್ನು ಕಾಣಲಿದ್ದೀರಿ. ವ್ಯಾಪಾರ ವ್ಯವಹಾರಗಳಲ್ಲಿನ ಲಾಭದಲ್ಲಿ ಹೆಚ್ಚಳವಾಗಲಿದೆ. ವ್ಯವಹಾರದಲ್ಲಿ ಹೊಸತನದ ಅನುಭವ. ವಿರೋಧಿಗಳ ಉಪದ್ರದಿಂದಾಗಿ ಮನಸ್ಸಿಗೆ ಕಿರಿಕಿರಿ.

ಮಕರ: ಮನಸ್ಸಿಗೆ ಬೇಸರ, ಖಿನ್ನತೆ ಉಂಟಾದೀತು. ತಾಯಿಯವರ ಆರೋಗ್ಯದಲ್ಲಿ ವ್ಯತ್ಯಯ ಉಂಟಾಗಲಿದೆ. ಎದೆಗುಂದದೇ ಮುಂದುವರಿಯುವು ಅವಶ್ಯಕ. ಯಂತ್ರೋಪಕರಣಗಳಿಂದ ನಿಶ್ಚಿತ ಆದಾಯ ಪ್ರಾಪ್ತವಾಗಲಿದೆ.

ಕುಂಭ: ಕೆಲಸ ಕಾರ್ಯಗಳಲ್ಲಿನ ಅತಿಯಾದ ಒತ್ತಡದಿಂದಾಗಿ ತಪ್ಪುಗಳು ಉಂಟಾಗುವ ಸಾಧ್ಯತೆ. ಅಧಿಕಾರಿಗಳ ಕೆಂಗಣ್ಣಿಗೆ ಗುರಿಯಾಗಬೇಕಾದೀತು. ಶತ್ರುಗಳಿಂದ ಭೀತಿಯ ವಾತಾವರಣ ಸೃಷ್ಟಿ.

ಮೀನ: ಆರೋಗ್ಯದಲ್ಲಿ ಸ್ಥಿರತೆ ಕಂಡುಬರುವುದು. ವ್ಯಾಪಾರ ವ್ಯವಹಾರಗಳಲ್ಲಿ ಉತ್ತಮ ಲಾಭ ದೊರೆಯಲಿದೆ. ಮಿತ್ರವರ್ಗದವರಿಂದ ಸಹಾಯ ದೊರಯಲಿದೆ. ಸಾಲ ತೀರುವಳಿಯಾಗಲಿದೆ.

ನಿಮ್ಮ ಜನ್ಮದಿನ 12-ಜುಲೈ ಇಂದು ಅತ್ಯಂತ ಶುಭದಾಯಕವಾಗಿದ್ದು, ವರ್ಷವಿಡೀ ಕೆಲಸ ಕಾರ್ಯಗಳು ಸುಗಮವಾಗಿ ನಡೆಯಲಿವೆ. ದಿನಸಿ ವ್ಯಾಪಾರಸ್ಥರಿಗೆ ನಿರೀಕ್ಷಿತ ಲಾಭಕ್ಕಿಂತಲೂ ಅಧಿಕ ಲಾಭ ದೊರಕಲಿದೆ. ವಾಣಿಜ್ಯ ಬೆಳೆಗಳ ವ್ಯಾಪಾರದಲ್ಲಿ ಕೈ ಸುಟ್ಟುಕೊಳ್ಳುವ ಸಾಧ್ಯತೆ ಕಂಡುಬರುತ್ತಿದೆ. ಮಿಶ್ರ ಲೋಹಗಳ ವ್ಯವಹಾರದಲ್ಲಿ ಲಾಭ.

ಪದಬಂಧ 4655

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಯುಕ್ತಾಯುಕ್ತ ಚಿಂತನೆಯನ್ನು ಹೊಂದಿದವನು (3)
2.ಪಂಡಿತ ಇಲ್ಲಿದ್ದಾನೆ (4)
4.ಬೂಟಾಟಿಕೆ ಸ್ವಭಾವದವಳು (4)
6.ಆನಂದ ಹೀಗೆ ಬಂದಿದೆ (3)
7.ದಿನಕರನಿರುವ ಹಗಲು (2)
9.ವಿಲಾಸಪ್ರಿಯನೀತ (3)
11.ವರಾರದವರಿಗೆ ದೊರೆತ ಅನುಗ್ರಹ (2)
13.ಸಮುದ್ರದೊಳಗೆ ಚಾಚಿಕೊಂಡಿರುವ ಭೂಭಾಗ (3)
14.ಅತ್ಯಂತ ರುಚಿಕಟ್ಟಾದ ಅಡುಗೆ (4)
16.ಅಂತರಾತ್ಮನ ಧ್ವನಿ (4)
17.ತರಳೆಯ ಮೂಗಿನ ರಂಧ್ರ (3)

ಮೇಲಿಂದ ಕೆಳಕ್ಕೆ

1.ಅಸಂಬದ್ಧವಾಗಿ ವಾದಿಸುವವನು (5)
2.ಕನ್ನಡಿಗನ ಇನ್ನೂರೆನ್ನು! (2)
3.ಬೆಳ್ಳಿ ಹಬ್ಬವಿದು (5)
5.ತೀರದಲ್ಲಿದ್ದಾಗ ಕವಿದ ಅಂಧಕಾರ (3)
8.ಕಾಲುಗುರಿನಿಂದ ತಲೆಯ ಮುಡಿಯವರೆಗೆ (5)
10.ಹಡಗಿನ ಮುಖ್ಯಾಧಿಕಾರಿ (3)
12.ಯುದ್ಧವನ್ನು ಸಾರುವ ಕಹಳೆ (5)
15.ಗುರಾಣಿ ಬಿದ್ದಿರುವ ಹಳ್ಳ (2)

1			■	■	2		3	
	■	■	■	■		■		■
4			5	■	■	6		
	■	■		■	■	■		■
7	8	■	9		10	■	11	12
■		■	■	■		■	■	
13			■	■	14			
■		■	15	■	■	■	■	
16				■	■	17		

4654ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಶಕುನಿ 6.ಸೂಕ್ಷ್ಮಪ್ರಕೃತಿ 7.ಪತ್ತಾರ 10.ಶರಣಾಗತಿ 15.ವಿಲೋಮ 16.ಮನೋನಿಗ್ರಹ 17.ವಕ್ತಾರ

ಮೇಲಿಂದ ಕೆಳಕ್ಕೆ: 1.ಶತಪದಿ 2.ನಿಷ್ಠುರ 3.ಮಸೂರ 4.ಸಂಪ್ರತಿ 5.ಪ್ರತಿನಿಧಿ 8.ಚರಣ 9.ಮಗಳು 11.ಸ್ಪರ್ಶಮಣಿ 12.ಮಮಕಾರ 13.ವನಿತ 14.ಕುಹಕಿ 15.ವಿಭವ

ಸುಡೊಕು 5041

				4		8		7
4		8					9	
	9			7		6		4
	5		7				6	
				9			5	
2		3			4		7	
7								6
	1		2		9		4	
6		2				9		5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5040 ಸುಡೊಕು

7	6	3	5	9	2	4	1	8
1	9	4	8	7	3	5	6	2
8	5	2	1	6	4	3	9	7
5	1	7	2	4	9	6	8	3
4	2	8	6	3	1	7	5	9
6	3	9	7	5	8	1	2	4
2	8	5	4	1	7	9	3	6
3	4	1	9	2	6	8	7	5
9	7	6	3	8	5	2	4	1

ನೀತಿ ಆಯೋಗದ ಉಪಾಧ್ಯಕ್ಷ ರಾಜೀವ್ ಕುಮಾರ್

ಪ್ರಸಕ್ತ ಹಣಕಾಸು ವರ್ಷದಲ್ಲಿ ಎರಡಂಕಿ ಆರ್ಥಿಕ ಪ್ರಗತಿ



ಮುಖ್ಯಾಂಶಗಳು

- ‘ಜಿಡಿಪಿ ಬೆಳವಣಿಗೆ ಅಂದಾಜು ಹೆಚ್ಚಿಸಲಿರುವ ರೇಟಿಂಗ್ಸ್ ಸಂಸ್ಥೆಗಳು’
- ಮೂರನೇ ತ್ರೈಮಾಸಿಕದಲ್ಲಿ ಖಾಸಗಿ ಹೂಡಿಕೆಯಲ್ಲಿ ಪೂರ್ಣ ಚೇತರಿಕೆ
- ₹ 1.75 ಲಕ್ಷ ಕೋಟಿಯ ಷೇರುವಿಕ್ರಯದ ಗುರಿ ತಲುಪುವ ವಿಶ್ವಾಸ

ನವದೆಹಲಿ (ಪಿಟಿಐ): ದೇಶದ ಆರ್ಥಿಕತೆಯು ಪ್ರಸಕ್ತ ಹಣಕಾಸು ವರ್ಷದಲ್ಲಿ ಎರಡಂಕಿ ಪ್ರಗತಿ ಸಾಧಿಸಲಿದೆ ಎಂದು ನೀತಿ ಆಯೋಗದ ಉಪಾಧ್ಯಕ್ಷ ರಾಜೀವ್ ಕುಮಾರ್ ಹೇಳಿದ್ದಾರೆ.

‘ಈ ಹಣಕಾಸು ವರ್ಷದ ದ್ವಿತೀಯಾರ್ಧದ ವೇಳೆಗೆ ಆರ್ಥಿಕ ಚಟುವಟಿಕೆಗಳು ಹೆಚ್ಚಾಗುವ ಹಲವು ಸೂಚನೆಗಳು ಕಾಣಿಸುತ್ತಿವೆ’ ಎಂದು ಅವರು ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

ಆರ್ಥಿಕ ಚೇತರಿಕೆಯು ಉತ್ತಮವಾಗಿರಲಿದ್ದು, ದೇಶದ ಜಿಡಿಪಿ ಬೆಳವಣಿಗೆ ಅಂದಾಜನ್ನು ತಗ್ಗಿಸಿರುವ ಸಂಸ್ಥೆಗಳು ಪರಿಷ್ಕರಿಸಿ ಮತ್ತೆ ಹೆಚ್ಚಿಸಲಿವೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಕೋವಿಡ್‌ನ ಎರಡನೇ ಅಲೆಯಿಂದಾಗಿ ಆರ್ಥಿಕ ಚೇತರಿಕೆಯು ವಿಳಂಬ ಆಗಲಿದೆ ಎನ್ನುವ ಕಾರಣಕ್ಕೆ ಎಸ್‌ಆ್ಯಂಡ್‌ಪಿ ಗ್ಲೋಬಲ್ ರೇಟಿಂಗ್ಸ್ ಸಂಸ್ಥೆಯು ಭಾರತದ ಜಿಡಿಪಿ ಅಂದಾಜನ್ನು ಶೇ 11ರಿಂದ ಶೇ 9.5ಕ್ಕೆ ಇಳಿಕೆ ಮಾಡಿದೆ. ಫಿಚ್ ರೇಟಿಂಗ್ಸ್ ಸಂಸ್ಥೆಯು ಶೇ 10ಕ್ಕೆ ತಗ್ಗಿಸಿದೆ.

‘ಖಾಸಗಿ ವಲಯದ ಹೂಡಿಕೆಯು ಯಾವಾಗ ಹೆಚ್ಚಾಗಲಿದೆ’ ಎನ್ನುವ ಪ್ರಶ್ನೆಗೆ ಕುಮಾರ್ ಅವರು, ‘ಉಕ್ಕು, ಸಿಮೆಂಟ್ ಮತ್ತು ರಿಯಲ್ ಎಸ್ಟೇಟ್ ವಲಯಗಳಲ್ಲಿ ಸಾಮರ್ಥ್ಯ ವೃದ್ಧಿಗಾಗಿ ಅಗತ್ಯವಾದ ಹೂಡಿಕೆಯು ಈಗಾಗಲೇ ಆಗುತ್ತಿದೆ. ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ ಖಾಸಗಿ ಹೂಡಿಕೆಯು ಪೂರ್ಣ ಪ್ರಮಾಣದ ಚೇತರಿಕೆ ಕಂಡುಕೊಳ್ಳುವ ನಿರೀಕ್ಷೆ ಮಾಡಬಹುದು’ ಎಂದು ಅವರು ಹೇಳಿದ್ದಾರೆ.

‘ಷೇರು ಮಾರುಕಟ್ಟೆಯಲ್ಲಿ ಉತ್ತಮ ವಹಿವಾಟು ನಡೆಯುತ್ತಿದೆ. ಈ ಸ್ಥಿತಿಯು ಇನ್ನಷ್ಟು ಬಲಗೊಳ್ಳಲಿದೆ. ಸಾಕಷ್ಟು ಸಂಖ್ಯೆಯಲ್ಲಿ ಐಪಿಒಗಳು ಬರಲಿದ್ದು, ಷೇರು ವಿಕ್ರಯಕ್ಕೆ ವಾತಾವರಣ ಉತ್ತಮವಾಗಿರುವಂತೆ ಕಾಣಿಸುತ್ತಿದೆ. ಷೇರು ವಿಕ್ರಯದ ಗುರಿಯನ್ನು ಸಂಪೂರ್ಣವಾಗಿ ತಲುಪುವ ವಿಶ್ವಾಸವಿದೆ’ ಎಂದು ಪ್ರಶ್ನೆಯೊಂದಕ್ಕೆ ಅವರು ಉತ್ತರಿಸಿದ್ದಾರೆ.

ಸರ್ಕಾರಿ ಸ್ವಾಮ್ಯದ ಕಂಪನಿಗಳು ಮತ್ತು ಹಣಕಾಸು ಸಂಸ್ಥೆಗಳ ಷೇರುಗಳನ್ನು ಮಾರಾಟ ಮಾಡುವ ಮೂಲಕ ₹ 1.75 ಲಕ್ಷ ಕೋಟಿ ಸಂಗ್ರಹಿಸುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ.

ಜಿಎಸ್‌ಟಿ ವಂಚನೆ: 23 ಕಂಪನಿಗಳ ಜಾಲ ಪತ್ತೆ

ನವದೆಹಲಿ (ಪಿಟಿಐ): ನಕಲಿ ಇನ್‌ವಾಯ್ಸ್ ಸೃಷ್ಟಿಸಿ ಜಿಎಸ್‌ಟಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ (ಐಟಿಸಿ) ವಂಚಿಸುತ್ತಿದ್ದ 23 ಕಂಪನಿಗಳ ಜಾಲವನ್ನು ಜಿಎಸ್‌ಟಿ ಅಧಿಕಾರಿಗಳು ಭೇದಿಸಿದ್ದಾರೆ. ₹ 551 ಕೋಟಿ ಮೌಲ್ಯದ ನಕಲಿ ಇನ್‌ವಾಯ್ಸ್ ಸೃಷ್ಟಿಸುವ ಮೂಲಕ ₹ 91 ಕೋಟಿ ಮೊತ್ತದ ಐಟಿಸಿ ವಂಚನೆ ಎಸಗಿರುವುದನ್ನು ಪತ್ತೆ ಮಾಡಿದ್ದಾರೆ.

ದೆಹಲಿ ಪೂರ್ವ ವಿಭಾಗದ ಕೇಂದ್ರ ಸರಕು ಮತ್ತು ಸೇವಾ ತೆರಿಗೆ (ಸಿಜಿಎಸ್‌ಟಿ) ಆಯುಕ್ತರ ಕಚೇರಿಯ ಅಧಿಕಾರಿಗಳು ಈ ವಂಚನೆ ಪ್ರಕರಣವನ್ನು ಭೇದಿಸಿದ್ದಾರೆ ಎಂದು ಹಣಕಾಸು ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ. ಗಿರಿಧರ್ ಎಂಟರ್‌ಪ್ರೈಸಸ್, ಅರುಣ್ ಸೇಲ್ಸ್, ಅಕ್ಷಯ್ ಟ್ರೇಡರ್ಸ್, ಪದ್ಮಾವತಿ ಎಂಟರ್‌ಪ್ರೈಸಸ್ ಮತ್ತು ಇತರೆ 19 ಕಂಪನಿಗಳು ಈ ವಂಚನೆಯ ಜಾಲದಲ್ಲಿ ತೊಡಗಿಕೊಂಡಿವೆ.

ದಿನೇಶ್ ಗುಪ್ತ, ಶುಭಂ ಗುಪ್ತ, ವಿನೋದ್ ಜೈನ್ ಮತ್ತು ಯೋಗೇಶ್ ಗೋಯೆಲ್ ಎನ್ನುವವರು ನಕಲಿ ಇನ್‌ವಾಯ್ಸ್ ಮಾರಾಟ ಮಾಡುತ್ತಿದ್ದರು. ಈ ಮೂವರು ಆರೋಪಿಗಳು ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದಾರೆ ಎಂದು ಸಚಿವಾಲಯ ತಿಳಿಸಿದೆ.

ಫ್ರ್ಯಾಂಕ್ಲಿನ್ ಟೆಂಪಲ್‌ಟನ್: ಹಣ ಹಿಂದಕ್ಕೆ

ನವದೆಹಲಿ (ಪಿಟಿಐ): ಫ್ರ್ಯಾಂಕ್ಲಿನ್ ಟೆಂಪಲ್‌ಟನ್ ಮ್ಯೂಚುವಲ್ ಫಂಡ್ ಕಂಪನಿ ಸ್ಥಗಿತಗೊಳಿಸಿದ ಆರು ಮ್ಯೂಚುವಲ್ ಫಂಡ್‌ಗಳಲ್ಲಿ ಹಣ ಹೂಡಿಕೆ ಮಾಡಿದ್ದವರ ಒಟ್ಟು ₹ 3,303 ಕೋಟಿಯನ್ನು ಎಸ್‌ಬಿಐ ಫಂಡ್ ಮ್ಯಾನೇಜ್‌ಮೆಂಟ್ ಕಂಪನಿಯು ಸೋಮವಾರದಿಂದ ಹಿಂದಿರುಗಿಸಲಿದೆ.

ಈ ಮೊತ್ತವನ್ನು ಸೇರಿಸಿದರೆ ಹೂಡಿಕೆದಾರರಿಗೆ ಹಿಂದಿರುಗಿಸಿದ ಒಟ್ಟು ಮೊತ್ತವು ₹ 21,080 ಕೋಟಿ ಆಗಲಿದೆ. ಇದು 2020ರ ಏಪ್ರಿಲ್ 23ರಂದು ಕಂಪನಿಯು ನಿರ್ವಹಣೆ ಮಾಡುತ್ತಿದ್ದ ಒಟ್ಟು ಮೊತ್ತದ ಶೇಕಡ 84ರಷ್ಟು ಎಂದು ಫ್ರ್ಯಾಂಕ್ಲಿನ್ ಟೆಂಪಲ್‌ಟನ್ ಕಂಪನಿಯ ವಕ್ತಾರರು ತಿಳಿಸಿದ್ದಾರೆ.

ಹಣವನ್ನು ಹೂಡಿಕೆದಾರರಿಗೆ ಮರಳಿಸುವ ಜವಾಬ್ದಾರಿಯನ್ನು ಎಸ್‌ಬಿಐ ಫಂಡ್ ಮ್ಯಾನೇಜ್‌ಮೆಂಟ್ ಕಂಪನಿಗೆ ಸುಪ್ರೀಂ ಕೋರ್ಟ್ ವಹಿಸಿದೆ.

ಮ್ಯೂಚುವಲ್ ಫಂಡ್‌ಗಳಲ್ಲಿ ವೈವಿಧ್ಯ ಹೀಗಿರಲಿ...



ಹಣಕಾಸು ಸಾಕ್ಷರತೆ

ಪ್ರಮೋದ್ ಬಿ.ಪಿ.

‘ಎಲ್ಲಾ ಮೊಟ್ಟೆಗಳನ್ನು ಒಂದೇ ಬುಟ್ಟಿಯಲ್ಲಿ ಇಡಬೇಡಿ’ ಎನ್ನುವುದು ಖ್ಯಾತ ಹೂಡಿಕೆದಾರ ವಾರನ್ ಬಫೆಟ್ ಅವರ ಸಲಹೆ. ಹೂಡಿಕೆಯಲ್ಲಿ ವೈವಿಧ್ಯ ಕಾಯ್ದುಕೊಳ್ಳುವುದು ಬಹಳ ಮುಖ್ಯ ಎನ್ನುವುದು ಈ ಮಾತಿನ ಸಾರ. ಆದರೆ ವಾರನ್ ಬಫೆಟ್ ಅವರ ಸಲಹೆಯನ್ನು ವಿಪರೀತವಾಗಿ ಅರ್ಥ ಮಾಡಿಕೊಳ್ಳುವ ಕೆಲವರು, ಮ್ಯೂಚುವಲ್ ಫಂಡ್‌ಗಳಲ್ಲಿ ಅತಿ ಅನಿಸುವಷ್ಟು ಹೂಡಿಕೆ ವೈವಿಧ್ಯ ಕಾಯ್ದುಕೊಳ್ಳಲು ಮುಂದಾಗುತ್ತಾರೆ.

ವಾಸ್ತವದಲ್ಲಿ ಮ್ಯೂಚುವಲ್ ಫಂಡ್ ಹೂಡಿಕೆಯಲ್ಲಿ ವೈವಿಧ್ಯ ಎಷ್ಟು ಮುಖ್ಯವೋ, ಆ ವೈವಿಧ್ಯಕ್ಕೆ ಮಿತಿ ಹಾಕಿಕೊಳ್ಳುವುದು ಕೂಡ ಅಷ್ಟೇ ಮುಖ್ಯ! ವೈವಿಧ್ಯ ಕಾಯ್ದುಕೊಳ್ಳುವುದು ಹಾಗೂ ವೈವಿಧ್ಯಕ್ಕೆ ಮಿತಿ ಹಾಕಿಕೊಳ್ಳುವುದರ ಬಗೆಗಿನ ಕೆಲವು ಮಾಹಿತಿ ಇಲ್ಲಿದೆ.

ಸರಿಯಾಗಿ ಅರ್ಥ ಮಾಡಿಕೊಳ್ಳಿ: ಸ್ನೇಹಿತನೊಬ್ಬ ಕರೆ ಮಾಡಿ, ‘25 ಬಗೆಯ ಮ್ಯೂಚುವಲ್ ಫಂಡ್‌ಗಳಲ್ಲಿ ನಾನು ಹಣ ತೊಡಗಿಸಿದ್ದೇನೆ. ಈಗ ಹೊಸದೊಂದು ಫಂಡ್ ಬಂದಿದೆ. ಅದು ಚೆನ್ನಾಗಿದೆ ಎಂದು ಕೆಲವರು ಹೇಳುತ್ತಿದ್ದಾರೆ. ಆ ಫಂಡ್‌ನಲ್ಲಿ ಹೂಡಿಕೆ ಮಾಡುವುದು ಸೂಕ್ತವೇ’ ಎಂದು ಕೇಳಿದ. ಈ ಪ್ರಶ್ನೆ ಕೇಳಿದ ನಂತರ ನನಗೆ ತಲೆನೋವು ಶುರುವಾಯಿತು. ‘ಫೋನ್‌ನಲ್ಲಿ ನಿನ್ನ ಪ್ರಶ್ನೆಗೆ ಉತ್ತರ ಕೊಡೋದು ಕಷ್ಟ. ಮುಖಾಮುಖಿಯಾಗಿ ಮಾತನಾಡೋಣ’ ಎಂದು ಸ್ನೇಹಿತನಿಗೆ ತಿಳಿಸಿದೆ.

ಇದು ನನ್ನ ಸ್ನೇಹಿತನೊಬ್ಬನ ಕಥೆಯಲ್ಲ, ಬಹುತೇಕರು ಮ್ಯೂಚುವಲ್ ಫಂಡ್‌ಗಳ ಆಯ್ಕೆಯಲ್ಲಿ ಹೀಗೆ ಎಡವಿರುತ್ತಾರೆ.

ಮ್ಯೂಚುವಲ್ ಫಂಡ್ ಅಂದರೇನೇ ವೈವಿಧ್ಯ!: ವಾಸ್ತವದಲ್ಲಿ ಮ್ಯೂಚುವಲ್ ಫಂಡ್ ಹೂಡಿಕೆ ಅಂದರೇನೇ ವೈವಿಧ್ಯ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಉದಾಹರಣೆಗೆ, ನೀವು ಕಂಪನಿಯೊಂದರ ಷೇರಿನಲ್ಲಿ ಹೂಡಿಕೆ ಮಾಡಿದರೆ, ಆ ಕಂಪನಿಯ ಷೇರು ಮಾತ್ರ ನಿಮ್ಮದಾಗುತ್ತದೆ. ಆದರೆ ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡಿದರೆ, ಫಂಡ್ ಮ್ಯಾನೇಜರ್ ನಿಮ್ಮ ಹಣವನ್ನು ಹತ್ತಾರು ಕಂಪನಿಗಳಲ್ಲಿ ತೊಡಗಿಸುತ್ತಾರೆ. ಹೀಗಿರುವಾಗ ನಾವು ಮ್ಯೂಚುವಲ್ ಫಂಡ್‌ಗಳಲ್ಲಿ ವೈವಿಧ್ಯದ ವಿಚಾರವನ್ನು ಹೇಗೆ ನಿರ್ಧಾರ ಮಾಡಬೇಕು ಎನ್ನುವ ಸ್ಪಷ್ಟತೆ ನಮ್ಮಲ್ಲಿರಬೇಕು.

ಮ್ಯೂಚುವಲ್ ಫಂಡ್‌ನಲ್ಲಿ ವೈವಿಧ್ಯ ಹೇಗೆ?: ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ವೈವಿಧ್ಯವನ್ನು ಸರಿಯಾಗಿ ಅನುಷ್ಠಾನಕ್ಕೆ ತರುವಲ್ಲಿ ಪ್ರಥಮ ಹೆಜ್ಜೆ, ಎಷ್ಟು ರೀತಿಯ ಮ್ಯೂಚುವಲ್ ಫಂಡ್‌ಗಳು ಇವೆ ಎಂಬುದನ್ನು ತಿಳಿದುಕೊಳ್ಳುವುದು. ಮ್ಯೂಚುವಲ್ ಫಂಡ್‌ಗಳನ್ನು ಪ್ರಮುಖವಾಗಿ ಮೂರು ರೀತಿಗಳಲ್ಲಿ ವರ್ಗೀಕರಿಸಬಹುದು.

1) ಈಕ್ವಿಟಿ ಮ್ಯೂಚುವಲ್ ಫಂಡ್ 2) ಡೆಟ್ (ಸಾಲಪತ್ರ) ಮ್ಯೂಚುವಲ್ ಫಂಡ್ ಮತ್ತು 3) ಹೈಬ್ರೀಡ್ ಫಂಡ್.

ಐದರಿಂದ ಏಳು ವರ್ಷಗಳ ದೀರ್ಘಾವಧಿ ಹೂಡಿಕೆ ಗುರಿಯಿದ್ದರೆ ಹೆಚ್ಚು ರಿಸ್ಕ್ ಇರುವ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳು ಸರಿಹೊಂದುತ್ತವೆ. ಮೂರರಿಂದ ಐದು ವರ್ಷಗಳ ಮಧ್ಯಮ ಅವಧಿಯ ಹೂಡಿಕೆ ಗುರಿ ಇದ್ದರೆ, ಮಧ್ಯಮ ಪ್ರಮಾಣದ ರಿಸ್ಕ್ ಇರುವ ಹೈಬ್ರೀಡ್ ಫಂಡ್‌ಗಳು ಸೂಕ್ತವಾಗುತ್ತವೆ. ಮೂರು ವರ್ಷಗಳು ಅಥವಾ ಅದಕ್ಕಿಂತ ಕಡಿಮೆ ಸಮಯದ ಅಲ್ಪಾವಧಿ ಗುರಿಯಿದ್ದರೆ ಕಡಿಮೆ ರಿಸ್ಕ್ ಇರುವ ಡೆಟ್ ಫಂಡ್‌ಗಳು ಸೂಕ್ತವೆನಿಸುತ್ತವೆ. ಉದಾಹರಣೆಗೆ, ನೀವು ಒಂದು ಲ್ಯಾಪ್ ಟಾಪ್ ಖರೀದಿಸುವುದನ್ನು ಅಲ್ಪಾವಧಿ ಗುರಿ ಎಂದುಕೊಳ್ಳಬಹುದು. ಮಕ್ಕಳ ಶಿಕ್ಷಣಕ್ಕಾಗಿ ಹಣ ಹೊಂದಿಸಿಕೊಳ್ಳುವುದು ಮಧ್ಯಮ ಅವಧಿಯ ಗುರಿ ಎಂದು ಪರಿಗಣಿಸಬಹುದು. ಮನೆ ಕಟ್ಟಿಸುವುದನ್ನು ದೀರ್ಘಾವಧಿ ಗುರಿ ಎಂದು ತಿಳಿಯಬಹುದು. ಹೀಗೆ ಅಗತ್ಯಕ್ಕೆ ಅನುಗುಣವಾಗಿ ಫಂಡ್‌ಗಳನ್ನು ಆಯ್ಕೆ ಮಾಡಿಕೊಳ್ಳಬೇಕು.

ಉಪ ಮಾದರಿಯಲ್ಲಿ ಗರಿಷ್ಠ 2 ಫಂಡ್ ಸಾಕು: ಮ್ಯೂಚುವಲ್ ಫಂಡ್‌ನ ಉಪ ಮಾದರಿಗಳಲ್ಲಿ ಒಂದು ಅಥವಾ ಗರಿಷ್ಠ ಎರಡಕ್ಕಿಂತ ಹೆಚ್ಚು ಫಂಡ್‌ಗಳಲ್ಲಿ ಹೂಡಿಕೆ ಬೇಡ. ‘ಅಯ್ಯೋ, ಇದೇನಿದು ಉಪ ಮಾದರಿ’ ಎಂದು ಗೊಂದಲಕ್ಕೆ ಒಳಗಾಗಬೇಡಿ. ಈಕ್ವಿಟಿ ಮ್ಯೂಚುವಲ್ ಫಂಡ್‌ಗಳನ್ನು ಉದಾಹರಣೆಯಾಗಿ ತೆಗೆದುಕೊಂಡರೆ ಅದರಲ್ಲಿ ಲಾರ್ಜ್ ಕ್ಯಾಪ್, ಮಿಡ್ ಕ್ಯಾಪ್, ಸ್ಮಾಲ್ ಕ್ಯಾಪ್ ಮತ್ತು ಮಲ್ಟಿ ಕ್ಯಾಪ್ ಫಂಡ್‌ಗಳು ಇವೆ. ಇವು ಈಕ್ವಿಟಿ ಫಂಡ್‌ನ ಉಪ ಮಾದರಿಗಳು. ಇಂತಹ ಪ್ರತಿ ಉಪ ಮಾದರಿಯಲ್ಲಿ ನೀವು ಗರಿಷ್ಠ ಎರಡು ಫಂಡ್‌ಗಳಲ್ಲಿ ಹೂಡಿಕೆ ಮಾಡಿದರೆ ಸಾಕು.

ಉದಾಹರಣೆಗೆ, ಲಾರ್ಜ್ ಕ್ಯಾಪ್ ಮ್ಯೂಚುವಲ್ ಫಂಡ್‌ಗಳನ್ನು ಪರಿಗಣಿಸಿದರೆ ಅದರಲ್ಲಿ ಎರಡು ಉತ್ತಮ ಫಂಡ್‌ಗಳನ್ನು ಆಯ್ಕೆ ಮಾಡಿ ಹೂಡಿಕೆ ಮಾಡಬಹುದು. ಒಂದೇ ಮಾದರಿಯ ಎರಡಕ್ಕಿಂತ ಹೆಚ್ಚಿನ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದರಲ್ಲಿ ಅರ್ಥವಿಲ್ಲ.

(ಲೇಖಕ: ಸುವಿಷನ್ ಹೋಲ್ಡಿಂಗ್ಸ್ ಪ್ರೈ.ಲಿ.,ನ ಸಂಶೋಧನಾ ವಿಭಾಗದ ಮುಖ್ಯಸ್ಥ)



ಸತತ ಎರಡನೇ ವಾರವೂ ಕುಸಿದ ಷೇರುಪೇಟೆ

ಷೇರುಪೇಟೆ ಸೂಚ್ಯಂಕಗಳು ಸತತ ಎರಡನೇ ವಾರವೂ ಕುಸಿತ ಕಂಡಿವೆ. 52,386 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್ ಮತ್ತು 15,689 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ವಾರದ ಅವಧಿಯಲ್ಲಿ ಶೇ 0.2ರಷ್ಟು ಇಳಿಕೆಯಾಗಿವೆ. ಮಿಡ್ ಕ್ಯಾಪ್ ಸೂಚ್ಯಂಕ ಶೇ 1.5ರಷ್ಟು ಏರಿಕೆಯಾಗಿದೆ. ಕೋವಿಡ್‌ನ ಡೆಲ್ಟಾ ರೂಪಾಂತರಿಯ ಪ್ರಕರಣಗಳು ಹೆಚ್ಚುತ್ತಿದ್ದು, ಈ ಬೆಳವಣಿಗೆ ಜಾಗತಿಕವಾಗಿ ಆರ್ಥಿಕ ಚೇತರಿಕೆ ಮೇಲೆ ಪರಿಣಾಮ ಬೀರಬಹುದು ಎನ್ನುವ ಕಾರಣದಿಂದ ಮಾರುಕಟ್ಟೆಯಲ್ಲಿ ನಕಾರಾತ್ಮಕತೆ ಕಂಡುಬಂದಿದೆ.

ವಲಯವಾರು ಪ್ರಗತಿಯಲ್ಲಿ, ನಿಫ್ಟಿ ಬ್ಯಾಂಕ್ ಶೇ 1ರಷ್ಟು ಏರಿಕೆಯಾಗಿದೆ. ರಿಯಲ್ ಎಸ್ಟೇಟ್ ಮತ್ತು ಲೋಹ ವಲಯ ಉತ್ತಮ ಗಳಿಕೆ ಕಂಡಿವೆ. ಆದರೆ ವಾಹನ ವಲಯ ಮತ್ತು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಕುಸಿದಿವೆ. ಕಳೆದ ವಾರ ನಿಫ್ಟಿ ಸೂಚ್ಯಂಕ 15,600ರಿಂದ 15,900 ಅಂಶಗಳ ನಡುವೆಯೇ ಸುಳಿದಾಡಿರುವುದು ಮಾರುಕಟ್ಟೆಯಲ್ಲಿ ಏರಿಳಿತ ಮುಂದುವರಿಯಲಿದೆ ಎನ್ನುವುದನ್ನು ಸೂಚಿಸುತ್ತಿದೆ.

ಏರಿಕೆ–ಇಳಿಕೆ: ನಿಫ್ಟಿಯಲ್ಲಿ ಬಜಾಜ್ ಫಿನ್‌ಸರ್ವ್ ಶೇ 9ರಷ್ಟು, ಟಾಟಾ ಸ್ಟೀಲ್ ಶೇ 9ರಷ್ಟು, ಹಿಂಡಾಲ್ಕೋ ಶೇ 4ರಷ್ಟು ಮತ್ತು ಇಂಡಸ್ ಇಂಡ್ ಬ್ಯಾಂಕ್ ಶೇ 3ರಷ್ಟು ಗಳಿಕೆ ಕಂಡಿವೆ. ಏರಿಕೆಯ ಹಾದಿಯಲ್ಲೇ ಇದ್ದ ಟಾಟಾ ಮೋಟರ್ಸ್ ಶೇ 11ರಷ್ಟು ಕುಸಿತ ಕಂಡಿದೆ. ಬಜಾಜ್ ಆಟೊ ಶೇ 4ರಷ್ಟು, ಟಿಸಿಎಸ್ ಶೇ 3ರಷ್ಟು, ಟೆಕ್ ಮಹೀಂದ್ರ ಶೇ 3ರಷ್ಟು ಮತ್ತು ರಿಲಯನ್ಸ್ ಶೇ 3ರಷ್ಟು ಇಳಿಕೆ ದಾಖಲಿಸಿವೆ.

ಮುನ್ನೋಟ: ಕೋವಿಡ್ ಡೆಲ್ಟಾ ಪ್ರಕರಣಗಳು ಎಷ್ಟರ ಮಟ್ಟಿಗೆ ಏರಿಕೆ ಕಾಣಲಿವೆ ಎನ್ನುವ ಅಂಶ ಮಾರುಕಟ್ಟೆ ಮೇಲೆ ನೇರ ಪರಿಣಾಮ ಬೀರಲಿದೆ. ಜಾಗತಿಕ ವಿದ್ಯಮಾನಗಳು, ಕಂಪನಿಗಳ ತ್ರೈಮಾಸಿಕ ಫಲಿತಾಂಶಗಳ ವರದಿಗಳು ಕೂಡ ಮಾರುಕಟ್ಟೆ ದಿಕ್ಕು ನಿರ್ಧರಿಸಲಿವೆ. ಈ ವಾರ ಮೈಂಡ್ ಟ್ರೀ, ಕ್ರಾಫ್ಟ್ಸ್‌ಮೆನ್, ವಿಪ್ರೊ, ಫೈಪೈಸಾ ಕ್ಯಾಪಿಟಲ್, ಟಾಟಾ ಮೆಟಾಲಿಕ್ಸ್, ಹ್ಯಾಟ್ಸನ್, ಏಂಜಲ್ ಬ್ರೋಕಿಂಗ್, ಇನ್ಫೊಸಿಸ್, ದೋಡ್ಲಾ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಜೊಮ್ಯಾಟೊ ಕಂಪನಿಯ ಐಪಿಒ (ಆರಂಭಿಕ ಸಾರ್ವಜನಿಕ ಹೂಡಿಕೆ) ಜುಲೈ 14ರಿಂದ ಜುಲೈ 16ರವರೆಗೆ ನಡೆಯಲಿದೆ.

ಬಿಪಿಸಿಎಲ್: ಖಾಸಗೀಕರಣದ ನಂತರ ಸಬ್ಸಿಡಿ ಎಲ್‌ಪಿಜಿ ಸಿಗುವುದೇ?

ನವದೆಹಲಿ (ಪಿಟಿಐ): ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ಕಂಪನಿಯು ಖಾಸಗಿಯವರಿಗೆ ಮಾರಾಟ ಆದ ನಂತರವೂ ತನ್ನ ಗ್ರಾಹಕರಿಗೆ ಸಬ್ಸಿಡಿ ಸಹಿತ ಎಲ್‌ಪಿಜಿ ಸಿಲಿಂಡರ್ ಪೂರೈಸಲಿದೆಯೇ?

ದೇಶದಲ್ಲಿ ಉತ್ಪಾದನೆ ಆಗುವ ಎಲ್‌ಪಿಜಿಯನ್ನು (ದ್ರವೀಕೃತ ಪೆಟ್ರೋಲಿಯಂ ಅನಿಲ) ಸರ್ಕಾರಿ ಸ್ವಾಮ್ಯದ ಕಂಪನಿಗಳಿಗೆ ಮಾತ್ರ ಪೂರೈಕೆ ಮಾಡಬೇಕು ಎಂದು ಎರಡು ದಶಕಗಳ ಹಿಂದೆ ಹೊರಡಿಸಿದ್ದ ಆದೇಶವೊಂದು ಈ ಪ್ರಶ್ನೆಯನ್ನು ಹುಟ್ಟುಹಾಕಿದೆ.

ಬಿಪಿಸಿಎಲ್ ಖಾಸಗೀಕರಣ ಆದ ನಂತರದಲ್ಲಿ, ಒಎನ್‌ಜಿಸಿ ಮತ್ತು ಗೇಲ್ ಉತ್ಪಾದಿಸಿದ ಎಲ್‌ಪಿಜಿ ಪಡೆಯುವ ಅರ್ಹತೆಯನ್ನು ಉಳಿಸಿಕೊಳ್ಳುವುದೇ ಎಂಬ ಬಗ್ಗೆ ವಿವರ ನೀಡುವಂತೆ ಕಾನೂನು ತಜ್ಞರಿಂದ ಅಭಿಪ್ರಾಯ ಕೇಳಲಾಗಿದೆ ಎಂದು ಮೂಲಗಳು ತಿಳಿಸಿವೆ. ಈಗ ಬಿಪಿಸಿಎಲ್ ಒಟ್ಟು 8.4 ಕೋಟಿಗಿಂತ ಹೆಚ್ಚು ಎಲ್‌ಪಿಜಿ ಗ್ರಾಹಕರನ್ನು ಹೊಂದಿದೆ. ಇವರಲ್ಲಿ 2.1 ಕೋಟಿ ಉಜ್ವಲಾ ಯೋಜನೆ ಫಲಾನುಭವಿಗಳೂ ಸೇರಿದ್ದಾರೆ.

ಬಿಪಿಸಿಎಲ್ ಕಂಪನಿಯು ಇತರ ತೈಲೋತ್ಪನ್ನ ಮಾರಾಟ ಕಂಪನಿಗಳಂತೆಯೇ ಸರ್ಕಾರಿ ಸ್ವಾಮ್ಯದ ಒಎನ್‌ಜಿಸಿ, ಗೇಲ್ ಕಂಪನಿಗಳಿಂದ ಎಲ್‌ಪಿಜಿ ಖರೀದಿ ಮಾಡುತ್ತಿದೆ. 2020ರ ಎಲ್‌ಪಿಜಿ ನಿಯಂತ್ರಣ ಆದೇಶವು ದೇಶದಲ್ಲಿ ಉತ್ಪಾದನೆ ಆಗುವ ಎಲ್‌ಪಿಜಿಯನ್ನು ಸರ್ಕಾರಿ ಸ್ವಾಮ್ಯದ ಕಂಪನಿಗಳಿಗೆ ಮಾತ್ರ ಪೂರೈಕೆ ಮಾಡಬೇಕು ಎಂದು ಹೇಳುತ್ತದೆ. ಖಾಸಗಿ ಕಂಪನಿಗಳು ತಮ್ಮ ಗ್ರಾಹಕರಿಗೆ ಎಲ್‌ಪಿಜಿ ಪೂರೈಸುವುದಿದ್ದರೆ ಅವು ವಿದೇಶಗಳಿಂದ ಆಮದು ಮಾಡಿಕೊಳ್ಳಬೇಕು.

ಬಿಪಿಸಿಎಲ್ ಖಾಸಗಿಯವರ ಕೈಗೆ ಹಸ್ತಾಂತರ ಆದ ನಂತರ ಈ ಆದೇಶವು ಆ ಕಂಪನಿಗೆ ಎಲ್‌ಪಿಜಿ ಪೂರೈಸುವುದನ್ನು ನಿರ್ಬಂಧಿಸುತ್ತದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು. ಅಲ್ಲದೆ, ಖಾಸಗಿಯವರ ತೆಕ್ಕೆಗೆ ಸರಿದ ನಂತರ ಬಿಪಿಸಿಎಲ್‌ಗೆ ತನ್ನ ಗ್ರಾಹಕರಿಗೆ ಅಗತ್ಯ ಪ್ರಮಾಣದಲ್ಲಿ ಎಲ್‌ಪಿಜಿ ಪೂರೈಸಲು ಆಗುವುದಿಲ್ಲ.

2000ನೇ ಇಸವಿಯ ಆದೇಶಕ್ಕೆ ತಿದ್ದುಪಡಿ ತಂದು, ಖಾಸಗಿ ಕಂಪನಿಗಳು ಕೂಡ ದೇಶದಲ್ಲಿ ಉತ್ಪಾದನೆ ಆದ ಎಲ್‌ಪಿಜಿಯನ್ನು ಖರೀದಿಸಬಹುದು ಎಂಬ ನಿಯಮ ಜಾರಿಗೆ ತರುವ ಬಗ್ಗೆಯೂ ಚರ್ಚೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

‘ಮಹಾರಾಷ್ಟ್ರ: ಮುಂದಿನ ಸ್ಪೀಕರ್ ಸ್ಥಾನ ಕಾಂಗ್ರೆಸ್‌ಗೆ’

ಪುಣೆ (ಪಿಟಿಐ): ಮಹಾರಾಷ್ಟ್ರ ವಿಧಾನಸಭೆಯ ಮುಂದಿನ ಸ್ಪೀಕರ್ ಸ್ಥಾನವನ್ನು ಕಾಂಗ್ರೆಸ್‌ಗೆ ನೀಡಲು ಆಡಳಿತಾರೂಢ ಮಹಾ ವಿಕಾಸ್ ಅಘಾಡಿ (ಎಂವಿಎ) ನಿರ್ಧರಿಸಿದೆ ಎಂದು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಭಾನುವಾರ ಹೇಳಿದರು.

ಶಾಸಕ ನಾನಾ ಪಟೋಲೆ ಅವರು ಮಹಾರಾಷ್ಟ್ರದ ಕಾಂಗ್ರೆಸ್ ಘಟಕದ ಅಧ್ಯಕ್ಷರಾದ ನಂತರ ಫೆಬ್ರುವರಿಯಲ್ಲಿ ಸ್ಪೀಕರ್ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಈವರೆಗೂ ಈ ಸ್ಥಾನಕ್ಕೆ ಆಯ್ಕೆ ನಡೆದಿರಲಿಲ್ಲ. ಆಯ್ಕೆ ಮಾಡುವಂತೆ ರಾಜ್ಯಪಾಲರು ಸಹ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದರು.

‘ಎಂವಿಎ ಒಕ್ಕೂಟ (ಶಿವಸೇನೆ, ಎನ್‌ಸಿಪಿ ಮತ್ತು ಕಾಂಗ್ರೆಸ್) ಹೊಸ ಸ್ಪೀಕರ್ ಸ್ಥಾನವನ್ನು ಕಾಂಗ್ರೆಸ್ ಪಕ್ಷಕ್ಕೆ ಬಿಟ್ಟುಕೊಡಲು ನಿರ್ಧರಿಸಿದೆ. ಆ ಪಕ್ಷವು ಯಾರನ್ನು ಸ್ಪೀಕರ್ ಮಾಡಬೇಕು ಎಂಬುದನ್ನು ನಿರ್ಧರಿಸಲಿದೆ. ಅದನ್ನು ನಾವು ಬೆಂಬಲಿಸುತ್ತೇವೆ’ ಎಂದು ಶರದ್ ಪವಾರ್ ಮಾಧ್ಯಮದವರಿಗೆ ತಿಳಿಸಿದರು.

ಹೊಸ ಐ.ಟಿ. ಪೋರ್ಟಲ್: ಬಗೆಹರಿಯದ ತಾಂತ್ರಿಕ ಸಮಸ್ಯೆ


ನವದೆಹಲಿ (ಪಿಟಿಐ): ಆದಾಯ ತೆರಿಗೆ ವಿವರ ಸಲ್ಲಿಸಲು ಹೊಸ ಪೋರ್ಟಲ್ ಬಳಕೆಗೆ ಬಂದು ಒಂದು ತಿಂಗಳು ಕಳೆದರೂ ಅದರಲ್ಲಿನ ತಾಂತ್ರಿಕ ಸಮಸ್ಯೆಗಳು ಬಗೆಹರಿದಿಲ್ಲ ಎಂದು ಲೆಕ್ಕ ಪರಿಶೋಧಕರು ಹೇಳಿದ್ದಾರೆ. ಆದಾಯ ತೆರಿಗೆ ಇಲಾಖೆಯ ನೋಟಿಸ್‌ಗಳಿಗೆ ಪೋರ್ಟಲ್ ಮೂಲಕವೇ ಉತ್ತರ ನೀಡಲು ಆಗುತ್ತಿಲ್ಲ, ಡಿಜಿಟಲ್ ಸಹಿ ಪ್ರಮಾಣಪತ್ರ ಈಗಲೂ ಕಾರ್ಯನಿರ್ವಹಿಸುತ್ತಿಲ್ಲ. ವಿದೇಶದಲ್ಲಿರುವ ಕೆಲವು ಕಂಪನಿಗಳು ಲಾಗಿನ್ ಆಗುವಾಗ ಸಮಸ್ಯೆ ಎದುರಿಸುತ್ತಿವೆ ಎಂದೂ ತಿಳಿಸಿದ್ದಾರೆ.

ಹೊಸ ಜಾಲತಾಣ www.incometax.gov.inಗೆ ಜೂನ್ 7ರಂದು ಚಾಲನೆ ನೀಡಲಾಗಿತ್ತು. ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಲು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಜೂನ್ 22ರಂದು ಇನ್ಫೊಸಿಸ್ ತಂಡದೊಂದಿಗೆ ಸಭೆ ನಡೆಸಿದ್ದರು. ಆ ಬಳಿಕವೂ ಸಮಸ್ಯೆಗಳು ಮುಂದುವರಿದಿವೆ.

ಕೆಲವು ಸಮಸ್ಯೆಗಳು: ಹಿಂದಿನ ವರ್ಷಗಳ ಐ.ಟಿ. ರಿಟರ್ನ್ಸ್ ಸಲ್ಲಿಸಲು ಆಗುತ್ತಿಲ್ಲ. 2019–20 ಮತ್ತು ಅದಕ್ಕೂ ಹಿಂದಿನ ಅಂದಾಜು ವರ್ಷಗಳಿಗೆ ಸಂಬಂಧಿಸಿದ, ಸೆಕ್ಷನ್ 143 (1) ಅಡಿ ನೀಡಲಾದ ನೋಟಿಸ್‌ಗಳು ಡೌನ್‌ಲೋಡ್ ಆಗುತ್ತಿಲ್ಲ. ವಿವಾದ್ ಸೆ ವಿಶ್ವಾಸ್ ಯೋಜನೆಯ ಫಾರಂ–3 ಸಿಗುತ್ತಿಲ್ಲ.


ಹೊಸ ಪೋರ್ಟಲ್‌ನಿಂದಾಗಿ ರಿಟರ್ನ್ಸ್ ಸಲ್ಲಿಕೆ ಮತ್ತು ತೆರಿಗೆ ನಿರ್ವಹಣೆ ಇನ್ನಷ್ಟು ಸುಧಾರಣೆ ಆಗುವ ನಿರೀಕ್ಷೆ ಇದೆ. ಹೀಗಿದ್ದರೂ ಪೋರ್ಟಲ್‌ನಲ್ಲಿ ಪ್ರಮುಖ ತೊಂದರೆಗಳು ಇರುವುದರಿಂದ ತೆರಿಗೆದಾರರು ಮತ್ತು ತೆರಿಗೆ ವೃತ್ತಿಪರರು ತೊಂದರೆ ಎದುರಿಸುವಂತಾಗಿದೆ ಎಂದು ಪಿಎಚ್‌ಡಿ ಛೇಂಬರ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರಿಯ ನೇರ ತೆರಿಗೆ ಸಮಿತಿಯ ಅಧ್ಯಕ್ಷ ಮುಕುಲ್ ಬಾಗ್ಲಾ ಹೇಳಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹490
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹490


ರಾಮನಗರ ರೇಷ್ಮೆ ಗೂಡು ಧಾರಣೆ



ಮಿಶ್ರತಳಿ (ಸಿ.ಬಿ) ₹271-393

ದ್ವಿತಳಿ (ಬಿ.ವಿ) ₹323-479

ಉದ್ಯಮಿಯ ‘ಹನಿಟ್ರ್ಯಾಪ್’ ಆರೋಪ: ಮೂವರ ಬಂಧನ



ಪ್ರಾತಿನಿಧಿಕ ಚಿತ್ರ

ನವದೆಹಲಿ (ಪಿಟಿಐ): ಉದ್ಯಮಿಯೊಬ್ಬರನ್ನು ‘ಹನಿಟ್ರ್ಯಾಪ್‘ ಮಾಡಿ, ₹ 1 ಕೋಟಿ ನೀಡದಿದ್ದರೆ ತಿದ್ದಲಾದ ಅವರ ಚಿತ್ರಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುವುದಾಗಿ ಬೆದರಿಕೆ ಹಾಕಿದ ಆರೋಪದ ಮೇಲೆ ಸಾಫ್ಟ್‌ವೇರ್ ಎಂಜಿನಿಯರ್ ಹಾಗೂ ಆತನ ಇಬ್ಬರು ಸಹಚರರನ್ನು ಬಂಧಿಸಿದ್ದಾಗಿ ದೆಹಲಿ ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಗುರುಗ್ರಾಮ ನಿವಾಸಿಯಾಗಿರುವ ಸಾಫ್ಟ್‌ವೇರ್ ಎಂಜಿನಿಯರ್ ರಾಜಕಿಶೋರ್ ಸಿಂಗ್, ಸಹಚರ ಆರ್ಯನ್ ದೀಕ್ಷಿತ್ ಹಾಗೂ ಮತ್ತೊಬ್ಬ ಯುವತಿಯನ್ನು ಬಂಧಿಸಲಾಗಿದ ಎಂದು ಪೊಲೀಸರು ತಿಳಿಸಿದ್ದಾರೆ.

‘ವೈಭವಯುತ ಜೀವನ ಶೈಲಿ ರೂಢಿಸಿಕೊಂಡಿದ್ದ ಆರೋಪಿ, ತನ್ನ ಖರ್ಚು–ವೆಚ್ಚಗಳಿಗಾಗಿ ಇಂಥ ಕೃತ್ಯಗಳನ್ನು ಎಸಗುತ್ತಿದ್ದ’ ಎಂದೂ ಪೊಲೀಸರು ತಿಳಿಸಿದ್ದಾರೆ.

‘ಸ್ಪಾ ಸ್ಥಾಪಿಸಿದ್ದ ಆರೋಪಿ ರಾಜಕಿಶೋರ್ ಸಿಂಗ್, ಕೆಲಸಕ್ಕಾಗಿ ಯುವತಿಯನ್ನು ನೇಮಕ ಮಾಡಿಕೊಂಡಿದ್ದ. ‘ಟಿಂಡರ್’ ಎಂಬ ಆ್ಯಪ್ ಮೂಲಕ ಶ್ರೀಮಂತರು, ಉದ್ಯಮಿಗಳನ್ನು ಸಂಪರ್ಕಿಸುತ್ತಿದ್ದರು.

ಮತ್ತೊಬ್ಬ ಆರೋಪಿ ಮಹಿಳೆ ಅವರೊಂದಿಗೆ ಚಾಟ್ ಮಾಡಿ, ಸ್ಪಾನಲ್ಲಿನ ಯುವತಿಯರೊಂದಿಗೆ ನಿಕಟವಾಗಿರುವಂತೆ ಪುಸಲಾಯಿಸುತ್ತಿದ್ದರು. ನಂತರ, ಅವರ ಏಕಾಂತದ ಕ್ಷಣಗಳ ಫೋಟೊ, ವಿಡಿಯೊ ಸೆರೆಹಿಡಿದು ಹಣಕ್ಕಾಗಿ ಬೇಡಿಕೆ ಇಡುತ್ತಿದ್ದರು. ಹಣ ನೀಡಲು ಒಪ್ಪದಿದ್ದಾಗ, ಈ ಫೋಟೊ, ವಿಡಿಯೊಗಳನ್ನು ಅಪ್‌ಲೋಡ್ ಮಾಡುವುದಾಗಿ ಬೆದರಿಕೆ ಹಾಕುತ್ತಿದ್ದರು’ ಎಂದು ಪೊಲೀಸರು ಹೇಳಿದ್ದಾರೆ.

‘ಉದ್ಯಮಿಯೊಬ್ಬರು ನೀಡಿದ ದೂರಿನ ಆಧಾರದ ಮೇಲೆ ಮೂವರನ್ನು ಬಂಧಿಸಲಾಗಿದೆ. ರಹಸ್ಯವಾಗಿ ಚಿತ್ರೀಕರಣಕ್ಕೆ ಬಳಸುತ್ತಿದ್ದ ಕ್ಯಾಮೆರಾಗಳಿದ್ದ ಎರಡು ಬ್ಯಾಗ್, ಮೆಮೊರಿ ಕಾರ್ಡ್, ಯುಎಸ್‌ಪಿ ಪೆನ್ ಡ್ರೈವ್, ಲ್ಯಾಪ್‌ಟಾಪ್ ಹಾಗೂ ಮೊಬೈಲ್‌ಫೋನನ್ನು ವಶಪಡಿಸಿಕೊಳ್ಳಲಾಗಿದೆ’ ಎಂದು ಕ್ರೈಂ ಬ್ರ್ಯಾಂಚ್‌ನ ಡಿಸಿಪಿ ಮನೋಜ್ ಸಿ. ಅವರು ತಿಳಿಸಿದ್ದಾರೆ.

ವಿಂಬಲ್ಡನ್ ಟೆನಿಸ್ ಟೂರ್ನಿ: ಇಟಲಿಯ ಮಟಿಯೊ ಬೆರೆಟಿನಿಗೆ ನಿರಾಸೆ

ನೊವಾಕ್‌ಗೆ ಪ್ರಶಸ್ತಿ ಸಂಭ್ರಮ

ಲಂಡನ್ (ಎಪಿ): ಮಟಿಯೊ ಬೆರೆಟಿನಿ ಅವರ ದಾಖಲೆಯ ಕನಸನ್ನು ನುಚ್ಚುನೂರು ಮಾಡಿದ ಸರ್ಬಿಯಾದ ನೊವಾಕ್ ಜೊಕೊವಿಚ್ ಅವರು ವಿಂಬಲ್ಡನ್ ಟೆನಿಸ್ ಟೂರ್ನಿಯ ಪ್ರಶಸ್ತಿ ಗೆದ್ದುಕೊಂಡರು. ಭಾನುವಾರ ರಾತ್ರಿ ನಡೆದ ಫೈನಲ್ ಪಂದ್ಯದಲ್ಲಿ ಅವರು 6–7 (4/7), 6–4, 6–4, 6–3ರಲ್ಲಿ ಜಯ ಸಾಧಿಸಿದರು.

ಇದು ನೊವಾಕ್ ಅವರ 20ನೇ ಗ್ರ್ಯಾನ್‌ಸ್ಲಾಮ್ ಕಿರೀಟವಾಗಿದೆ. ಈ ಮೂಲಕ ರೋಜರ್ ಫೆಡರರ್ ಮತ್ತು ರಫೆಲ್ ನಡಾಲ್ ದಾಖಲೆಯನ್ನು ಸಮಗಟ್ಟಿದರು. ವಿಂಬಲ್ಡನ್‌ನಲ್ಲಿ ಆರು ಬಾರಿ ಚಾಂಪಿಯನ್ ಆದ ಶ್ರೇಯಸ್ಸು ಕೂಡ ಅವರದಾಯಿತು. ಇದು ವಿಂಬಲ್ಡನ್‌ನಲ್ಲಿ ಜೊಕೊವಿಚ್‌ಗೆ ಏಳನೇ ಮತ್ತು ಒಟ್ಟಾರೆ ಗ್ರ್ಯಾನ್‌ಸ್ಲಾಮ್‌ನಲ್ಲಿ 30ನೇ ಫೈನಲ್ ಆಗಿತ್ತು.

ವಿಂಬಲ್ಡನ್ ಟೂರ್ನಿಯಲ್ಲಿ ಫೈನಲ್ ಪ್ರವೇಶಿಸಿದ ಇಟಲಿಯ ಮೊದಲ ಆಟಗಾರ ಎಂಬ ದಾಖಲೆ ಸೃಷ್ಟಿಸಿರುವ ಬೆರೆಟಿನಿ ಪ್ರಶಸ್ತಿ ಗೆದ್ದು ಈ ಅವಕಾಶವನ್ನು ಅವಿಸ್ಮರಣೀಯವಾಗಿಸಿಕೊಳ್ಳುವ ಹುಮ್ಮಸ್ಸಿನಲ್ಲಿದ್ದರು. ಮೊದಲ ಸೆಟ್‌ನಲ್ಲಿ ಗೆಲುವು ಸಾಧಿಸಿ ಭರವಸೆಯನ್ನೂ ಮೂಡಿಸಿದ್ದರು. ಆದರೆ ಮುಂದಿನ ಮೂರು ಸೆಟ್‌ಗಳಲ್ಲಿ ಜೊಕೊವಿಚ್ ಏಕಪಕ್ಷೀಯ ಜಯ ಸಾಧಿಸಿದರು. ಜೊಕೊವಿಚ್ ವಿರುದ್ಧ ಬೆರೆಟಿನಿಗೆ ಇದು ಸತತ ಮೂರನೇ ಸೋಲು.

ಮೊದಲ ಮಹಿಳಾ ಅಂಪೈರ್: ವಿಂಬಲ್ಡನ್ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ ಇದೇ ಮೊದಲ ಬಾರಿ ಮಹಿಳಾ ಚೇರ್ ಅಂಪೈರ್ ಕಾರ್ಯನಿರ್ವಹಿಸಿದರು. ಕ್ರೊವೇಷ್ಯಾದ 43 ವರ್ಷದ ಮರಿಜಾ ಸಿಕಾಕ್ ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ಫೈನಲ್ ಪಂದ್ಯದಲ್ಲಿ ಅಂಪೈರ್ ಆಗಿ ಕಾರ್ಯನಿರ್ವಹಿಸಿದರು.

ನೊವಾಕ್ ಜೊಕೊವಿಚ್ ಪ್ರಶಸ್ತಿ ಗೆಲುವಿನ ಹಾದಿ

ಮೊದಲ ಸುತ್ತು	ಬ್ರಿಟನ್‌ನ ಜ್ಯಾಕ್ ಡ್ರಾಪರ್ ಎದುರು **4-6, 6-1, 6-2, 6-2**ರಲ್ಲಿ ಜಯ
ಎರಡನೇ ಸುತ್ತು	ದಕ್ಷಿಣ ಆಫ್ರಿಕಾದ ಕೆವಿನ್ ಆ್ಯಂಡರ್ಸನ್ ವಿರುದ್ಧ **6-3, 6-3, 6-3**ರಲ್ಲಿ ಜಯ
ಮೂರನೇ ಸುತ್ತು	ಅಮೆರಿಕದ ಡೆನಿಸ್ ಕುಡ್ಲ ವಿರುದ್ಧ **6-4, 6-3, 7-6 (9/7)**ರಲ್ಲಿ ಜಯ
ನಾಲ್ಕನೇ ಸುತ್ತು	ಚೀನಾದ ಕ್ರಿಸ್ಟಿಯನ್ ಗರಿನ್ ಎದುರು **6-4, 6-2, 6-2**ರಲ್ಲಿ ಗೆಲುವು
ಕ್ವಾರ್ಟರ್ ಫೈನಲ್	ಹಂಗೇರಿಯ ಮಾರ್ಟನ್ ಫುಕ್ಸೊವಿಕ್ಸ್ ವಿರುದ್ಧ **6-3, 6-4, 6-4**ರಲ್ಲಿ ಜಯ
ಸೆಮಿಫೈನಲ್	ಕೆನಡಾದ ಡೆನಿಸ್ ಶಪೊವಲೊವ್ ವಿರುದ್ಧ **7-6 (7/3), 7-5, 7-5**ರಲ್ಲಿ ಜಯ
ಫೈನಲ್	ಇಟಲಿಯ ಮಟಿಯೊ ಬೆರೆಟಿನಿ ಎದುರು **6-7 (4/7), 6-4, 6-4, 6-3**ರಲ್ಲಿ ಗೆಲುವು

ಜೊಕೊವಿಚ್ ವೃತ್ತಿಜೀವನದ ಪ್ರಮುಖ ಮೈಲುಗಲ್ಲುಗಳು

- 20 ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಗೆದ್ದು ರೋಜರ್ ಫೆಡರರ್, ರಫೆಲ್ ನಡಾಲ್ ದಾಖಲೆ ಸಮ; ಈ ಸಾಧನೆ ಮಾಡಿದ ಒಟ್ಟಾರೆ ಆರನೇ ಟೆನಿಸ್ ಪಟು.
- ಸತತ ಮೂರು ವಿಂಬಲ್ಡನ್ ಪ್ರಶಸ್ತಿಗಳನ್ನು ಗೆದ್ದ ನಾಲ್ಕನೇ ಆಟಗಾರ. ರೋಜರ್ ಫೆಡರರ್, ಬ್ಯಾನ್ ಬೋರ್ಗ್ ಮತ್ತು ಪೀಟ್ ಸಾಂಪ್ರಾಸ್ ಇತರ ಮೂವರು.
- ಮೂರು ಬಾರಿ ಸತತ ಮೂರು ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಗೆದ್ದ ಸಾಧನೆ. ಆಸ್ಟ್ರೇಲಿಯಾ ಓಪನ್‌ನಲ್ಲಿ 2011ರಿಂದ 2013, 2019ರಿಂದ 2021ರ ವರೆಗೆ ಪ್ರಶಸ್ತಿ ಗೆದ್ದುಕೊಂಡಿದ್ದರು.
- ಋತುವೊಂದರ ಮೊದಲ ಮೂರು ಗ್ರ್ಯಾನ್‌ಸ್ಲಾಂ ಪ್ರಶಸ್ತಿಗಳನ್ನು ಗೆದ್ದ ಐದನೇ ಆಟಗಾರ. 1969ರ ನಂತರ ಈ ಸಾಧನೆ ಮಾಡಿದ ಮೊದಲ ಆಟಗಾರ. ಎಲ್ಲ ನಾಲ್ಕು ಗ್ರ್ಯಾನ್‌ಸ್ಲಾಂ ಪ್ರಶಸ್ತಿಗಳನ್ನು ಎರಡು ಬಾರಿ ಗೆದ್ದ ಮೂರನೇ ಆಟಗಾರ.

(ಮಾಹಿತಿ: ರಾಯಿಟರ್ಸ್)



ವಿಂಬಲ್ಡನ್ ಪ್ರಶಸ್ತಿಯೊಂದಿಗೆ ನೊವಾಕ್ ಜೊಕೊವಿಚ್ –ಎಎಫ್‌ಪಿ ಚಿತ್ರ

ಭಾರತ ಮೂಲದ ಸಮೀರ್‌ಗೆ ಬಾಲಕರ ಸಿಂಗಲ್ಸ್ ಕಿರೀಟ

ಲಂಡನ್ (ಪಿಟಿಐ): ಭಾರತ ಮೂಲದ ಅಮೆರಿಕ ಟೆನಿಸ್ ಆಟಗಾರ ಸಮೀರ್ ಬ್ಯಾನರ್ಜಿ, ವಿಂಬಲ್ಡನ್ ಬಾಲಕರ ವಿಭಾಗದ ಸಿಂಗಲ್ಸ್ ಪ್ರಶಸ್ತಿ ಮುಡಿಗೇರಿಸಿದ್ದಾರೆ.

ಭಾನುವಾರ ನಡೆದ ಪ್ರಶಸ್ತಿ ಸುತ್ತಿನ ಹೋರಾಟದಲ್ಲಿ ಅಮೆರಿಕದ ವಿಕ್ಟರ್ ಲಿಲೊವ್ ವಿರುದ್ಧ 7-5, 6-3ರ ಅಂತರದಲ್ಲಿ ಅವರು ಜಯ ಗಳಿಸಿದರು.

ಗ್ರ್ಯಾನ್‌ಸ್ಲಾಮ್ ಜೂನಿಯರ್ ವಿಭಾಗದಲ್ಲಿ 17ರ ಹರೆಯದ ಸಮೀರ್ ಎರಡನೇ ಬಾರಿಗೆ ಸ್ಪರ್ಧಿಸಿದ್ದರು.

ಸಮೀರ್ ಬ್ಯಾನರ್ಜಿ ಪೋಷಕರು ಭಾರತದ ಮೂಲದವರಾಗಿದ್ದು, 1980ರ ದಶಕದಲ್ಲಿ ಅಮೆರಿಕದಲ್ಲಿ ನೆಲೆಸಿದ್ದರು.

ಇತ್ತೀಚೆಗಷ್ಟೇ ನಡೆದ ಫ್ರೆಂಚ್ ಓಪನ್‌ನಲ್ಲಿ 19ನೇ ರ್‍ಯಾಂಕ್‌ನ ಸಮೀರ್, ಮೊದಲ ಸುತ್ತಿನಲ್ಲೇ ಸೋತು ಹೊರಬಿದ್ದಿದ್ದರು.

2009ರಲ್ಲಿ ಯೂಕಿ ಭಾಂಬ್ರಿ ಆಸ್ಟ್ರೇಲಿಯನ್ ಓಪನ್ ಬಾಲಕರ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿ ಗೆದ್ದಿದ್ದರು.



ಪ್ರಶಸ್ತಿಯೊಂದಿಗೆ ಸಂಭ್ರಮಿಸಿದ ಅರ್ಜೆಂಟೀನಾ ತಂಡದ ಆಟಗಾರರು –ಎಎಫ್‌ಪಿ ಚಿತ್ರ

ಕೋಪಾ ಅಮೆರಿಕ ಫುಟ್‌ಬಾಲ್: ಬ್ರೆಜಿಲ್‌ಗೆ ನಿರಾಸೆ

ಅರ್ಜೆಂಟೀನಾ ತಂಡಕ್ಕೆ ಪ್ರಶಸ್ತಿ

ಬ್ಯೂನಸ್ ಐರಿಸ್/ರಿಯೊ ಡಿ ಜನ್ನೈರೊ (ಎಪಿ/ರಾಯಿಟರ್ಸ್): ತಂಡದಿಂದ ಕೈಬಿಡಬೇಕು ಎಂದು ಅಭಿಮಾನಿಗಳು ಒತ್ತಾಯಿಸಿದ್ದ ಆಂಗೆಲ್ ಡಿ ಮರಿಯಾ ಅವರು ಕೋಪಾ ಅಮೆರಿಕ ಟೂರ್ನಿಯಲ್ಲಿ ಅರ್ಜೆಂಟೀನಾಗೆ ಪ್ರಶಸ್ತಿ ಗೆದ್ದುಕೊಟ್ಟರು.

ಶನಿವಾರ ರಾತ್ರಿ (ಭಾರತೀಯ ಕಾಲಮಾನ ಭಾನುವಾರ ಮುಂಜಾನೆ) ನಡೆದ ಫೈನಲ್‌ನಲ್ಲಿ ಆಂಗೆಲ್ ಗಳಿಸಿದ ಏಕೈಕ ಗೋಲು ಬ್ರೆಜಿಲ್ ವಿರುದ್ಧ ಅರ್ಜೆಂಟೀನಾಗೆ 1–0 ಅಂತರದ ಗೆಲುವು ತಂದುಕೊಟ್ಟಿತು. ಈ ಮೂಲಕ 28 ವರ್ಷಗಳ ನಂತರ ತಂಡ ಪ್ರಮುಖ ಟೂರ್ನಿಯೊಂದರ ಪ್ರಶಸ್ತಿ ಮುಡಿಗೇರಿಸಿಕೊಂಡಿತು. ನಾಯಕ ಲಯೊನೆಲ್ ಮೆಸ್ಸಿ ಅವರಿಗೆ ಪ್ರಮುಖ ಟೂರ್ನಿಯಲ್ಲಿ ಇದು ಮೊದಲ ಪ್ರಶಸ್ತಿಯಾಗಿದೆ.

ಫೈನಲ್‌ನಲ್ಲಿ ಆಡಲು ಸಾಧ್ಯವಾಗದೇ ಇರುವುದು ಮತ್ತು ಆಡಿದರೂ ಯಶಸ್ಸು ಕಾಣದೇ ಇರುವುದರಿಂದ ನೊಂದಿದ್ದ ಆಂಗೆಲ್ ಮನೋವಿಜ್ಞಾನಿಯನ್ನು ಭೇಟಿಯಾಗಿ ಖಿನ್ನತೆ ಪರಿಹಾರ ಕಂಡುಕೊಳ್ಳಲು ನಿರ್ಧರಿಸಿದ್ದರಂತೆ. ಕೋಪಾ ಅಮೆರಿಕ ಟೂರ್ನಿಯ ಫೈನಲ್‌ನಲ್ಲಿ ಅವರನ್ನು ಕಣಕ್ಕೆ ಇಳಿಸಬಾರದು ಎಂದು ತಂಡದ ಅಭಿಮಾನಿಗಳು ಒತ್ತಾಯಿಸಿದ್ದರು. ಆದರೆ 33 ವರ್ಷದ ಸ್ಟ್ರೈಕರ್ 22ನೇ ನಿಮಿಷದಲ್ಲಿ ಚೆಂಡನ್ನು ಗುರಿ ಮುಟ್ಟಿಸಿ ಮುನ್ನಡೆ ತಂದುಕೊಟ್ಟರು. ಇದನ್ನು ಕೊನೆಯ ವರೆಗೂ ಉಳಿಸಿಕೊಂಡ ತಂಡದ ಆಟಗಾರರು ಕಪ್ ಎತ್ತಿ ಹಿಡಿದು ಕುಣಿದಾಡಿದರು.



ಆಂಗೆಲ್ ಡಿ ಮರಿಯಾ

2014ರ ವಿಶ್ವಕಪ್ ಟೂರ್ನಿಯಲ್ಲಿ ಅರ್ಜೆಂಟೀನಾ ಪರ ಆಡಿದ್ದ ಆಂಗೆಲ್, ಸ್ಟ್ರೈಕರ್ ಸರ್ಜಿಯೊ ಅಗೆರೊ ಮತ್ತು ನಾಯಕ ಲಯೊನೆಲ್ ಮೆಸ್ಸಿ ಮಾತ್ರ ಈಗ ತಂಡದಲ್ಲಿ ಉಳಿದಿದ್ದಾರೆ. ವಿಶ್ವಕಪ್ ಫೈನಲ್‌ನಲ್ಲಿ ತಂಡ ಸೋತಿತ್ತು. 2015 ಮತ್ತು 2016ರ ಕೋಪಾ ಅಮೆರಿಕ ಟೂರ್ನಿಯಲ್ಲೂ ಈ ಮೂವರು ಆಡಿದ್ದರು.

ಈ ನಡುವೆ ಆಂಗೆಲ್ ಗಾಯದಿಂದಾಗಿ ಆಗಾಗ ಸಂಕಷ್ಟಕ್ಕೆ ಒಳಗಾಗಿದ್ದರು. 2014ರ ವಿಶ್ವಕಪ್‌ನ ಫೈನಲ್‌ನಲ್ಲಿ ಆಡಲು ಅವರಿಗೆ ಸಾಧ್ಯವಾಗಲಿಲ್ಲ. ಮುಂದಿನ ವರ್ಷದ ಕೋಪಾ ಅಮೆರಿಕ ಟೂರ್ನಿಯ ಫೈನಲ್‌ನಲ್ಲೂ ಗಾಯದ ಸಮಸ್ಯೆ ಕಾಡಿತ್ತು. 2016ರ ಟೂರ್ನಿಯಲ್ಲಿ ಚಿಲಿ ವಿರುದ್ಧದ ನಿರ್ಣಾಯಕ ಪಂದ್ಯದಲ್ಲಿ ಆಡುವುದಕ್ಕೂ ಸಾಧ್ಯವಾಗಲಿಲ್ಲ.

ಆದರೆ ಮರಕಾನ ಕ್ರೀಡಾಂಗಣದಲ್ಲಿ ಅವರು ಮ್ಯಾಜಿಕ್ ಮಾಡಿದರು. ರೊಡ್ರಿಗೊ ಡಿ ಪಾಲ್ ದೂರದಿಂದ ನೀಡಿದ ಪಾಸ್‌ನಲ್ಲಿ ಚೆಂಡನ್ನು ನಿಯಂತ್ರಿಸಿ ಆಂಗೆಲ್ ಮುನ್ನುಗ್ಗಿದಾಗ ಎದುರಾಳಿ ತಂಡದ ಡಿಫೆಂಡರ್‌ಗಳು ಇರಲಿಲ್ಲ. ಗೋಲ್‌ಕೀಪರ್ ತಮ್ಮತ್ತ ಧಾವಿಸಿ ಬರುವುದನ್ನು ಗಮನಿಸಿದ ಆಂಗೆಲ್ ದೂರದಿಂದಲೇ ಚೆಂಡನ್ನು ತುದಿಗಾಲಲ್ಲಿ ಎತ್ತಿ ಗೋಲ್‌ಕೀಪರ್ ತಲೆ ಮೇಲಿಂದ ಗೋಲುಪೆಟ್ಟಿಗೆಯ ಒಳಗೆ ಹಾಕಿದರು.

ಟೋಕಿಯೊ ಒಲಿಂಪಿಕ್ಸ್ 2020 ಭಾರತದ ಕನಸಿನ ಪಯಣ

ಅಥ್ಲೆಟಿಕ್ಸ್: ನನಸಾಗುವುದೇ ಪದಕದ ಕನಸು?

ಪ್ರತಿ ಒಲಿಂಪಿಕ್ಸ್ ಆರಂಭವಾದಾಗ ಅಥ್ಲೆಟಿಕ್ಸ್‌ನಲ್ಲಿ ಈ ಬಾರಿಯಾದರೂ ಪದಕ ಬರಬಹುದೇ ಎನ್ನುವ ಪ್ರಶ್ನೆ ಮೂಡುತ್ತದೆ. ಹೀಗೆ ಕ್ರೀಡಾಪ್ರೇಮಿಗಳು ಪ್ರಶ್ನೆ ಕೇಳುತ್ತಾ ಒಂದು ಶತಮಾನವೇ ಕಳೆದರೂ ನಿರೀಕ್ಷೆ ಮಾತ್ರ ನಿಜವಾಗಿಲ್ಲ. ಅನೇಕ ಸಲ ಹಲವು ಅಥ್ಲೀಟ್‌ಗಳು ಪದಕಗಳ ಸಮೀಪ ಬಂದು ನಿರಾಸೆ ಕಂಡಿದ್ದಾರೆ.

ಭಾರತ ಪಾಲ್ಗೊಂಡ 1900ರ ತನ್ನ ಮೊದಲ ಒಲಿಂಪಿಕ್ಸ್‌ನ (ಪ್ಯಾರಿಸ್) ಅಥ್ಲೆಟಿಕ್ಸ್‌ನಲ್ಲಿ ನಾರ್ಮನ್ ಪಿಚರ್ಡ್ ಪುರುಷರ 200 ಮೀಟರ್ಸ್ ಓಟ ಮತ್ತು 200 ಮೀಟರ್ಸ್ ಹರ್ಡಲ್ಸ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಜಯಿಸಿದ್ದರು. ಅದರ ನಂತರದ ಒಲಿಂಪಿಕ್ಸ್‌ನಿಂದ ಹಿಂದಿನ 2016ರ ರಿಯೊ ಡಿ ಜನ್ನೈರೊ ಕೂಟದ ತನಕ ಅಥ್ಲೆಟಿಕ್ಸ್‌ನಲ್ಲಿ ಪದಕದ ಆಸೆ ಈಡೇರಿಲ್ಲ. ಇತ್ತೀಚೆಗಷ್ಟೇ ನಿಧನರಾದ ಅಥ್ಲೀಟ್ ಮಿಲ್ಖಾ ಸಿಂಗ್ 'ಭಾರತ ಅಥ್ಲೆಟಿಕ್ಸ್‌ನಲ್ಲಿ ಪದಕ ಗೆಲ್ಲುವುದನ್ನು ಕಣ್ತುಂಬಿಕೊಳ್ಳಬೇಕು' ಎಂಬ ಆಸೆ ವ್ಯಕ್ತಪಡಿಸಿದ್ದರು.

ಟೋಕಿಯೊ ಟಿಕೆಟ್ ಪಡೆದಿರುವ ಜಾವೆಲಿನ್ ಎಸೆತ ಸ್ಪರ್ಧಿ ಹರಿಯಾಣದ ನೀರಜ್ ಚೋಪ್ರಾ ಭಾರತದ ಭರವಸೆ ಎನಿಸಿದ್ದಾರೆ. 2018ರಲ್ಲಿ ಗೋಲ್ಡ್ ಕೋಸ್ಟ್‌ನಲ್ಲಿ ನಡೆದ ಕಾಮನ್‌ವೆಲ್ತ್ ಮತ್ತು ಜಕಾರ್ತದಲ್ಲಿ ಜರುಗಿದ ಏಷ್ಯನ್ ಕ್ರೀಡಾಕೂಟದಲ್ಲಿ ಅವರು ಚಿನ್ನದ ಪದಕಗಳನ್ನು ಗೆದ್ದು ಸಾಮರ್ಥ್ಯ ಸಾಬೀತು ಮಾಡಿದ್ದಾರೆ.

2019ರ ಮೇನಲ್ಲಿ ನೀರಜ್ ಬಲಮೊಣಕೈ ಗಾಯದ ಸಮಸ್ಯೆಯಿಂದಾಗಿ ಬಳಲಿದ್ದರು. ಆದ್ದರಿಂದ ಅವರಿಗೆ ಆ ವರ್ಷ ಯಾವ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲು ಸಾಧ್ಯವಾಗಿರಲಿಲ್ಲ. 2021ರ ಜನವರಿಯಲ್ಲಿ ಸ್ಪರ್ಧಾ ಕಣಕ್ಕೆ ಮರಳಿ 88.07 ಮೀಟರ್ ದೂರ ಎಸೆದು ರಾಷ್ಟ್ರೀಯ ದಾಖಲೆ ಬರೆದಿದ್ದರು. ಈ ಉತ್ತಮ ಪ್ರದರ್ಶನದಿಂದಾಗಿಯೇ ಮೊದಲ ಸಲ ಒಲಿಂಪಿಕ್ಸ್‌ಗೆ ಅರ್ಹತೆ ಲಭಿಸಿದೆ.

ಲಾಂಗ್‌ಜಂಪ್‌ನಲ್ಲಿ ಸ್ಪರ್ಧಿಸಲಿರುವ ಮುರಳಿ ಶ್ರೀಶಂಕರ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲು 8.22 ಮೀ. ಜಿಗಿಯಬೇಕಿತ್ತು. ಅವರು 8.26 ಮೀ. ಜಿಗಿದು ಉತ್ತಮ ಸಾಮರ್ಥ್ಯ ತೋರಿಸಿ ತಮ್ಮದೇ ಹೆಸರಿನಲ್ಲಿದ್ದ ರಾಷ್ಟ್ರೀಯ ದಾಖಲೆಯನ್ನು ಉತ್ತಮಪಡಿಸಿಕೊಂಡಿದ್ದಾರೆ.

ನಡಿಗೆ ಸ್ಪರ್ಧಿ ಕೆ.ಟಿ. ಇರ್ಫಾನ್, ಮಹಿಳೆಯರ 100 ಮೀ. ಓಟದಲ್ಲಿ ರಾಷ್ಟ್ರೀಯ ದಾಖಲೆ ಹೊಂದಿರುವ ದ್ಯುತಿ ಚಾಂದ್, ನಾಲ್ಕನೇ ಬಾರಿಗೆ ಅರ್ಹತೆ ಗಳಿಸಿರುವ ಡಿಸ್ಕಸ್ ಎಸೆತ ಸ್ಪರ್ಧಿ ಸೀಮಾ ಪೂನಿಯಾ ಒಲಿಂಪಿಕ್ಸ್‌ನಂಥ ದೊಡ್ಡ ಕ್ರೀಡಾ ವೇದಿಕೆಯಲ್ಲಿ ಆಡಿದ ಹಾಗೂ ಅಲ್ಲಿನ ಸವಾಲನ್ನು ಎದುರಿಸಿದ ಅನುಭವ ಹೊಂದಿದ್ದಾರೆ. ಈ ಅನುಭವವೇ ಭಾರತಕ್ಕೆ ಪದಕ ತಂದುಕೊಡಬಲ್ಲದು ಎನ್ನುವ ನಿರೀಕ್ಷೆ ಬಲವಾಗಿದೆ.




ಸೀಮಾ ಪೂನಿಯಾ

ಇನ್ನು 11 ದಿನ



ಮುರಳಿ ಶ್ರೀಶಂಕರ್ – ಟ್ವಿಟರ್ ಚಿತ್ರ



ನೀರಜ್ ಚೋಪ್ರಾ

ಟಿ20: ಭಾರತದ ಮಹಿಳೆಯರಿಗೆ ಜಯ

ಹೊವ್, ಇಂಗ್ಲೆಂಡ್(ಪಿಟಿಐ): ಆರಂಭಿಕ ಜೋಡಿ ಶೆಫಾಲಿ ವರ್ಮಾ (48) ಮತ್ತು ಹರ್ಮನ್‌ಪ್ರೀತ್ ಕೌರ್ (31) ಅವರ ಅಮೋಘ ಬ್ಯಾಟಿಂಗ್ ಮತ್ತು ಪೂನಂ ಯಾದವ್ (17ಕ್ಕೆ 2) ಅವರ ಬೌಲಿಂಗ್ ಬಲದಿಂದ ಭಾರತ ಮಹಿಳಾ ತಂಡವು ಇಂಗ್ಲೆಂಡ್ ಎದುರಿನ ಟಿ20 ಕ್ರಿಕೆಟ್ ಪಂದ್ಯದಲ್ಲಿ ಎಂಟು ರನ್‌ಗಳ ಜಯ ಸಾಧಿಸಿತು.

ಕೌಂಟಿ ಕ್ಲಬ್‌ನಲ್ಲಿ ನಡೆದ ಎರಡನೇ ಪಂದ್ಯದಲ್ಲಿ ಟಾಸ್ ಸೋತು ಬ್ಯಾಟಿಂಗ್ ಮಾಡಿದ ಭಾರತ 20 ಓವರ್‌ಗಳಲ್ಲಿ ನಾಲ್ಕು ವಿಕೆಟ್ ಕಳೆದುಕೊಂಡು 148 ರನ್ ಕಲೆ ಹಾಕಿತು. ಇಂಗ್ಲೆಂಡ್ ತಂಡವು ನಿಗದಿತ ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 140 ರನ್ ಮಾತ್ರ ಗಳಿಸಿತು.

ಭಾರತದ ಪರ ಸ್ಮೃತಿ ಮತ್ತು ಶೆಫಾಲಿ ಮೊದಲ ವಿಕೆಟ್‌ಗೆ 53 ಎಸೆತಗಳಲ್ಲಿ 70 ರನ್ ಸೇರಿಸಿದರು. ಇಂಗ್ಲೆಂಡ್ ಪರ ಟ್ಯಾಮಿ ಬೇಮೌಂಟ್ ಗಳಿಸಿದ ಅರ್ಧಶತಕ (59) ವ್ಯರ್ಥವಾಯಿತು.

ಬೌಲಿಂಗ್‌ನಲ್ಲಿ ದೀಪ್ತಿ ಶರ್ಮಾ (18ಕ್ಕೆ 1) ಕೂಡ ಮಿಂಚಿದರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 4ಕ್ಕೆ 148 (ಸ್ಮೃತಿ ಮಂದಾನ 20, ಶೆಫಾಲಿ ವರ್ಮಾ 48, ಹರ್ಮನ್‌ಪ್ರೀತ್ ಕೌರ್ 31, ದೀಪ್ತಿ ಶರ್ಮಾ ಔಟಾಗದೆ 24, ರಿಚಾ ಘೋಷ್ 8, ಸ್ನೇಹ್ ರಾಣಾ ಔಟಾಗದೆ 8; ನತಾಲಿ ಶೀವರ್ 20ಕ್ಕೆ1, ಫ್ರೇಯ ಡೇವಿಸ್ 31ಕ್ಕೆ1, ಸಾರಾ ಗ್ಲೆನ್ 32ಕ್ಕೆ1, ಮ್ಯಾಡಿ ವಿಲಿಯರ್ಸ್ 9ಕ್ಕೆ1).

ಇಂಗ್ಲೆಂಡ್: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 140 (ಟ್ಯಾಮಿ ಬೇಮೌಂಟ್ 59, ಹೀದರ್ ನೈಟ್ 30, ಆ್ಯಮಿ ಜೋನ್ಸ್ 11; ಪೂನಂ ಯಾದವ್ 17ಕ್ಕೆ 2, ದೀಪ್ತಿ ಶರ್ಮಾ 18ಕ್ಕೆ1) ಫಲಿತಾಂಶ: ಭಾರತಕ್ಕೆ ಎಂಟು ರನ್‌ಗಳ ಜಯ, ಸರಣಿಯಲ್ಲಿ 1–1ರಿಂದ ಸಮಬಲ.

ಕ್ರಿಕೆಟ್: ಶ್ರೀಲಂಕಾ ಆಟಗಾರರ ಕೋವಿಡ್ ವರದಿ 'ನೆಗೆಟಿವ್'

ಕೊಲಂಬೊ (ಪಿಟಿಐ): ಭಾರತ ತಂಡದ ಎದುರಿನ ಸೀಮಿತ ಓವರ್‌ಗಳ ಸರಣಿಗೆ ಸಜ್ಜಾಗುತ್ತಿರುವ ಶ್ರೀಲಂಕಾ ತಂಡದ ಕುಶಾಲ್ ಪೆರೇರ, ದುಷ್ಮಂತ್ ಚಮೀರಾ ಸೇರಿದಂತೆ ಎಲ್ಲ ಆಟಗಾರರು ಕೋವಿಡ್ ಪರೀಕ್ಷೆ ಪೂರ್ಣಗೊಳಿಸಿದ್ದು, ವರದಿ 'ನೆಗೆಟಿವ್' ಬಂದಿದೆ.

ಶ್ರೀಲಂಕಾ ಕ್ರಿಕೆಟ್ ಮಂಡಳಿ (ಎಸ್‌ಎಲ್‌ಸಿ) ಈ ಪರೀಕ್ಷೆಗಳನ್ನು ನಡೆಸಿತ್ತು.

ಇಂಗ್ಲೆಂಡ್ ಪ್ರವಾಸದಿಂದ ಹಿಂದಿರುಗಿದ ಬಳಿಕ ಶ್ರೀಲಂಕಾ ಆಟಗಾರರು ಒಂದು ವಾರ ಕ್ವಾರಂಟೈನ್‌ನಲ್ಲಿದ್ದರು. ಸೋಮವಾರ ತಂಡದ ಬಯೋಬಬಲ್ ಪ್ರವೇಶಿಸುವ ನಿರೀಕ್ಷೆಯಿದೆ.

ಬ್ಯಾಟಿಂಗ್ ಕೋಚ್ ಗ್ರ್ಯಾಂಟ್ ಫ್ಲವರ್ ಹಾಗೂ ಡೇಟಾ ಅನಾಲಿಸ್ಟ್ ಜಿ.ಟಿ.ನಿರೋಶನ್ ಹಾಗೂ ಪ್ರತ್ಯೇಕ ಬಯೋಬಬಲ್‌ನಲ್ಲಿರುವ ಇನ್ನೊಬ್ಬ ಆಟಗಾರನಿಗೆ ಕೋವಿಡ್ ಖಚಿತಪಟ್ಟ ಬಳಿಕ ಜುಲೈ 13ರಂದು ಪ್ರಾರಂಭವಾಗಬೇಕಿದ್ದ ಭಾರತ ತಂಡದ ಎದುರಿನ ಸರಣಿಯನ್ನು 18ಕ್ಕೆ ಆರಂಭಿಸಲು ನಿರ್ಧರಿಸಲಾಗಿತ್ತು.

ಸದ್ಯ ಸಿಂಹಳೀಯ ಸ್ಪೋರ್ಟ್ಸ್ ಕ್ಲಬ್ ಕ್ರೀಡಾಂಗಣದಲ್ಲಿ (ಎಸ್‌ಎಸ್‌ಸಿ) ಭಾರತದ ಆಟಗಾರರು ತರಬೇತಿ ಪಡೆಯುತ್ತಿರುವುದರಿಂದ ಶ್ರೀಲಂಕಾ ತಂಡವು ಆರ್. ಪ್ರೇಮದಾಸ ಕ್ರೀಡಾಂಗಣದಲ್ಲಿ ಅಭ್ಯಾಸದಲ್ಲಿ ತೊಡಗಲಿದೆ ಎಂದು ತಿಳಿದುಬಂದಿದೆ.

ಟೆಸ್ಟ್: ಜಿಂಬಾಬ್ವೆ ವಿರುದ್ಧ ಬಾಂಗ್ಲಾಗೆ ಭರ್ಜರಿ ಜಯ

ಹರಾರೆ: ಬಾಂಗ್ಲಾದೇಶ ತಂಡವು ಜಿಂಬಾಬ್ವೆ ಎದುರಿನ ಏಕೈಕ ಟೆಸ್ಟ್ ಪಂದ್ಯದಲ್ಲಿ ಭರ್ಜರಿ ಜಯ ಸಾಧಿಸಿತು. 477 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಜಿಂಬಾಬ್ವೆ ಕೊನೆಯ ದಿನವಾದ ಭಾನುವಾರ 256 ರನ್‌ಗಳಿಗೆ ಪತನಗೊಂಡಿತು. ಈ ಮೂಲಕ ಬಾಂಗ್ಲಾದೇಶ 220 ರನ್‌ಗಳ ಜಯ ತನ್ನದಾಗಿಸಿಕೊಂಡಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಬಾಂಗ್ಲಾದೇಶ: 468; ಜಿಂಬಾಬ್ವೆ: 276; ಎರಡನೇ ಇನಿಂಗ್ಸ್: ಬಾಂಗ್ಲಾದೇಶ: 1ಕ್ಕೆ 284 ಡಿಕ್ಲೇರ್; ಜಿಂಬಾಬ್ವೆ: 94.4 ಓವರ್‌ಗಳಲ್ಲಿ 256 (ಡೊನಾಲ್ಡ್ ತಿರಿಪಾನೊ 52, ಬ್ಲೆಸಿಂಗ್ ಮುಜರಬಾನಿ ಔಟಾಗದೆ 30; ಮೆಹದಿ ಹಸನ್ 66ಕ್ಕೆ4, ತಸ್ಕಿನ್ ಅಹಮ್ಮದ್ 82ಕ್ಕೆ4, ಎಬದತ್ ಹೊಸೇನ್ 39ಕ್ಕೆ1). ಫಲಿತಾಂಶ: ಬಾಂಗ್ಲಾದೇಶಕ್ಕೆ 220 ರನ್‌ಗಳ ಜಯ; ಏಕೈಕ ಪಂದ್ಯದ ಸರಣಿಯಲ್ಲಿ ಗೆಲುವು.

ಒಲಿಂಪಿಕ್ ಕೂಟ: ಫುಕುಶಿಮಾ, ಸಪೊರೊದಲ್ಲೂ ಪ್ರೇಕ್ಷಕರಿಗೆ ನಿರ್ಬಂಧ

ಟೋಕಿಯೊ (ಎಪಿ/ಪಿಟಿಐ): ಒಲಿಂಪಿಕ್ಸ್ ಕೂಟದ ಪ್ರಮುಖ ಸ್ಪರ್ಧೆಗಳು ನಡೆಯಲಿರುವ ಟೋಕಿಯೊದಲ್ಲಿ ಪ್ರೇಕ್ಷಕರಿಗೆ ಅವಕಾಶ ನಿರಾಕರಿಸಿರುವ ಬೆನ್ನಲ್ಲೇ ಸಮೀಪದ ಫುಕುಶಿಮಾ ಮತ್ತು ಸಪೊರೊದಲ್ಲೂ ಪ್ರೇಕ್ಷಕರನ್ನು ಒಳಗೆ ಬಿಡದೇ ಇರಲು ಆಯೋಜಕರು ನಿರ್ಧರಿಸಿದ್ದಾರೆ.

ಒಲಿಂಪಿಕ್ಸ್ ಆರಂಭಗೊಳ್ಳಲು ಎರಡು ವಾರಗಳು ಬಾಕಿ ಇದೆ. ಈಗಲೂ ಕೋವಿಡ್ ಸೋಂಕು ಏರುಗತಿಯಲ್ಲಿ ಸಾಗುತ್ತಿರುವ ಹಿನ್ನೆಲೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಟೋಕಿಯೊ ಮತ್ತು ಸಮೀಪದ ಮೂರು ಅಂಗಣಗಳಿಗೆ ಪ್ರೇಕ್ಷಕರನ್ನು ಬಿಡದೇ ಇರಲು ಸ್ಥಳೀಯ ಆಯೋಜಕರು ಮತ್ತು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಕಳೆದ ವಾರ ನಿರ್ಧರಿಸಿತ್ತು.

ಫುಕುಶಿಮಾ ಪ್ರದೇಶವು ಈಶಾನ್ಯ ಜಪಾನ್‌ನಲ್ಲಿದ್ದು ಇಲ್ಲಿ ಬ್ಯಾಸ್ಕೆಟ್‌ಬಾಲ್ ಮತ್ತು ಸಾಫ್ಟ್‌ಬಾಲ್ ಸ್ಪರ್ಧೆಗಳು ನಡೆಯಲಿವೆ. ಉತ್ತರ ಜಪಾನ್‌ನಲ್ಲಿರುವ ಸಪೊರೊದ ಹೊಕ್ಕೈಡೊದಲ್ಲಿ ಫುಟ್‌ಬಾಲ್ ಪಂದ್ಯಗಳು ನಡೆಯಲಿವೆ.

ಶೂಟಿಂಗ್‌ನಲ್ಲಿ ಬದಲಿ ಅಥ್ಲೀಟ್‌ಗೆ ಅವಕಾಶ: ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವ ಮಿಶ್ರ ಶೂಟಿಂಗ್ ತಂಡದಲ್ಲಿ ಯಾರಿಗಾದರೂ ಕೋವಿಡ್ ಸೋಂಕು ತಗುಲಿದರೆ ಬದಲಿ ಶೂಟರ್‌ಗೆ ಅವಕಾಶ ನೀಡಲು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಒಪ್ಪಿಗೆ ನೀಡಿದೆ.

17ರಂದು ಟೋಕಿಯೊಗೆ ಬಾಕ್ಸರ್‌ಗಳು

ನವದೆಹಲಿ (ಪಿಟಿಐ): ಒಲಿಂಪಿಕ್ಸ್‌ಗಾಗಿ ಇಟಲಿಯಲ್ಲಿ ತರಬೇತಿ ನಡೆಸುತ್ತಿರುವ ಭಾರತದ ಬಾಕ್ಸರ್‌ಗಳ ತಂಡವು ಇದೇ 17ರಂದು ಟೋಕಿಯೊಗೆ ತೆರಳಲಿದೆ.

ಐವರು ಪುರುಷ ಮತ್ತು ನಾಲ್ವರು ಮಹಿಳೆಯರು ಸೇರಿ ಭಾರತದ ಒಂಬತ್ತು ಮಂದಿ ಬಾಕ್ಸರ್‌ಗಳು ಟೋಕಿಯೊ ಟಿಕೆಟ್ ಗಿಟ್ಟಿಸಿದ್ದಾರೆ. ಸದ್ಯ ಇವರೆಲ್ಲರೂ ಕೊನೆಯ ಹಂತದ ಸಿದ್ಧತೆಗಾಗಿ ಇಟಲಿಯ ಅಸ್ಸಿಸಿಯಲ್ಲಿದ್ದಾರೆ. ಜುಲೈ 23ರಂದು ಒಲಿಂಪಿಕ್ಸ್ ಆರಂಭವಾಗಲಿದ್ದು, 24ರಂದು ಬಾಕ್ಸಿಂಗ್ ಸ್ಪರ್ಧೆಗಳು ಶುರುವಾಗಲಿವೆ. 'ಪ್ರಯಾಣದ ಯೋಜನೆಗಳನ್ನು ಅಂತಿಮಗೊಳಿಸಲಾಗಿದೆ. ಜುಲೈ 17ರಂದು ತಂಡವು ಟೋಕಿಯೊ ವಿಮಾನವೇರಲಿದೆ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಭಾರತ ಅಥ್ಲೆಟಿಕ್ಸ್ ಕೋಚ್‌ಗಳ ತಂಡ ಪ್ರಕಟ

ನವದೆಹಲಿ: ಟೋಕಿಯೊ ಒಲಿಂಪಿಕ್ಸ್‌ಗೆ ತೆರಳಲಿರುವ ಭಾರತ ಅಥ್ಲೆಟಿಕ್ಸ್ ತಂಡದ ಕೋಚ್‌ಗಳು ಹಾಗೂ ನೆರವು ಸಿಬ್ಬಂದಿಯ ಹೆಸರುಗಳನ್ನು ಶನಿವಾರ ಪ್ರಕಟಿಸಲಾಗಿದೆ.

ಕ್ರೀಡಾಕೂಟಕ್ಕೆ ಅರ್ಹತೆ ಗಳಿಸಿರುವ 26 ಅಥ್ಲೀಟ್‌ಗಳಿಗೆ ಇವರು ತರಬೇತಿ ಮತ್ತು ನೆರವು ನೀಡಲಿದ್ದಾರೆ.

ತಂಡ ಇಂತಿದೆ: ಕೋಚ್‌ಗಳು: ರಾಧಾಕೃಷ್ಣನ್ ನಾಯರ್, ಗಲಿನಾ ಬುಖಾರಿನಾ, ಡಾ. ಕ್ಲಾಸ್, ಮೋಹಿಂದರ್ ಸಿಂಗ್, ಉವೆ ಹಾನ್, ರಾಜ್‌ಮೋಹನ್, ಅಮರೀಷನ್ ಕುಮಾರ್, ಅಲೆಕ್ಸಾಂಡರ್, ಎಸ್. ಮುರಳಿ, ರಮೇಶ್, ಅಲೆಕ್ಸಾಂಡರ್ ಸಿನಿತ್‌ಸಿನ್, ರಾಖಿ ತ್ಯಾಗಿ ಮತ್ತು ಗುರ್ಮೀತ್ ಸಿಂಗ್.

ನೆರವು ಸಿಬ್ಬಂದಿ: ಎಲ್‌ಮೀರಾ, ಅಭಿಷೇಕ್ ಪಾಂಡೆ, ಇಶಾನ್ ಮಾರ್ವಾ, ಡಾ.ಆ್ಯಂಡ್ರೆ, ಸಿಮೋನಿ ಶಾ, ಚಂದ್ರೇಜ್, ಪವನ್ ಕುಮಾರ್, ಕೇತನ್ ಹುಲವಾಲೆ.